ವಿಷಯಗಳನ್ನು ಬರೆದವರ ಹೆಸರು

ಮು॥ರಾ॥ಶ್ರೀ॥

1 ಎಡಿಟರ್.

2 ಎಂ. ವೆಂಕಟಕೃಷ್ಣಯ್ಯನವರು

3 ಕುಂಡಲಿಗಿರ್ಯಾಚಾರ್ಯರು, ಪಂಡಿತರು.

4 ಕೆ ನರಸಿಂಹಯ್ಯಂಗಾರ್, ಅಗ್ರಿಕಲ್ಚರ್ ಲೆಕ್ಚರರ

5 ಬಿ. ರಾಮರಾವ್, ಎಂ. ಎ.

6 ಕೆ. ನರಸಿಂಹಮೂರ್ತಿರಾವ್, ಸ್ಕೂಲ್ ಮಾಸ್ಟರ

7 ಸಂಪತ್ತ್ಯಯ್ಯಂಗಾರ್, ಸ್ಕೂಲ್ ಮಾಸ್ಟರ್.

8 ಕೆ. ಚಿಂತಾಮಣಿರಾವ್, ಬಿ. ಎ. ಎಲ್. ಟಿ.

9 ಎ. ವೆಂಕಟೇಶಯ್ಯ, ಬಿ. ಎ.

10 ವಿ. ನರಸಿಂಹಮೂರ್ತಿರಾವ್, ರೇಂಜರ್.

11 ಜೆ. ವೆಂಕಟೇಶಯ್ಯ.

12 ಎಂ. ಶಾಮರಾವ್. ಬಿ. ಎ.ಅ. ಡಿ. ಇನ್‌ಸ್ಪೆಕ್ಟರ್.

13 ಎಂ. ಶ್ರೀನಿವಾಸರಾವ ಬಿ. ಎ. ಡಿ. ಇನ್‌ಸ್ಪೆಕ್ಟರ್.

14 ಎಸ್. ವೆಂಕೋಬರಾವ್ ಬಿ. ಎ. ಅಪಾತಕೆರಿ.

15 ಶ್ರೀನಿವಾಸರಾಘವಾಚಾರ ಪಂಡಿತರು.

16 ಎಂ ವಿ. ಶ್ರೀನಿವಾಸಯ್ಯಂಗಾರ ಬಿ. ಎ.

17 ಎಂ. ನಾರಾಯಣಮೂರ್ತಿರಾವ್.

ಮುಂತಾದವರು.

763

V	(1) ಪಂಚಭೂತಗಳು—	೪೨.
	(2) ವಾಯು.	೧೦, ೧೯, ೧೫೦, ೧೫೫, ೧೬೪, ೧೯೨, (ನವೆಂಬರ್) ೧೪೭, (ಡಿಸೆಂಬರ್ ೧೭೬.
	(3) ನೀರು.	೨೧೫
	(4) ಭೂಮಿ.	೫೫, ೫೯.
VI	ವನಸ್ಪತಿಗಳು.	
	(1) ಖರ್ಜೂರ.	೫೭.
VII	ಗಣಿತಶಾಸ್ತ್ರ.	೧೨, ೫೪, ೫೭, ೧೪೫, (ನವೆಂಬರ್) ೧೫ (ಡಿಸೆಂಬರ್) ೧೭೪.
VIII	ಜ್ಯೋತಿಶ್ಶಾಸ್ತ್ರ.	
	(1) ಸೂರ್ಯಗ್ರಹ.	೧೯೪.
	(2) ಇತರ ಗ್ರಹಗಳು.	(ಅಕ್ಟೋಬರ್) ೧೨
IX	ವಿದ್ಯಾಭ್ಯಾಸ.	
	(1) ಅಮೂಲ್ಯವಾದ ಜ್ಞಾನ.	೬೫, ೯೫.
	(2) ಕೈಗಾರಿಕೆಯ ವಿದ್ಯಾಭ್ಯಾಸ.	೪೫, ೧೦೭, ೧೨೬.
	(3) ಜ್ಞಾನಪಕ್ಷಕ್ಕಿಯನ್ನು ವೃದ್ಧಿಪಡಿಸುವಿಕೆ.	(ಡಿಸೆಂಬರ್) ೧೬೫.
X	ಮ್ಯಾಜಿಕ್‌ಲ್ಯಾಂಟರ್ನ್—	೭೪, ೧೨೫, ೧೫೭, ೧೭೬, ೨೦೭, (ಅಕ್ಟೋಬರ್) ೧೪೦ (ನವೆಂಬರ್) ೧೪೫.
XI	ಇದ್ಯಾಭ್ಯಾಸದ ಇಲಾಖೆಯ ಸರ್ಕ್ಯೂಲರ್, ಸೂಚನೆ ಮತ್ತು ಸಮಾಚಾರಗಳು.	(ಅಕ್ಟೋಬರ್) ೧೪೫, (ನವೆಂಬರ್) ೧೪೬ ೧೭, ೩೨, ೪೧, ೧೧೧, ೧೪೪, ೨೧೦.
XII	ವೈದ್ಯಶಾಸ್ತ್ರ (ಛಳಿಜ್ವರ)—	(ಡಿಸೆಂಬರ್) ೧೭೧.
XIII	ಪ್ರಶ್ನೆಪತ್ರಿಕೆಗಳು—	೪೭, ೧೧೨, ೧೪೭, ೧೫೯,

ವಿಷಯಸೂಚನೆ.

ವಿದ್ಯಾದಾಯಿನಿಯು ಐಂಬತ್ತನೆಯ ಭಾಗ, ೧೯೦೧ನೆಯ ಇಸವಿ.

ವಿಷಯಗಳು.		ಪುಟಗಳು.
I	ಎಡಿಟರವರ ನೋಟ್ಸ್,	೧, ೭೦, ೪೩, ೬೩, ೯೧, ೧೦೫, ೧೩೯, ೧೬೩, ೧೮೨, ೨೧೧, (ನವಂಬರ್) ೧೩೫, (ಡಿಸೆಂಬರ್) ೧೫೯.
II	ಪ್ರಸಿದ್ಧಪುರುಷರು.	
	(1) ಆರ್ನಲ್ಡ್ ರವರ ಚರಿತ್ರೆ	೩, ೪೫, ೬೪, ೯೭, ೧೧೪, ೧೪೧, ೧೬೫, ೧೪೪, ೨೧೩, (ನವಂಬರ್) ೧೩೩, (ಡಿಸಂಬರ್) ೧೬೧,
	(2) ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾರವರು	೭೪.
III	(1) ಕಿಂಡರ್‌ಗಾರ್ಟನ್—	೪೯, ೧೪೪, ೧೩೪, ೭೦೫, (ನವಂಬರ್) ೧೪೪, (ಡಿಸೆಂಬರ್) ೧೩೪.
	(2) ಕಥೆಗಳು—	೪೭, ೬೩, ೪೪, ೧೦೩, ೧೪೫, (ನವಂಬರ್) ೧೫೩.
	(3) ಹಾಡುಗಳು—	೧೪.
IV	ಶಾಸ್ತ್ರಗಳು	
	(1) ವ್ಯಾಕರಣಶಾಸ್ತ್ರ.	೩೭, ೫೪, ೧೪೦, (ಅಕ್ಟೋಬರ್) ೧೭೦
	(2) ವ್ಯವಸಾಯಶಾಸ್ತ್ರ	
	(a) ಸುಣ್ಣ.	೧೫೫.
	(b) ಸಸಿಗಳು.	(ನವಂಬರ್) ೧೪೦.
	(c) ಮಣ್ಣು.	೭೦೩, ೭೧೪.
	(d) ನೆಲಗಡಲೆ.	(ಡಿಸೆಂಬರ್) ೧೭೪,

MYSORE GOVERNMENT
ORIENTAL LIBRARY.

ವಿದ್ಯಾದಾಯಿನಿ.

ಭಾಗ ೯.] ಜನವರಿ ೧೯೦೧. [ಸಂಚಿಕೆ ೧.

ಎಡಿಟರವರ ನೋಟ್ಸ್.

ಸಾವಿರದ ಒಂಬೈನೂರೊಂದನೆಯು ಸಂವತ್ಸರದಿಂದ ಇಪ್ಪತ್ತನೆಯ ಶತಮಾನವು ಆರಂಭವಾಗುವುದು. ಹತ್ತೊಂಬತ್ತನೆಯು ಶತಮಾನದ ಉತ್ತರಾರ್ಧದಲ್ಲಿ ಪ್ರಪಂಚವು ಬಹಳಮಟ್ಟಿಗೆ ವೃದ್ಧಿಗೊಂಡಿತೆಂತಲೂ, ಪಾಶ್ಚಾತ್ಯರ ನಾಗರಿಕತೆಯು, ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ತಕ್ಕಮಟ್ಟಿಗೆ ಪಸರಿಸಿದೆ ಯೆಂತಲೂ, ಈ ಇಪ್ಪತ್ತನೆಯ ಶತಮಾನವು ಅಗೋಚರವಾದ ಅನೇಕ ನವೀನ ವಿಷಯಗಳನ್ನು ಪ್ರಕಾಶಗೊಳಿಸಬಹುದೆಂತಲೂ ಅನೇಕರು ಅಭಿಪ್ರಾಯಪಡುವರು. ನಮ್ಮ ವಿದ್ಯಾದಾಯಿನಿಯ ವಾಚಕರು, ಕಾಲದೊಂದಿಗೆ ಜ್ಞಾನವನ್ನೂ ಸರಿಗೊಳಿಸಿ, ಜ್ಞಾನಾನಂದವನ್ನು ಪಡೆಯಲಿ ಎಂದು ನಾವು ಹಾರೈಸುವೆವು.

***

ಈ ವಿದ್ಯಾದಾಯಿನಿಯು ಲೇಖಕರೂ, ವಾಚಕರೂ ಸಾಕಾದಷ್ಟು ಪ್ರೋತ್ಸಾಹನವನ್ನು ಕೊಟ್ಟು, ಸಂಪಾದಕರ ಉದ್ದೇಶ್ಯವನ್ನು ನೆರವೇರಿಸುವರೆಂದು ಕೋರುವೆವು.

***

ಕಳೆದ ಡಿಶಂಬರ್ ತಿಂಗಳಲ್ಲಿ ಮೈಸೂರು ಸಂಸ್ಥಾನವು ಶ್ರೀಮತ್ ಮಹಾರಾಜ್ಞೀ ವಿಕ್ಟೋರಿಯ ಚಕ್ರವರ್ತಿನಿಯವರ ಪ್ರತಿನಿಧಿಗಳಾದ ಲಾರ್ಡ್ ಕರ್ಜನ್‌ರವರ ಸುಭಾಗಮನದಿಂದ ಉಲ್ಲಾಸಗೊಂಡಿತು. ಈ ಮಹನೀಯರು, ಸಂಸ್ಥಾನದ ರಾಜಕೀಯ ವಿಷಯಗಳನ್ನೆತ್ತಿ ಪ್ರಸಂಗಿಸುವ ಸಮಯದಲ್ಲಿ ವಿದ್ಯಾಭ್ಯಾಸದ ಇಲಾಖೆಯು ವಿಷಯವಾಗಿ ಒಂದೆರಡು ಭಾವಗರ್ಭಿತವಾದ ವಾಕ್ಯಗಳನ್ನು ಹೇಳಿರುವರು. ವಿದ್ಯಾದಾಯಿನಿಯ ವಾಚಕರೆಲ್ಲರೂ ಅಗತ್ಯವಾಗಿ ಆ ವಾಕ್ಯಗಳಿಗೆ ಗಮನಕೊಡಬೇಕು. ಆ

XIV ವಿಶೇಷ ವಿಷಯಗಳು—

(1) ಅರ್ವಾಚೀನ ಕರ್ಣಾ ಟಕ ಸಂಹಿತ್ಯದ ಬೆಳವಣಿಗೆ. ಪು. ೧೦೩, ೧೨೮, ೧೪೪.

(2) ದೊಡ್ಡಬಳ್ಳಾಪುರದ ಓಂ. ಸ್ಕೂಲ್. ೪೦.

(3) ಬಗೆಟೆಗಳು— ೪೦.

(4) ಸಮುದ್ರ ನಿವಾಸಿಗಳು-೧೭೦.

(5) ನಾಯಿ— ೧೯೪.

(6) ಔಷಣ್ಯ— (ನವಂಬರ್) ೧೪೩, (ಡಿಸೆಂಬರ್) ೧೬೫.

(7) ಗ್ರಂಥವಿಮರ್ಶೆ— (ನವಂಬರ್) ೧೫೫, (ಡಿಸೆಂಬರ್) ೧೭೯.

(8) ೧೯೦೧ ನೇ ಇಸವಿ ಲೋವರಿಸೆಕಂಡರಿ ವಿದ್ಯಾರ್ಥಿಗಳು ಓದತಕ್ಕ ವಿಷಯ.

(9) ಶ್ರೀಮನ್ಮಹಾರಾಜ್ಞೀ ೧ ಯವರ ಭಾವಚಿತ್ರ



ಸಂದೇಹವಿಲ್ಲವು. ಇದರ ಬೆಲೆಯೂ ಬಹುಸುಲಭವಾಗಿರುವುದು. ಇದರಲ್ಲಿ ಮನೋಹರವಾದ ಚಿತ್ರಪಠಗಳನ್ನು ಪ್ರಕಟಿಸುವರು. ಆದುದರಿಂದ ಕನ್ನಡಿತಿಯರೆಲ್ಲರೂ ಇದನ್ನು ತೆಗೆದುಕೊಂಡು ಪ್ರಯೋಜನಪಡೆದು ಸಂಪಾದಕರ ಕೋರಿಕೆಯನ್ನು ಕೈಗೂಡಿಸುವರೆಂದು ನಂಬುವೆವು.

ಅರ್ನಲ್ಡ್‌ರವರ ಚರಿತ್ರೆ.

ಡಾಕ್ಟರ್ ಅರ್ನಲ್ಡ್‌ರವರು ಒಬ್ಬ ವಿದ್ಯಾರ್ಥಿಯ ಕರ್ತವ್ಯವನ್ನು ಕುರಿತು ಅವನ ತಂದೆಗೆ ಬರೆದ ಒಂದು ಲೇಖನವು ಶ್ರೋತವ್ಯವಾಗಿ ಇದೆ. ಅವರು ಬರೆದಿರುವದೇನಂದರೆ :—ನಿಮ್ಮ ಮಗನು ಉದಾಸೀನನು. ಇದು ನನಗೆ ಬಹಳ ಕ್ಲೇಶವನ್ನುಂಟುಮಾಡಿ ಇದೆ. " ನನ್ನ ವ್ಯಾಸಂಗಕ್ಕೆ ಉದ್ದೇಶವೇನು ? ಉತ್ತರೋತ್ತರ ಸ್ವಶಕ್ತಿಯಿಂದ ಜೀವನೋಪಾಯವನ್ನು ಸಂಪಾದಿಸಿಕೊಂಡು ಗೌರವವಾಗಿ ಬದುಕತಕ್ಕದ್ದೇ ನನ್ನ ವ್ಯಾಸಂಗದ ಗುರಿಯಲ್ಲವೇ ? ವ್ಯಾಸಂಗಮಾಡುವುದು ಕರ್ತವ್ಯವೆಂದು ತಿಳಿದುಕೊಂಡು ಅದನ್ನು ಮಾಡಿದರೆ ಫಲವುಂಟಾಗುವದೆ ? ಅಥವಾ ಶಿಕ್ಷೆಯಾಗುವುದೆಂಬ ಭಯದಿಂದ ವ್ಯಾಸಂಗಮಾಡಿದರೆ ಅದರಿಂದ ಫಲ ಉಂಟೆ ? ಮನಃಪೂರ್ವಕನಾಗಿ ವ್ಯಾಸಂಗಮಾಡದೇ ಇದ್ದರೆ ಫಲಸಾಪ್ತಿ ಎಂದಿಗಾದರೂ ಆಗುವದೆ ? ಎಂಬ ವಿಷಯಗಳೇ ನಿಮ್ಮ ಮಗನ ಯೋಚನೆಗೆ ಬಂದಿಲ್ಲ. ಈ ವಿಷಯದಲ್ಲಿ ಮಾಡಿದ ಉಪದೇಶಗಳೆಲ್ಲಾ ಕನಡಿಗರಿಗೆ ಹೇಳಿದ ಉಪದೇಶದಂತೆ ಪರಿಣಮಿಸಿ ಇದೆ ಈ ಔದಾಸೀನ್ಯವು ನಿಮ್ಮ ಮಗನಲ್ಲಿ ಮಾತ್ರವೇ ಇರುವದೆಂದು ಹೇಳುವದಿಲ್ಲ. ಇವನ ಸಹಾಧ್ಯಾಯಿಗಳಲ್ಲಿ ಅನೇಕರು ಇದೇರೀತಿಯಲ್ಲಿರುತ್ತಾರೆ ಪರ್ವತ ಶಿಖರಕ್ಕೆ ಆರೋಹಣ ಮಾಡಬೇಕೆಂದು ಉತ್ಸಾಹದಿಂದ ಪರ್ವತವನ್ನು ಹತ್ತತಕ್ಕವರು ಆ ಶಿಖರವನ್ನು ತಲಪುವುದುಂಟು. ಅದರಲ್ಲಿ ನ್ಯೂನತೆ ಬಂದಿಗ್ಯೂ ಸ್ವಲ್ಪದೂರದ ಮಟ್ಟಿಗೆ ಹೋಗುವದಾದರೂ ಉಂಟು. ಹತ್ತುವವಿಷಯದಲ್ಲಂತೂ ಉದಾಸೀನರಾದರೆ ಪರ್ವತಾರೋಹಣವು ಹ್ಯಾಗೆ ಲಭಿಸುವುದು ? ವಿದ್ಯಾವ್ಯಾಸಂಗವು ಪರ್ವತಾರೋಹಣದಂತೆಯೇ ಶ್ರಮಸಾಧ್ಯವಾದದ್ದು ; ಮತ್ತು ಅದರಂತೆಯೇ ಸಂತೋಷಪ್ರದವಾದದ್ದು, ಪಾಠಕರು ವಿದ್ಯಾವಿನಯಸಂಪನ್ನರಾಗು

ವಾಕ್ಯಗಳ ಅಭಿಪ್ರಾಯವು :—ಇತರ ಸಂಸ್ಥಾನಗಳಿಗಿಂತಲೂ, ಈ ಸಂಸ್ಥಾನದಲ್ಲಿ, ಜನರಿಗೆ ವಿದ್ಯೆಯು ವಿಶೇಷ ಬೆಲೆಯಿಲ್ಲದಂತೆ ಸುಲಭವಾಗಿ ದೊರೆಯುವಂತೆ, ಸರ್ಕಾರದವರು ಏರ್ಪಡಿಸಿರುವುದೆಂತಲೂ, ವಿದ್ಯಾಪ್ರೌಢಿಮೆಯನ್ನು ಪಡೆದ ದೇಶೀಯರಿಗೆ ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ಪ್ರೋತ್ಸಾಹಗೊಳಿಸುವ ಏರ್ಪಾಡುಗಳಾಗಿರುವುದು ಶ್ಲಾಘ್ಯವಾದುದೆಂತಲೂ, ಇಂಥಾ ಅನುಕೂಲಸಮಯದಲ್ಲಿ ಈ ದೇಶೀಯರು ಪಾಲವಹಿಸದೆ ವಿದ್ಯೆಯನ್ನು ಸಂಪಾದಿಸಿ ರಾಜಕಾರ್ಯ ನಿರ್ವಾಹಶಕ್ತಿಯನ್ನು ಪಡೆದು ವೈಸೂರಿನ ಏಳಿಗೆಗೆ ಕಾರಣರಾಗದಿರರು :—ಎಂಬುದನ್ನು ಸೂಚಿಸುವುದು.

***

ಸರ್ಕಾರದವರು ಮತ್ತು ಮಿಷನರಿಗಳು ವಿದ್ಯಾಪ್ರಚಾರಕ್ಕೆ ವಿಶೇಷ ಸೌಲಭ್ಯವನ್ನುಂಟುಮಾಡಿರುವರು. ಇದಕ್ಕೆ ತಕ್ಕಹಾಗೆ ವಿದ್ಯಾರ್ಥಿಗಳ ಸಂಖ್ಯೆಯು ವರ್ಷವರ್ಷ ವೃದ್ಧಿಗೊಳುತಿರುವುದು. ಆದರೆ, ಉಪಾಧ್ಯಾಯರು ಬೋಧನಾಕ್ರಮ, ಶಿಕ್ಷಾಪದ್ಧತಿ ಮುಂತಾದವುಗಳನ್ನು ಓದಿ, ಬಾಲಕರ ಮನವರಿತು ಬೋಧಿಸುವ ಶಕ್ತಿಯನ್ನು ಪಡೆಯದಿದ್ದರೆ, ವಿದ್ಯಾಪ್ರಾಚುರ್ಯಕ್ಕೆ ಎಷ್ಟು ಸಹಕಾರಿಗಳಿದ್ದರೂ, ವಿದ್ಯಾಭಿವೃದ್ಧಿಗೆ ಕುಂದಕವನ್ನುಂಟುಮಾಡದಿರದು. ಆದುದರಿಂದ ಉಪಾಧ್ಯಾಯರು ಮುಂದಾಗಿ ಶಿಕ್ಷಿತರಾಗಿ, ಬೋಧಿಸುವುದಕ್ಕೆ ಅರ್ಹರಾಗುವುದು ಅವಶ್ಯಕ.

***

'ಮಹಿಳಾಸಖಿ' ಎಂಬ ಮಾಸಪತ್ರಿಕೆಯ ಸಂಪಾದಕರು ನಮ್ಮಲ್ಲಿ ಕಳುಹಿಸಿದ ಪ್ರತಿಗಳನ್ನು ಆದರದಿಂದ ಓದಿನೋಡಿದೆವು. ಈ ದೇಶದ ಮಹಿಳೆಯರಿಗೆ ವಿದ್ಯಾಸಖಿಯೊಬ್ಬಳು ಆವಶ್ಯಕವಾಗಿದ್ದಳು. ಅಂಥಾ ಸಖಿಯೊಬ್ಬಳನ್ನು ಕಲ್ಪಿಸಿಕೊಟ್ಟು, ನಮ್ಮ ದೇಶದ ಮಹಿಳೆಯರನ್ನು ವಿದ್ಯಾವತಿಗುಣವತಿಯರನ್ನಾಗಿ ಮಾಡಲು ಯತ್ನಿಸಿರುವ ಸಂಪಾದಕರ ಅಭಿಪ್ರಾಯವು ನಿರವೇರಬೇಕೆಂದು ನಾವು ಕೋರುವೆವು. ಈ ಪತ್ರಿಕೆಯಲ್ಲಿ, ಆರ್ಯಮಹಿಳೆಯರ ಸಹಜಚರಿತ್ರೆ, ಉಪಯುಕ್ತವಾದ ಶಾಸ್ತ್ರವಿಚಾರ ಪಾಕಶಾಸ್ತ್ರ, ಆರೋಗ್ಯಶಾಸ್ತ್ರ ಮುಂತಾದ ವಿಷಯಗಳನ್ನು ಪ್ರಕಟಿಸುವರು. ಮಕ್ಕಳನ್ನು ಸಾಕುವ ಕ್ರಮ, ಶಿಕ್ಷಿಸುವ ಕ್ರಮ, ಮನೆಯ ಆಡಳಿತವನ್ನು ನಡೆಸುವ ಕ್ರಮ, ಕಾಯಿಪಲ್ಲ್ಯಗಳನ್ನು ಬೆಳೆಯುವ ಕ್ರಮ, ಹೊಲಿಗೆ ಮುಂತಾದವುಗಳನ್ನೂ ಈ ಪತ್ರಿಕೆಯಲ್ಲಿ ಪ್ರಕಟಿಸಿದರೆ ಪತ್ರಿಕೆಯು ವಿಶೇಷ ಪ್ರಯೋಜನಕಾರಿಯಾಗುವುದೆಂಬುದರಲ್ಲಿ

ಉದಾಸೀನರಾಗಿ ಇತರಕ್ಕ ವಿದ್ಯಾರ್ಥಿಗಳು ಸಾಮಾನ್ಯವಾಗಿ ಪ್ರತಿನಿತ್ಯವೂ ಪಾಠ ಒಪ್ಪಿಸುವುದರಲ್ಲಿ ಹಿಂದಾಳುಗಳಾಗಿದ್ದು ಪರೀಕ್ಷೆಯು ಸನ್ನಿಹಿತವಾದಾಗ ಪರೀಕ್ಷೆಗೆ ಕಟ್ಟುವುದಕ್ಕೂ ಅನರ್ಹರೆಂದೆನ್ನಿಸಿಕೊಂಡು ಪರೀಕ್ಷೆಗೆ ಹೋಗುವುದನ್ನೇ ಬಿಡುವುದುಂಟು. ಪರೀಕ್ಷೆಗೆ ಹೋದರೂ ತೇರ್ಗಡೆಯಾಗದೇ ಹೋಗುವುದುಂಟು. ತಾವು ಅಯೋಗ್ಯರೆಂದು ತಿಳಿದುಕೊಂಡು ವ್ಯಾಸಂಗವನ್ನೇ ಶುದ್ಧಾಂಗವಾಗಿ ಬಿಟ್ಟುಬಿಡುವುದುಂಟು. ಶ್ರದ್ಧೆಯಿಂದ ಓದಿದ ಹುಡುಗರು ಕೆಲವು ವರ್ಷಗಳಲ್ಲಿ ಭಾರಿ ಪರೀಕ್ಷೆಗಳನ್ನು ಕೊಟ್ಟು ದಿವಾನಗಿರಿಗೂ ಅರ್ಹರಾಗುವರು. ಔದಾಸೀನ್ಯದಿಂದ ವ್ಯಾಸಂಗವಿಷಯದಲ್ಲಿ ಪರಾಙ್ಮುಖರಾದವರು ಸ್ವತಂತ್ರರಾಗಿ ಬದುಕುವುದಕ್ಕೆ ಶಕ್ತಿ ಇಲ್ಲದೆ ಪರಾಧೀನರಾದ ಅವಸ್ಥೆಯನ್ನು ಹೊಂದಿ ಜುಜುವಿ ನೌಕರಿಗಳಲ್ಲಿ ಅಹೋರಾತ್ರಿಯಲ್ಲಿಯೂ ಶ್ರಮಪಡುತ್ತಾ ಅನ್ನವಸ್ತ್ರಗಳಿಗೆ ಬೇಕಾದಷ್ಟು ಸಂಪಾದಿಸುವುದಕ್ಕೂ ಶಕ್ತಿ ಇಲ್ಲದೆ ಮೂಡಬಾರದ ಕೆಲಸಗಳನ್ನು ಮಾಡಿ ಅಗಬಾರದ ಫಲಗಳನ್ನು ಅನುಭವಿಸುವರು. ವಿದ್ಯಾರ್ಥಿಗಳು ಅಜ್ಞಾನಾತಿಶಯದಿಂದ ಪ್ರರೋವೃದ್ಧಿಗೆ ವಿರೋಧವಾದ ಕೆಲಸಗಳನ್ನು ಮಾಡುವುದು ಸಹಜವಾಗಿರುತ್ತದೆ. ಅಂತಹ ವಿದ್ಯಾರ್ಥಿಗಳು ಉದಾಸೀನರಾಗಿ ವ್ಯಾಸಂಗಮಾಡದೆ ಕೆಟ್ಟುಹೋಗುವುದಕ್ಕೆ ಅವಕಾಶವನ್ನು ಕೊಡತಕ್ಕ ಪಾಠಕನು ಉಪಾಧ್ಯಾಯ ಪದವಿಗೆ ಎಂದಿಗೂ ಅರ್ಹನಾಗುವುದಿಲ್ಲ. ಇಂಥಾ ಉದಾಸೀನರಾದ ವಿದ್ಯಾರ್ಥಿಗಳನ್ನು ಶ್ರದ್ಧೆಯುಳ್ಳವರನ್ನಾಗಿ ಮಾಡಿ ಅವರಿಗೆ ಉತ್ಸಾಹವನ್ನು ಕಲ್ಪಿಸಿ ಅವರು ಅಭಿವೃದ್ಧಿಗೆ ಬರುವಂತೆ ಮಾಡತಕ್ಕ ಸಾರಥಿಯೇ ಉಪಾಧ್ಯಾಯನೆಂಬದಾಗಿಯೂ, ಗುರು ಎಂಬದಾಗಿಯೂ ಅನ್ನಿಸಿಕೊಳ್ಳುವುದಕ್ಕೂ ವಿದ್ಯಾರ್ಥಿಗಳಿಂದ ಪೂಜಿಸಲ್ಪಡುವುದಕ್ಕೂ ಪಾತ್ರನಾಗುವನು ಆರ್ನಲ್ಡ್‌ರವರಿಗೆ ತಮ್ಮ ಪಾಠಶಾಲೆಯಲ್ಲಿ ಒಂದು ತರಗತಿಯಲ್ಲಿ ಒಬ್ಬ ವಿದ್ಯಾರ್ಥಿಯು ಹಿಂದಾಳಾದಾಗ್ಯೂ ಅನಿರ್ವಚನೀಯವಾದ ಸಂಕಟವು ಪ್ರಾಪ್ತವಾಗುತ್ತಿತ್ತು. ಒಬ್ಬ ಹುಡುಗನು ಉದಾಸೀನನಾಗಿ ಪಾಠಸ್ಮರಣೆಗಳಲ್ಲಿಯೂ ಪರೀಕ್ಷೆಗಳಲ್ಲಿಯೂ ಹಿಂದಾಳಾದ ಪಕ್ಷದಲ್ಲಿ ಅವನ ಮೇಲು ಪಜ್ಜಯಿಂದ ಇತರರೂ ಕೆಡುವಕಾಲ ಬರುವುದೆಂಬ ಭಯ ಒಂದಲ್ಲದೆ ಅಂಥಾ ವಿದ್ಯಾರ್ಥಿಯು ಕೆಡುವುದು ಪ್ರಾಣಹತ್ಯಕ್ಕೆ ಸಮಾನವಾದದ್ದೆಂಬದಾಗಿಯೂ, ವಿದ್ಯಾವಿನಯಸಂಪತ್ತುಗಳಿಂಬಲಂಕೃತನಾಗಿ ಸ್ವಶಕ್ತಿಯಿಂದ ಪ್ರವ್ಯಾರ್ಜನೆಯನ್ನು ಮಾಡಿ ಕುಟುಂಬ ಭರಣವನ್ನು ಮಾಡುತ್ತಾ ಲೋಕೋಪಕಾರಿಯಾಗಿ ಇರುವುದಕ್ಕೆ ಅವಕಾಶವಿಲ್ಲದ ಸ್ಥಿತಿಗೆ

ವದರಿಂದ ವಿದ್ಯಾರ್ಥಿಗಳಿಗುಂಟಾಗತಕ್ಕ ಲಾಭಗಳನ್ನು ಉಪದೇಶಿಸಬಹುದು. ವಿದ್ಯಾರ್ಜನೆಯು ವಿಷಯದಲ್ಲಿ ಪಾಠವನ್ನೂ ಹೇಳಬಹುದು. ಚಿಂತನೆ ಮಾಡುವುದರಲ್ಲಿಯೂ ಸಹಾಯವನ್ನಾಡಬಹುದು. ಆದಾಗ್ಯೂ ಉದಾಸೀನರಾಗಿ ಇದ್ದರೆ ಅಂಥಾ ವಿದ್ಯಾರ್ಥಿಗಳ ವಿಷಯದಲ್ಲಿ ಮಾಡತಕ್ಕದ್ದೇನಿರುತ್ತದೆ ? ನಿಮ್ಮ ಮಗನು ಅಸಾಧಾರಣನಾದ ಔದಾಸೀನ್ಯವನ್ನು ತೋರಿಸುತ್ತಲಿದಾನೆ. ಆದಾಗ್ಯೂ ಆತನ ಮನಸ್ಸನ್ನು ವಿದ್ಯಾರ್ಜನೆಯು ಮಾರ್ಗಗಳಿಗೆ ಚತುರೋಪಾಯಗಳಿಂದಲೂ ಆಕರ್ಷಿಸುವ ಪ್ರಯತ್ನ ಮಾಡುತ್ತಲಿದೇನೆ. ದೈವಾಧೀನದಿಂದ ಈ ವಿಷಯದಲ್ಲಿ ನನ್ನ ಪ್ರಯತ್ನಗಳು ಸಫಲವಾದರೆ ನಾನು ಕೃತಕೃತ್ಯನೆಂದು ಭಾವಿಸುತ್ತೇನೆ. ಇಂಥಾ ವಿಷಯಗಳಲ್ಲಿ ಅಸಹಾಯನಾಗಿ ನಾನು ಪ್ರಯತ್ನಗಳನ್ನು ಪಡಾಡುವದಕ್ಕಿಂತಲೂ ಆಗಾಗ್ಯೆ ಈ ವಿದ್ಯಾರ್ಥಿಗಳ ಮಾತಾ ಪಿತೃಗಳ ಸಹಾಯವನ್ನು ಹೊಂದುವುದೂ ಅವಶ್ಯವಾದದ್ದು. ಅದುದರಿಂದ ಹಿತೋಕ್ತಿಗರ್ಭಿತಗಳಾದ ಲೇಖನಗಳನ್ನು ಆಗಾಗ್ಯೆ ನಿಮ್ಮ ಮಗನಿಗೆ ನೀವು ಬರೆಯುತ್ತಾ ಇರಬೇಕು. ವಿದ್ಯಾರ್ಥಿಗಳು ಸ್ವಯಂ ವ್ಯಾಸಂಗಮಾಡುವುದಕ್ಕೂ, ಯೋಚಿಸುವುದಕ್ಕೂ ಸಮರ್ಥರಾಗುವಂತೆ ಮಾಡುವದೇ ಪಾಠಕರ ಪ್ರಥಮ ಕರ್ತವ್ಯ. ಈ ಕರ್ತವ್ಯವನ್ನು ನಿರ್ವಹಿಸುವದರಲ್ಲಿ ನಾನು ಮಾಡುವ ಕೆಲಸಕ್ಕೆ ನೀವೂ ಆಗಾಗ್ಯೆ ಸಹಾಯ ಮಾಡುವಿರಂದು ನಂಬಿ ಇದೇನೆ.

ಈ ಲೇಖನದಿಂದ ಜಡರಾಗಿಯೂ, ಉದಾಸೀನರಾಗಿಯೂ, ಅತಿಯೇವ ಶುಂಠರಾಗಿಯೂ ಇರತಕ್ಕ ವಿದ್ಯಾರ್ಥಿಗಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಇವರ ಕುತೂಹಲಾತಿಶಯವು ಸ್ಪಷ್ಟವಾಗುತ್ತದೆ. ಪಾಠಕರಿಗೆ ಇದೇ ಮುಖ್ಯೋದ್ದೇಶವಾಗಿರಬೇಕು. ವೈಧವಿಗ್ಗಳಾಗಿಯೂ, ಪಟುವಾಗಿಯೂ, ಶ್ರದ್ಧೆಯುಳ್ಳವರಾಗಿಯೂ ಇರತಕ್ಕ ವಿದ್ಯಾರ್ಥಿಗಳು ಮೆಹನತ್ತು ಮಾಡಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ತಾವು ಮುಂದಕ್ಕೆ ಬರುವದಲ್ಲದೆ ತಾವು ಓದುವ ಪಾಠಶಾಲೆಗಳಿಗೂ ಕೀರ್ತಿಯನ್ನು ತರುವರು. ಆ ಕೀರ್ತಿಗೆ ಎಂತಹರು ಸಂಪೂರ್ಣವಾಗಿ ಅರ್ಹರೆಂದು ಹೇಳುವುದಕ್ಕಾಗುವದಿಲ್ಲ, ಪಾಠಕರ ಮಹನೆತ್ತಿನ ಜೀತಕ್ಕೆ ಈ ವಿದ್ಯಾರ್ಥಿಗಳ ಮೆಹನತ್ತು ಸೇರುವದ್ದರಿಂದ ಪಾಠಕರಿಗೂ ಪಾಠಶಾಲೆಗಳಿಗೂ ಕೀರ್ತಿ ಲಾಭಕ್ಕೆ ಅವಕಾಶವಾಗುವದು. ಆದುದರಿಂದ ಇಂಥಾ ಕೀರ್ತಿಯಲ್ಲಿ ಒಂದು ಭಾಗ ಪಾಠಕರಿಗೂ, ಮತ್ತೊಂದು ಭಾಗ ವಿದ್ಯಾರ್ಥಿಗಳಿಗೂ ಸೇರತಕ್ಕದ್ದಾಗಿರುವದು

ಇತರರ ಅನುಭವಗಳೆಲ್ಲಾ ಅವರ ಮಾತುಗಳಿಂದಲೂ, ಬರವಣಿಗೆಗಳಿಂದಲೂ ನಮಗೆ ದೊರೆಯುತ್ತವೆ.

ಈ ಅನುಭವಗಳನ್ನು ತಿಳಿದುಕೊಳ್ಳುವದರಲ್ಲಿ ಅನೇಕ ತಪ್ಪುಗಳು ಸಂಭವಿಸುವವು.

೨ೊದಲು ಎಲ್ಲರೂ ತಮ್ಮ ಅನುಭವಗಳನ್ನು ತಪ್ಪಿಲ್ಲದೆ ತಿಳಿಸಬಹುದಾದರೂ, ವಾಕ್ಚಾತುರ್ಯವನ್ನೂ, ಭಾಷಾ ಸಂಸ್ಕಾರವನ್ನೂ ಹೊಂದಿರುವದಿಲ್ಲ.

[೨] ಎರಡನೇದು ಮಾತುಗಳನ್ನು ಅರ್ಥಮಾಡಿಕೊಳ್ಳುವದರಲ್ಲಿ ಕೇಳುಗರಿಗೆ ಅವುಗಳನ್ನು ಭಿನ್ನಾಭಿಪ್ರಾಯಕ್ಕೆ ತಿರುಗಿಸಬಹುದು.

[೩] ಮೂರನೇದು ಕೆಲವು ಅನುಭವಗಳನ್ನು ತದನುಗುಣವಾದ ಇಂದ್ರಿಯಗಳ ಮೂಲಕವೇ ಹೊಂದಬೇಕು. ನಮ್ಮ ಜ್ಞಾನದಲ್ಲಿ ಮುಕ್ಕಾಲುಪಾಲು ಪುಸ್ತಕಗಳನ್ನೊದುವದರಿಂದಲೂ, ಇತರರು ಹೇಳುವ ವಿಷಯಗಳಿಂದಲೂ ಉಂಟಾಗುತ್ತದೆ. ಆದ್ದರಿಂದ ನಿಶ್ಚಯವಾದ ಜ್ಞಾನವನ್ನು ಪಡೆಯುವದು ಕಷ್ಟ.

ಇಂಥ ಜ್ಞಾನಕ್ಕೆ ಮುಖ್ಯಸಹಕಾರಿಗಳು ಯಾವವೆಂದರೆ :—(೧) ಇಂದ್ರಿಯ ಸೌಷ್ಠವವೂ ಸೂಕ್ಷ್ಮತೆಯೂ ಇದ್ದು, ನಿಸ್ಸಂದೇಹವಾದ ವಸ್ತುಗಳ ಪ್ರತ್ಯಕ್ಷಾನುಭವವನ್ನು ಹೊಂದಿರಬೇಕು. ಅಂದರೆ ವಸ್ತುಗಳ ಮುಖ್ಯಗುಣಗಳನ್ನು ಭೇದ, ಸಾದೃಶ್ಯ ವಿಶೇಷಣೆಯಿಂದ ನಮ್ಮ ಇಂದ್ರಿಯಗಳ ಮೂಲಕ ವಿಷಯಸಾನ್ನಿಧ್ಯದಲ್ಲಿ ತಿಳಿದುಕೊಳ್ಳಬೇಕು. ಇಂಥಾ ಅನುಭವವು ಕಡಮೆಯಾದಹಾಗೆಲ್ಲಾ ವಿಷಯಗ್ರಹಣದಲ್ಲಿ ಭ್ರಮೆ ಹೆಚ್ಚುವುದು. ಇತರರ ಅನುಭವಗಳು ನಮ್ಮ ಅನುಭವವೆಂಬ ಕನ್ನಡಿಯಲ್ಲಿ ಪ್ರತಿಫಲಿಸಿ ನಮ್ಮ ಮನಸ್ಸಿಗೆ ಗೋಚರವಾಗುತ್ತವೆ. ಆದ್ದರಿಂದ ಅನುಭವವೆಂಬ ಕನ್ನಡಿಯನ್ನು ಪಾರಿಶುದ್ಧ್ಯ ಹೊಂದದರೀತಿಯಲ್ಲಿ ಇಟ್ಟುಕೊಂಡಿರಬೇಕು.

(೨) ಎರಡನೇದು :-ಸರಿಯಾದ ಭಾಷಾಪರಿಚಯವಿರಬೇಕು ಅಂದರೆ ನಮ್ಮ ಮಾತುಗಳೂ ಬರವಣಿಗೆಯೂ ಇತರರಿಗೆ ನಮ್ಮ ಅಭಿಪ್ರಾಯವನ್ನು ನಿಸ್ಸಂದೇಹವಾಗಿ ತಿಳಿಸುವಂತೆಯೂ ಇತರರ ಮಾತನ್ನು ತಪ್ಪಿಲ್ಲದೆ ನಾವು ಅರ್ಥಮಾಡಿಕೊಳ್ಳುವಂತೆಯೂ ಇರಬೇಕು.

ಆದುದರಿಂದ ವಿದ್ಯಾವ್ಯಾಸಂಗಕಾಲದಲ್ಲಿ ನಮ್ಮ ಇಂದ್ರಿಯಗಳ ಸೂಕ್ಷ್ಮತೆ

ಬಹತಕ್ಕವರು ಬದುಕಿದ್ದರೂ ಸತ್ತದ್ದಕ್ಕಿಂತಲೂ ಕಡೆ ಎಂಬದಾಗಿಯೂ, ಅಸಹಾಯ ಶೂರರಾಗಿ ಬದುಕುವುದಕ್ಕೆ ಶಕ್ತಿ ಇಲ್ಲದೆ ಕುಟುಂಬಕ್ಕೂ ಲೋಕಕ್ಕೂ ಭಾರರಾಗಿರತಕ್ಕ ವರನ್ನು ನಿರ್ಮಾಣ ಮಾಡಿದ ಪಾಪವು ಪಾಠಕರಿಗೆ ಸಂಭವಿಸುವುದೆಂಬದಾಗಿಯೂ, ತಾವು ತ್ರಯಪಡುತ್ತಾ ಅರ್ನಲ್ಡ್‌ರವರು, ಸೋದರಾಭಿಗಳಾಗಿಯೂ ಶುಂಠರಾಗಿಯೂ ಉದಾಸೀನರಾಗಿಯೂ, ಅಜಾಗರೂಕರಾಗಿಯೂ ಇರತಕ್ಕ ವಿದ್ಯಾರ್ಥಿಗಳನ್ನು ಗೊತ್ತುಮಾಡಿಕೊಂಡು ಅವರಿಗೆ ಅನೇಕಾವರ್ತಿ ಪಾಠಶಾಲೆಗಳಲ್ಲಿ ಪಾಠಗಳನ್ನು ಹೇಳುತ್ತಾ, ವ್ಯಾಸಂಗ ಕಾಲದಲ್ಲಿ ಚಿಂತನೆಯನ್ನು ಮಾಡಿಸುತ್ತಾ, ವಿದ್ಯಾಭ್ಯಾಸದಿಂದ ಉತ್ತರೋತ್ತರ ಉಂಟಾಗತಕ್ಕ ಫಲಪರಂಪರೆಗಳನ್ನು ಶ್ರುತಪಡಿಸಿ ಚಿತ್ರವಿಚಿತ್ರವಾದ ಮನೋರಥಗಳನ್ನುಂಟುಮಾಡುತ್ತಾ, ವಜ್ರಶುಂಠರಾದವರನ್ನೂ ಕೂಡ ಒಳ್ಳೇ ವಿದ್ಯಾರ್ಥಿಗಳನ್ನಾಗಿ ಮಾಡುತ್ತಾ ಬಂದರು. ಅರ್ನಲ್ಡ್‌ರವರು ಅನ್ಯಾದೃಶವಾದ ಪಾಠಕರೆಂಬ ಕೀರ್ತಿಗೆ ಇದೇ ಮುಖ್ಯಕಾರಣ. ನಮ್ಮ ಭರತಖಂಡದಲ್ಲಿಯೂ ಪೂರ್ವಕಾಲದಲ್ಲಿ ವಸಿಷ್ಠಾದಿಗಳು ಇಂಥಾ ಯಶಸ್ಸನ್ನು ಪಡೆದಿದ್ದರು. ಈಗ ಇಂಥವರ ಸಂಖ್ಯೆಯು ಬಹಳ ವಿರಳವಾಗುತ್ತಿದೆ ಅರ್ನಲ್ಡ್‌ರವರ ಮೇಲುಷ್ಟಾಂತವಾದರೂ ನಮ್ಮ ದೇಶೀಯರಾದ ಪಾಠಕರಿಗೆ ಇಂಥಾ ಉತ್ಸಾಹವನ್ನುಂಟುಮಾಡುವುದೆಂದು ನಾವು ಕೋರುತ್ತೇವೆ.

ವಿದ್ಯೆಯೂ ವಿದ್ಯೆಯ ಫಲಗಳು.

ವಿದ್ಯಾಭ್ಯಾಸವೆಂದರೆ ತನಗೂ ಉಳಿದ ಪ್ರಪಂಚಕ್ಕೂ ಇರುವ ಪರಸ್ಪರ ಸಂಬಂಧವನ್ನು ತಿಳಿದುಕೊಳ್ಳುವುದು.

ಇದಕ್ಕೆ ಎರಡು ಮಾರ್ಗಗಳು.

ಆಯಾಯ ವಸ್ತು ಸಾನ್ನಿಧ್ಯದಲ್ಲಿ ನಮ್ಮ ಇಂದ್ರಿಯಗಳ ಮೂಲಕ ಉಂಟಾಗುವ ತಿಳುವಳಿಕೆ.

ಇತರರ ಇಂದ್ರಿಯಗಳಿಗೆ ಗೋಚರವಾಗಿರುವ ವಿಷಯವನ್ನು ನಮ್ಮ ಅನುಭವಗಳ ಸಹಾಯದಿಂದ ಊಹಿಸಿ ತಿಳಿದುಕೊಳ್ಳುವುದು.

ವಸ್ತುಪಾಠಗಳೂ, ಕಿಂಡರ್‌ಗಾರ್ಟ್ಕಪಾಠಗಳೂ ಚಿತ್ರ ಬರೆಯುವದೂ ಇವುಗಳೇ ಮುಖ್ಯವಾದ ಶಿಕ್ಷಾಸಾಮಗ್ರಿಗಳಾಗಿರಬೇಕು.

ಚಿತ್ರ ಬರೆಯುವಿಕೆಯು ಕಣ್ಣಿನ ಅವಲೋಕನಾಶಕ್ತಿಯನ್ನು ಕ್ರಮಪಡಿಸಿ ಅದನ್ನು ಅತಿಸೂಕ್ಷ್ಮವಾಗಿ ಮಾಡುತ್ತದೆ. ನೋಡಿದ ವಸ್ತುವಿನ ಆಕಾರವನ್ನು ಬರೆಯುವದರಲ್ಲಿ ಗಮನಕೊಟ್ಟು ನೋಡದೆಹೋದ ಭಾಗಗಳೆಲ್ಲಾ ಬಿಟ್ಟುಹೋಗಿ ಆಕಾರವು ಕೆಟ್ಟುಹೋಗುವದರಿಂದ ಗಮನವಿಟ್ಟು ನೋಡಬೇಕಾದ ಅವಶ್ಯಕತೆಯು ತೋರಿಬಂದು ವಸ್ತುಗಳನ್ನು ಪದೇಪದೇ ನೋಡಿ ಅವುಗಳ ಆಕಾರ, ಪ್ರಮಾಣ, ಅವಯವೆಗಳನ್ನು ಚೆನ್ನಾಗಿ ತಿಳಿದುಕೊಳ್ಳುವ ರೂಢಿ ಬರುವುದು. ಮರ ಮತ್ತು ಲೋಹಗಳಲ್ಲಿ ಆಯುಧಗಳ ಸಹಾಯದಿಂದ ಕೆಲಸಮಾಡಿಸುವದರಲ್ಲಿ ಆಯಾಯವಸ್ತುವಿನ ಸ್ವಾಭಾವಿಕಸ್ಥಿತಿಯೂ ಗುಣಗಳೂ ತಿಳಿದು ಸಾಮಗ್ರಿಗಳನ್ನು ಮಾಡುವುದರಲ್ಲಿ ಅವುಗಳನ್ನು ಉಪಯೋಗಿಸುವ ಕ್ರಮವೂ ಇದರಿಂದ ಈಂಥಾ ಸಾಮಗ್ರಿಗಳ ಉಪಯೋಗವೂ ಚೆನ್ನಾಗಿ ಮನಸ್ಸಿಗೆ ಅವಗಾಹನವಾಗುವದಲ್ಲದೆ ಈ ಸಂಬಂಧಗಳಲ್ಲಿ ತಿಳಿಸಬಹುದಾದ ಹೆಚ್ಚು ವಿಷಯಗಳನ್ನು ಹುಡುಗರು ತಪ್ಪಿಲ್ಲದ ಸುಲಭವಾಗಿ ಗ್ರಹಿಸುವರು.

ಹೀಗೆ ಆಯಾಯವಸ್ತು ಸಾನ್ನಿಧ್ಯದಲ್ಲಿ ಇಂದ್ರಿಯವ್ಯಾಪಾರಗಳು ನಡೆಯುವದರಿಂದ ಪ್ರತ್ಯಕ್ಷಾನುಭವವು ಹೆಚ್ಚುವದಲ್ಲದೆ ಬುದ್ಧಿಗೆ ವಿವೇಚನಾಶಕ್ತಿಯೂ ಸ್ಥೈರ್ಯವೂ ಉಂಟಾಗುವವು.

ಮುಖ್ಯವಾಗಿ ಕಣ್ಣು ಕೈಗಳ ವ್ಯಾಪಾರಗಳನ್ನು ಮನೋವ್ಯಾಪಾರಕ್ಕೆ ಅನುವೃತ್ತಿಗಳನ್ನಾಗಿ ಮಾಡಿ ಮನಸ್ಸಿನ ಧಾರಣಾಶಕ್ತಿಯನ್ನು ಹೆಚ್ಚಿಸಿ ಸ್ವತಃ ಬುದ್ಧಿ ಕುಶಲತೆಯನ್ನು ಹೆಚ್ಚಿಸುವುದು.

ವಿದ್ಯಾಭ್ಯಾಸದ ಪರಿಪೂರ್ಣಫಲಗಳ್ಯಾವವೆಂದರೆ—

(೧) ಜೀವನೋಪಾಯಕ್ಕಾಗಿ ಮಾಡುವ ಕಸಬುಗಳ ಶಾಸ್ತ್ರಜ್ಞಾನವನ್ನುಂಟುಮಾಡಬೇಕು—ಅಂದರೆ ಕಾಯಶಕ್ತಿಯೊಡನೆ ಬುದ್ಧಿಶಕ್ತಿಯೂ ಸೇರಿ ಕಸಬಿನಲ್ಲಿ ಕುಶಲತೆಯನ್ನುಂಟುಮಾಡಬೇಕು.

(೨) ದೇಶದಸ್ವಭಾವಸಿದ್ಧವಾದ ಸಹಾಯಸಂಪತ್ತುಗಳನ್ನು ತಿಳಿಸಿ, ಅವುಗಳನ್ನು ಜನರ ಸೌಖ್ಯಕ್ಕಾಗಿ ಕೆಲಸಕ್ಕೆ ಉಪಯೋಗಿಸಿಕೊಳ್ಳುವಂತೆ ತಿಳಿವಳಿಕೆಯನ್ನುಂಟುಮಾಡಬೇಕು. ಅಂದರೆ—ದೇಶದ ಐಶ್ವರ್ಯಾಭಿವೃದ್ಧಿಗೆ ಕಾರಣವಾಗಬೇಕು.

ಯನ್ನು ಹೆಚ್ಚಿಸಿಕೊಂಡು ಇತರರ ಅನುಭವಗಳನ್ನು ತಿಳಿದುಕೊಳ್ಳುವದು ಮುಖ್ಯ ವಾದದ್ದು.

ಮೇಲೆ ಹೇಳಿದಂತೆ ವಿದ್ಯಾಭ್ಯಾಸದ ಪ್ರಯೋಜನವನ್ನು ಮಕ್ಕಳಿಗೆ ಉಂಟು ಮಾಡಬೇಕಾದರೆ ಅವರಿಂದ ಪುಸ್ತಕಗಳನ್ನು ಮಟ್ಟಗೆ ಓದಿಸುವದರಿಂದ ಉಂಟಾಗ ಲಾರದು. ಹೀಗೆ ಎಷ್ಟು ವರ್ಷಗಳನ್ನು ಕಳೆದಾಗ್ಯೂ ಸ್ವತಃ ಯೋಚಿಸುವ ಶಕ್ತಿ ಯೂ, ಕೆಲಸ ಮಾಡುವುದರಲ್ಲಿ ಯುಕ್ತಿಯೂ ಉಂಟಾಗುವದಿಲ್ಲ. ಓದಿ ತಿಳಿಯುವ ಕೆಲಸವನ್ನು ಮಾತುವದಕ್ಕೆ ಉಪಕ್ರಮಿಸಿ ತಪ್ಪಿಲ್ಲದೆ ಅದನ್ನು ಮಾಡಿ ಮುಗಿಸುವದು ಕಷ್ಟ. ಏಕೆಂದರೆ:— ಮಾತುಗಳಿಂದ ತಿಳಿಸುವವಕ್ಕಾಗದ ಇಂದ್ರಿಯಾನುಭವ ಗಳು ಮಧ್ಯೆಮಧ್ಯೆ ಬಿಟ್ಟುಹೋಗಿರುವದರಿಂದ ಕತ್ತಲೆಯುಲ್ಲಿ ಎಡವಿ ಬಿದ್ದಂತಾಗು ತ್ತದೆ. ಇದಕ್ಕೆ ದೃಷ್ಟಾಂತವಾಗಿ ಅಡಿಗೆ ಮಾಡುವದನ್ನು ತಿಳಿಯುವನೊಬ್ಬನು ಪಾಕ ಶಾಸ್ತ್ರದಲ್ಲಿ ಅನ್ನ ಮಾತುವ ಕ್ರಮವನ್ನು ಓದಿ ಹಾಗೆ ಮಾಡುವದು ಕಷ್ಟ. ಇದಕ್ಕೆ ಪುಸ್ತಕದಲ್ಲಿ ವಿವರಿಸುವವಕ್ಕಾಗದೆ ಬಿಟ್ಟಿರುವ ಬೆಂಕಿ ಸಮ್ಮಂಧನಾದ, ಪಾಕಸಮ್ಮಂ ಧನಾದ ಇಂದ್ರಿಯಾನುಭವಗಳು ಇಲ್ಲದಿರುವದೇ ಕಾರಣ. ಸ್ವಪ್ರಯತ್ನದಿಂದಲೂ ಇತರರು ಅದೇ ಕೆಲಸವನ್ನು ಮಾಡುವಾಗ ನೋಡುವದರಿಂದಲೂ ಮೇಲ್ಕಂಡ ಅನು ಭವವನ್ನು ಪಡೆಯಬೇಕು.

ಅದುದರಿಂದ ಬಾಲಕರಿಗೆ ಮೊದಲು ಅವರ ಇಂದ್ರಿಯ ವ್ಯಾಪಾರಗಳಿಂದ ಕ್ರಮವಾದ ವಸ್ತುಗಳ ಪ್ರತ್ಯಕ್ಷಾನುಭವವನ್ನುಂಟುಮಾಡಬೇಕು.

ಎಲ್ಲಾ ಇಂದ್ರಿಯಗಳಲ್ಲಿಯೂ ತ್ವಕ್ಚಕ್ಷುರಿಂದ್ರಿಯಗಳು ಪ್ರಧಾನವಾದುವು ಅತಿ ಬಾಲ್ಯದಲ್ಲಿಯೇ ಇವು ಬೆಳೆದು ಪರಿಪೂರ್ಣವಾಗಿ ವ್ಯಾಪಾರಕ್ಕೆ ಸಿದ್ಧವಾಗಿರುವವು. ಪ್ರಪಂಚದಲ್ಲಿ ಬಹುಶಃ ಎಲ್ಲಾ ವಸ್ತುಗಳೂ ಸ್ಪರ್ಶೇಂದ್ರಿಯಕ್ಕೆ ವಿಷಯವಾದವು. ಅದುದರಿಂದ ಈ ಇಂದ್ರಿಯಜ್ಞಾನವು ಅತಿ ವಿಸ್ತಾರವಾಗುವದು. ಚಕ್ಷುರಿಂದ್ರಿಯ ಜ್ಞಾನವು ಪ್ರತ್ಯಕ್ಷಜ್ಞಾನಕ್ಕೆ ಮುಖ್ಯವಾದುದು.

ಈ ಎರಡು ಇಂದ್ರಿಯಗಳಿಗೆ ವಸ್ತುಗಳ ಭೇದ, ಸಾದೃಶ್ಯಗಳನ್ನು ತಿಳಿಯುವ ಅವಲೋಕನಾಶಕ್ತಿಯು ಹೆಚ್ಚಿದಹಾಗೆಲ್ಲಾ ವಸ್ತುಜ್ಞಾನವು ಹೆಚ್ಚುವುದು. ಆದ ಕಾರಣ ಅತಿ ಬಾಲ್ಯದಿಂದಲೂ ಕೈ ಮತ್ತು ಕಣ್ಣುಗಳ ವ್ಯಾಪಾರಶಿಕ್ಷೆಯು ಮೊದಲು ಉಪಾಧ್ಯಾಯರ ಗಮನವನ್ನು ಹೊಂದಬೇಕು.

ಜೀವಿಸುತ್ತವೆ ಆದುದರಿಂದ ಈ ವಾಯುಮಂಡಲವು ಪ್ರಪಂಚದಲ್ಲಿನ ಜೀವಿಗಳಿಗೆ ಮುಖ್ಯವಾಗಿ ಬೇಕಾಗುವ ಸಾಮಗ್ರಿಗಳಿಗೆ ಉಗಮಾಸ್ಥಾನವಾಗಿದೆ. ಒಂದು ಸ್ಥಳದಲ್ಲಾದ ಶಬ್ದವು ಮತ್ತೊಂದು ಸ್ಥಳಕ್ಕೆ ಕೇಳಿಸಬೇಕಾದಲ್ಲಿ ವಾಯುವು ಅತ್ಯಾವಶ್ಯಕವು. ಆದುದರಿಂದ ವಾಯುಮಂಡಲವು ಶಬ್ದಚಲನೆಗೆ ಆಧಾರವಾಗಿರುವುದು. ವಾಯುಮಂಡಲದ ಮತ್ತೊಂದು ಮುಖ್ಯವಾದ ಪ್ರಯೋಜನವೇನೆಂದರೆ-ಜಗತ್ತಿನ ಶಕ್ತಿಗಳೆಲ್ಲೆಲ್ಲಾ ಉತ್ಕೃಷ್ಟವಾದ ನೀರಿನ ಆವಿಯನ್ನು ಸಮುದ್ರದಿಂದ ಭೂಭಾಗಕ್ಕೆ ತರತಕ್ಕದ್ದು — ಈ ಆವಿಯು ಮಂಜು, ಇಬ್ಬನಿ, ಮಳೆ ಇವುಗಳ ರೂಪದಿಂದ ಭೂಮಿಗೆ ತನುವನ್ನುಂಟುಮಾಡುವುದಲ್ಲದೆ ಹಳ್ಳಕೊಳ್ಳಗಳಿಗೂ, ಹೊಳೆ ಕೆರೆಗಳಿಗೂ ನೀರನ್ನು ಒದಗಿಸುವುದು.

ಈ ಜಲಶಕ್ತಿಯು ಜಗತ್ತಿನಲ್ಲಿ ಕೆಲವು ಆಶ್ಚರ್ಯಕರವಾದ ಕಾರ್ಯಗಳನ್ನು ನಡೆಸುತ್ತದೆ. ಅವುಗಳ ವಿಚಾರವನ್ನು ತಿಳಿಯುವುದಕ್ಕೆ ಮೊದಲು, ಈ ಶಕ್ತಿಯು ಎಲ್ಲಿಂದ ಬರುವುದು ಹೇಗೆ ಪಸರಿಸುವುದು ಎಂಬುದನ್ನು ವಿಚಾರಿಸೋಣ:—ಬೇಸಿಗೆಯಲ್ಲಿ ನಮ್ಮ ಮನೆಗಳ ಮುಂಬಾಗಲ ಮೆಟ್ಟಿಲ್ಲಿ ಕಲ್ಲುಮೇಲೆ ಚೆಲ್ಲಿದ ನೀರು ಸ್ವಲ್ಪಹೊತ್ತಿನಲ್ಲಿಯೇ ಕಾಣದೇಹೋಗುವುದನ್ನು ಎಲ್ಲರೂ ನೋಡಿರುವರಷ್ಟೆ-ಅದು ಎಲ್ಲಿಹೋಯಿತು? ಕಲ್ಲಿನಲ್ಲಿಬೇರೆ ಹೋಗಿಲ್ಲ. ಕಣ್ಣಿಗೆ ಕಾಣುವಂಥ ವಿರೂಪವನ್ನು ಬಿಟ್ಟು ವಾಯುವಿನಲ್ಲಿ ಲೀನವಾಯಿತು. ಈ ಬದಲಾವಣೆಗೆ ಉಷ್ಣವು ಸಹಕಾರಿ. ವಾಯುವು ಉಷ್ಣವಾಗಿದ್ದಷ್ಟೂ ಆವಿಯನ್ನು ಸೆಳಕೊಂಡು ಬಿಸುವ್ದು ಹೆಚ್ಚು.

ಜಗತ್ತಿನಲ್ಲಿ ಇಂಥಾ ಬದಲಾವಣೆಯು ಸದಾ ಹೇರಳವಾಗಿ ಜರಗುತ್ತಲಿರುತ್ತದೆ. ಸೂರ್ಯನ ತಾಪವು ವಿಶೇಷವಾಗಿರುವ ಉಷ್ಣವಲಯುಗಳಲ್ಲಿನ ಸಮುದ್ರದ ಮೇಲುಭಾಗದಲ್ಲಿ ಇದು ಬಹಳವಾಗಿ ನಡೆಯುತ್ತದೆ. ಸಮುದ್ರವು ವಾಯುಮಂಡಲಕ್ಕೆ ದಿನ ಒಂದಕ್ಕೆ ಲಕ್ಷಕೋಟಿ ಟನ್‌ಗಳಮೇರೆ ಆವಿಯನ್ನು ಬಿಡಿಸುತ್ತದೆಂದು ಕಂಡುಹಿಡದಿರುವರು. ಈರೀತಿ ನೀರು ಆವಿರೂಪವಾಗುವ್ದಕ್ಕೆ ಭಾಷ್ಪೀಭವನವೆಂದು ಹೆಸರು. ಇದಕ್ಕೆ ಬದಲಾಗಿ ಆವಿಯೇ ನೀರಾಗುವ್ದಕ್ಕೆ ಘನೀಭವನವೆಂದು ಹೆಸರು. ಭಾಷ್ಪೀಭವನವು ಯಾವರೀತಿಯಲ್ಲಿ ಉಷ್ಣದ ಪರಿತಾಂಶವೋ ಅದೇರೀತಿ ಘನೀಭವವು ಶೀತದ ಪರಿತಾಂಶವು ನಿಜವಾದ ನೀರಿನ ಆವಿ ಎಂಬುವು ಕಣ್ಣಿಗೆ ಕಾಣುವದಿಲ್ಲ. ಬಿಸಿನೀರುಕುಂಡೆಯಿಂದ ಬರುವ ಹಬೆಯನ್ನು ನೋಡಿದ್ದೀ ಅಲ್ಲವೆ? ಆಹಬೆಯು ಬಾಯಿಯು ಹತ್ತಿರವೇ ಕಾಣಿಸುವದಿಲ್ಲ. ಬಾಯಿಯಿಂದ ಸ್ವಲ್ಪದೂರದಲ್ಲಿ ಕಾಣಿಸುತ್ತದೆ.

(೬) ಇಂದ್ರಿಯಗಳಿಗೆ ವ್ಯಾಪಾರವೇ ಸಹಜಧರ್ಮ. ಆದುದರಿಂದ ಮನುಷ್ಯನು ನಿರಂತರ ಕೆಲಸವಾಡುತಿರಬೇಕು. ಈ ಕೆಲಸಗಳೇ ಮನುಷ್ಯನ ಕೆಟ್ಟ ಅಥವಾ ಒಳ್ಳೇಸ್ಥಿತಿಯನ್ನು ನಿಶ್ಚಯಿಸುತ್ತದೆ.

ಇತರರಿಗೆ ಹಿಂಸಾಕರವಾಗಿಲ್ಲದೆಯೂ ತನಗೆ ಸ್ವಾತಂತ್ರ್ಯವನ್ನೂ ಸುಖವನ್ನೂ ಉಂಟುಮಾಡುವಂತೆ ಈ ಕೆಲಸಗಳನ್ನೆಲ್ಲಾ ಮಾಡುವ ಕ್ರಮವನ್ನು ವಿದ್ಯೆಯು ತಿಳಿಸುತ್ತದೆ. ಇದರಿಂದ ಪರಹಿಂಸವು ತೋರಿ ಸನ್ಮಾರ್ಗಪ್ರವೃತ್ತಿಯುಂಟಾಗಬೇಕು.

(೪) ಸುಖದುಃಖ ಮಿಶ್ರವಾದ ಸಂಸಾರಸಂಬಂಧದಲ್ಲಿ ಮನಸ್ಥೈರ್ಯವನ್ನು ಕಾಪಾಡಿಕೊಳ್ಳುವಶಕ್ತಿಯುಂಟಾಗಬೇಕು.

ಸಂಪತ್ತ್ಯಂಗಾರ್.

ವಾಯುಮಂಡಲ.

ಗೋಳದ ಸುತ್ತಲೂ ಆವರಿಸಿಕೊಂಡಿರುವ ವಾಯುವಿಗೆ **ವಾಯುಮಂಡಲ** ಅಥವಾ **ವಾತಾವರಣ** ವೆಂದು ಹೆಸರು. ನಮ್ಮಲ್ಲಿ ರೂಢಿಯಾಗಿರುವ ಆಕಾಶವೆಂಬ ಶಬ್ದವು ಇದಕ್ಕೆ ಸಲ್ಲತಕ್ಕದ್ದು. ಈ ವಾಯುಮಂಡಲವು ಭೂಮಿಗೆ ದೂರವಾದಹಾಗೆಲ್ಲ ವಿರಳವಾಗುತ್ತಾಬರುತ್ತದೆ. ಇದು ಸಮುದ್ರಮಟ್ಟಕ್ಕೆ ೫೦ ಮೈಲಿ ಎತ್ತರದ ವರೆಗೆ ವ್ಯಾಪಿಸಿರುತ್ತದೆ.

ಈ ವಾತಾವರಣದ ವಾಯುವಿನಲ್ಲಿ ನೂರುಭಾಗಕ್ಕೆ ಇಪ್ಪತ್ತೊಂದುಭಾಗವು ಆಮ್ಲಜನಕವೆಂಬ ವಾಯುರೂಪವಾದ ವಸ್ತುವೂ, ಸುಮಾರು ಎಪ್ಪತ್ತೊಂಭತ್ತು ಭಾಗ ಸಾರಜನಕವೆಂಬ ವಾಯುರೂಪವಾದ ವಸ್ತುವೂ, ಎಲ್ಲೋ ಸ್ವಲ್ಪಭಾಗ ನೀರಿನ ಆವಿಯೂ, ಇದಕ್ಕಿಂತಲೂ ಸ್ವಲ್ಪಭಾಗ ಇಂಗಾಲಾಮ್ಲವೆಂಬ ವಾಯುರೂಪವಾದ ವಸ್ತುವೂ ಸೇರಿವೆ. ವಾಯುವಿನಲ್ಲಿನ ಈ ಅಂಶಗಳು ಪ್ರಾಣಿ ಮತ್ತು ಸಸ್ಯವರ್ಗಗಳಿಗೆ ಮುಖ್ಯಾಹಾರವಾಗಿವೆ. ಆಮ್ಲಜನಕವೆಂಬುದು ಜೀವಿಗಳ ಪ್ರಾಣರಕ್ಷಣೆಗೆ ಅತ್ಯಾವಶ್ಯಕವಾದುದು. ಇಂಗಾಲಾಮ್ಲವು ವಾಯುವಿನಿಂದಲೇ ಮುಖ್ಯವಾಗಿ ಸಸ್ಯಾದಿಗಳ ಸ್ಥೂಲಭಾಗಗಳ ರಚನೆಗೆ ಬೇಕಾಗುವ ಪದಾರ್ಥವು ದೊರಿಯತಕ್ಕದ್ದು. ಪ್ರಾಣಿಗಳು ಮಾಂಸಾಹಾರ ಅಥವಾ ಸಸ್ಯಾಹಾರ ಇಲ್ಲವೆ ಈ ಎರಡು ಆಹಾರಗಳಿಂದಲೂ

2. 1875 ವರ್ಗಸಂಖ್ಯೆಯಾಗಬೇಕಾದರೆ ಯಾವ ಕನಿಷ್ಠಸಂಖ್ಯೆಯಿಂದ ಭಾಗಿಸಲ್ಪಡಬೇಕು.

$1875 = 5\times375 = 5\times5\times75 = 5\times5\times5\times5\times3$.

ಆದ್ದರಿಂದ ಇದನ್ನು 3 ರಿಂದ ಭಾಗಿಸಿದರೆ $5\times5\times5\times5$ ಆಗುತ್ತೆ; ಅಂದರೆ 25 ರ ವರ್ಗವಾಗುತ್ತೆ.

3. 13 ರಿಂದ ಭಾಗವಾಗುವ ನಾಲ್ಕು ಅಂಕಿಗಳ ಕನಿಷ್ಠಸಂಖ್ಯೆ ಯಾವದು?

ನಾಲ್ಕು ಅಂಕಿಗಳ ಕನಿಷ್ಠಸಂಖ್ಯೆ 1000; ಇದನ್ನು 13 ರಿಂದ ಭಾಗಿಸಿದರೆ ಶೇಷ 12. ಆದ್ದರಿಂದ ಇದಕ್ಕೆ 1 ನ್ನು ಸೇರಿಸಿದರೆ 13 ರಿಂದ ಭಾಗವಾಗುತ್ತೆ.

4. 13 ರಿಂದ ಭಾಗವಾಗುವ ನಾಲ್ಕು ಅಂಕಿಗಳ ಅತ್ಯಂತ ದೊಡ್ಡ ಸಂಖ್ಯೆ ಯಾವುದು?

ನಾಲ್ಕು ಅಂಕಿಗಳ ಅತ್ಯಂತ ದೊಡ್ಡಸಂಖ್ಯೆ 9999; ಇದನ್ನು 13 ರಿಂದ ಭಾಗಿಸಿದರೆ ಶೇಷ 2; ಆದ್ದರಿಂದ 9999 ರಿಂದ 2 ನ್ನು ಕಳೆದರೆ ಉಳಿಯುವದು 13 ರಿಂದ ಭಾಗವಾಗುತ್ತೆ.

5. 67,594 ನ್ನು 56,287 ರಿಂದ ಮೀರುಪಟ್ಟಿಯಲ್ಲಿ ಗುಣಿಸಬೇಕು.

67594	
56287	
473,158	$= 67594\times7$
18,926,320	$= 67594\times7\times40$
	$= 5759+4\times280$
3,795,264,000	$=$ 2 ನೇ ಪಟ್ಟಿ $\times 200 =$
3,814,663,478	67594×56000

ವಿವರಣೆ.

ಮೊದಲನೇ ಪಂಕ್ತಿಯು 67594 ರನ್ನು 7 ರಿಂದ ಗುಣಿಸಿ ಬಂದಲಬ್ಧ; ಎರಡನೇ ಪಂಕ್ತಿಯು ಮೊದಲನೇ ಪಂಕ್ತಿಯನ್ನು 40 ರಿಂದ ಗುಣಿಸಿ ಬಂದಲಬ್ಧ; ಯಾಕಂದರೆ $56000 = 280\times200$.

ಆದ್ದರಿಂದ ಮೊದಲನೇ ಪಂಕ್ತಿ ದತ್ತ ಸಂಖ್ಯೆಯನ್ನು 7 ರಿಂದಲೂ, 2 ನೇ ಪಂಕ್ತಿಯಲ್ಲಿ 280 ರಿಂದಲೂ, 3 ನೇ ಪಂಕ್ತಿಯಲ್ಲಿ 56000 ರಿಂದಲೂ ಗುಣಿಸಿದಂ

ನೀರು ಕುಡಿಯುತ್ತಿರುವ ಪಾತ್ರೆಯು ಬಾಯಿಗೆ ಒಂದು ಗಾಜಿನ ಕೊಳವೆಯು ನಿಟ್ಟಲ್ಲಿ ಅವಿಯು ಕೊಳವಿಯಲ್ಲಿ ಕಾಣಿಸದೆ ಅದರಿಂದ ಹೊರಗೆ ಬಂದನಂತರ ಕಣ್ಣಿಗೆ ಗೋಚರವಾಗುತ್ತದೆ. ಇವಕ್ಕೆ ಕಾರಣವೇನೆಂದರೆ ಉಷ್ಣವಾದ ಆವಿಯು ಶೀತಲವಾಯುವಿನೊಡನೆ ಸೇರಿದೊಡನೆ ಅದರ ಉಷ್ಣವು ಕೊಂಚಮಟ್ಟಿಗೆ ಹೋಗಿ ಅದು ತಣ್ಣಗಾಗುತ್ತದೆ. ತಣ್ಣಗಾದುದರಿಂದ ಪುನಹ ನೀರಾಗುತ್ತದೆ; ಎಂದರೆ ಘನೀಭವಿಸುವುದು. ಧೂಳಿನೋಪಾದಿಯಲ್ಲಿ ವಾಯುವಿನೊಳಗೆ ತೇಲಾಡುತ್ತಲಿರುವ ಈ ಸಣ್ಣ ಸಣ್ಣ ನೀರಿನ ಕಣಗಳು ನಾವು ಹಬೆ ಎಂದು ಕರೆಯುವ ಸಣ್ಣ ಮೋಡವಾಗುತ್ತದೆ, ಇದೇ ರೀತಿಯಲ್ಲಿ ಆವಿಯನ್ನುಳ್ಳ ವಾತಾವರಣದ ವಾಯುವು ತಣ್ಣಗಾದಲ್ಲಿ ಆ ಆವಿಯಲ್ಲಿ ಕೊಂಚಭಾಗವು ಸೂಕ್ಷ್ಮವಾದ ಜಲಕಣಗಳಾಗಿ ಘನೀಭವಿಸಿ ಮೋಡದ ರೂಪಿನಲ್ಲಿ ದೃಷ್ಟಿಗೆ ಗೋಚರವಾಗುತ್ತದೆ. ಘನೀಭವನವು ಜರಗುತ್ತ ಜರಗುತ್ತ ಈ ಸೂಕ್ಷ್ಮವಾದ ಜಲಕಣಗಳು ಒಂದಕ್ಕೊಂದು ಸೇರಿಕೊಂಡು ಹನಿಗಳಾಗುತ್ತವೆ. ಈ ಹನಿಗಳು ವಾಯುವಿಗಿಂತ ಭಾರವಾದುದರಿಂದ ವಾಯುಮಂಡಲದಲ್ಲಿ ನಿಲ್ಲಲಾಗದೆ ಭೂಮಿಗೆ ಬೀಳುತ್ತವೆ. ಇದೆ ಮಳೆಯು. ಮಳೆ ಹನಿಗಳು ಕೆಳಗೆ ಬೀಳುವ ಸಮಯದಲ್ಲಿ ಹೆಚ್ಚಾಗಿ ಘನೀಭವಿಸಿದರೆ ಆನೆಕಲ್ಲುಗಳಾಗುತ್ತವೆ. ವಾಯುಮಂಡಲದಲ್ಲಿರುವ ಜಲಕಣಗಳು ಹನಿಗಳ ರೂಪವನ್ನು ಪಡೆಯದೆ ಘನೀಭವಿಸಿದಲ್ಲಿ ಅವುಗಳು ಭೂಮಿಗೆ ಮಂಜಿನ ರೂಪದಲ್ಲಿ ಬೀಳುತ್ತವೆ. ಆದುದರಿಂದ ಮಳೆಯು, ಆನೆಕಲ್ಲು, ಮಂಜೂ ಜಲಕಣಗಳ ರೂಪಭೇದಗಳು.

ಕೆ. ಚಿಂತಾಮಣಿರಾವ್, ಬಿ. ಎ. ಎಲ್. ಟಿ.

ಗಣಿತ.

1. ಯಾವ ಕನಿಷ್ಠ ಸಂಖ್ಯೆಯಿಂದ ಗುಣಿಸಲ್ಪಟ್ಟರೆ 675 ಘನಸಂಖ್ಯೆಯಾಗುವದು ?

$\therefore \quad 675 = 5 \times 135 = 5 \times 5 + 27 = 5 \times 5 \times 3 \times 3 \times 3.$

ಆದ್ದರಿಂದ 5 ರಿಂದ ಗುಣಿಸಿದರೆ $5 \times 5 \times 3 \times 3 \times 3$ ಆಗಿ 15 ರ ಘನವಾಗುತ್ತೆ.

ರಾಗ—ಕವಾಚು. ರೂಪಕಾ.

ಈದಿನವೇಸುದಿನಾ । ನರವರದರುಶನಾ ॥ ಪ ॥ ಯಾದವ ಕುಲಾಂಬುಧಿ ಸೋಮ । ವಸುಮತಿಪತಿಲಲಾಮ । ಸದಮಲನೀಭುವನ ಪ್ರಕಾಶನ ಸಮಾಗಮ—ವೀ ॥ ಅ ॥

ಸರ್ವಜನ ಲೋಚನ ಚಕೋರಕೆಮುದಪ್ರದನು । ಸುಕಲಾನಿಧಿಯು ವಿಕಸಿತಬುಧಹೃ । ತ್ಕುಮುದಾಸ್ಮಿತ ಕೌಮುದಿಯಿಂ ಕರುಣಾಮೃತದಿಂ । ದುನ್ನತಪದ । ಪಸರಿಸುವನು ॥ ೧ ॥

ಸುಮನಸವರತನಯು । ಸಮಗುಣಗಣನಿಲಯ ॥ ನತಜನಾಭಿಮತವರದ ಪರಮಪದ ಬಳುಸ ಖದಿಂ ಶ್ರೀಕೃಷ್ಣಂಬ್ರ ಮೆರೆಯುತ್ತಿರಲಿ ನರಹರಿದಯದಿಂ ಮನೋಹರ ಶರೀರನು ಕಟಾಕ್ಷಿಸಲು ಮಿಗೆ ನಮಗೆ ॥ ೨ ॥

ವೃತ್ತ॥ ಶ್ರೀಕಾಂತಾಸಖನಂತೆ ಶಾಂತಗುಣದಿಂ ಸಂತೋಷಸಾಮ್ರಾಜ್ಯದಿಂ । ಶ್ರೀಕಂಠ ಪ್ರಿಯನಂತೆ ಭೂರಿಧನದಿಂ ಸೌಭಾಗ್ಯಸೌಖ್ಯಂಗಳಿಂ ॥ ನಾಕಾಧೀಶ್ವರನಂತೆ ಭೋಗಪದದಿಂ ಸರ್ವಾಯುರಾರೋಗ್ಯದಿಂ । ಭೂಕಾಂತಂಧ್ರುವನಂತೆ ಬಾಳುಗೆಚಿರಂ ಶ್ರೀಕೃಷ್ಣರಾಜಾಂಕಿತಂ ॥ ೩ ॥

ವಿ. ನರಸಿಂಹಮೂರ್ತಿರಾವ್

ರೇಂಜರ್, ತುಮಕೂರ್.

ವಿದ್ಯಾಭ್ಯಾಸದ ಇಲಾಖೆಯ ಸರ್ಕ್ಯುಲರ್.

D. ನಂ. 13. ತಾ॥ 24—12—1900.

ಕನ್ನಡಾ ಸ್ಕೂಲ್ III ನೇ ಸ್ಟ್ಯಂಡರ್ಡ್‌ನಲ್ಲಿ ಉಪಯೋಗಿಸಿರುವ "ನೀತಿರತ್ನಾಕರ" ವೆಂಬ ಪುಸ್ತಕಕ್ಕೆ ಬದಲಾಗಿ, ಗಾರ್ಜುಯೇಟ್ಸ್ ಟ್ರೇಡಿಂಗ್

ತಾಯಿತು. ಈ ಮೂರು ಪಂಕ್ತಿಗಳನ್ನೂ ಸೇರಿಸಿದರೆ ದತ್ತಸಂಖ್ಯೆಯನ್ನು 56287 ರಿಂದ ಗುಣಿಸಿದಂತಾಯಿತು.

ಇದೇರೀತಿಯಲ್ಲಿ ದತ್ತ ಸಂಖ್ಯೆಯನ್ನು 72856 ರಿಂದಲೂ ಗುಣಿಸಬಹುದು.

67594
72856

4,731,580,000
189,263,200
3,785,264

4,924,628,464

ಮೊದಲು ಪಂಕ್ತಿಯಲ್ಲಿ ದತ್ತ ಸಂಖ್ಯೆಯನ್ನು 7 ರಿಂದ ಗುಣಿಸಿ ನಾಲ್ಕು ಸೊನ್ನೆ ಸೇರಿಸಿದೆ; ಅಂದರೆ ದತ್ತಸಂಖ್ಯೆಯನ್ನು 70000 ರಿಂದ ಗುಣಿಸಿದೆ; 2 ನೇ ಪಂಕ್ತಿಯಲ್ಲಿಯೂವರೂ ಮೊದಲನೇ ಪಂಕ್ತಿಯಲ್ಲಿ 7 ರಿಂದ ಗುಣಿಸಿ ಬಂದ ಲಬ್ಧವನ್ನು 4 ರಿಂದ ಗುಣಿಸಿ 2 ಸೊನ್ನೆ ಸೇರಿಸಿದೆ; ಅಂದರೆ ದತ್ತಸಂಖ್ಯೆಯನ್ನು 2800 ರಿಂದ ಗುಣಿಸಿದಹಾಗಾಯಿತು. 3 ನೇ ಪಂಕ್ತಿಯಲ್ಲಿ ದತ್ತಸಂಖ್ಯೆಯನ್ನು 28 ರಿಂದ ಗುಣಿಸಿ ಬಂದ ಲಬ್ಧವನ್ನು 2 ರಿಂದ ಗುಣಿಸಿದೆ; ಅಂದರೆ ದತ್ತಸಂಖ್ಯೆಯನ್ನು 56 ರಿಂದ ಗುಣಿಸಿದಂತಾಯಿತು.

ಎ. ವೆಂಕಟೇಶಯ್ಯ, ಬಿ. ಎ.

೨೮.

ಶ್ರೀವಮ್ಮಹಾರಾಜರವರ ಸುಖಾಗಮನ.

ವೃತ್ತ॥ ಜಂಬುಲಕ್ಷ್ಮೀಸಹಸಂಭವಂ ಸವಮಲಂ ಸೌಭಾಗ್ಯರತ್ನಾಕರಾ । ನ್ವಯವೃದ್ಧಿಂ ಕೆಸುತ್ತವೊಮೃತಕರಂ ವಿಭ್ರಾಜವಾನಾಂಬರಂ ॥ ಭುವಿದೂರಂಕರ ನೇ ಸವೊಗಮನದಿಂ ಸರ್ವಪ್ರಜಾವೃಂದಕಂ । ನಯನಾನಂದವನೀಯುತಿರು ವಂ ಕೃಷ್ಣಾಂಕರಾಜಂಕರಂ ॥ ೧ ॥

ವಿದ್ಯಾದಾಯಿನಿ.

ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯ ಚಕ್ರವರ್ತಿನಿಯವರ ಭಾವ
ಚಿತ್ರವನ್ನು, ವೃತ್ತಾಂತ ಪತ್ರಿಕೆಯ ಎಡಿಟರವರು ನಮಗೆ ಕಳು
ಹಿಸಿ ಕೊಟ್ಟದುದಕ್ಕಾಗಿ ನಾವು ಕೃತಜ್ಞರಾಗಿರುತ್ತೇವೆ.

ಸಂಪಾದಕ.



ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾರವರು.

ಅನೇಕಸಮಯೋಪಕಾರವಾಗಿಯೂ ಮುದ್ರಿಸಲ್ಪಟ್ಟಿರುವ "ನೀತಿಕಥಾಸಾರ" (I ನೇ ಮತ್ತು II ನೇ ಭಾಗ) ವೆಂಬ ಪುಸ್ತಕವನ್ನು, ವಿದ್ಯಾಭ್ಯಾಸದ ಇಲಾಖೆಯಿಂದ ಮುದ್ರಿಸ್ಪಡುವ ಕನ್ನಡ ಮೂರನೆಯ ಪುಸ್ತಕವು ಪ್ರಕಟನವಾಗುವವರೆಗೂ ಎಲ್ಲಾ ಕನ್ನಡಾ ಸಾಲೆಗಳಲ್ಲಿಯೂ ಉಪಯೋಗಿಸತಕ್ಕದ್ದು.

ರುಜು—ಹೆಚ್. ಜಿ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.

[I ಮತ್ತು II ನೇ ಭಾಗಗಳನ್ನು ಒಟ್ಟುಗೂಡಿಸಿರುವ ನೀತಿಕಥಾಸಾರದ ಬೆಲೆಯು ನಾಲ್ಕು ಆಣೆ.]

ರ್‌ಂಗನೇ ಇನವಿಯೆ ಲೋವರ್‌ಸೆಕೆಂಡರಿ ವಿದ್ಯಾರ್ಥಿಗಳು ಅವಶ್ಯ ಓದತಕ್ಕ ಅಂಶ.

ಈ ರ್‌ಂಗನೇ ಇನವಿ ಲೋವರ್‌ಸೆಕೆಂಡ್ರಿ ಕನ್ನಡ ಟೆಕ್ಸ್‌ಟ್‌ಬುಕ್ ಕಮಿಟಿಯಾವರ ಮುದ್ರಣಾತ್ಯವೆಯಿಂದ ೨ ಪದ್ಯಗಳು ವ್ಯತ್ಯಾಸವಾಗಿ ಬಿದ್ದಿರುವವು. ಇವುಗಳನ್ನು ಈ ಕೆಳಗೆ ಬಿದ್ದಿರುವಂತೆ ಪರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿಗಳು ಓದಿಕೊಳ್ಳತಕ್ಕದ್ದು.

೩ ನೆಯ ಸಂಧಿ. ೬೨ ನೆಯ ಪದ್ಯದ ಪೂರ್ವಾರ್ಧವು.

ತ್ರಿತಯಪ್ರಮಾಣಮೇಂ ದುರ್ಜನಂ ನಿಂದಿಸಿದೊಂ । ಪತಿಗಳೆಯೆಗೂಗೆ ರವಿರುಚಿ ಯಾನಾರೊವ್ವುವೆ । ಕ್ಷಿತಿಯೊಳೊಂದಂ ನಾಮಿಸುಟ್ಟುದೊಡೆ ಗಂಗೆಯಂ ಲೋಕಂಪರಿ ಸ್ಮರಿಸದೆ ॥ ಎಂದಿರಬೇಕು.

೮ ನೆಯ ಸಂಧಿ ೦೧ ನೆಯ ಪದ್ಯದ ೪ ನೆಯ ನಾದದ ಕೊನೆಯಿಂದ

ಕುಮಾರನಕಲೆ । ಮಡದಿಯರ ಜನ್ಮನೇ ಕೆಟ್ಟುದೀಕೊಡ್ತಿಗೆನ್ನಯ ಜಾಳ್ಕೆ ಹಾ ಮಾನಿಸರೇ ॥ ಎಂದಿರಬೇಕು.

ಆಯ್ಯಾಶಾಸ್ತ್ರಿಗಳು.
ಆ॥ ವಿ॥ ಸ್ಪಂಪರ್ಕರು.

ವಿದ್ಯಾದಾಯಿನಿ

ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾರವರು.

ಅಸೋಸಿಯೇರ್ಷನ್‌ರವರಿಂದ ಮುದ್ರಿಸಲ್ಪಟ್ಟಿರುವ "ನೀತಿಕಥಾಸಾರ" (I ನೇ ಮತ್ತು II ನೇ ಭಾಗ) ವೆಂಬ ಪುಸ್ತಕವನ್ನು, ವಿದ್ಯಾಭ್ಯಾಸದ ಇಲಾಖೆಯಿಂದ ಮುದ್ರಿಸಲ್ಪಡುವ ಕನ್ನಡ ಮೂರನೆಯ ಪುಸ್ತಕವು ಪ್ರಕಟವಾಗುವವರೆಗೂ ಎಲ್ಲಾ ಕನ್ನಡಾ ಸ್ಕೂಲ್‌ಗಳಲ್ಲಿಯೂ ಉಪಯೋಗಿಸತಕ್ಕದ್ದು

ರುಜು—ಹೆಚ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇರ್ಷನ್.

I ನೇ ಮತ್ತು II ನೇ ಭಾಗಗಳನ್ನು ಬಹು ಗೌರವಿಸುವ ನೀತಿಕಥಾಸಾರದ

[illegible]

ಶ್ರುತಿಯಪ್ರಮಾಣಮೇಂ ದುರ್ಜನಂ ನಿಂದಿಸಿದೊಡಂ । ಪತಿಗಳಿಯೊಗೂಗೆ ರವಿರುಚಿಯನಾರೊಪ್ಪುವ । ಕ್ಷಿತಿಯೊಳೊರ್ವಂ ಪಾಪಿಮುಟ್ಟಿದೊಡೆ ಗಂಗೆಯುಂ ಲೋಕಂಪರಿಗ್ರಹಸದೆ ॥ ಎಂದಿರಬೇಕು.

೪ ನೆಯ ಸಂಧಿ ೧೧ ನೆಯ ಪದ್ಯದ ೫ ನೆಯ ಪಾದದ ಕೊನೆಯಿಂದ

ಫಲವೇನಕಟ । ಮಡದಿಯರ ಜನ್ಮವೇ ಕೆಟ್ಟುದೀಹೊತ್ತಿಗೆನ್ನಯ ಬಾಳ್ಕೆ ಹಾಮುಗಿದುದೇ ॥ ಎಂದಿರಬೇಕು.

ಅಯ್ಯಾಶಾಸ್ತ್ರಿಗಳು.
ಅ॥ವಿ॥ ಗ್ರಂಥಕರ್ತರು.

ಎಷ್ಟು ಪಾಕ್ಷಿಪೀತಿಯಿಂದಲೂ, ಪ್ರಜಾನುರಾಗದಿಂದಲೂ ಮುಂದಕ್ಕೆ ಇವರು ತಮ್ಮ ಕರ್ತವ್ಯವನ್ನು ನಡೆಯಿಸಿದರೆಂಬುವುದು ಇದರಿಂದ ಚೆನ್ನಾಗಿ ಗೊತ್ತಾಗುವುದು. ವಿಕ್ಟೋರಿಯಾ ಮಹಾರಾಜ್ಞೀಯವರ ಸೌಜನ್ಯಕ್ಕೂ, ಇಂಗ್ಲೀಸಿನವರ ಒಟ್ಟು ಜನಾಂಗದ ದೊಡ್ಡತನಕ್ಕೂ ಇದೊಂದೇ ದೃಷ್ಟಾಂತವು ಸಾಕು.

***

ದೇಶದಲ್ಲೆಲ್ಲಾ ಸರ್ವಪ್ರಕಾರವಾಗಿಯೂ ಇವರಕಾಲದಲ್ಲಿ ಅಭಿವೃದ್ಧಿಯಾಯಿತು. ಇತರ ವಿಷಯಗಳಂತೆ ವಿದ್ಯಾಭ್ಯಾಸ ವಿಷಯದಲ್ಲೂ ಸಹ ಅಭಿವರ್ಧಕವಾದ ಏರ್ಪಾಡುಗಳು ನಡೆದವು. ಮೊದಲಿಂದಲೂ ಏಕರೀತಿಯಲ್ಲಿ ನಡೆಯುತಿದ್ದ ವಿದ್ಯಾಭ್ಯಾಸವನ್ನು ಇನ್ನೂ ವಿಶೇಷವಾಗಿ ವೃದ್ಧಿಗೆ ತರುವ ಕಾನೂನುಗಳು ಈಗ ಸುಮಾರು ೩೦ ವರ್ಷಗಳಿಂದೀಚಿಗೆ ನಡೆದಿರುವುವು. ಇವುಗಳಲ್ಲೆಲ್ಲ ೧೮೭೦ನೇ ಇಸವಿಯಲ್ಲಿ ನಡೆದ ಒಂದು ಕಾನೂನು ಬಹಳ ಮುಖ್ಯವಾದುದು. ಇದರಿಂದ ಇಂಗ್ಲೆಂಡ್ ದೇಶದಲ್ಲಿರುವ ೫ ರಿಂದ ೧೪ ವರ್ಷ ವಯಸ್ಸಿಗೆ ವಿಾರದ ಮತ್ತು ವಿದ್ಯೆಯನ್ನು ಕಲಿಯಲು ಶಕ್ತರಾದ ಸಮಸ್ತ ಬಾಲಕರು ಬಾಲಕಿಯರೂ ಅಗತ್ಯವಾಗಿ ವಿದ್ಯಾಭ್ಯಾಸಮಾಡಬೇಕೆಂದಾಗಿದೆ ಇದಕ್ಕೆ ವಿರುದ್ಧವಾಗಿ ನಡೆವ ತಾಯಿತಂದೆಗಳಿಗೆ ಶಿಕ್ಷೆಯನ್ನು ಸಹ ವಿಧಿಸುತ್ತಾರೆ. ಈ ಕಾನೂನಿನಿಂದ ಆ ದೇಶದ ಪುರೋಭಿವೃದ್ಧಿ ಎಷ್ಟು ಸುನಿಶ್ಚಿತವಾಯಿತೆಂಬುದು ಸ್ಪಷ್ಟವಾಗಿದೆ. ಇಂಡಿಯಾದೇಶದಲ್ಲಿ ಕೆಲವು ವರ್ಷಗಳಿಂದ ವಿದ್ಯಾಭಿವೃದ್ಧಿಯು ನಡೆಯುತಿದ್ದಾಗ್ಯೂ ವಿದ್ಯಾಭ್ಯಾಸ ಮಾಡಬಹುದಾದ ವಯಸ್ಸಿನ ಮಕ್ಕಳಲ್ಲಿ ಎಂಟು ಭಾಗದಲ್ಲಿ ಒಂದು ಭಾಗ ಮಾತ್ರ ಈಗ ವಿದ್ಯೆಯನ್ನು ಕಲಿಯುತ್ತಿದಾರೆ.

***

ಶ್ರೀಮನ್ಮಹಾರಾಣಿ ವಿಕ್ಟೋರಿಯಾರವರು ಗತಿಸಿದ ನಂತರ ರಾಜ್ಯಾಧಿಕಾರಕ್ಕೆ ಹಕ್ಕುದಾರರಾದ ಅವರ ಪ್ರಥಮ ಪುತ್ರರಾದ ಶ್ರೀಮಾನ್. ಎಡ್ವರ್ಡ್‌ರವರು ದಯವಾಡಿಸಿದರು.

ವಿದ್ಯಾದಾಯಿನಿ.

ಭಾಗ ೯.] ಫೆಬ್ರವರಿ ೧೯೦೧. [ಸಂಚಿಕೆ ೨.

ಎಡಿಟರವರ ನೋಟ್ಸ್.

ಈ ತಿಂಗಳಲ್ಲಿ ತಿಳಿಸಬೇಕಾದ ವರ್ತಮಾನಗಳಲ್ಲೆಲ್ಲಾ ವಿಕ್ಟೋರಿಯಾ ಮಹಾರಾಜ್ಞೀಯವರ ಮರಣವೇ ಮುಖ್ಯವಾದ್ದು. ಸಾಕ್ಷಾತ್ ರಾಜ್ಯಲಕ್ಷ್ಮಿಯಂತಿದ್ದ ಇವರು ಜನವರಿ ತಿಂಗಳು ೨೨ ನೇ ತಾ॥ ಮಂಗಳವಾರ ಸಾಯಂಕಾಲ ೬. ೩೦ ಘಂಟೆ ಸಮಯದಲ್ಲಿ ಈ ಲೋಕವನ್ನು ಬಿಟ್ಟರು. ಸಾಯುವಾಗ್ಗೆ ಇವರಿಗೆ ೮೨ ವರ್ಷ ವಯಸ್ಸು; ಮತ್ತು ಅದುವರೆಗೆ ೬೪ ವರ್ಷ ಏಕರೀತಿದಾಗಿ ರಾಜ್ಯಭಾರವನ್ನು ಮಾಡಿದ್ದರು. "ಜಾತಸ್ಯ ಮರಣಂ ಧ್ರುವಂ" ಎಂಬುದು ನಿಶ್ಚಯವೇ ಆದರೂ, ಪುರುಷನ ಪರಿಮಿತನಾದ ಆಯುಸ್ಸನ್ನು ಇವರು ಸ್ವಲ್ಪ ಹೆಚ್ಚುಕಡಮೆಯಾಗಿ ಮುಗಿಸಿದವರೆ ಆದರೂ, ಇಂಥ ಮಹಾತ್ಮರ ವಿಯೋಗವು ಸರ್ವರಿಗೂ ವಿಷಾದವನ್ನುಂಟುಮಾಡದಿರದು. ನಿರುಪಮೈಶ್ವರ್ಯಸಂಪನ್ನರಾಗಿ ಇವರು ಚಿರಕಾಲ ನಳವುಂಡಾತನಿಗಿಂತಲೂ ವಿಶೇಷವಾಗಿ ರಾಜ್ಯಾಧಿಕಾರವನ್ನು ನಡೆಯಿಸಿದರು. ಇಂಗ್ಲೀಷು ಚಕ್ರಾಧಿಪತ್ಯಕ್ಕೆ ಈಗಿರುವ ಪರಮೋನ್ನತಿಯು ಇವರಕಾಲದಲ್ಲೇ ನೆಲೆಗೊಂಡದ್ದು. ಮುಖ್ಯವಾಗಿ ಇವರಿಗಿದ್ದ ಪ್ರಜಾವಾತ್ಸಲ್ಯವು ಅತ್ಯಂತಸ್ತುತ್ಯರ್ಹವಾಗಿದೆ. ಪ್ರಜೆಗಳಲ್ಲಿ ಇವರಿಗೆ ತಾಯಿಗೆ ಮಕ್ಕಳಲ್ಲಿರುವಂತೆ ವಾತ್ಸಲ್ಯವು ಸಂಪೂರ್ಣವಾಗಿತ್ತೆಂಬುದಕ್ಕೆ ಅನೇಕ ನಿದರ್ಶನಗಳನ್ನು ಹೇಳುತ್ತಾರೆ. ಅಂಥವುಗಳಲ್ಲೊಂದನ್ನು ಮಾತ್ರ ಇಲ್ಲಿ ತಿಳಿಸುವೆವು. ಇವರಿಗೆ ರಾಜ್ಯಾಭಿಷೇಕವು ವಿಶೇಷ ವೈಭವದಿಂದ ನಡೆಯುತ್ತಿದ್ದಾಗ, ಕಿರೀಟವನ್ನು ಇವರು ಧರಿಸುವ ಸಮಯದಲ್ಲಿ ನೆರೆದ್ದ ಪ್ರಜೆಗಳಲ್ಲಿ ವ್ಯಕ್ತವಾದ ಅಪಾರಾತಿಶಯವನ್ನು ರಾಜಭಕ್ತಿಯನ್ನೂ, ತತ್ಕಾಲೋಚಿತವಾದ ವಿಜೃಂಭಣೆಯನ್ನೂ ನೋಡಿದಮಾತ್ರಕ್ಕೆ ಇವರಿಗೆ "ಇಂತಹ ಚಕ್ರಾಧಿಪತ್ಯದ ಭಾರವನ್ನು ನಾನು ಹೇಗೆ ವಹಿಸೇನು? ಇಷ್ಟು ಭಕ್ತರಾದ ಪ್ರಜೆಗಳನ್ನು ನಾನು ಹೇಗೆ ಸಂರಕ್ಷಿಸೇನು?" ಎಂದು ತಮ್ಮಲ್ಲಿ ತನಗೆ ಇದ್ದ ಅಪ್ರತ್ಯಯವನ್ನು ಸೂಚಿಸುವ ಕಣ್ಣೀರು ಬಂತಂತೆ.

ಗತಿಸಿದ ನನ್ನ ಪೂರ್ವಾಧಿಕಾರಿಯವರು ಇಂಡಿಯಾವಿನ ರಾಜ್ಯಭಾರವನ್ನು ಸ್ವತಃ ವಹಿಸಿಕೊಳ್ಳಲೂ, ಆ ವಿಸ್ತಾರವಾದ ದೇಶದ ರಾಜ್ಯಭಾರದ ವಿಷಯದಲ್ಲಿ ಅತ್ಯಂತ ಆಸಕ್ತಿಯನ್ನು ತೋರ್ಪಡಿಸಿ ಇಂಡಿಯಾ ಚಕ್ರವರ್ತಿನಿ ಎಂಬ ಬಿರುದಾಂಕಿತವನ್ನು ಪಡೆಯಲೂ ಈ ದೇಶದ ದೊರೆಗಳಲ್ಲಿ ಮೊದಲನೇಯವರಾಗಿದ್ದರು.

"ಶ್ರೀ ಮಹಾರಾಣಿ ಚಕ್ರವರ್ತಿನಿಯವರು ಇಂಡಿಯಾವಿಗೆ ಸಂಬಂಧಪಟ್ಟ ವಿಶಿಷ್ಟ ವಿಷಯಗಳಲ್ಲಿಯೂ ನಿರಂತರವಾದ ಅನುರಾಗವುಳ್ಳವರಾಗಿದ್ದರು, ಮತ್ತು ಅವರ ಕೋಟ್ಯಂತರ ಪ್ರಜೆಗಳು ಅವರ ವಿಷಯದಲ್ಲಿಯೂ ಅವರ ಸಾರ್ವಭೌಮ ವಿಷಯದಲ್ಲಿಯೂ ತೋರ್ಪಡಿಸಿದ ರಾಜಭಕ್ತಿಯನ್ನೂ ಪ್ರೀತಿಗೌರವವನ್ನೂ ನಾನು ಚೆನ್ನಾಗಿ ತಿಳಿದವನಾಗಿರುತ್ತೇನೆ.

"ಈ ಅನುರಕ್ತಿಯು ಶ್ರೀ ಮಹಾರಾಣಿಯವರ ದೀರ್ಘ ಮತ್ತು ವಿಖ್ಯಾತವಾದ ರಾಜ್ಯಭಾರದ ಕಡೆಯ ವರುಷದಲ್ಲಿ ದಕ್ಷಿಣ ಆಫ್ರಿಕಾದೇಶದ ಯುದ್ಧದಲ್ಲಿ ಬಹು ಶ್ಲಾಘ್ಯರೀತಿಯಲ್ಲಿಯೂ ಸ್ವದೇಶಾಭಿಮಾನದೊಡನೆಯೂ ಹಿಂದೂದೇಶದ ಅರಸರುಗಳು ಸಹಾಯವನ್ನು ಕೊಡುವರೆ ತೋರ್ಪಡಿಸಿದ ಉತ್ಸಾಹದಿಂದಲೂ, ಹಿಂದೂದೇಶಿಯ ಸೈನ್ಯದವರು ತಮ್ಮ ದೇಶದ ಎಲ್ಲೆಗಳ ಹೊರಗೆ ಯುದ್ಧದಲ್ಲಿ ತೋರಿಸಿದ ಪರಾಕ್ರಮದಿಂದಲೂ ಸ್ಪಷ್ಟವಾಗಿ ನಿದರ್ಶನವಾಗುತ್ತದೆ.

"ಶ್ರೀ ಮಹಾರಾಣಿಯವರ ಅಪೇಕ್ಷೆಮೇರೆಗೂ ಅವರ ಅನುಮತಿಯಿಂದಲೂ ನಾನು ಇಂಡಿಯಾದೇಶಕ್ಕೆ ಪ್ರಯಾಣಮಾಡಿ ಆ ಪ್ರಾಚೀನದೇಶದ—ವೈ—ಪ್ರಖ್ಯಾತಿ ಹೊಂದಿದ ಛತ್ರಾಧಿಪತ್ಯದಲ್ಲಿಯು ಸಾಮಂತ ಅರಸರುಗಳನ್ನೂ, ಪ್ರಜೆಗಳನ್ನೂ, ಮುಖ್ಯಪಟ್ಟಣಗಳನ್ನೂ ಸ್ವತಃ ಸಂದರ್ಶಿಸಿ ಪರಿಚಿತಿ ಮಾಡಿಕೊಂಡದ್ದಾಗಿರುತ್ತದೆ.

"ಆಗ ನನಗೆ ಹೃದಯಸ್ಥವಾದ ಅನುಭವವು ನಾನು ಎಂದಿಗೂ ಮರೆಯುತಕ್ಕದ್ದಲ್ಲ. ಪ್ರಥಮ ಚಕ್ರವರ್ತಿನಿ ಮಹಾರಾಣಿಯವರನ್ನೇ ಮೇಲುಪಜ್ಞೆಯಾಗಿಟ್ಟುಕೊಂಡು ಹಿಂದೂದೇಶದ ಸಮಸ್ತವರ್ಗದ ಪ್ರಜೆಗಳ ಯೋಗಕ್ಷೇಮವನ್ನು ಅಭಿವೃದ್ಧಿಪಡಿಸುವದಕ್ಕೂ, ನನ್ನ ಮಾತುಶ್ರೀಯವರ ಹಾಗೆಯೇ ಪ್ರಜೆಗಳ ನಿರಂತರವಾದ ಪ್ರೀತಿಗೌರವಕ್ಕೆ ಪಾತ್ರನಾಗುವದಕ್ಕೂ ನಾನು ಸಾರ್ವದಾ ಪ್ರಯತ್ನಿಸುವೆನು.

ವಿಂಡ್ಸರ್ ಕಾಸ್ಲ್ ಎಡ್ವರ್ಡ್, ಮಹಾರಾಜಾ ಚಕ್ರವರ್ತಿ"
೪ನೇ ಫೆಬ್ರವರಿ ೧೯೦೧.

ವಿದ್ಯಾದಾಯಿನಿ.

ಮದರಾಸು ಗವರ್ನ್‌ಮೆಂಟ್ ಪ್ರಾಪ್ತ ಅಲಾಖಾ ಸೂಪರ್‌ಟೆಂಡೆಂಟರವರು ನಮ್ಮ ವಾಚಕರ ತಿಳುವಳಿಕೆ ಬಗ್ಗೆ ಕಳುಹಿಸಿದ ಈ ಲೇಖನವನ್ನು ಪ್ರಕಟಿಸಿರುತ್ತೇವೆ.

ಪ್ರಕಟನೆ.

ಫೋರ್ಟ್ ಸೈಂಟ್ ಜಾರ್ಜ್, ೧೯೦೧ ನೇ ಇಸವಿ ಫೆಬ್ರವರಿ ೧೧ ನೇ ತಾರೀಕು.

ನಂ. ೧೧೫.—ಇಂಡಿಯಾ ಗವರ್ನ್‌ಮೆಂಟಿನವರ ಈ ಕೆಳಗಣ ಗಜೆಟ್ ಎಕ್ಸ್‌ಟ್ರಾರ್ಡಿನರಿ ಸರ್ವಜನರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿದೆ.

ಹೋಮ್ ಡಿಪಾರ್ಟ್‌ಮೆಂಟ್.

ಪಬ್ಲಿಕ್

ಫೋರ್ಟ್ ಸೈಂಟ್ ಜಾರ್ಜ್, ತಾ॥ ೪ ನೇ ಫೆಬ್ರವರಿ ೧೯೦೧ ನೇ ಇಸವಿ.

ನಂ. ೪೧೦.—ಶ್ರೀಮನ್ಮಹಾರಾಜಾ ಇಂಡಿಯಾ ಚಕ್ರವರ್ತಿಯವರು ಇದರಿಂದ ಕಂಡ ಲೇಖನವನ್ನು ಇಂಡಿಯಾ ದೇಶದ ಅರಸರುಗಳಿಗೂ, ಪ್ರಜೆಗಳಿಗೂ ದಯವಿಟ್ಟು ಕಳುಹಿಸಿಕೊಟ್ಟಿರುತ್ತಾರೆ.

" ಇಂಡಿಯಾದೇಶದ ಅರಸರುಗಳಿಗೆ ಮತ್ತು ಪ್ರಜೆಗಳಿಗೆ,—ನನ್ನ ಪ್ರಿಯ ಮಾತುಶ್ರೀಯವರ ಅತ್ಯಂತ ದುಃಖಕರವಾದ ಮರಣದ ದೆಸೆಯಿಂದ ಬಹು ಪುರಾತನದಿಂದ ವಂಶ ಪರಂಪರೆಯಾಗಿ ನಡೆದುಬಂದ ಪಟ್ಟವು ನನಗೆ ಲಭಿಸಿರುತ್ತದೆ. ಈ ಸಂದರ್ಭದಲ್ಲಿ ಹಿಂದೂದೇಶದ ಅರಸರುಗಳಿಗೂ, ನಮ್ಮ ಹಿಂದೂಸ್ಥಾನ ರಾಜ್ಯದ ಪ್ರಜೆಗಳಿಗೂ ನನ್ನ ಅಭಿನಂದನಂಗಳನ್ನು ಕಳುಹಿಸಲೂ ಅವರ ಯೋಗಕ್ಷೇಮದಲ್ಲಿ ನನ್ನ ಅನುರಾಗವನ್ನು ವ್ಯಕ್ತಪಡಿಸಲು ಕುತೂಹಲವುಳ್ಳವನಾಗಿರುತ್ತೇನೆ. ಜಗದ್ವಿಖ್ಯಾತಿಯಾದ

ಗತಿಸಿದ ನನ್ನ ಪೂರ್ವಾಧಿಕಾರಿಯವರು ಇಂಡಿಯಾವಿನ ರಾಜ್ಯಭಾರವನ್ನು ಸ್ವತಃ ವಹಿಸಿಕೊಳ್ಳಲೂ, ಆ ವಿಸ್ತಾರವಾದ ದೇಶದ ರಾಜ್ಯಭಾರದ ವಿಷಯದಲ್ಲಿ ಅತ್ಯಂತ ಆಸಕ್ತಿಯನ್ನು ತೋರ್ಪಡಿಸಿ ಇಂಡಿಯಾ ಚಕ್ರವರ್ತಿನಿ ಎಂಬ ಬಿರುದಾಂಕಿತವನ್ನು ಪಡೆಯಲೂ ಈ ದೇಶದ ದೊರೆಗಳಲ್ಲಿ ಮೊದಲನೇಯವರಾಗಿದ್ದರು.

"ಶ್ರೀ ಮಹಾರಾಣಿ ಚಕ್ರವರ್ತಿನಿಯವರು ಇಂಡಿಯಾವಿಗೆ ಸಂಬಂಧಪಟ್ಟ ವಿಶಿಷ್ಟ ವಿಷಯಗಳಲ್ಲಿಯೂ ನಿರಂತರವಾದ ಅನುರಾಗವುಳ್ಳವರಾಗಿದ್ದರು; ಮತ್ತು ಅವರ ಕೋಟ್ಯಂತರ ಪ್ರಜೆಗಳು ಅವರ ವಿಷಯದಲ್ಲಿಯೂ ಅವರ ಸಾಮ್ರಾಜ್ಯದ ವಿಷಯದಲ್ಲಿಯೂ ತೋರ್ಪಡಿಸಿದ ರಾಜಭಕ್ತಿಯನ್ನೂ ಪ್ರೀತಿಗೌರವವನ್ನೂ ನಾನು ಚೆನ್ನಾಗಿ ತಿಳಿದವನಾಗಿರುತ್ತೇನೆ.

"ಈ ಅನುರಕ್ತಿಯು ಶ್ರೀ ಮಹಾರಾಣಿಯವರ ದೀರ್ಘ ಮತ್ತು ವಿಖ್ಯಾತವಾದ ರಾಜ್ಯಭಾರದ ಕಡೆಯ ವರುಷದಲ್ಲಿ ದಕ್ಷಿಣ ಆಫ್ರಿಕಾದೇಶದ ಯುದ್ಧದಲ್ಲಿ ಬಹು ಶ್ಲಾಘ್ಯರೀತಿಯಲ್ಲಿಯೂ ಸ್ವದೇಶಾಭಿಮಾನದೊಡನೆಯೂ ಹಿಂದೂದೇಶದ ಅಧಿಪತಿಗಳು ಸಹಾಯವನ್ನು ಕೊಡುವರೆ ತೋರ್ಪಡಿಸಿದ ಉತ್ಸಾಹದಿಂದಲೂ, ಹಿಂದೂದೇಶಿಯ ಸೈನ್ಯದವರು ತಮ್ಮ ದೇಶದ ಎಲ್ಲೆಗಳ ಹೊರಗೆ ಯುದ್ಧದಲ್ಲಿ ತೋರಿಸಿದ ಪರಾಕ್ರಮದಿಂದಲೂ ಸ್ಪಷ್ಟವಾಗಿ ನಿದರ್ಶನವಾಗುತ್ತದೆ.

"ಶ್ರೀ ಮಹಾರಾಣಿಯವರ ಅಪೇಕ್ಷೆಮೇರೆಗೂ ಅವರ ಅನುಮತಿಯಿಂದಲೂ ನಾನು ಇಂಡಿಯಾದೇಶಕ್ಕೆ ಪ್ರಯಾಣಮಾಡಿ ಆ ಪ್ರಾಚೀನದೇಶದ—ವೈ—ಪ್ರಖ್ಯಾತಿ ಹೊಂದಿದ ಛತ್ರಾಧಿಪತ್ಯಗಳಲ್ಲಿಯು ಸಾಮಂತ ಅರಸರುಗಳನ್ನೂ, ಪ್ರಜೆಗಳನ್ನೂ, ಮುಖ್ಯಪಟ್ಟಣಗಳನ್ನೂ ಸ್ವತಃ ಸಂದರ್ಶಿಸಿ ಪರಿಚಿತಿ ಮಾಡಿಕೊಂಡದ್ದಾಗಿರುತ್ತದೆ.

"ಆಗ ನನಗೆ ಹೃದಯಸ್ಥವಾದ ಅನುಭವವು ನಾನು ಎಂದಿಗೂ ಮರೆಯುತಕ್ಕದ್ದಲ್ಲ. ಪ್ರಥಮ ಚಕ್ರವರ್ತಿನಿ ಮಹಾರಾಣಿಯವರನ್ನೇ ಮೇಲುಪಜ್ಞೆಯಾಗಿಟ್ಟುಕೊಂಡು ಹಿಂದೂದೇಶದ ಸಮಸ್ತವರ್ಗದ ಪ್ರಜೆಗಳ ಯೋಗಕ್ಷೇಮವನ್ನು ಅಭಿವೃದ್ಧಿಪಡಿಸುವದಕ್ಕೂ, ನನ್ನ ಮಾತುಶ್ರೀಯವರ ಹಾಗೆಯೇ ಪ್ರಜೆಗಳ ನಿರಂತರವಾದ ಪ್ರೀತಿಗೌರವಕ್ಕೆ ಪಾತ್ರನಾಗುವದಕ್ಕೂ ನಾನು ಸಾರ್ವದಾ ಪ್ರಯತ್ನಿಸುವೆನು.

ವಿಂಡ್ಸರ್ ಕಾಸ್ಲ್ ಎಡ್ವರ್ಡ್, ಮಹಾರಾಜಾ ಚಕ್ರವರ್ತಿ"
೪ನೇ ಫೆಬ್ರವರಿ ೧೯೦೧.

ಮದರಾಸ್ ಗೌರ್ನಮೆಂಟ್ ಥಾಪಾ ಇಲಾಖಾ ಸೂಪರ್ಟೆಂಡೆಂಟರವರು ನಮ್ಮ ವಾಚಕರ ತಿಳುವಳಿಕೆ ಬಗ್ಗೆ ಕಳುಹಿಸಿದ ಈ ಲೇಖನವನ್ನು ಪ್ರಕಟಿಸಿರುತ್ತೇವೆ.

ಪ್ರಕಟನೆ.

ಫೋರ್ಟ್ ಸೈಂಟ್ ಜಾರ್ಜ್, ೧೯೦೧ ನೇ ಇಸವಿ ಫೆಬ್ರವರಿ ೧೧ ನೇ ತಾರೀಕು.

ನಂ. ೧೧೫೬.—ಇಂಡಿಯಾ ಗವರ್ನ್‌ಮೆಂಟಿನವರ ಈ ಕಳಗೆಣ ಗಜೆಟ್ ಎಕ್ಸ್‌ಟ್ರಾರ್ಡಿನರಿ ಸರ್ವಜನರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿದೆ.

ಹೋಮ್ ಡಿಪಾರ್ಟ್‌ಮೆಂಟ್.

ಪಬ್ಲಿಕ್

ಕಲ್ಕತ್ತಾ, ತಾ॥ ೪ ನೇ ಫೆಬ್ರವರಿ ೧೯೦೧ ನೇ ಇಸವಿ.

ನಂ. ೫೧೦.—ಶ್ರೀಮನ್ಮಹಾರಾಜಾ ಇಂಡಿಯಾ ಚಕ್ರವರ್ತಿಯವರು, ಇವರು ಕಂಡ ಲೀಲೆಯನ್ನು ಇಂಡಿಯಾ ದೇಶದ ಅರಸರುಗಳಿಗೂ, ಪ್ರಜೆಗಳಿಗೂ ತಿಳುವಿಸ್ಸಿ ಕಳುಹಿಸಿಕೊಟ್ಟಿರುತ್ತಾರೆ.

" ಇಂಡಿಯಾದೇಶದ ಅರಸುಗಳಿಗೆ ನಮ್ಮ ಪ್ರಜೆಗಳಿಗೆ—ನನ್ನ ಪ್ರಿಯ ಮಕ್ಕಳಿಗೆ ಮತ್ತು ಅಭಿಮಾನಿಗಳಾದ ಮೂರು ದೇಶದಿಂದ ಬಹು ಪ್ರಾತಃಕಾಲ ನಿಮ್ಮ ಮೇಲೆ ಕರುಣೆಯುಳ್ಳವರಾಗಿ ನಡೆಸುವಂತೆ ಸರ್ವೇಶ್ವರನು ನಮಗೆ ಅಪ್ಪಣೆಕೊಟ್ಟಿದ್ದಾನೆ. ಈ ಸಂದರ್ಭದಲ್ಲಿ ನಿಮ್ಮ ಅರಸುಗಳಿಗೂ, ನಿಮ್ಮ ಮೇಲಾಳ್ವಿಕೆಯ ಅಧಿಕಾರಿಗಳಿಗೂ, ನಿಮ್ಮ ಮೇಲಾಳ್ವಿಕೆಯ ಪ್ರಜೆಗಳಿಗೂ ನಮ್ಮ ಪಟ್ಟಾಭಿಷೇಕಾವಸರದಲ್ಲಿ ನಿಮಗೆ ಕಳುಹಿಸಿರುವ ಅನೇಕ ಸಂದೇಶಗಳಿಗೆ ನಾವು ಬಹಳವಾಗಿ ಸಂತೋಷಪಟ್ಟಿದ್ದೇವೆ. ನಾವು ನಿಮ್ಮ ಕಡೆಯ ರಾಜಭಕ್ತಿಯನ್ನು ಸ್ವೀಕರಿಸಲು ಸಂತೋಷಪಟ್ಟಿದ್ದೇವೆ. ನಾವು ನಿಮ್ಮ ಕಡೆಯ

ಅಂತರಿಕ್ಷಕ್ಕೆ ಹೋಗಿ ಮೇಘಗಳಾಗಿ ಬಿಟ್ಟಗುಡ್ಡಗಳಲ್ಲಿ ವರ್ಷಿಸುವ ನೀರು ಪ್ರವಾಹಗಳಾಗಿ ಪುನಃ ಸಮುದ್ರಕ್ಕೆ ಸೇರುವುದನ್ನು ನೋಡಿ ಈ ಜಲವು ವೃಥಾ ಪುನಃ ಸಮುದ್ರವನ್ನು ಸೇರಕೂಡದು. ವ್ಯವಸಾಯಕ್ಕೂ, ವ್ಯಾಪಾರಕ್ಕೂ, ಕೈಗಾರಿಕ ಕೆಲಸಗಳಿಗೂ ಇವುಗಳು ಉಪಯೋಗವಾಗುವಂತೆ ಮಾಡಬೇಕೆಂದು, ಇವರಕಾಲದಲ್ಲಿ ಇಂಜನೀರ್‌ಗಳು ಈ ಜಲಾಶಯುಗಳಿಗೆಲ್ಲಾ ಸಂಕಲೆಯನ್ನು ಹಾಕಿ ಮೇಲೆ ಹೇಳಿದ ವಿಷಯಾಗಳಲ್ಲಿ ಜನಗಳ ಇಷ್ಟಾರ್ಥಪರಿಪೂರ್ಣವಾಗುವಂತೆ ಮಾಡಿದರು. ಇನ್ನೂ ಮಾಡುತ್ತಲಿರುವರು. ಅನೇಕ ಇಂಜನೀರ್‌ಗಳು ನದಿಗಳಲ್ಲಿ ಪ್ರವಹಿಸತಕ್ಕ ನೀರಿನಲ್ಲಿ ಒಂದು ಹನಿಯೂ ಸಮುದ್ರಕ್ಕೆ ಹೋಗದಂತೆ ವ್ಯವಸಾಯಾದಿಗಳಿಗೆ ಅನುಕೂಲವಾಗುವಂತೆ ಮಾಡಬೇಕೆಂಬ ಸಂಕಲ್ಪವುಳ್ಳವರಾಗಿರುತ್ತಾರೆ. ಇಂಥಾ ಕೆಲಸಗಳಿಗೆಲ್ಲಾ ನಮ್ಮ ಶ್ರೀಮನ್ಮಹಾರಾಜ್ಞ್ಞಿಯವರು ಅನ್ಯಾದೃಶವಾದ ಪ್ರೋತ್ಸಾಹವನ್ನು ಮಾಡಿರುವರು

ಯೂರೋಪ್ ಖಂಡದಲ್ಲಿ ರಾಜರ ದವಲತ್ತು ಉಪಸಂಹರಿಸಲ್ಪಡಬೇಕೆಂಬದಾಗಿಯೂ ಪ್ರಜೆಗಳ ಪ್ರತಿನಿಧಿಗಳಿಂದ ಮಾಡಲ್ಪಡತಕ್ಕ ದವಲತ್ತು ಉಜ್ಜೀವಿಸುವಂತೆ ಮಾಡಲ್ಪಡಬೇಕೆಂಬದಾಗಿಯೂ, ಅನೇಕರು ಅಭಿಪ್ರಾಯಪಡುತ್ತಿರುವರು. ಅಲ್ಲದೆ ಅಲ್ಲಿ ರಾಜದ್ವೇಷಿಗಳೂ ಶಂಡೋಪತಂಡವಾಗಿರುವರು. ನಮ್ಮ ಮಹಾರಾಜ್ಞ್ಞೀಯವರು ಇಂಥಾವರ ಅನುರಾಗಕ್ಕೂ ಪಾತ್ರರಾಗಿದ್ದರು. ಹೀಗಿರುವುದಕ್ಕೆ ಕಾರಣವೇನು? ಅವರ ಅನ್ಯಾದೃಶವಾದ ಭೂತದಯೆಯು ಇದಕ್ಕೆ ಮುಖ್ಯಕಾರಣವಲ್ಲವೆ! ನಮ್ಮ ಶ್ರೀಮನ್ಮಹಾರಾಜ್ಞ್ಞಿಯವರು ಕಷ್ಟಪಡತಕ್ಕವರನ್ನು ನೋಡಿ ಸಹಿಸುತ್ತಿರಲಿಲ್ಲ. ಕಷ್ಟಪಡುತ್ತಿದ್ದವರ ಕಷ್ಟ ಪರಿಹಾರವಾದಹೊರತು ಇವರಿಗೆ ವಿಶ್ರಾಂತಿಯೇ ಇರುತ್ತಿರಲಿಲ್ಲ. ಇದಕ್ಕೆ ಬೇರೆ ದೃಷ್ಟಾಂತಗಳು ಆವಶ್ಯಕವಿಲ್ಲ. ರಾಜದ್ರೋಹಿಯಾದ ಒಬ್ಬನು ಪ್ರಪಂಚದಲ್ಲಿ ರಾಜರಿಲ್ಲದಂತೆ ಮಾಡಬೇಕೆಂದು ಇವರನ್ನು ಗುಂಡಿನಿಂದ ಹೊಡೆದನು. ಇವರ ಪುಣ್ಯದ ಫಲದಿಂದ ಆ ಏಟು ಇವರಿಗೆ ತಪ್ಪಿತು. ಆತನನ್ನು ವಿಚಾರ ಮಾಡಿ ಕೋರ್ಟಿನವರು ಅವನನ್ನು ಗಲ್ಲಿಗೆ ಹಾಕಿಸಬೇಕೆಂದು ತೀರ್ಮಾನ ಮಾಡಿದರು. ಗಲ್ಲಿಗೆ ಹಾಕಲ್ಪಡತಕ್ಕ ಅವಸ್ಥೆಯಲ್ಲಿ ಅವನ ಕ್ಲೇಶಾದಿಗಳನ್ನೂ, ಸಂಕಟಿವನ್ನೂ ಕೇಳಿ ಕನಿಕರಗೊಂಡು ಆತನ ಅಪರಾಧವನ್ನು ಕ್ಷಮಿಸಿ ಗಲ್ಲಿಗೆ ಹಾಕುವುದನ್ನು ತಪ್ಪಿಸಿದರು. ತಮಗೆ ದ್ರೋಹಚಿಂತನೆ ಮಾಡಿದವರ ವಿಷಯದಲ್ಲಿಯೂ ಕೂಡ ಈರೀತಿಯಲ್ಲಿ ನಡೆದುಕೊಂಡ ನಮ್ಮ ಮಹಾರಾಜ್ಞ್ಞಿ ವಿಕ್ಟೋರಿಯಾರವರ ಭೂತದಯೆಯು ಸಜ್ಜನರಲ್ಲಿ ಯಾವರೀತಿಯಲ್ಲಿ ಪರಿಣಮಿಸಿತ್ತೋ ಅದನ್ನು ಊಹಿಸುವುದು ಬಹುಸುಲಭ. ವಿಲಾ

ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾರವರು.

ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾರವರು ೧೮೧೯ ನೇ ಇಸವಿಯ ಮೇ ೨೪ ನೇ ರಲ್ಲು ಜನಿಸಿದರು. ೧೮೩೭ ನೇ ಇಸವಿ ಜೂನ್ ೨೦ ರಲ್ಲಿ ಬ್ರಿಟಿಷ್ ಸಿಂಹಾಸನವನ್ನು ಅಲಂಕರಿಸಿದರು.

ನಮ್ಮ ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾರವರು ಬ್ರಿಟಿಷ್ ರಾಜ್ಯದಲ್ಲಿ ಇದುವರೆವಿಗೂ ಆಳಿದವರೆಲ್ಲರಿಗಿಂತಲೂ ಹೆಚ್ಚಾದಕಾಲವು ಪ್ರಭುತ್ವವನ್ನು ವಹಿಸಿದ್ದರು.

ಇವರ ರಾಜ್ಯಭಾರವು ಅಸಮಾನವಾಗಿ ನಿರ್ದುಷ್ಟವಾಗಿತ್ತು. ಇವರ ಕಾಲದಲ್ಲಿ ಬ್ರಿಟಿಷ್ ರಾಜ್ಯವು ಈ ಭೂಮಂಡಲದ ಅರು ಭಾಗದಲ್ಲೊಂದು ಭಾಗವನ್ನು ಒಳಗೊಂಡಿತು : ಇದರ ಪ್ರಜಾಸಂಖ್ಯೆಯು ಈ ಭೂಮಂಡಲದ ಪ್ರಜಾಸಂಖ್ಯೆ ನಾಲ್ಕರಲ್ಲಿ ಒಂದುಭಾಗ ಉಳ್ಳದ್ದಾಯಿತು. ನಮ್ಮ ಮಹಾರಾಣಿ ವಿಕ್ಟೋರಿಯಾರವರ ರಾಜ್ಯಭಾರದಲ್ಲಿ ಪ್ರಜೆಗಳಿಗೆ ಸೌಖ್ಯವೂ, ರೂಢಮೂಲವಾಯಿತು. ಇವರು ಯಾವಾಗ್ಯೂ ಪ್ರಜೆಗಳ ಹಿತವನ್ನು ಹಾರೈಸುತ್ತಾ, ಯಾವ ದೇಶದ ಪ್ರಭುಗಳು ಬಂದಾಗ್ಯೂ ಪ್ರಜೆಗಳ ಯೋಗಕ್ಷೇಮ ವಿಚಾರವನ್ನು ಮಾಡುವದರಲ್ಲಿ ವಿಶೇಷ ಬದ್ಧಾದರರಾಗಿದ್ದರು. ಪ್ರಜೆಗಳಿಗೆ ಜೀವನೋಪಾಯಗಳನ್ನು ಕಲ್ಪಿಸತಕ್ಕ ವ್ಯವಸಾಯ, ವ್ಯಾಪಾರ, ಕೈಗಾರಿಕೆ ಕೆಲಸಗಳೆಲ್ಲಾ ಇವರಕಾಲದಲ್ಲಿ ವಿಶೇಷ ವೃದ್ಧಿಗೆ ಬಂದವು. ಇವರ ಪ್ರೋತ್ಸಾಹನವಿಂದ ಉತ್ಸಾಹವನ್ನು ಹೊಂದಿದ ಶಾಸ್ತ್ರಜ್ಞರು ಪಂಚಭೂತಗಳು ಪ್ರಜೆಗಳ ಹಿತವನ್ನಾಚರಿಸುವದರಲ್ಲಿ ಸೇವಕವೃತ್ತಿಗೆ ವಿಶೇಷವಾಗಿ ತರಲ್ಪಟ್ಟವು. ಜನಾಂಗಗಳ ಪರಸ್ಪರ ಪರಿಚಯಕ್ಕೆ ಪ್ರತಿಕೂಲವಾಗಿ ಇದ್ದಂತೆ ಎಣಿಸಲ್ಪಟ್ಟ ಸಮುದ್ರವು ಸಹಕಾರಿಯಾಗಿ ಮಾಡಲ್ಪಟ್ಟಿತು. ಹಡಗುಗಳು, ಸ್ಟೀಮರುಗಳು, ದೇಶದಿಂದ ದೇಶಕ್ಕೆ ಹೋಗುವುದಕ್ಕೆ ಸಮುದ್ರದಲ್ಲಿ ವಾಹನವಾಗಿ ಪರಿಣಮಿಸಿವೆ. ನೀರಿನ ಆವಿಯು ಮೂಲಕವಾಗಿ ರೈಲ್ ಮೊದಲಾದವುಗಳನ್ನು ನಡೆಯುಸತಕ್ಕ ಕೋಟ್ಯಂತರ ಯಂತ್ರಗಳು ಆಚರಣೆಗೆ ಬಂದಿವೆ. ವಾಯು, ನಿಗಳುಂಧನವನ್ನು ಹೊಂದಿ, ಅನೇಕರಿಗೆ ಯಂತ್ರಗಳ ಕೈಲಿ ಕೆಲಸ ಮಾಡಿಸುವದಕ್ಕೆ ಉಪಯುಕ್ತವಾಗಿ ಮಾಡಲ್ಪಟ್ಟಿತು. ಸಮುದ್ರವು, ಭೂಮಿಯು, ತಮ್ಮ ತಮ್ಮ ಗರ್ಭದಲ್ಲಿರತಕ್ಕ ಲೋಹ, ರತ್ನ, ಮುತ್ತು ಮೊದಲಾದವುಗಳನ್ನು ಪ್ರಜೆಗಳಿಗೆ ಮುಚ್ಚಿಡದಂತೆ ಮಾಡಲ್ಪಟ್ಟವು. ಸಮಸ್ತ ಬ್ರಹ್ಮಾಂಡವನ್ನೂ ವ್ಯಾಪಿಸಿ ಮನುಷ್ಯನ ಹತೋಟಿಗೆ ಬರದಂತೆ ತೋರುತ್ತಿದ್ದ ವಿದ್ಯುಚ್ಛಕ್ತಿಗೆ ನಿಗಳ ಬಂಧವನ್ನು ಮಾಡಿ ಅದರ ಸಹಾಯದಿಂದ ಯಂತ್ರಗಳನ್ನು ಕಲ್ಪಿಸಿ, ಕೋಟ್ಯಂತರ ಜನಗಳು ಮಾಡತಕ್ಕ ಕೆಲಸವನ್ನು, ಅವುಗಳ ಕೈಲೆ ಮಾಡಿಸುವುದಕ್ಕೆ ಉಪಕ್ರಮವಾದವು. ಸೂರ್ಯನ ಶಕ್ತಿಯಿಂದ ಸಮುದ್ರದ ನೀರು ಅತಿಯಾಗಿ

ಅಂತರಿಕ್ಷಕ್ಕೆ ಹೋಗಿ ಮೇಘಗಳಾಗಿ ಬೆಟ್ಟಗುಡ್ಡಗಳಲ್ಲಿ ವರ್ಷಿಸುವ ನೀರು ಪ್ರವಾಹಗಳಾಗಿ ಪುನಃ ಸಮುದ್ರಕ್ಕೆ ಸೇರುವುದನ್ನು ನೋಡಿ ಈ ಜಲವು ವ್ಯರ್ಥವಾಗಿ ಪುನಃ ಸಮುದ್ರವನ್ನು ಸೇರಕೂಡದು. ವ್ಯವಸಾಯಕ್ಕೂ, ವ್ಯಾಪಾರಕ್ಕೂ, ಕೈಗಾರಿಕೆ ಕೆಲಸಗಳಿಗೂ ಇವುಗಳು ಉಪಯೋಗವಾಗುವಂತೆ ಮಾಡಬೇಕೆಂದು, ಇವರಕಾಲದಲ್ಲಿ ಇಂಜನೀರ್‌ಗಳು ಈ ಜಲಾಶಯುಗಳಿಗೆಲ್ಲಾ ಸಂಕಲೆಯನ್ನು ಹಾಕಿ ಮೇಲೆ ಹೇಳಿದ ವಿಷಯುಗಳಲ್ಲಿ ಜನಗಳ ಇಷ್ಟಾರ್ಥಪರಿಪೂರ್ಣವಾಗುವಂತೆ ಮಾಡಿದರು. ಇನ್ನೂ ಮಾಡುತ್ತಲಿರುವರು. ಅನೇಕ ಇಂಜನೀರ್‌ಗಳು ನದಿಗಳಲ್ಲಿ ಪ್ರವಹಿಸತಕ್ಕ ನೀರಿನಲ್ಲಿ ಒಂದು ಹನಿಯೂ ಸಮುದ್ರಕ್ಕೆ ಹೋಗದಂತೆ ವ್ಯವಸಾಯಾದಿಗಳಿಗೆ ಅನುಕೂಲವಾಗುವಂತೆ ಮಾಡಬೇಕೆಂಬ ಸಂಕಲ್ಪವುಳ್ಳವರಾಗಿರುತ್ತಾರೆ. ಇಂಥಾ ಕೆಲಸಗಳಿಗೆಲ್ಲಾ ನಮ್ಮ ಶ್ರೀಮನ್ಮಹಾರಾಜ್ಞ್ಞಿಯವರು ಅನ್ಯಾದೃಶವಾದ ಪ್ರೋತ್ಸಾಹವನ್ನು ಮಾಡಿರುವರು.

ಯೂರೋಪ್ ಖಂಡದಲ್ಲಿ ರಾಜರ ದವಲತ್ತು ಉಪಸಂಹರಿಸಲ್ಪಡಬೇಕೆಂಬದಾಗಿಯೂ ಪ್ರಜೆಗಳ ಪ್ರತಿನಿಧಿಗಳಿಂದ ಮಾಡಲ್ಪಡತಕ್ಕ ದವಲತ್ತು ಉಜ್ಜೀವಿಸುವಂತೆ ಮಾಡಲ್ಪಡಬೇಕೆಂಬದಾಗಿಯೂ, ಅನೇಕರು ಅಭಿಪ್ರಾಯಪಡುತ್ತಿರುವರು. ಅಲ್ಲದೆ ಅಲ್ಲಿ ರಾಜದ್ವೇಷಿಗಳೂ ಶಂಡೋಪತಂಡವಾಗಿರುವರು. ನಮ್ಮ ಮಹಾರಾಜ್ಞ್ಞೀಯವರು ಇಂಥಾವರ ಅನುರಾಗಕ್ಕೂ ಪಾತ್ರರಾಗಿದ್ದರು. ಹೀಗಿರುವುದಕ್ಕೆ ಕಾರಣವೇನು? ಅವರ ಅನ್ಯಾದೃಶವಾದ ಭೂತದಯೆಯು ಇದಕ್ಕೆ ಮುಖ್ಯಕಾರಣವಲ್ಲವೆ! ನಮ್ಮ ಶ್ರೀಮನ್ಮಹಾರಾಜ್ಞ್ಞಿಯವರು ಕಷ್ಟಪಡತಕ್ಕವರನ್ನು ನೋಡಿ ಸಹಿಸುತ್ತಿರಲಿಲ್ಲ. ಕಷ್ಟಪಡುತ್ತಿದ್ದವರ ಕಷ್ಟ ಪರಿಹಾರವಾದಹೊರತು ಇವರಿಗೆ ವಿಶ್ರಾಂತಿಯೇ ಇರುತ್ತಿರಲಿಲ್ಲ. ಇದಕ್ಕೆ ಬೇರೆ ದೃಷ್ಟಾಂತಗಳು ಅವಶ್ಯಕವಿಲ್ಲ. ರಾಜದ್ರೋಹಿಯಾದ ಒಬ್ಬನು ಪ್ರಪಂಚದಲ್ಲಿ ರಾಜರಿಲ್ಲದಂತೆ ಮಾಡಬೇಕೆಂದು ಇವರನ್ನು ಗುಂಡಿನಿಂದ ಹೊಡೆದನು. ಇವರ ಪುಣ್ಯದ ಫಲದಿಂದ ಆ ಏಟು ಇವರಿಗೆ ತಪ್ಪಿತು. ಆತನನ್ನು ವಿಚಾರ ಮಾಡಿ ಕೋರ್ಟಿನವರು ಅವನನ್ನು ಗಲ್ಲಿಗೆ ಹಾಕಿಸಬೇಕೆಂದು ತೀರ್ಮಾನ ಮಾಡಿದರು. ಗಲ್ಲಿಗೆ ಹಾಕಲ್ಪಡತಕ್ಕ ಅವಸ್ಥೆಯಲ್ಲಿ ಅವನ ಕ್ಲೇಶಾದಿಗಳನ್ನೂ, ಸಂಕಟವನ್ನೂ ಕೇಳಿ ಕನಿಕರಗೊಂಡು ಅತನ ಅಪರಾಧವನ್ನು ಕ್ಷಮಿಸಿ ಗಲ್ಲಿಗೆ ಹಾಕುವುದನ್ನು ತಪ್ಪಿಸಿದರು. ತಮಗೆ ದ್ರೋಹಚಿಂತನೆ ಮಾಡಿದವರ ವಿಷಯದಲ್ಲಿಯೂ ಕೂಡ ಈರೀತಿಯಲ್ಲಿ ನಡೆದುಕೊಂಡ ನಮ್ಮ ಮಹಾರಾಜ್ಞ್ಞಿ ವಿಕ್ಟೋರಿಯಾರವರ ಭೂತದಯೆಯು ಸಜ್ಜನರಲ್ಲಿ ಯಾವರೀತಿಯಲ್ಲಿ ಪರಿಣಮಿಸಿತ್ತೋ ಅದನ್ನು ಊಹಿಸುವುದು ಬಹುಸುಲಭ. ವಿಲಾ

ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾರವರು.

ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾರವರು ೧೮೧೯ ನೇ ಇಸವಿಯ ಮೇ ೨೪ ರಲ್ಲು ಜನಿಸಿದರು. ೧೮೩೭ ನೇ ಇಸವಿ ಜೂನ್ ೨೦ ರಲ್ಲಿ ಬ್ರಿಟಿಷ್ ಸಿಂಹಾಸನವನ್ನು ಅಲಂಕರಿಸಿದರು.

ನಮ್ಮ ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾರವರು ಬ್ರಿಟಿಷ್ ರಾಜ್ಯದಲ್ಲಿ ಪ್ರಭುತ್ವ ವಹಿಸಿದವರೆಲ್ಲರಿಗಿಂತಲೂ ಹೆಚ್ಚಾದಕಾಲವು ಪ್ರಭುತ್ವವನ್ನು ವಹಿಸಿದ್ದರು.

ಇವರ ರಾಜ್ಯಭಾರವು ಅಸಮಾನವಾಗಿ ನಿರ್ದುಷ್ಟವಾಗಿತ್ತು. ಇವರ ಕಾಲದಲ್ಲಿ ಬ್ರಿಟಿಷ್ ರಾಜ್ಯವು ಈ ಭೂಮಂಡಲದ ಆರು ಭಾಗದಲ್ಲೊಂದು ಭಾಗವನ್ನು ಒಳಗೊಂಡಿತು ಇದರ ಪ್ರಜಾಸಂಖ್ಯೆಯು ಈ ಭೂಮಂಡಲದ ಪ್ರಜಾಸಂಖ್ಯೆ ನಾಲ್ಕರಲ್ಲಿ ಒಂದುಭಾಗ ಉಳ್ಳದ್ದಾಯಿತು. ನಮ್ಮ ಮಹಾರಾಣಿ ವಿಕ್ಟೋರಿಯಾರವರ ರಾಜ್ಯಭಾರದಲ್ಲಿ ಪ್ರಜೆಗಳಿಗೆ ಸೌಖ್ಯವೂ, ರೂಢಮೂಲವಾಯಿತು. ಇವರು ಯಾವಾಗ್ಯೂ ಪ್ರಜೆಗಳ ಹಿತವನ್ನು ಹಾರೈಸುತ್ತಾ, ಯಾವ ದೇಶದ ಪ್ರಭುಗಳು ಬಂದಾಗ್ಯೂ ಪ್ರಜೆಗಳ ಯೋಗಕ್ಷೇಮ ವಿಚಾರವನ್ನು ಮಾಡುವವರಲ್ಲಿ ವಿಶೇಷ ಬದ್ಧಾದರರಾಗಿದ್ದರು. ಪ್ರಜೆಗಳಿಗೆ ಜೀವನೋಪಾಯಗಳನ್ನು ಕಲ್ಪಿಸತಕ್ಕ ವ್ಯವಸಾಯ, ವ್ಯಾಪಾರ, ಕೈಗಾರಿಕೆ ಕೆಲಸಗಳೆಲ್ಲಾ ಇವರಕಾಲದಲ್ಲಿ ವಿಶೇಷ ವೃದ್ಧಿಗೆ ಬಂದವು. ಇವರ ಪ್ರೋತ್ಸಾಹನದಿಂದ ಉತ್ಸಾಹವನ್ನು ಹೊಂದಿದ ಶಾಸ್ತ್ರಜ್ಞರು ಪಂಚಭೂತಗಳೂ ಪ್ರಜೆಗಳ ಹಿತವನ್ನಾಚರಿಸುವದಕ್ಕಲ್ಲಿ ಸೇವಕವೃತ್ತಿಗೆ ವಿಶೇಷವಾಗಿ ತರಲ್ಪಟ್ಟವು. ಜನಾಂಗಗಳ ಪರಸ್ಪರ ಪರಿಚಯಕ್ಕೆ ಪ್ರತಿಕೂಲವಾಗಿ ಇದ್ದಂತೆ ಎಣಿಸಲ್ಪಟ್ಟ ಸಮುದ್ರವು ಸಹಕಾರಿಯಾಗಿ ಮಾಡಲ್ಪಟ್ಟಿತು. ಹಡಗುಗಳು, ಸ್ಟೀಮರುಗಳು, ದೇಶದಿಂದ ದೇಶಕ್ಕೆ ಹೋಗುವುದಕ್ಕೆ ಸಮುದ್ರದಲ್ಲಿ ವಾಹನವಾಗಿ ಪರಿಣಮಿಸಿವೆ. ಸ್ಟೀಮಿನ ಆವಿಯು ಮೂಲಕವಾಗಿ ರೈಲ್ ಮೊದಲಾದವುಗಳನ್ನು ನಡೆಯುಸತಕ್ಕ ಕೋಟ್ಯಂತರ ಯಂತ್ರಗಳು ಆಚರಣೆಗೆ ಬಂದಿವೆ. ವಾಯು, ನಿಗಳುಂಧನವನ್ನು ಹೊಂದಿ, ಅನೇಕಬಗೆ ಯಂತ್ರಗಳ ಕೈಲಿ ಕೆಲಸ ಮಾಡಿಸುವದಕ್ಕೆ ಉಪಯುಕ್ತವಾಗಿ ಮಾಡಲ್ಪಟ್ಟಿತು. ಸಮುದ್ರವು, ಭೂವಿಯು, ತಮ್ಮ ತಮ್ಮ ಗರ್ಭದಲ್ಲಿರತಕ್ಕ ಲೋಹ, ರತ್ನ, ಮುತ್ತು ಮೊದಲಾದವುಗಳನ್ನು ಪ್ರಜೆಗಳಿಗೆ ಮುಚ್ಚಿಡದಂತೆ ಮಾಡಲ್ಪಟ್ಟವು. ಸಮಸ್ತ ಬ್ರಹ್ಮಾಂಡವನ್ನೂ ವ್ಯಾಪಿಸಿ ಮನುಷ್ಯನ ಹತೋಟಿಗೆ ಬರದಂತೆ ತೋರುತ್ತಿದ್ದ ವಿದ್ಯುಚ್ಛಕ್ತಿಗೆ ನಿಗಳ ಬಂಧವನ್ನು ಮಾಡಿ ಅದರ ಸಹಾಯದಿಂದ ಯಂತ್ರಗಳನ್ನು ಕಲ್ಪಿಸಿ ಕೋಟ್ಯಂತರ ಜನಗಳು ಮಾಡತಕ್ಕ ಕೆಲಸವನ್ನು, ಅವುಗಳ ಕೈಲೆ ಮಾಡಿಸುವುದಕ್ಕೆ ಉಪಕ್ರಮವಾದವು. ಸೂರ್ಯನ ಶಕ್ತಿಯಿಂದ ಸಮುದ್ರದ ನೀರು ಅತಿಯಾಗಿ

ಇಂತಹಕಾಲದಲ್ಲಿ ನಮ್ಮ ಶ್ರೀಮನ್ಮಹಾರಾಜ್ಞಿ ವಿಕ್ಟೋರಿಯಾರವರು ಸಾಮಾನ್ಯ ಜನರಂತೆ ರಾಗದ್ವೇಷಪ್ರಶಿನಿವಿಷ್ಟರಾಗಿದ್ದಾರ್ಯೆ ಅವರು ಯಾರಿಗೂ ತೊಂದರೆಯನ್ನುಂಟುಮಾಡುತ್ತಿರಲಿಲ್ಲ. ಆದರೆ ನಮ್ಮ ಶ್ರೀಮನ್ಮಹಾರಾಜ್ಞಿಯವರ ನಿಸರ್ಗವಾದ ಗುಣವು ಆಗ ಪ್ರದರ್ಶನವಾಯಿತು. ಜನಗಳ ಗುಣಾವಗುಣಗಳು ಪ್ರಕಾಶಕ್ಕೆ ಬರುವುದಕ್ಕೆ ಇಂತಹ ವಿಷಮಕಾಲವೇ ಸಾಧಕವಾದುದಲ್ಲವೆ ? ಆಗ, ರಾಜ ತಂತ್ರವಿಶಾರದರೆನ್ನಿಸಿಕೊಂಡಿದ್ದ ಬ್ರಿಟಿಷ್ ಅಧಿಕಾರಿಗಳಲ್ಲಿ ಅನೇಕರು ಈ ಇಂಡಿಯಾ ದೇಶದ ದಂಗೆಗೆ ಮೂಲಕಾರಣವು ಮತಾಭಿಮಾನವಾದುದರಿಂದ ಈ ಮತಾಭಿಮಾನದ ಮೂಲಕ್ಕೆ ಕೊಡ್ಲಿಯನ್ನು ಹಾಕಬೇಕೆಂಬದಾಗಿ ಸ್ವಮತಕ್ಕೆ ಪ್ರಾಶಸ್ತ್ಯವನ್ನು ಕೊಡ ಬೇಕೆಂಬದಾಗಿಯೂ, ಅಭಿಪ್ರಾಯವುಳ್ಳವರಾಗಿದ್ದರು. ಈ ಅಭಿಪ್ರಾಯವು ಸರಕಾರದ ವರಿಗೆ ಇರುವುದು ಮಾತ್ರವಲ್ಲದೆ ನಮ್ಮ ಶ್ರೀಮನ್ಮಹಾರಾಜ್ಞಿಯವರಿಗೂ ಇರುವು ದೆಂದು ಅನೇಕರು ಆರೋಪಣೆ ಮಾಡುತ್ತಿದ್ದರು, ಆಗ ಈ ದುರಭಿಪ್ರಾಯವನ್ನು ಖಂಡಿಸುವುದಕ್ಕೋಸ್ಕರ ಶ್ರೀಮನ್ಮಹಾರಾಜ್ಞಿ ವಿಕ್ಟೋರಿಯಾರವರು ತಮ್ಮ ಮುಖ್ಯ ಮಂತ್ರಿಗಳಾದ ಲಾರ್ಡ್ ಡಾರ್ಬಿಯವರಿಗೆ ತಾವೇ ಒಂದು ಲೇಖನವನ್ನು ಬರೆ ದರು. ಈ ಲೇಖನದಿಂದ ಇಂಡಿಯಾ ದೇಶೀಯರ ಮತವಿಷಯದಗೊಡವೆಗೆ ಹೋಗ ತಕ್ಕ ವಿಷಯದಲ್ಲಿ ಅವರಿಗಿದ್ದ ಅಭಿಪ್ರಾಯವು ಸ್ಪಷ್ಟವಾಗುತ್ತದೆ. ಶ್ರೀಮನ್ಮಹಾ ರಾಜ್ಞಿಯವರು ಬರೆದಿರುವುದೇನಂದರೆ :—" ಇಂಡಿಯಾದೇಶೀಯರ ಮತಗಳನ್ನು ಮೂಲೋತ್ಪಾಟನೆ ಮಾಡಬೇಕೆಂಬ ಅಭಿಪ್ರಾಯವನ್ನು ನಾನು ಹೊಂದಿರುವುದಾಗಿ ಹುಟ್ಟಿದ ವರ್ತಮಾನವು ನಿರಾಧಾರವಾದದ್ದು. ನನ್ನ ಹೆಸರಿನಲ್ಲಿ ಹುಟ್ಟಿತಕ್ಕ ರಾಯಲ್ ಪ್ರೊಕ್ಲಮೇಷನ್ನಲ್ಲಿ ಈ ದುರಭಿಪ್ರಾಯಕ್ಕೆ ಸ್ವಲ್ಪವೂ ಅವಕಾಶವಿರಕೂಡದು. ನಮ್ಮ ಮತದಲ್ಲಿ ನಮಗೆ ಹ್ಯಾಗೆ ಅಭಿಮಾನವಿರುವುದೋ ಇಂಡಿಯಾದೇಶೀಯರಿಗೂ ಅವರವರ ಮತವಿಷಯದಲ್ಲಿ ಇರುವುದು. ಪ್ರಭುಗಳಾದವರಿಗೆ ಎಲ್ಲಾ ಮತಗಳ ಲ್ಲಿಯೂ ಸಮದೃಷ್ಟಿ ಇರಬೇಕು. ಪಕ್ಷಪಾತವು ಎಂದಿಗೂ ಸಮನಾದುದಲ್ಲ. ಈ ಸಂಗತಿಯನ್ನು ವಿಶದವಾಗಿ ಪ್ರೊಕ್ಲಮೇಷನ್ನಲ್ಲಿ ಸೇರಿಸಬೇಕು. "

ಈ ಲೇಖನದಿಂದ ನಮ್ಮ ಶ್ರೀಮನ್ಮಹಾರಾಜ್ಞಿಯವರಿಗೆ ಪರಮತದ್ವೇಷವಿ ತ್ತೆಂದು ಹೇಳುವುದಕ್ಕಾಗುವುದಿಲ್ಲವೆಂಬುವುದು ಗೊತ್ತಾಗುವುದು. ಆದೇ ಸಚಿವರಿಗೆ ಇದೇವಿಷಯವಾಗಿ ಇನ್ನೊಂದು ಲೇಖನವನ್ನು ಬರೆದಿರುವರು. ಈ ಲೇಖನದಲ್ಲಿ

ಯಾತಿಶಯ್ಯಲ್ಲಿ ಜನರು ಸವಿಾಪದಲ್ಲಿದ್ದು ಕೊಂಡು ಅವರ ನಡೆನುಡಿಗಳನ್ನು, ಗುಣಾತಿಶಯಗಳನ್ನು ಪ್ರತ್ಯಕ್ಷವಾಗಿ ನೋಡಿ ಆಶ್ಚರ್ಯಪಡುತ್ತಾರೆ. ಇಷ್ಟು ದೂರದಲ್ಲಿರುತಕ್ಕ ನಾವಾದರೋ ಅವರನ್ನು ನೋಡಿ ಇರಲಿಲ್ಲ. ಅವರ ಗುಣಾತಿಶಯಗಳ ಪ್ರತ್ಯಕ್ಷವಾದ ಅನುಭವ ಉಳ್ಳವರಲ್ಲ. ಆದಾಗ್ಯೂ ಇವರ ಮರಣ ಸವಾಚಾರವನ್ನು ಕೇಳಿದಾಗಲೆ ಅಪರಿಹಾರ್ಯವಾದ ಒಂದು ಸಂಕಟವು ಈ ಭರತಖಂಡದ ಜನಗಳನ್ನೆಲ್ಲ ಬಾಧಿಸುತ್ತಲಿದೆ. ಈ ಭರತಖಂಡವ ಚಕ್ರವರ್ತಿನಿ ಪದವಿಗೆ ಇವರು ಬಂದದ್ದು ಮುಖ್ಯಕಾರಣವೆಂದು ಅನೇಕರು ತಾತ್ಪರ್ಯಪಡುವರು. ಇದು ಮುಖ್ಯಕಾರಣವೆಂದು ಹೇಳುವದಕ್ಕಾಗುವದಿಲ್ಲ. ಅನೇಕ ದೇಶಗಳಲ್ಲಿ ಶಿರಾತರಾದ ಅನೇಕ ಚಕ್ರವರ್ತಿಗಳು ದವಲತ್ತು ಮಾಡಿದರು, ಅವರು ಸ್ವರ್ಗಸ್ಥರಾದಾಗ ಜನಗಳು ಈರೀತಿಯಲ್ಲಿ ಅನುತಾಪ ಪಟ್ಟರೆ ? ಎಂದಿಗೂ ಇಲ್ಲ. ಜನಗಳ ಹೃದಯವನ್ನು ಆಕರ್ಷಿಸುವುದು ಪ್ರಭುತ್ವವಲ್ಲ; ಭೂತದಯೆಯೇ ಮೊದಲಾದ ಪ್ರಜಾರಂಜನೈಕ ಪರಾಯಣತೆಯು ಪ್ರಭುಗಳಲ್ಲಿ ಮುಖ್ಯವಾದ ಆಕರ್ಷಣಶಕ್ತಿಯಾಗಿರುವುದು. ಈ ಶಕ್ತಿಯನ್ನು ನಮ್ಮ ಶ್ರೀಮನ್ಮಹಾರಾಜ್ಞ್ಞೀ ವಿಕ್ಟೋರಿಯಾರವರು ವಿಶೇಷವಾಗಿ ಹೊಂದಿದ್ದರು. ಈ ಆಕರ್ಷಣಶಕ್ತಿಯಿಂದಲೆ ಬ್ರಿಟಿಷ್ ರಾಜ್ಯದವರು, ಇಂಡಿಯಾ ದೇಶೀಯರೂ, ಈ ಪ್ರಪಂಚಕ್ಕೆ ಸೇರಿದ ಅನೇಕರು ನಮ್ಮ ಮಹಾರಾಜ್ಞ್ಞಿಯವರ ಮರಣವನ್ನು ತಮಗೂ ಉಂಟಾದ ಮುಖ್ಯ ವಿಪತ್ತಿನಂತೆ ಭಾವಿಸುತ್ತಲಿರುವರು—

ನಮ್ಮ ಇಂಡಿಯಾದೇಶದಲ್ಲಿ ಈ ಭಾವನೆಗೆ ಮುಖ್ಯವಾದ ಕಾರಣವಿರುವುದು. ಈಸ್ಟ್ ಇಂಡಿಯಾ ಕಂಪೆನಿಯವರಿಂದ ಇಂಡಿಯಾದೇಶವನ್ನು ಶ್ರೀಮನ್ಮಹಾರಾಜ್ಞ್ಞಿ ವಿಕ್ಟೋರಿಯಾರವರು ೧೮೫೮ ನೇ ಇಸವಿ ನವಂಬರಿನಲ್ಲಿ ವಹಿಸಿದರು. ಆಕಾಲದಲ್ಲಿ ರಾಯಲ್ ಪ್ರೊಕ್ಲಮೇಷನ್ ಎಂಬ ಒಂದುಪ್ರಕಟನೆಯನ್ನು ಮಾಡಿಸಿದರಷ್ಟೆ ; ಆಗ ಇಂಡಿಯಾದ ದಂಗೆಯು ಪರಿಸಮಾಪ್ತವಾಗಿರಲಿಲ್ಲ. ಅನೇಕಜನ ಇಂಗ್ಲಿಷ್‌ನವರನ್ನೂ, ಅವರ ಹೆಂಡರನ್ನೂ, ಮಕ್ಕಳನ್ನೂ ದುರಾತ್ಮರಾದ ದಂಗೆಕೋರರು ಛಿದ್ರಛಿದ್ರವಾಗಿ ಕತ್ತರಿಸಿ ಭಾವಿಗಳು, ಕೊಳಗಳು, ಹಳ್ಳಗಳು ಇವುಗಳನ್ನೆಲ್ಲಾ ತುಂಬಿ ಬಹಳ ಅನರ್ಥವನ್ನು ಮಾಡಿದ್ದರು. ಈ ದೇಶೀಯುರಿಗೆ ಮುನ್ಸಿಯ್ಯಮಾಡಬೇಕೆಂಬ ದ್ವೇಷವು ಅನೇಕ ಇಂಗ್ಲಿಸ್ ಜನರಿಗೆ ಅತ್ಯುತ್ಕಟವಾಗಿತ್ತು; ದುರ್ಮಾರ್ಗರಾದ ಕೆಲವರು ಮಾಡಿದ ಪಾಪಕೃತ್ಯಗಳಿಗೋಸ್ಕರ ಇಂಡಿಯಾದೇಶದ ಜನಗಳಮೇಲೆಲ್ಲಾ ದ್ವೇಷವುಳ್ಳವರಾಗಿದ್ದರು.

ರಥಪ್ರಾಪ್ತಿ " ಎಂದು ಹೇಳಿದ ಈ ಮಾತುಗಳನ್ನು ಸ್ಮರಿಸಿಕೊಂಡರೆ ಈಗ ಅವರ ಅಕಸ್ಮಾತ್ತಾದ ಮರಣದಿಂದ ಯಾರಿಗಿತಾನೇ ಸಂಕಟ ಉಂಟಾಗಲಾರದು ! ಈಗ ಕೆಲವು ಜನರು ಸಮರ್ಪಕವಾಗಿ ನಡೆಯಲಿಲ್ಲವೆಂದು ಆಕ್ಷೇಪಿಸುವದೂ ಉಂಟು. ನಮ್ಮ ಶ್ರೀಮನ್ಮಹಾರಾಜ್ಞ್ಞೀ ವಿಕ್ಟೋರಿಯಾರವರ ತಾತ್ಪರ್ಯವು ಸಮರ್ಪಕವಾಗಿ ನಡೆಯು ಬೇಕೆಂಬದಾಗಿತ್ತೇ ಹೊರತು ಮತ್ತೆಬೇರೆ ಇರಲಿಲ್ಲ. ಸಂಪೂರ್ಣವಾಗಿ ಸರ್ಕಾರದ ವರು, ಇವರ ಉದ್ದೇಶಗಳನ್ನು ನೆರವೇರಿಸದೇ ಇದ್ದಾಗ್ಯೂ ಬಹುದೂರದವರೆಗೂ ನೆರವೇರಿಸಿರುತ್ತಾರೆ. ಇದರಲ್ಲಿ ನ್ಯೂನತೆ ಯುಂಟಾಗಿದ್ದರೆ ಅದಕ್ಕೆ ನಮ್ಮ ಮಹಾರಾ ಜ್ಞ್ಞಿಯವರು ಕಾರಣಭೂತರಲ್ಲ. ಅವರ ಉದ್ದೇಶವನ್ನು ನೆರವೇರಿಸುವದಕ್ಕೋಸ್ಕರ ಏರ್ಪಾಡು ಮಾಡಲ್ಪಟ್ಟಿದ್ದವರು ಈ ನ್ಯೂನತೆಗೆ ಬಾಧ್ಯರು. ಅದು ಹಾಗಿರಲಿ, ನಮ್ಮ ಮಹಾರಾಜ್ಞ್ಞೀ ವಿಕ್ಟೋರಿಯಾರವರು—ತಮ್ಮ ಉದ್ದೇಶವನ್ನೆಲ್ಲಾ ತಾವೇ ಜಾರಿಗೆ ತರುವುದಕ್ಕಾಗುವದೇ ಇವುಗಳನ್ನು ಜಾರಿಗೆ ತರತಕ್ಕವರು ಅಧಿಕಾರಿಗಳ ಲ್ಲವೆ ? ದೇವರು ವರವನ್ನು ಕೊಟ್ಟರೂ ಪೂಜಾರಿ ಕೊಡದೇ ಇರುವದುಂಟೆಂಬ ಗಾಧೆಯು— ಪ್ರಸಿದ್ಧವಾಗಿಯೇ ಇದೆ. ಪೂಜಾರಿಗಳನ್ನು ಹತೋಟಿಯುಳ್ಳಿಟ್ಟು ಕೊಂಡು ಭಕ್ತಾದಿಗಳನ್ನು ರಕ್ಷಿಸುವದು—ದೇವರಿಗೆ ಹ್ಯಾಗೆ ಕರ್ತವ್ಯವೊ ಸಚಿವರನ್ನು ಹತೋಟಿಯುಳ್ಳಿಟ್ಟುಕೊಂಡು—ಪ್ರಜೆಗಳ ಕ್ಷೇಮಾರ್ಥವಾದ ಕೆಲಸಗಳನ್ನು ಜಾರಿಗೆ ತರುವಂತೆ ಮಾಡವುವದು—ಪ್ರಭುಗಳ ಕರ್ತವ್ಯ. ಈ ಕೆಲಸವನ್ನು ದೇವರು ಎಷ್ಟು ಸಮರ್ಪಕವಾಗಿ ಮಾಡುತ್ತಲಿದಾನೋ ಹಾಗೆಯೇ ನಮ್ಮ ಇಂಡಿಯಾ ಚಕ್ರವರ್ತಿನಿಯು ವರುಕೂಡಾ ಕಂಡಮಟ್ಟಿಗೂ ತಮ್ಮ ಆಜ್ಞ್ಞೆಯನ್ನು ಜಾರಿಗೆ ತಂದಿರುತಾರೆ. ಅಸೇತು ಹಿಮಾಚಲವವರೆಗೂ ನಮ್ಮ ದೇಶವು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿರುವುದು. ಈ ದೇಶವನ್ನು ಎಷ್ಟೋಜನ ಚಕ್ರವರ್ತಿಗಳು ಆಳಿದರು. ಆದರೂ ಬ್ರಿಟಿಷ್ ಜನಗಳು ಬರುವುದಕ್ಕೆ ಮುಂಚೆ ಇಂಡಿಯೋದೇಶದಲ್ಲಿ ದೇಶಾಟನಮಾಡುವುದಕ್ಕೆ ಸೌಲಭ್ಯಗಳೂ, ರೈಲುಗಳೂ, ಟೆಲಿಗ್ರಾಫ್ ಗಳೂ, ಕೈಗಾರಿಕೆ ಕೆಲಸಗಳೂ, ವಿದ್ಯಾಭ್ಯಾಸದ ಕ್ರಮ ಗಳೂ, ದುಷ್ಟನಿಗ್ರಹ ಶಿಷ್ಟ ಪರಿಪಾಲನೆಗೆ ಬೇಕಾದ ಏರ್ಪಾಡುಗಳೂ, ಹ್ಯಾಗಿತ್ತೋ ಅದನ್ನು ಪರ್ಯಾಲೋಚಿಸಿದರೆ ನಮ್ಮ ಇಂಡಿಯಾ ಚಕ್ರವರ್ತಿನೀಯವರ ರಾಜ್ಯಭಾರಕ್ಕೂ, ಪೂರ್ವದ ರಾಜ್ಯಭಾರಗಳಿಗೂ ಇರತಕ್ಕ ವೈಲಕ್ಷಣ್ಯಗಳು ಗೊತ್ತಾಗುತ್ತವೆ. ನಮ್ಮ ಇಂಡಿಯಾ ಚಕ್ರವರ್ತಿನಿಯವರು ರಾಜ್ಯಭಾರಕ್ಕೆ ಬಂದ ಮೇಲೆ ಅನೇಕ ಮಂತ್ರಿ

ಅವರು ಹೇಳಿರುವದೇನಂದರೆ :— " ಇಂಡಿಯಾದೇಶದಲ್ಲಿ ಮತಕ್ಕೆ ಅಸ್ಪೋಹಬರುವ ದೆಂಬ ಯೋಚನೆಯಿಂದ ದಂಗೆಯುಂಟಾಗಿ ಘೋರವಾದ ಅನರ್ಥಗಳು ನಡೆದಿವೆ ಇಂತಹ ಅಭಿಪ್ರಾಯಕ್ಕೆ ಅವಕಾಶ ಕೊಟ್ಟದ್ದು ತಪ್ಪು. ಪ್ರಭುಗಳಾದವರು ಇದುವರೆಗೂ ನಡೆದ ಅನರ್ಥಗಳಿಗೆ ದುರಾಗ್ರಹ ಪ್ರತಿನಿವಿಷ್ಟರಾಗುವುದು ಧರ್ಮವಲ್ಲ. ಸದಾಚಾರಕ್ಕೂ, ಧರ್ಮಪ್ರವರ್ತನೆಗೂ, ಸರ್ವತ್ರ ಸಮದೃಷ್ಟಿಗೂ ಇದು ಮುಖ್ಯಕಾಲವು. ಬ್ರಿಟಿಷ್ ಪ್ರಜೆಗಳು, ಇಂಡಿಯಾದೇಶದ ಪ್ರಜೆಗಳು, ಎಂಬ ಭೇದವೂಕೂಡ ಮಾಡತಕ್ಕದ್ದಲ್ಲ. ಪ್ರಜೆಗಳಾದವರೆಲ್ಲಾ ಒಂದೇ. ಈ ವಿಷಯವನ್ನು ಸಮಗ್ರವಾಗಿ ಈ ಪ್ರಕಟನೆಯಲ್ಲಿ ವ್ಯಕ್ತಮಾಡಬೇಕು. " ಈ ಎರಡು ಲೇಖನಗಳು ನಮ್ಮ ಶ್ರೀಮನ್ಮಹಾರಾಜ್ಞಿ ಇಂಡಿಯಾ ಚಕ್ರವರ್ತಿನಿಯವರ ಉದಾರವಾದ ಮನಸ್ಸನ್ನೂ ನಿಸರ್ಗವಾದ ಶಮೆದಮಾದಿಗುಣಗಳನ್ನೂ ತೋರಿಸುತ್ತವೆ.

ಇವರು ರಾಜ್ಯಭಾರವನ್ನು ವಹಿಸಿದಾಗ ಇವರಿಗೆ ೧೯ ವರ್ಷ ವಯಸ್ಸು. ಲಾರ್ಡ್ ಮೆಲ್ಬೊರ್ನ್‌ರವರು ಇವರಿಗೆ ಮುಖ್ಯ ಸಚಿವರಾಗಿದ್ದರು. ರಾಜತಂತ್ರದಲ್ಲಿ ನಮ್ಮ ಶ್ರೀಮನ್ಮಹಾರಾಜ್ಞಿಯವರಿಗೂ, ಅನ್ಯಾದೃಶವಾದ ಶಿಕ್ಷೆಯನ್ನು ಮಾಡಿದವರೀ ಇವರು. ಇವರು ೭॥ ವರ್ಷಗಳೊಳಗಾಗಿ ನಮ್ಮ ಶ್ರೀಮನ್ಮಹಾರಾಜ್ಞಿಯವರು ರಾಜ್ಯ ಭಾರದ ಮರ್ಯಾದೆಗಳನ್ನೆಲ್ಲಾ ತಿಳಿದುಕೊಂಡು ಲಾರ್ಡ್ ಮೆಲ್ಬೊರ್ನ್‌ರವರಿಗೆ ಆಶ್ಚರ್ಯ ವುಂಟಾಗುವಂತೆ ರಾಜ್ಯ ಭಾರವನ್ನು ವಹಿಸಿ ತಮ್ಮ ಕೆಲಸಗಳನ್ನು ಮಾಡುತ್ತಾ ಬಂದರು. ಇವರು ಯಾವಕೆಲಸವನ್ನು ಮಾಡಬೇಕಾದರೂ ಚನ್ನಾಗಿ ಪರ್ಯಾಲೋಚಿಸಿ ಉತ್ತರೋತ್ತರ ತಾವು ಮಾಡತಕ್ಕ ಕೆಲಸದಿಂದ ಧರ್ಮ ವುಂಟಾಗುವುದೇ ಇಲ್ಲವೇ ಎಂದು ಪರೀಕ್ಷಿಸಿಮಾಡುತ್ತಿದ್ದರು. ಮೇಲೆಹೇಳಿದ ರಾಯಲ್ ಪ್ರೊಕ್ಲಮೇಷನ್‌ನಲ್ಲಿ ಇಂಡಿಯಾ ದೇಶದಲ್ಲಿ ಸಮಾಧಾನವು ನೆಲಗೊಳ್ಳುವಂತೆ ಮೂಡಿ ಕೈಗಾರಿಕೆ ಕೆಲಸಗಳನ್ನು ವೃದ್ಧಿಪಡಿಸಿ ಎಲ್ಲಾಭಾಗಗಳಲ್ಲಿಯೂ ಅಭಿವೃದ್ಧಿಗೆ ಅವಕಾಶವನ್ನು ಮಾಡಿ ಇಂಡಿಯಾ ದೇಶದ ಜನಗಳ ಕ್ಷೇಮಕ್ಕೆ ಅನುಕೂಲವಾಗುವಂತೆ ಇಂಡಿಯಾ ಗೌರ್ನಮೆಂಟ್ ಏರ್ಪಾಡುಗಳಾಗಬೇಕೆಂದು ಅಪ್ಪಣೆಕೊಡಿಸಿರುತ್ತಾರೆ. ಈ ಪ್ರಕಟನೆ ಕೊನೆಯ ಭಾಗದಲ್ಲಿ ಶ್ರೀಮನ್ಮಹಾರಾಜ್ಞಿಯವರು ಅಪ್ಪಣೆಕೊಡಿಸಿದ ಮಾತು ಬಹಳ ಹೃದಯಂಗಮವಾಗಿದೆ. ಇಂತಿಯ ದೇಶೀಯರನ್ನುಕುರಿತು ಇವರು ಹೇಳಿರುವದೇನಂದರೆ-" ನಿಮ್ಮಕ್ಷೇಮವೆ ನನ್ನ ಬಲ, ನಿಮ್ಮತೃಪ್ತಿಯೇ ನನ್ನಕವಚ, ನಿಮ್ಮ ಕೃತಜ್ಞತೆಯೇ ನನ್ನ ಮನೋ

ದೆಯನ್ನು ಬಿಟ್ಟು ನಡೆದುಕೊಳ್ಳುವರು. ಇಂತಹ ಸ್ತ್ರೀಯರೆಲ್ಲರೂ ನಮ್ಮ ಇಂಡಿಯಾ ಚಕ್ರವರ್ತಿನಿಯವರ ಪಾಂಡಿತ್ಯವನ್ನೂ ಪದವಿಯನ್ನೂ, ಪರ್ಯಾಲೋಚಿಸಿ ಕೃತಕೃತ್ಯರಾಗಬೇಕು.

ನಮ್ಮ ಇಂಡಿಯಾ ಚಕ್ರವರ್ತಿನಿಯವಂಗ ಇಂತಹ ಅಕಸ್ಮಾತ್ತಾದ ಮರಣವೂ ಸಂಭವಿಸುವದಕ್ಕೆ ಒಂದು ಕಾರಣವುಂಟು. ಕಳೆದ ೧೬ ೧೭ ತಿಂಗಳುಗಳಿಂದ ದಕ್ಷಿಣ ಆಫ್ರಿಕಾದ ಯುದ್ಧವು ಆಗುತ್ತಲಿದೆ. ಪ್ರತಿನಿತ್ಯದಲ್ಲೂ ನಮ್ಮ ಇಂಡಿಯಾ ಚಕ್ರವರ್ತಿನಿಯವರ ಸ್ನೇಮಪಾತ್ರರಾದ ಪ್ರಜೆಗಳಲ್ಲಿ ಮಡಿದವರ ಪಟ್ಟಿಗಳು ಪ್ರಕಟಿಸಲ್ಪಡುತ್ತಲಿದೆ. ಸಾಮಾನ್ಯವಾಗಿ ದಾರಿದ್ರ್ಯ ಮೊದಲಾದವುಗಳಿಂದ ಸಂಕಟಪಡತಕ್ಕವರ ಕಷ್ಟಗಳನ್ನು ನೋಡಿ ಅದನ್ನು ಪರಿಹಾರ ಮಾಡದೇ ಇದ್ದರೆ ಇವರಿಗೆ ಬಹು ಕ್ಲೇಶವುಂಟಾಗುತ್ತಿತ್ತು. ಈ ಯುದ್ಧದ ಅನರ್ಥಗಳನ್ನು ಕೇಳಿ ಇವರಿಗೆ ಕ್ಲೇಶಾತಿಶಯವು ಬಹಳವಾಗಿ ಆಯಿತೆಂಬದಾಗಿಯೂ ಇದಕ್ಕಾಗಿ ಇಂತಹ ಅಕಸ್ಮಾತ್ತಾದ ಮರಣಕ್ಕೆ ಕಾರಣವುಂಟಾಗಿರಬಹುದೆಂಬದಾಗಿಯೂ ಕೆಲವರು ಭಾವಿಸುತ್ತಾರೆ. ಇದೂ ವಾಸ್ತವವಾಗಿರಬಹುದು. ನಮ್ಮ ಶ್ರೀಮನ್ಮಹಾರಾಜ್ಞ್ಞೀ ವಿಕ್ಟೋರಿಯಾರವರ ಭೂತದಯೆಯೂ, ವಿನಯವೂ, ಪ್ರಜಾರಂಜನೈಕ ಪರಾಯಣತೆಯೂ, ರಾಜತಂತ್ರ ವಿಶಾರದತ್ವವೂ, ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಆಕಾರಪ್ರಾಯವಾಗಿತ್ತು. ಇಂತಹ ಮಹಿಮೆಯುಳ್ಳವರು ಇನ್ನುಮೇಲೆ ರಾಜ್ಯಭಾರ ಮಾಡುವುದಕ್ಕೆ ಸಿಕ್ಕುವುದು ಕಷ್ಟ. ಇವರಿಗೆ ಸಮನಾದ ಗುಣಾತಿಶಯವುಳ್ಳವನಾದ ಹೊರ್ತು ಚಕ್ರಾಧಿಪತ್ಯದ ಪ್ರತಿಷ್ಠೆಯು ಳಿಯುವದು ಕಷ್ಟ. ಆದರೆ ನಮ್ಮ ೭ ನೇ ಎಡ್ವರ್ಡ್‌ರವರು ೬೧ ವಯಸ್ಸುಳ್ಳವರಾಗಿರುತ್ತಾರೆ. ಲೋಕವ್ಯವಹಾರಗಳನ್ನು ಚನ್ನಾಗಿ ಬಲ್ಲವರಾಗಿಯೂ, ಕಷ್ಟ ಸುಖಗಳನ್ನು ಸ್ವಯಂ ತಿಳಿದವರಾಗಿಯೂ, ಒಳ್ಳೇ ವಿದ್ವಾಂಸರಾಗಿಯೂ. ಧರ್ಮಜ್ಞರಾಗಿಯೂ, ತಮ್ಮ ವಿಖ್ಯಾತಪಿತೃಗಳು ಹಾಕಿರತಕ್ಕ ಧರ್ಮಮಾರ್ಗದ ಮೇಲ್ಪಜ್ಞೆಯನ್ನು ಲೇಶವೂ ಉಲ್ಲಂಘಿಸದೆ ಅನುಸರಿಸಬೇಕೆಂಬ ದೃಢಸಂಕಲ್ಪವುಳ್ಳವರಾಗಿಯೂ, ಇರುತ್ತಾರೆ. ನಮ್ಮ ವಿಕ್ಟೋರಿಯಾ ಮಹಾರಾಜ್ಞ್ಞಿಯವರು ಬ್ರಿಟಿಷ್ ರಾಜ್ಯಕ್ಕೆ ಸಂಪಾದಿಸಿಕೊಟ್ಟಿರತಕ್ಕ ಕೀರ್ತಿಗೆ ಯಾವ ನ್ಯೂನತೆಯೂ ಬಾರದಂತೆ ಇವರು ರಾಜ್ಯಭಾರ ಮಾಡುವರೆಂದು ಕೋರುತ್ತೇನೆ

ಳು ಇವರಸೇವೆಯನ್ನು ಮಾಡಿದರು. ಇವರಲ್ಲಿ ಬಹುಜನರು ಅನನ್ಯಸಾಧರಣವಾದ ರಾಜತಂತ್ರಜ್ಞ್ಞರಾಗಿದ್ದರು. ಅಂಥಹವರುಗಳೊಡನೆ ರಾಜ್ಯಭಾರದ ಕೆಲಸಗಳನ್ನು ನಿರ್ವಹಿಸುತ್ತಲು ಗುಣದೋಷಗಳನ್ನು ಚರ್ಚಿಸುತ್ತಲು ಇದ್ದುದರಿಂದ ನಮ್ಮ ಇಂಡಿಯಾ ಚಕ್ರವರ್ತಿನಿಯವರ ರಾಜಕೀಯ ವಿಷಯವಾದ ಜ್ಞ್ಞಾನವು ಅದ್ಭುತವಾಗಿ ಪರಿಣಮಿಸಿತು. ಅನೇಕ ರಾಜಕೀಯ ವಿಷಯಗಳಲ್ಲಿ ಮಹಾಪಂಡಿತರಾದ ಸಚಿವನುಗಳಿಗಿಂತಲೂ ನಮ್ಮ ಶ್ರೀಮನ್ಮಹಾರಾಜ್ಞ್ಞಿಯವರ ಅನುಭವವು ಹೆಚ್ಚಾಯಿತು. ಲಾರ್ಡ್ ಸಾಲಿಸ್ ಬರಿಯವರು ಕೂಡ ಅನೇಕ ವಿಷಯಗಳಲ್ಲಿ ನಮ್ಮ ಮಹಾರಾಜ್ಞಿಯವರ ಅನುಭವವನ್ನು ಉಪಯೋಗಿಸಿಕೊಂಡು ರಾಜ್ಯಭಾರಮಾಡುತ್ತಾ ಬಂದರು.

ನಮ್ಮ ಶ್ರೀಮನ್ಮಹಾರಾಜ್ಞ್ಞಿಯವರು ಚಕ್ರವರ್ತಿ ಪದವಿಯನ್ನು ಅಲಂಕರಿಸಿದಾಗ್ಯೂ. ಸಾಮಾನ್ಯ ಜನಗಳಿಗಿಂತಲೂ. ಹೆಚ್ಚಿದ ಕಷ್ಟವನ್ನು ಅನುಭವಿಸಿದರು. ೧೮೫೬ನೇ ಇಸವಿಯಲ್ಲಿ ಇವರುಪ್ರಿನ್ಸ್ ಅಲ್ಬರ್ಟ್‌ರವರನ್ನು ವಿವಾಹ ಮಾಡಿಕೊಂಡರು. ಪ್ರಿನ್ಸ್ ಆಲ್ಬರ್ಟ್‌ರೂ. ಅನ್ಯಾದೃಶವಾದ ವಿದ್ಯಾವಿನಯ ಸಂಪನ್ನಾತ್ಮರಾಗಿದ್ದರು. ಬ್ರಿಟಿಷ್ ರಾಜ್ಯವು ಇಷ್ಟು ಮಹೋನ್ನತಸ್ಥಿತಿಗೆ ಬರುವ ದಕ್ಕೆ ಅವರೂ ಕಾರಣಭೂತರಾದರು. ೧೮೫೧ ನೇ ಇಸವಿಯಲ್ಲಿ ಯಂಟರ್‌ನ್ಯಾಷನಲ್ ಎಕ್ಸಿಬಿಷನ್ ಎಂಬ ಸರ್ವದೇಶ ಪ್ರದರ್ಶನ ಶಾಲೆಯನ್ನು ಮಾಡಿ ಅನೇಕ ವಿಧನಾದ ಕಸಬುಗಳಿಗೆ ಅದ್ವಿತೀಯವಾದ ಪ್ರೋತ್ಸಾಹವನ್ನುಂಟುಮಾಡಿದರು. ೧೮೬೦ ರಲ್ಲಿ ನಮ್ಮ ಶ್ರೀಮನ್ಮಹಾರಾಜ್ಞ್ಞಿಯವರಿಗೆ ಮಾತೃವಿಯೋಗವಾಯಿತು ಅದೇ ವರುಷ ಕೊನೆಯ ಭಾಗದಲ್ಲಿ ಪತಿವಿಯೋಗವಾಯಿತು. ಶ್ರೀಮನ್ಮಹಾರಾಜ್ಞ್ಞೀ ವಿಕ್ಟೋರಿಯಾರವರು ಬಹಿರಂಗದಲ್ಲಿ ಚಕ್ರವರ್ತಿನಿಯವರಾಗಿಯೂ, ಪ್ರಿನ್ಸ್ ಆಲ್‌ಬರ್ಟ್‌ರವರು ಅವರಿಗೆ ಪ್ರಜೆಯಾಗಿಯೂ ಇದ್ದಾಗ್ಯೂ ಅರಮನೆಯಲ್ಲಿ ವಿಕ್ಟೋರಿಯಾರವರು ಪ್ರಿನ್ಸ್ ಆಲ್‌ಬರ್ಟ್‌ರವರಿಗೆ ಪ್ರಿಯಾಳಾದ ದಾಸಿಯೋಪಾದಿಯಲ್ಲಿದ್ದುಕೊಂಡಿದ್ದರು. ಇವರ ಪತಿಭಕ್ತಿಯು ಅನ್ಯಾದೃಶವಾದದ್ದು. ಹೆಸರಿಗೆ ಚಕ್ರವರ್ತಿನಿಯರಾಗಿದ್ದಾಗ್ಯೂ, ಪ್ರಿನ್ಸ್ ಆಲ್‌ಬರ್ಟ್‌ರವರ ಹಿತೋಪದೇಶಗಳಿಗೆ ವಿರೋಧವಾಗಿ ಯಾವಾಗ್ಯೂ ನಡೆದಿರಲಿಲ್ಲ. ಈ ಕಾಲದ ಸ್ತ್ರೀಯರಲ್ಲಿ ಕೆಲವರು ಅಲ್ಪಸ್ವಲ್ಪ ವಿದ್ಯೆಯನ್ನು ಕಲಿತುಕೊಂಡು ದೊಡ್ಡ ಪದವಿಯಲ್ಲಿರತಕ್ಕವರಿಂದ ಸನ್ಮಾನವನ್ನು ಹೊಂದಿ ತಮ್ಮ ಸಮಳಿಲ್ಲವೆಂದು ತಿಳಿದುಕೊಂಡು ಪತಿಗಳಲ್ಲಿ ಮರ್ಯಾ

ಕರ್ತೃವೇ ಆಗಿರುವುದೊ ಅಂತಹ ಕ್ರಿಯಾವಾಚಕವಾದುವು ಅಕರ್ಮಕಗಳಿಂದೂ ಹೇಳಲ್ಪಡುವುದೆಂದ ರ್ಥವನ್ನು ಹೇಳಿ, ಎರಡನೇಯ ಶ್ಲೋಕದಲ್ಲಿಯೂ ಇದೇಅರ್ಥವು ಸ್ಪಷ್ಟವಾಗಿ ಬಾಲಕರಿಗೆ ಬೋಧೆಯಾಗುವಂತೆ, ಯಾವಕ್ರಿಯೆಯನ್ನು ಹೇಳುತ್ತಲೂ ಏನು ? ಎಂದು ಆಕಾಂಕ್ಷೆತೋರುವುದೊ, ಅಂತಹ, ಅಡು, ಕೇಳ್, ಓದು ಮೊದಲಾದ ಧಾತುಗಳ ಕ್ರಿಯೆಗಳು ಸವಿಷಯಕ್ರಿಯೆಗಳೆಂದೊ, ಯಾವಕ್ರಿಯೆಯಲ್ಲಿ ಇಂತಹ ಆಕಾಂಕ್ಷೆಬರುವುದಿಲ್ಲವೊ ಅಂತಹಕ್ರಿಯೆಗಳು ನಿರ್ವಿಷಯಕ್ರಿಯೆಗಳೆಂದೂ. ಇವು ಸಕರ್ಮಕಾಕರ್ಮಕಗಳೆಂದೂ ತಿಳಿಯತಕ್ಕದ್ದೆಂದು ಅರ್ಥವನ್ನು ಹೇಳಿರುವರು.

ಆದುದರಿಂದಲೆ ಸವಿಷಯ ಕ್ರಿಯಾವಾಚಕಗಳಾದ ಧಾತುಗಳ ಮೇಲೆಯೆ ಕರ್ಮಣಿ ಪ್ರತ್ಯಯಗಳು ಬರುವುವು. ಉಳಿದ ಧಾತುಗಳ ಮೇಲೆ ಕರ್ಮಣಿ ಪ್ರತ್ಯಯಗಳು ಬರುವುದಿಲ್ಲವೆಂದು ಹಿಂದೆ ಹೇಳಲ್ಪಟ್ಟಿರುವುದು.

ಆದರೆ ಹಿಂದೆ ಹೇಳಿದ ಪ್ರಕಾರ ಧಾತುಗಳು ಸವಿಷಯನಿರ್ವಿಷಯಗಳ ಭೇದದಿಂದ ಕ್ರಿಯೆಗಳು ಎರಡು ಭೇದವುಳ್ಳವು, ಈ ಕ್ರಿಯಾಭೇದಗಳಿಂದ ಧಾತುಗಳೂ ಸಕರ್ಮಕಾಕರ್ಮಕಗಳೆಂಬೆರಡು ಭೇದವುಳ್ಳವು, ಎಂದು ಹೇಳಿ ಸಕರ್ಮಕ ಧಾತುಗಳ ಮೇಲೆ ಕರ್ಮಾರ್ಥಕ ಪ್ರತ್ಯಯಗಳು ಬರುವುವು. ಅಕರ್ಮಕಗಳ ಮೇಲೆ ಬರುವುದಿಲ್ಲ. ಎಂದು ಹೇಳಲ್ಪಟ್ಟಿತು. ಆದರೆ ಅಕರ್ಮಕ ಧಾತುಗಳ ಮೇಲೆ ಕರ್ತೃರ್ಥಕ ಪ್ರತ್ಯಯಗಳು ಬರುವುವು, ಸಕರ್ಮಕಗಳಮೇಲೆ ಬರುವುದಿಲ್ಲ, ಎಂದು ಮಂದಮತಿಗಳು ಆಕ್ಷೇಪಿಸಬಹುದು. ಆದಾಗ್ಯೂ ಹೀಗೆ ಕರ್ಮಾರ್ಥಕ ಪ್ರತ್ಯಯಗಳಲ್ಲಿ ವ್ಯವಸ್ಥೆ ಮಾಡಿದಂತೆಕರ್ತೃರ್ಥಕ ಪ್ರತ್ಯಯಗಳಲ್ಲಿ ಈವ್ಯವಸ್ಥೆ ಮಾಡಲಾಗದು. ಏತ ಕೆಂದರೆ,—

ಲೋಕದಲ್ಲಿ ಕ್ರಿಯೆ ಎಂಬುವುದೆಲ್ಲ ಒಂದಾಶ್ರಯವನ್ನು ಹೊಂದೇ ಇರುವುದಲ್ಲದೆ ನಿರಾಶ್ರಯವಾಗಿರುವುದೊಂದೂ ಇಲ್ಲವಾದುದರಿಂದ ಎಲ್ಲಾ ಕಡೆಯಲ್ಲೂ, ತನ್ನಾಶ್ರಯವನ್ನು ಆಕಾಂಕ್ಷಿಸದೆ ಇರಲೆ ಇರದು. ಅಲ್ಲಿ ಯಾವಾಗಲೂ ಅಕರ್ಮಕ ಧಾತುಗಳಿಂದ ವಾಚ್ಯವಾದ ಕ್ರಿಯೆಯು ಕರ್ತೃಸ್ಥವಾಗಿರುವುದಲ್ಲದೆ ಕರ್ಮಸ್ಥವಾಗಿರುವುದಿಲ್ಲ. ಸಕರ್ಮಕಧಾತುಕ್ರಿಯೆಯಾದರೊ ಸವಿಷಯವಾಗಿರುವುದು. ಇದರಲ್ಲಿ ಅಡಿಗೆ ಮೊದಲಾದ ಕ್ರಿಯೆಗಳೆ ಸಕರ್ಮಕ ಕ್ರಿಯೆಗಳೆಂಬುವುದು. ಇವು ಅನೇಕ ಕ್ರಿಯೆಗಳಿಂ

ವ್ಯಾಕರಣಶಾಸ್ತ್ರ.

ಧಾತುಪ್ರಕರಣ.

(೬೫ನೇ ಪುಟದ ಶೇಷ.)

ಹಿಂದೆ ಹೇಳಿರುವಂತೆ ಸಕರ್ಮಕಾಕರ್ಮಕಗಳ ಸ್ವರೂಪವನ್ನು ಕಂಡು ಹಿಡಿಯುವುದು ಮಂದಮತಿಗಳಿಗೆ ಅಸಾಧ್ಯವಾದುದರಿಂದ ಕೆಲವು ಪ್ರಾಚೀನ ವೈಯ್ಯಾಕರಣರು,—" ವೃದ್ಧಿಕ್ಷಯಭಯ ಜೀವಿತಮರಣಂ ಲಜ್ಜಾಸತ್ತಾಸ್ಥಿತಿ ಜಾಗರಣಂ॥ ಶಯನ ಕ್ರೀಡಾರುಚಿದೀಪ್ತ್ಯರ್ಥಂ ಧಾತುಗಣಂತಮಕರ್ಮಕಮೂಹುಃ "

ಎಂಬ ಶ್ಲೋಕವನ್ನು ಹೇಳಿ,—ವೃದ್ಧ್ಯರ್ಥಕವಾಗಿಯೂ, ಕ್ಷಯಾರ್ಥಕವಾಗಿಯೂ, ಭಯಾರ್ಥಕವಾಗಿಯೂ, ಬದುಕುವಿಕೆಯೆಂಬರ್ಥವುಳ್ಳದ್ದಾಗಿಯೂ, ಮರಣಾರ್ಥವಾಗಿಯೂ, ಲಜ್ಜಾರ್ಥಕವಾಗಿಯೂ, ಇರ್ಥಾತ್ವರ್ಥಕವಾಗಿಯೂ ಸ್ಥಿತ್ಯರ್ಥಕವಾಗಿಯೂ, ಜಾಗರಣಾರ್ಥಕವಾಗಿಯೂ, ಶಯನಾರ್ಥಕವಾಗಿಯೂ, ಕ್ರೀಡಾರ್ಥಕವಾಗಿಯೂ, ರುಚ್ಯರ್ಥಕವಾಗಿಯೂ, ಕಾಂತ್ಯರ್ಥಕವಾಗಿಯೂ, ಇರುವ ಧಾತುಗಳೆಲ್ಲ ಸಾವಾನ್ಯವಾಗಿ ಅಕರ್ಮಕಗಳೆಂದೂ, ತದತಿರಿಕ್ತವಾದುವುಗಳೆಲ್ಲಾ ಸಕರ್ಮಕಗಳೆಂದೂ, ತಿಳಿಯಬೇಕೆಂದು ಹೇಳಿರುವರು. ಮತ್ತು,—

" ಯದ್ವಾಜ್ಞೇಹಾಸವಿಷಯಾ ಧಾತವಸ್ತೆ ಸಕರ್ಮಕಾಃ ॥
ಯೇತುನಿರ್ವಿಷಯಾವಾಹುರೀಹಾಂ ತೇಸ್ಯುರಕರ್ಮಕಾಃ ॥
ಪಚ್ಯಾದಿಕಾಸವಿಷಯಾಕ್ರಿಯಾ ಸಾಯಾಕಿವಿಚ್ಛಿಕಾ ॥
ಸ್ಥಿತ್ಯಾದಿರನ್ಯಾವಿಷಯಾಕಿವಿಜ್ಞಾಂಜನಯೇನ್ನಯಾ ॥

ಎಂಬ ಎರಡು ಶ್ಲೋಕಗಳನ್ನು ಹೇಳಿ, ಮೊದಲನೆಯುದಕ್ಕೆ,—ಯಾವಧಾತುಗಳಿಂದ ವಾಚ್ಯನಾದಕ್ರಿಯೆಯು ವಿಷಯದಿಂದ ಕೂಡಿರುವ್ರದೋ, (ಎಂದರೆ ಕರ್ತೃವಲ್ಲದೆ ಅಕ್ರಿಯೆಯಿಂದ ಹುಟ್ಟುವ ಫಲಕ್ಕೆ ಆಶ್ರಯವಾದುದು ಬೇರೊಂದು ವಸ್ತು ತೋರುತ್ತಿದ್ದರೆ) ಅಧಾತುಗಳು ಸಕರ್ಮಕಗಳೆಂದೂ, ಯಾವಧಾತುಗಳ ಕ್ರಿಯೆಯು ನಿರ್ವಿಷಯವಾಗಿರುವ್ರದೋ ಎಂದರೆ ಅಂತಹಫಲಾಶ್ರಯವಾದುದು ಬೇರೊಂದು ಇಲ್ಲದೆ

ಭೂಪಠ.

ಗಳೆಲ್ಲಾ ಒಂದಾಗಿದ್ದುವು ಎಂಬುವುದಕ್ಕೆ ಅನೇಕ ದೃಷ್ಟಾಂತಗಳಿರುತ್ತವೆ. ಆಫ್ರಿಕಾ ಖಂಡಕ್ಕೂ ಏಷ್ಯಾಖಂಡಕ್ಕೂ ಸೂಯಿಜ್ ಎಂಬ ಭೂಸಂಧಿಯು ಮಧ್ಯ ವರ್ತಿಯಾಗಿತ್ತು. ಈಗ ಈ ಭೂಸಂಧಿಯನ್ನು ಕತ್ತರಿಸಿ ಹಡಗುಗಳು ಸಂಚಾರವಾ ಡುವುದಕ್ಕೆ ಕಾಲುವೆಯನ್ನು ಪಡಿಸಿ ಇದಾರೆ. ಇದಕ್ಕೆ ಸೂಯಜ್ ಕಾಲುವೆಯೆಂದು ಹೇಳುವರು. ಭೂಮಿಗೂ ಸಮುದ್ರಕ್ಕೂ ಒಂದು ವ್ಯತ್ಯಾಸವುಂಟು. ಭೂಮಿಯು ಶಿಲಾಮಯವಾಗಿರುವುದು. ಸಮುದ್ರವು ಜಲದಿಂದ ಪರಿಪೂರ್ಣವಾದದ್ದು. ಗಾಳಿಯು ಹೆಚ್ಚಾಗಿರುವಾಗ ಅಲೆಗಳು ಎಳುವುದುಂಟು. ಗಾಳಿಯ ವೇಗಕ್ಕನುಸಾರವಾಗಿ ಈ ಅಲೆಗಳೂ ಕೂಡ ಹೆಚ್ಚಾಗಿಯೂ ಕಡವೆಯಾಗಿಯೂ ಇರುವುದುಂಟು. ಭೂಮಿಯೊಳಕೆಲ ಕೆಲವುಭಾಗಗಳಲ್ಲಿ ಮಟ್ಟವಾಗಿರುತ್ತದೆ. ಮತ್ತೆ ಕೆಲವುಭಾಗಗಳಲ್ಲಿ ಪರ್ವತಶಿಖರಗಳೂ ಕಣಿವೆಗಳೂ ಇರುತ್ತವೆ. ಸಮುದ್ರದಲ್ಲಿ ಪ್ರವಾಹಗಳು ಅನೇಕವಿದ್ದು ಗಳಿಗೆ ಹೊರಡುವುವು. ಉಷ್ಣವಲಯದಲ್ಲಿ ಪಶ್ಚಿಮದಿಕ್ಕಿಗೆ ಹೋಗತಕ್ಕ ಅಟ್ಲಾಂ ಟಿಕ್ ಸಾಗರದ ಬಿಸಿನೀರಿನ ಪ್ರವಾಹವು ಮಧ್ಯ ಅಮೆರಿಕಾಖಂಡದ ಮೆಕ್ಸಿಕೊ ಕೊಲ್ಲಿಗೆ ತಗಲಿ ಒಂದು ಬಾಗವು ಬಲಗಡೆಗೂ ಒಂದುಭಾಗವು ಎಡೆಗಡೆಗೂ ಪ್ರವಹಿಸುವುದು. ವಾಯುಮಂಡಲದಲ್ಲಿಯೂ ಕೂಡ ಗಾಳಿಯು ಇದೇರೀತಿಯಲ್ಲಿ ಬೀಸುವುದು. ವಾಯುಮಂಡಲದ ಶೀತೋಷ್ಣಗಳಿಗೆ ಸಮುದ್ರವೂ, ಬೆಟ್ಟಗಳೂಕೂಡ ಕಾರಣವಾ ಗುವುವು ಉಷ್ಣವಲಯವಾದ ಬಿಸಿನೀರಿನ ಪ್ರವಾಹವು ಮೆಕ್ಸಿಕೋಖಾರಿಗೆ ತಗಲಿ ಅಗ್ನೇ ಯದಿಕ್ಕಿಗೆ ಹೊರಟು ಬ್ರಿಟಿಷ್‌ರಾಜ್ಯದ ಸವಿಾಪದಲ್ಲಿ ಹರಿದು ಆ ದೇಶದ ಶೈತ್ಯವನ್ನು ಬಹಳಮಟ್ಟಿಗೆ ಕಡಮೆಮಾಡುವುದು. ಈ ಬಿಸಿನೀರಿನ ಪ್ರವಾಹಕ್ಕೆ "ಗಲ್ಫ್ ಸ್ಟ್ರೀಮ್" ಎಂದಾಗಿ ಹೆಸರುಪ್ಪ ಬ್ರಿಟಿಷ್‌ರಾಜ್ಯದ ಹವಾಮಾನ ಸಮಶೀತೋಷ್ಣ ವಾಗಿರುವುದಕ್ಕೆ ಈ ಪ್ರವಾಹವೇ ಮುಖ್ಯಕಾರಣ. ಭೂಮಿಯ ಅನೇಕಭಾಗಗಳಲ್ಲಿರಂಧ್ರ ಗಳೆವರ್ಗವಾಗಿ ಭೂಗರ್ಭದಿಂದ ಜ್ವಾಲೆಯು ಹೊಗೆಯು ಅವಿಯು ಧೂಳುಕಲ್ಲು ಗಳು, ಮತ್ತು ಕರಗಿ ಜಲಾವಸ್ಥೆಯನ್ನು ಹೊಂದಿರತಕ್ಕ ಲೋಹಾದಿಗಳು ಇವುಗ ಳೆಲ್ಲಾ ಈಚೆಗೆ ಬರತಕ್ಕದ್ದು ಮತ್ತು ಪ್ರವಹಿಸತಕ್ಕದ್ದು ಅನುಭವವೇದ್ಯವಾಗಿಯೇ ಇದೆ. ವಾಯಿಕವಾಗಿ ಇಂಥಾ ರಂಧ್ರಗಳು ಬೆಟ್ಟಗಳು ಅಥವಾ ಪರ್ವತಗಳಲ್ಲಿರುವವು ಇವುಗಳಿಗೇ ಅಗ್ನಿಪರ್ವತಗಳೆಂದು ಹೆಸರು. ಇಂಥಾ ರಂಧ್ರಗಳು ಅನೇಕಪರ್ವತಗ ಳಲ್ಲಿ ಸಾಲುಸಾಲಾಗಿ ನೂರಾರು ಇರುವುದುಂಟು. ಈ ಅಗ್ನಿಪರ್ವತಗಳ ಸವಿಾಪದಲ್ಲಿ ಆಗಾಗ್ಗೆ ಭೂಕಂಪಗಳಾಗುವುವು. ಕೆಲವುಕಾಲದಲ್ಲಿ ಕೆಲವು ಬೆಟ್ಟಗಳು ಕುಸಿದು ಹೋಗುವುವು. ಕೆಲವು ಮೈದಾನಗಳು ಬೆಟ್ಟಗಳಾಗಿ ಪರಿಣಮಿಸುವುವು. ಇದೆಲ್ಲಾ ಭೂಗರ್ಭದಲ್ಲಿರತಕ್ಕ ಅತ್ಯಂತ ತೀಕ್ಷ್ಣವಾದ ಅಗ್ನಿಯಮಹಿಮೆಯು.

ಕಿಂಡರ್‌ಗಾರ್ಟನ್ ೨೩

ಸುಮಾರು ಒಂದು ಸಹಸ್ರ ವರ್ಷಗಳ ಕೆಳಗೆ ವಿಸ್ತಾರವಾದ ಅರೇಬಿಯ ಮತ್ತು ಪರಿಷ್ಯಾ ದೇಶಗಳನ್ನು ಹ್ಯಾರೂನ್ ಅಲರ್ರಷಿಡ್ ಎಂಬ ಕಲೀಫನೊಬ್ಬನು ಬಹು ಧರ್ಮದಿಂದ ಆಳುತ್ತಿದ್ದನು. ಅವನ ಆಳುವಿಕೆಯಲ್ಲಿ ಒಂದಾನೊಂದು ದಿನ ಮಧ್ಯಾಹ್ನದವೇಳೆ ಸಿಂದ್‌ಬಾದ್‌ನೆಂಬ ಕೂಲಿಗಾರನೊಬ್ಬನು ಭಾರವಾದ ಮೂಟೆಯೊಂದನ್ನು ಹೊತ್ತುಕೊಂಡು, ಆ ಕಲೀಫನ ಮುಖ್ಯಪಟ್ಟಣವಾದ ಬಾಗದಾದಿನ ಒಂದು ರಾಜಬೀದಿಯಲ್ಲಿ ಹೋಗುತ್ತಿದ್ದನು. ಉರಿಬೇಸಿಗೆಯ ಬಿಸಿಲಿನ ತಾಪಕ್ಕೆ ಬಳಲಿ, ಅವನು, ಅಲ್ಲಿದ್ದ ಸಿಂದ್‌ಬಾದ್ ನಾವಿಕನ ಉಪ್ಪರಿಗೆಯ ಮನೆಯ ತಣ್ಣನೆಯ ಜಗುಲಿಯಮೇಲೆ, ಸುದಾರಿಸಿಕೊಳ್ಳಲು ಕೂತನು. ಅವನು ದಣುವಾರಿಸಿಕೊಳ್ಳುತ ಕೂತಿದ್ದಹಾಗೆ ಇಂಪಾದ ಸಂಗೀತಧ್ವನಿಯೊಂದು ಆ ಮನೆಯೊಳಗಿನಿಂದ ಅವನಿಗೆ ಕೇಳಬಂದಿತು. ಆ ಧ್ವನಿಯನ್ನೇ ಕಿವಿಗೊಟ್ಟು ಕೇಳಬೇಕೆಂದು ಅವನು ಚೇತರಿಸಿಕೊಂಡು ಕೂಡಲು, ರುಚಿರುಚಿಯಾದ ಭಕ್ಷ್ಯಭೋಜ್ಯಗಳ ಮನೋಹರವಾದ ವಾಸನೆಯು ಅವನ ಬಾಯಿಯಲ್ಲಿ ನೀರನ್ನು ಕರೆಯಿಸಿತು. ಇಷ್ಟರಲ್ಲಿಯೆ ಅನೇಕ ಮಂದಿ ದೊಡ್ಡಮನುಷ್ಯರು ಜರತಾರಿ ಅಂಗಿಗಳನ್ನು ತೊಟ್ಟುಕೊಂಡು ಬಹುಸಡಗರದಿಂದ

ಗ್ರಂಥ ವಿಮರ್ಶೆ.

ಶೇಷರಾಮಾಯಣ.

ಮೈಸೂರ್ ಶ್ರೀಮನ್ಮಹಾರಾಜರವರ ಆಸ್ಥಾನ ವಿದ್ವಾಂಸರಾದ ॥ ವೇ ॥ ನೇ೦ಸಲೆ ತಿಯಮ್ಮಾಶಾಸಿ ಗಳು ಕನ್ನಡದಲ್ಲಿ ವಾರ್ಧಿಕಷಟ್ಪದಿರೂಪಕವಾಗಿ ಬರೆದಿರುವ ಶೇಷರಾಮಾಯಣವೆಂಬ ಗ್ರಂಥವನ್ನು ಪರಮಾದರಪೂರ್ವಕವಾಗಿ ನೋಡಲಾಯಿತು. ದಶರಥಪುತ್ರನಾದ ಶ್ರೀ ರಾಮನು ರಾವಣನ ಸಂಹಾರವನ್ನು ಮಾಡಿದಮೇಲೆ ಪಟ್ಟಾಭಿಷಿಕ್ತನಾಗಿ ರಾಜ್ಯಭಾರವನ್ನು ಮಾಡುತ್ತಾ ಯಾವನೋಬ್ಬ ಅಗಸರವನು ಸೀತಾದೇವಿಯಮೇಲೆ ಹೇಳಿದ ಅಪವಾದಕ್ಕಾಗಿ ಪೂರ್ಣ ಗರ್ಭಿಣಿಯಾದ ಸೀತಾದೇವಿಯನ್ನು ಅರಣ್ಯಕ್ಕೆ ಕಳುಹಿಸಿ ಅಶ್ವಮೇಧವೆಂಬ ಯಾಗವನ್ನು ಮಾಡುತ್ತಿದ್ದಾಗ ವಾಲ್ಮೀಕಿ ಮುನಿಪ್ರಭೃತಿಗಳ ವರ್ಣನಾನುಸಾರವಾಗಿ ತಮ್ಮ ಪುತ್ರರಾದ ಕುಶಲವರನ್ನೂ ತನ್ನ ಪತ್ನಿಯಾದ ಸೀತೆಯನ್ನೂ ಬರಮಾಡಿಕೊಂಡನಂತರದಲಿ ಆದೇಯಾಗವನ್ನು ಸಾಂಗವಾಗಿ ನೆರವೇರಿಸಿದ ಕಥೆಯನ್ನು ಈ ಗ್ರಂಥದಲ್ಲಿ ಹೇಳಿರುವುದು. ಈ ಕಥೆಯು ಪದ್ಮಪುರಾಣಾಂತರ್ಗತವಾಗಿ ಆದಿಶೇಷನು ವಾತಿಳ್ಯಮುನಿಗೆ ಹೇಳಿದಂತಿರುವದು. ಈ ಗ್ರಂಥವು ೧೫೦೦ ಪದ್ಯಗಳುಳ್ಳದ್ದಾಗಿ ೩೪ ಸಂಧಿಗಳುಳ್ಳದ್ದಾಗಿರುವುದಲ್ಲದೆ ಲಲಿತವಾಗಿಯೂ, ಕರ್ಣಾಟಕರಿಗೆಸುಲಭವಾಗಿ ತಿಳಿಯಲರ್ಹವಾಗಿಯೂ, ವರ್ಣನಾಭಾಗಗಳು ಮನಸ್ಸಿಗೆ ಸಂಕೋಚವನ್ನುಂಟುಮಾಡದೆ ಸ್ತ್ರೀಪುಂಸ ಸಾಧಾರಣವಾಗಿ ಪರಿಗ್ರಾಹ್ಯವಾಗಿಯೂ, ಅನೇಕವಾದ ಉಪಾಖ್ಯಾನಗಳಿಂದ ಕೂಡಿ ಕಾವ್ಯಲಕ್ಷಣ ಲಕ್ಷಿತವಾಗಿಯೂ ಇರುವುದು. ಭಾಷಾರೀತಿಯು ಜೈಮಿನಿ ಭಾರತ ಮೊದಲಾದ ಕರ್ಣಾಟಕ ಷಟ್ಪದಿ ಗ್ರಂಥಗಳಂತಿರುವುದು. ಗಾರ್ಜುಯೇಟ್ಸ್ ಪ್ರೆಸ್ಸಿನವರು ಈ ಗ್ರಂಥವನ್ನು ಎಂದಿನಂತೆ ಚೆನ್ನಾಗಿ ಮುದ್ರಿಸಿರುವರು.

[ಈ ಪುಸ್ತಕವು ಗ್ರಂಥಕರ್ತರಲ್ಲಿಯೂ, ಗಾರ್ಜುಯೇಟ್ಸ್ ಟ್ರೇಡಿಂಗ್ ಅಸೋಸಿಏಷನ್ನಲ್ಲಿಯೂ, ಕ್ರಯಕ್ಕೆ ದೊರೆಯುವುದು.

ದುದು' ಎಂದು ನನ್ನ ತಂದೆಯು ಪದೇಪದೇ ಹೇಳುತಲಿದ್ದ ಆ ಸಾಲನ್ನು ನನ್ನ ಗಾಢವಾಗಿ ನನಗೆ ಜ್ಞಾಪಕಕ್ಕೆ ಬಂದಿತು. ಹಾಗೆಯೆ 'ಪಿತಾರ್ಜಿತ ಸ್ವತ್ತಿನೊಂದಿಗೆ ವಿವೇಕವು ಶೋಭಿಸುವದು.' ಎಂದು ಆಗಾಗ್ಗೆ ಹೇಳುತಿದ್ದುದೂ ಜ್ಞಾಪಕಕ್ಕೆ ಬಂದಿತು. ಇವು ನನ್ನ ಮನಸ್ಸಿನಲ್ಲಿ ನಾಟಿ, ನನ್ನ ತಂದೆಯಂತೆ ನಾನೂ ಪ್ರಸಿದ್ಧನಾಗಬೇಕೆಂದು ನಿಶ್ಚಯಿಸಿದೆನು. ಒಡನೆಯೆಹೋಗಿ ಕೆಲವುಮಂದಿ ಸಾಹುಕಾರರೊಡನೆ ಮಾತನಾಡಿದೆನು. ಆಮೇಲೆ, ನಾವೆಲ್ಲರೂ ಸೇರಿ ಕಟ್ಟಿದ ಹಡಗನ್ನೇರಿ ವ್ಯಾಪಾರಕ್ಕಾಗಿ ಹೊರಟೆವು.

ಪಶ್ಚಿಮ ದ್ವೀಪಗಳಿಗೆ ಹೋಗವದಕ್ಕಾಗಿ, ಬಲಗಡೆಯಲ್ಲಿ ಅರೇಬಿಯಾ ದೇಶದ ಕರೆಯೂ, ಎಡಭಾಗದಲ್ಲಿ ಪರಿಷ್ಯಾ ದೇಶದ ಒಂದು ಭಾಗವೂ ಉಳ್ಳ ಪರಿಷ್ಯಾ ಖಾರಿಯನ್ನು ನಮ್ಮ ಹಡಗು ದಾಟಿತು. ಸಮುದ್ರಯಾನದ ಆರಂಭದಲ್ಲಿ ಪ್ರಾಪ್ತವಾಗುವ ಅಲಸಿಕೆಯು ಮೊದಲು ಮೊದಲು ನನಗ ಬಹಳ ತೊಂದರೆಯನ್ನುಂಟುಮಾಡಿತು. ಆದರೆ ಒಡನೆಯೆ ನಾನು ಚೇತರಿಸಿಕೊಂಡೆನು. ಅಂದುಮೊದಲು, ಅಂತಹ ಅಲಸಿಕೆಗೆ ನಾನು ಈಡಾಗಲಿಲ್ಲ.

ನಾವು ಹೋಗ ಹೋಗುತ ದಾರಿಯಲ್ಲಿ ಸಿಕ್ಕಿದ ಅನೇಕದ್ವೀಪಗಳಲ್ಲಿಳಿದು ನಮ್ಮ ಪದಾರ್ಥಗಳನ್ನು ಮಾರುತ್ತಲೂ, ಅಲ್ಲಿಯ ವಿಶೇಷಪದಾರ್ಥಗಳನ್ನು ನಮ್ಮ



ಆ ಮನೆಗೆ ಭೋಜನಕ್ಕೆ ಬರುತಿದ್ದುದನ್ನು ಅವನು ನೋಡಿದನು. ಇವೆಲ್ಲವನ್ನೂ ನೋಡಿ ಅವನ ಮನಸ್ಸು ಸಹಿಸಲಾರದೆ ಅಯ್ಯೋ ! ದೇವರೆ ? ನಿನ್ನದು ಎಂತಹ ಅನ್ಯಾಯ ! ಸಿಂದ್‌ಬಾದ ನಾವಿಕನಿಗೆ ಮಾತ್ರ ಬೇಕಾದಷ್ಟು ಐಶ್ವರ್ಯ ! ಸಕಲ ಸೌಖ್ಯ ! ಸಿಂದ್‌ಬಾದ್ ಕೂಲಿಗಾರನಿಗಾದರೊ ತಿನ್ನುವದಕ್ಕೆ ಅನ್ನವೇ ಇಲ್ಲ ! ಹೊಟ್ಟೆಯುವದಕ್ಕೆ ಬಟ್ಟೆಯೇ ಇಲ್ಲ ! ಇಂತಹ ಅನ್ಯಾಯವೂ ನಿನ್ನಲ್ಲಿ ಉಂಟೆ ! ಎಂದು ಗಟ್ಟಿಯಾಗಿ ಕೂಗಿಕೊಂಡನು.

ಅವನ ಕೂಗು ಮೇಲಕ್ಕೆ ಕೇಳಿಸಿತು. ಸಿಂದ್‌ಬಾದ್ ನಾವಿಕನು ಬಡನೆಯೆ ಅವನನ್ನು ಬರಹೇಳಿ ಕಳುಹಿಸಿದನು. ಸಿಂದ್‌ಬಾದ್ ಕೂಲಿಗಾರನು ಭೋಜನಶಾಲೆಗೆ ಬಂದೊಡನೆ ನಾವಿಕನು, ಎದ್ದು ಅದರಧಿಂದ ಅವನನ್ನು ಕರೆತಂದು ಬೇಕಾದುದನ್ನು ಹಾಕಿಸಿಕೊಂಡು ಸಖವಾಗಿ ಭೋಜನಮಾಡೆಂದು ಉಪಚರಿಸಿದನು. ಭೋಜನವಾದ ಮೇಲೆ ನಾವಿಕನು, ಕೂಲಿಗಾರನನ್ನು ಕರೆದು, 'ಅಯ್ಯಾ, ನೀನು ಬೀದಿಯಲ್ಲಿ ಹೇಳಿದ ದೇನು ?' ಎಂದು ಕೇಳಿದನು. ಅದಕ್ಕೆ ಪಾಪ ! ಆ ಕೂಲಿಗಾರನು ಗಡಗಡನೆ ನಡುಗುತ್ತಾ 'ಸ್ವಾಮಿ ! ಕವಿಸಬೇಕು ನಾನು ಏನೋ ಹೇಳಿಕೊಂಡೆನು' ಎಂದನು.

ಅಲವಯಾ ! ನೀನು ಹೇಳಿಕೊಂಡುದಕ್ಕೆ ನನಗೆ ಆಸವಾದಾವನಿಲ್ಲ. ಆದರೆ ನೀನು ತಿಳಿದಿರುವುದು ದೊಡ್ಡ ತಪ್ಪು. ಅದೇನೆನ್ನುವಿಯೋ ? ಹೇಳುವೆನು ಕೇಳು. ನಿನ್ನ ಮನಸ್ಸಿನಲ್ಲೇನೋ, ಸಿಂದ್‌ಬಾದ್ ನಾವಿಕನು, ಸಲವೂ ಕೆಲಸವೂಡದೆ, ಎಷ್ಟಪಾದರೂ ಕಳುಹಿಸಿದೆ, ಈ ಸಂಪತ್ತೆನ್ನೂ, ಈ ಸೌಖ್ಯವನ್ನೂ, ಅನುಭವಿಸಿರುವನೆಂದು, ನೀನು ತಿಳಿದಿರುವಿ. ನೀನು ಹಾಗೆ ತಿಳಿಯಬಾರದು. ಬಹುಕಾಲ ಪಡಲಾರದ ಕಷ್ಟವನ್ನು ಪಟ್ಟು, ಅನುಭವಿಸಲಾಗದ ಮನೋವ್ಯಥೆಯನ್ನು ಅನುಭವಿಸಿ, ಕೊನೆಗೆ ನಾನು ಗಳಿಸಿದ ಸೌಖ್ಯವೂ ಸಂಪತ್ತೂ ಇವೆಂದು ತಿಳಿ. ಇದಕ್ಕೆ ದೃಷ್ಟಾಂತವಾಗಿ, ನನ್ನ ಕಥೆಯನ್ನು ಮೊದಲಿನಿಂದಲೂ ಹೇಳುವೆನು ಕೇಳು.

ನನ್ನ ತಂದೆಯು ಹೆಸರುವಾಸಿಯೂ ಧನಿಕನೂ ಆದ ಒಬ್ಬ ಸಾಹುಕಾರನು. ಅವನು ಸಾಯುವಾಗ ನನಗೆ ಬಿಟ್ಟು ಆಸ್ತಿಯು ದೊಡ್ಡದಾಗಿದ್ದರೂ ನನ್ನು ದುಂದುಗಾರಿಕೆಯಿಂದಲೇ ಆದನು. ನಾನು ಹಾಳುಮಾಡಿಕೊಂಡೆನು. ಅದರೊಡನೆ ಎಲ್ಲಕ್ಕಿಂತಲೂ ಅಮೂಲ್ಯವಾದ ಕಾಲವನ್ನೂ ನಾನು ಕಳೆದುಕೊಳ್ಳುತ್ತಿರುವೆನೆಂದು ತಿಳಿದು ಬೇಗನೆ ಎಚ್ಚೆತ್ತೆನು. 'ಒಳ್ಳೆಯ ಹೆಸರು ಪರಿಮಳಿದ್ರವ್ಯಕ್ಕಿಂತಲೂ ಉತ್ತಮ'

ವಿದ್ಯಾದಾಯಿನಿ.

ಭಾಗ ೯.] ಏಪ್ರೆಲ್ ೧೯೦೧. [ಸಂಚಿಕೆ ೪.

ಎಡಿಟರವರ ನೋಟ್ಸ್.

ಯಾವದೇಶದಲ್ಲೇ ಆಗಲಿ ಜನಗಳ ಸ್ಥಿತಿಯೂ ಆ ದೇಶದ ಭಾಷಾಸ್ವರೂಪವೂ ಏಕರೀತಿಯಾಗಿ ವೃದ್ಧಿಯಾಗಬೇಕು. ಜನಗಳ ಸ್ಥಿತಿಯು ಮಾತ್ರ ವೃದ್ಧಿಯನ್ನು ಹೊಂದಿ, ಅವರ ಭಾಷೆಯು ಪೂರ್ವದಂತೆ ವೃದ್ಧಿಹೊಂದದೇ ಇರುವುದು ಯಾವಾಗ್ಗೂ ಅಸಂಭವ. ಹೀಗಿರುವಲ್ಲಿ ದೇಶದ ಪುರೋಭಿವೃದ್ಧಿಯಲ್ಲಿ ಬದಳ್ಳಿದರರಾಗಿರುವವರು ಆ ದೇಶಭಾಷೆಯು ವೃದ್ಧಿಯು ವಿಷಯಕ್ಕೆ ತಕ್ಕಷ್ಟು ಗಮನವನ್ನು ಕೊಡಬೇಕು. ಇಂಗ್ಲೀಷಿನವರ ಆಳ್ವಿಕೆಯಿಂದ ಈಚೆಗೆ ನಮ್ಮ ಹಿಂದೂದೇಶದ ಸ್ಥಿತಿಯು ಅಭಿವೃದ್ಧಿಯು ಅನೇಕಪ್ರಕಾರವಾಗಿ ನಡೆಯುತಿದೆ. ದೇಶದ ಅಭಿವೃದ್ಧಿಗೂ ಆ ದೇಶಭಾಷಾಭಿವೃದ್ಧಿಗೂ ಇರುವ ಪರಸ್ಪರ ಸಂಬಂಧವನ್ನು ತಿಳಿದು ಈ ದೇಶದ ಕೆಲವು ಕಡೆಗಳಲ್ಲಿ ದೇಶಭಾಷಾಭಿವೃದ್ಧಿಗೆ ಬೇಕಾದಷ್ಟು ಯತ್ನವನ್ನು ಮಾಡುತಿದಾರೆ. ಮೈಸೂರು ದೇಶವನ್ನು, ಮದರಾಸಾಧಿಪತ್ಯವನ್ನು, ಇಂಥವುಗಳಿಗೆ ನಿದರ್ಶನವಾಗಿ ಹೇಳಬಹುದು. ಮತ್ತೆ ಕೆಲವು ಭಾಗಗಳಲ್ಲಿ ದೇಶಭಾಷಾವಿಷಯವಾಗಿ ಇಷ್ಟು ಉತ್ಸುಕತೆಯು ಸ್ಪಷ್ಟವಾಗುತಿಲ್ಲವಾದರೂ ಈಚೀಚೆಗೆ ಬೇಕಾದ ಬದಲಾವಣೆಯು ನಡೆಯುತಿದೆ. ಬಂಗಾಳದೇಶದಲ್ಲಿ ದೇಶಭಾಷೆಗೆ ಪ್ರಾಮುಖ್ಯತೆಯನ್ನು ವಿದ್ಯಾಭ್ಯಾಸ ಮಾಡಿಸುವವರು ಕೊಡಬೇಕೆಂದು ನಿರ್ಣಯಿಸಿದರೆಂದು ಹಿಂದಿನ ಸಂಚಿಕೆಯಲ್ಲಿ ತಿಳಿಸಿದ್ದೆವು. ಈಸಲ ಬೊಂಬಾಯಲ್ಲಿ ಸಹ ಈ ವಿಧವಾದ ದೇಶಭಾಷೆಯ ಉನ್ನತಿಯನ್ನು ಹೆಚ್ಚಿಸುವ ಏರ್ಪಾಡೊಂದಾಗಿದೆಯೆಂದು ತಿಳಿಸಲು ಸಂತೋಷಪಡುತ್ತೇವೆ. ಬೊಂಬಾಯಿ ಯೂನಿವರ್ಸಿಟಿಯಲ್ಲಿ ದೇಶಭಾಷೆಗೆ ಇದುವರೆಗೆ ಅಷ್ಟು ಪುರಸ್ಕಾರವಿರಲಿಲ್ಲ. ಈಗ ಆ ಭಾಷೆಯನ್ನು ಅಭ್ಯಸಿಸಿ ಅದರಲ್ಲಿ ಎಂ. ಎ. ಪರೀಕ್ಷೆಯನ್ನು ಕೊಡಬಹುದೆಂ

ಪದಾರ್ಥಗಳಿಗೆ ಬದುಲಾಗಿ ತೆಗೆದುಕೊಳ್ಳುತ್ತಲೂ ಇದ್ದವು. ಒಂದು ದಿನ ನಮ್ಮ ಹಡಗು ಹೋಗುತಿದ್ದಹಾಗೆ ಹತ್ತಿರವಲ್ಲ ಒಂದು ಸಣ್ಣ ದ್ವೀಪವು ಕಾಣಬಂದಿತು. ಅಮ್ಮು ಹೊತ್ತಿಗೆ ಗಾಳಿಯು ಸ್ವಲ್ಪ ಕಡಮೆಯಾಗಲು, ಕಡಲು ಮಟ್ಟಕ್ಕಿಂತಲೂ ಸ್ವಲ್ಪ ಎತ್ತರವಾಗಿ ಅಪೇಕ್ಷೆಯುಳ್ಳವರು ಇಳಿಯಬಹುದೆಂದು, ಹಡಗಿನ ಅಧಿಕಾರಿಯು ಅಪ್ಪಣೆ ಕೊಟ್ಟು, ಹಾಯಿಗಳನ್ನು ಕಟ್ಟಿಸಿದನು. ಹಡಗು ನಿಂತಿತು. ನಾನೂ ಕೆಲವರೊಡನೆ ಇಳಿದೆನು.

ಸಮುದ್ರಯಾನದ ಆಯಾಸವನ್ನು ಹೋಗಲಾಡಿಸಿಕೊಳ್ಳುವದಕ್ಕಾಗಿ ನಾವು ಸುಖವಾಗಿ ತಿಂದು, ಕುಡಿದು, ಬೇಕಾದಹಾಗೆ ಆ ದ್ವೀಪದಮೇಲೆ ವಿಹರಿಸುತಲಿದ್ದಾಗ, ತಟ್ಟನೆ ಆ ದ್ವೀಪವು ಅಲುಗಾಡಿತು. ಅದರಿಂದ ನಾವೆಲ್ಲರೂ ನಡುಗಿ ಹೋದೆವು.

ಆ ದ್ವೀಪವು ಅಲುಗಾಡಿದುದನ್ನು ಹಡಗಿನಲ್ಲಿದ್ದವರು ನೋಡಿ, ಒಡನೆಯೆ ನಮಗೆ ಕೇಳಿಬರುವಂತೆ "ಹಡಗೇರಿ, ಇಲ್ಲದಿದ್ದರೆ ಎಲ್ಲರೂ ಮುಳುಗಿಸೋಗುವಿರಿ" ಎಂದು ಕೂಗಿ ಹೇಳಿದರು. ದ್ವೀಪವೆಂದು ನಾವು ತಿಳಿದಿದ್ದುದು ಸಮುದ್ರದಲ್ಲಿರುವ ಅದ್ಭುತಾಕಾರವುಳ್ಳ ಒಂದು ತಿಮಿಂಗಿಲದ ಬೆನ್ನಾಗಿತ್ತು. ಪಟುವಾಗಿದ್ದವರು ದೋಣಿಯನ್ನು ಏರಿಕೊಂಡರು. ಇತರರು ಈಜಿಕೊಂಡು ಹೋದರು. ನಾನು ಒಬ್ಬನು ಮಾತ್ರ ಅದು ಮುಳುಗಿಹೋಗುವ ಸಮಯದಲ್ಲಿ, ಅಲ್ಲಿಯೇ ಉಳಿದೆನು. ಬೆಂಕಿಯನ್ನು ಹೊತ್ತಿಸುವುದಕ್ಕಾಗಿ ನಾವು ಜತೆಯಲ್ಲಿ ತಂದಿದ್ದ ಒಂದು ಮರದ ತುಂಡನ್ನು ಹಿಡಿದುಕೊಳ್ಳುವಮಟ್ಟಿಗೆ ನನಗೆ ಅವಕಾಶ ದೊರಕಿದುದರಿಂದ ನಾನು ಅಲ್ಲಿಂದ ಮುಳುಗಿಹೋಗದೆ ನಿಂತೆನು. ಇಷ್ಟರಲ್ಲಿಯೆ ಹಡಗಿನ ಯಜಮಾನನು ದೋಣಿಯನ್ನೇರಿ ಬಂದವರೆಲ್ಲರನ್ನೂ, ಈಜಿಕೊಂಡು ಹಡಗನ್ನುಸೇರಿದವರಲ್ಲಿ ಕೆಲವರುನ್ನೂ ಮೇಲಕ್ಕೆ ಏರಿಸಿಕೊಂಡು ಆಗತಾನೆ ಅನುಕೂಲವಾದ ಗಾಳಿಯು ಬೀಸಲಾರಂಭಿಸಿದುದರಿಂದ ಹಾಯಿಗಳನ್ನು ಬಿಡಿಸಿ ಹಡಗನ್ನು ನಡೆಸಿಕೊಂಡು ಹೊರಟನು. ಅದಕಾರಣ ಆಹಡಗನ್ನು ಸೇರುವ ಸಂಭವವೇ ನನಗೆ ಇಲ್ಲದಂತಾಯಿತು.

(ಸಶೇಷ)

ರಕ ಧರ್ಮಶಾಸ್ತ್ರ ವ್ಯಾಸಂಗವು ಅನೇಕ ಇತರ ಶಾಸ್ತ್ರಗಳಿಗೆ ಮಾರ್ಗಪ್ರದರ್ಶನವನ್ನುಂಟುಮಾಡಿತು. ಆದರೆ ಗ್ರೀಸ್‌ದೇಶದ ಚರಿತ್ರೆಯನ್ನು ಓದಿದಹಾಗೆಲ್ಲಾ ಇವರ ಪ್ರಪಂಚಜ್ಞಾನವು ಅದ್ಭುತವಾಯಿತು. ಪ್ರಜೆಗಳು ಕಷ್ಟಪಟ್ಟು ವ್ಯವಸಾಯವನ್ನು ಮಾಡಿ ಕಂದಾಯರೂಪವಾಗಿ ತಾವು ಆರ್ಜಿಸಿದ್ದರಲ್ಲೊಂದುಭಾಗವನ್ನು ಸರಕಾರಕ್ಕೆ ಕೊಟ್ಟು ದುಷ್ಟನಿಗ್ರಹಶಿಷ್ಟಪರಿಪಾಲನೆಯನ್ನು ಮಾಡಬೇಕೆಂದು ಹೇಗೆ ನಿರೀಕ್ಷಿಸುತ್ತಾರೋ ಅದನ್ನು ಪ್ರಜೆಗಳಿಂದ ಕೊಡಲ್ಪಟ್ಟ ದ್ರವ್ಯವನ್ನು ಪ್ರಭುಗಳೂ, ಸರಕಾರದವರೂ ತೆಗೆದುಕೊಂಡು ಈ ಹುಟ್ಟುವಳಿಯನ್ನು ಮನಸ್ಸೀ ಖರ್ಚುಮಾಡುವುದಕ್ಕೆ ತಾವು ಹಕ್ಕುದಾರರೆಂಬದಾಗಿಯೂ, ಜಗದೀಶ್ವರನೇ ಇಂಥಾ ಹಕ್ಕನ್ನು ತಮಗೆ ಕೊಟ್ಟಿರುವನೆಂಬದಾಗಿಯೂ, ತಿಳಿದುಕೊಂಡು ನಿರಂಕುಶವಾಗಿ ಹೇಗೆ ರಾಜ್ಯಭಾರವನ್ನು ಮಾಡುತ್ತಾರೋ, ರಾಜ್ಯಭಾರದ ಗುಣದೋಷಗಳನ್ನು ಉದಾಸ್ಫಾಟಿಸತಕ್ಕವರನ್ನು ಶಿಕ್ಷಿಸಬೇಕೆಂದು ಹ್ಯಾಗೆ ಪ್ರವರ್ತಿಸುತ್ತಾರೋ ಇವುಗಳನ್ನೂ, ಇಂಥಾ ನಿರಂಕುಶಪ್ರವರ್ತನವನ್ನು ನೋಡಿ ನಾವು ದ್ರವ್ಯಸಹಾಯವನ್ನು ಮಾಡಿ ನಾವಾಗಿಯೇ ಈತಿಬಾಧೆಗಳನ್ನುಂಟುಮಾಡಿಕೊಂಡವೆಂದು ಅನುತಾಪಪಟ್ಟು ಪ್ರಜೆಗಳು ಐಕಮತ್ಯದಿಂದ ಸರಕಾರಕ್ಕೆ ಪ್ರತಿಭಟಿಸುವುದನ್ನೂ ಇವರು ತಿಳಿದುಕೊಂಡರು. ಈ ವಿಷಯಗಳು ರೋಮ್ ಚರಿತ್ರೆಯಲ್ಲಿ ಇನ್ನೂ ವಿಶೇಷವಾಗಿರುವವೆಂದು ತಿಳಿದುಬಂದಿತು. ರೋಮು ದೇಶದ ಚರಿತ್ರೆಯನ್ನು ಜರ್ಮ್ಮ ಗ್ರಂಥಕರ್ತರಾದ ನೀಭರ್‌ರವರು ಅತ್ಯಂತ ಶ್ಲಾಘ್ಯವಾಗಿ ಬರೆದಿರುವದಾಗಿ ತಿಳಿಯಬಂದಿತು. ಈ ಚರಿತ್ರೆಯನ್ನು ಓದಿ ತಿಳಿದುಕೊಳ್ಳಬೇಕೆಂದು ಇವರು ಜರ್ಮ್ಮ ಭಾಷೆಯನ್ನು ಉಪಕ್ರಮಿಸಿದರು. ಅನೇಕ ವಿದ್ಯಾರ್ಥಿಗಳು ವಯಸ್ಸಾದಮೇಲೆ ಭಾಷಾಂತರದಲ್ಲಿ ಪಾಂಡಿತ್ಯವನ್ನು ಸಂಪಾದಿಸುವುದು ಕಷ್ಟವೆಂದು ಭಾವಿಸಿ ಉದಾಸೀನರಾಗಿರುವರು. ಆದರೆ ಮೆ॥ ಆರ್ನಲ್ಡ್‌ರವರು ಇಂಥಾವರಲ್ಲ. ಮನುಷ್ಯ ಮಾಡಿದ ಕೆಲಸವನ್ನು ಇತರ ಮನುಷ್ಯರೂ ಮಾಡಬಹುದೆಂದು ಇವರು ಬಹಳ ದೃಢವಾಗಿ ನಂಬುತ್ತಿದ್ದರು. ೬೦ ವರ್ಷ ವಯಸ್ಸಿನಲ್ಲಿ ನಮ್ಮ ಹಿಂದೂ ವೇದಾಂತದ ಮಹಿಮೆ ಇಂಥಾದ್ದೆಂದು ಸರ್ ವಿಲಿಯಂ ಜೋನ್ಸ್ ಎಂಬ ಆಂಗ್ಲೇಯ ವಿದ್ವಾಂಸರಿಗೆ ಯಾರೋ ಹೇಳಿದರು. ಆಗ ಸಂಸ್ಕೃತವನ್ನು ಓದಿ ನಮ್ಮ ವೇದಾಂತವನ್ನು ತಿಳಿದುಕೊಳ್ಳಬೇಕೆಂಬ ಆಶೆಯು ಇವರಿಗೆ ಹುಟ್ಟಿತು. ೬೦ ವರ್ಷಗಳವರೆಗೂ ಏಕಾಗ್ರಚಿತ್ತರಾಗಿ ಅಹೋರಾತ್ರಿಗಳಲ್ಲಿಯೂ ಬಳ್ಳೇ ಪಂಡಿತರನ್ನು ಕರೆಸಿಕೊಂಡು

ದಾಗಿದೆ. ಈ ದೊಡ್ಡ ಪರೀಕ್ಷೆಗೆ ಈ ಭಾಷೆಯನ್ನು ವಿಷಯವಾಗಿಟ್ಟದುದರಿಂದ ಆ ಭಾಷೆಗೆ ಬಂದ ಪುರಸ್ಕಾರವೂ, ಅದರಿಂದ ಕ್ರಮೇಣ ಆಗುವ ಫಲವೂ ಸ್ಪಷ್ಟವಾಗಿವೆ.

***

ನೂತನವಾದ ವಿದ್ಯಾಭ್ಯಾಸಕ್ರಮವನ್ನು ಕುರಿತು ಪರಾಮರ್ಶಿಸುವವರೆಲ್ಲರೂ ಈ ದೇಶದ ಈಗಿನ ವಿದ್ಯಾಭ್ಯಾಸವೆಲ್ಲ ಪರೀಕ್ಷಾಮಯವಾಗಿದೆಯೆಂದು ಹೇಳುವುದು ಈಡಿಗೆ ವಾಡಿಕೆಯಾಗಿದೆ. ಪರೀಕ್ಷೆಗೆ ಇಷ್ಟು ಮಟ್ಟಿನ ಪ್ರಾಧಾನ್ಯವನ್ನು ಕೊಡುವುದು ಕಷ್ಟವೆಂದು ಹೇಳುವುದೂ ನಾಡಿಕೆಯಾಗಿದೆ. ಆದರೆ ಹೀಗೆ ಪರೀಕ್ಷೆಗಳಲ್ಲಿ ದೋಷಾರೋಪಣೆ ಮಾಡುವುದು ಅನುಚಿತವೆಂದು ಮದರಾಸಿನಲ್ಲಿರುವ ಕ್ರಿಶ್ಚಿಯನ್ ಕಾಲೆಜ್ ಅಧ್ಯಕ್ಷರಾದ ಡಾಕ್ಟರ್ ಮಿಲರ್ ಸಾ|| ರವರು ತಮ್ಮ ಉಪನ್ಯಾಸವೊಂದರಲ್ಲಿ ತಿಳಿಸಿ ದ್ದಾರೆ. ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸುವುದಕ್ಕಾಗಿ ಇವರು ಒಂದು ಸಾಮ್ಯ ವನ್ನನುಸರಿಸಿ ಕಾರಣಗಳನ್ನು ವಿಶದವಾಗಿ ವಿವರಿಸಿರುವರು. ಮನುಷ್ಯನ ದೇಹದಲ್ಲಿ ಮೂಳೆಗಳು ಬಹಳವಾಗಿರುವುವು. ಈ ಅಸ್ಥಿಸನ್ನಿವೇಶವು ದೇಹಕ್ಕೆ ಅತ್ಯಾವಶ್ಯಕವಾ ದ್ದೆಂದು ಎಲ್ಲರೂ ಒಪ್ಪುವರು. ಆದರೆ ಈ ಅಸ್ಥಿಸನ್ನಿವೇಶಮಾತ್ರವೇ ಸಾಲದು. ಮಾಂಸಾದಿಯಾದ ಬೇರೆ ಪದಾರ್ಥಗಳೂ ಬೇಕು. ಇತರ ಪದಾರ್ಥಗಳು ಬೇಕೆಂಬ ಕಾರಣದಿಂದ ಮೂಳೆಗಳು ಅನಾವಶ್ಯಕವೆಂದು ಹೇಳುವುದು ಸರಿಯಲ್ಲ. ಹೀಗೆಯೆ ದೇಶದ ವಿದ್ಯಾಭ್ಯಾಸಕ್ರಮದಲ್ಲಿ ಪರೀಕ್ಷೆಗಳು ಅಸ್ಥಿಸನ್ನಿವೇಶದಂತೆ ಆಧಾರಭೂತವಾ ದವುಗಳು, ಆದರೆ ಪರೀಕ್ಷೆಗಳು ಮಾತ್ರವೇ ಸಾಲದು. ವಿದ್ಯಾಭ್ಯಾಸವು ಪೂರ್ಣವಾ ಗಬೇಕಾದರೆ ಬೇರೇ ಅಂಶಗಳಿರಬೇಕು. ಸಾಕ್ಷಾತ್ತಾಗಿ ಪರೀಕ್ಷೆಗಾಗಿಯೇ ಅಲ್ಲದೆ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳ ತಿಳುವಳಿಕೆಯನ್ನು ಹೆಚ್ಚಿಸುವುದಕ್ಕೆ ಮಾಡುವುದೆಲ್ಲ ಇವುಗಳಿಗೆ ನಿದರ್ಶನ. ಇಷ್ಟೇಹೊರತು ಪರೀಕ್ಷೆಗಳು ಅನಾವಶ್ಯಕಗಳಲ್ಲ. ಪ್ರತಿ ದೇಶದ ವಿದ್ಯಾಭ್ಯಾಸಕ್ರಮದಲ್ಲೂ ಮನುಷ್ಯನ ದೇಹದಲ್ಲಿ ಅಸ್ಥಿಸನ್ನಿವೇಶಕ್ಕಿರುವಂತೆ, ಪರೀಕ್ಷೆಗಳಿಗೆ ಪ್ರಾಧಾನ್ಯವಿದ್ದೇ ಇರಬೇಕು.

ಅರ್ನಲ್ಡ್‌ರವರ ಚರಿತ್ರೆ.

ಮೆ|| ಅರ್ನಲ್ಡ್‌ರವರು ಲೇಲ್‌ಹಂ ಪಾಠಶಾಲೆಯಲ್ಲಿದ್ದಾಗ ಶಾರೀರಕ ಧರ್ಮಶಾ ಸ್ತ್ರವನ್ನೂ, ಗ್ರೀಸ್ ದೇಶದ ಚರಿತ್ರೆಯನ್ನೂ ಓದುವಷ್ಟಕ್ಕೆ ಪಕ್ರಮಿಸಿದರು. ಶಾರೀ

ಭಾಷೆಯಲ್ಲಿರತಕ್ಕ ಗ್ರಂಥಗಳೆಲ್ಲನೋಕವನ್ನು ಅಹೋರಾತ್ರಿಯಲ್ಲಿಯೂ ಪರಿಸಿದೆನು. ಈ ಗ್ರಂಥಗಳು ಅಜ್ಞಾನವೆಂಬ ಗಾಢಾಂಧಕಾರವನ್ನು ನಿವಾರಿಸುವದಕ್ಕೆ ದ್ವಾದಶಾದಿತ್ಯ ರಂತೆ ಪರಿಣಮಿಸಿರುತ್ತವೆ. ಈ ಗ್ರಂಥ ಸಮೂಹವನ್ನೆಲ್ಲಾ ಪರೀಕ್ಷಿಸಿ ತಿಳಿದುಕೊಳ್ಳ ಬೇಕೆಂಬ ಅಭಿಲಾಷೆಯು ತರಂಗಗಳಂತೆ ಹೆಚ್ಚುತ್ತಲಿದೆ. ಆದರೆ ಸರ್ವೋತ್ತಮವಾದ ಗ್ರಂಥಗಳು ಅತ್ಯಂತ ಬಹುಳವಾಗಿ ಇವೆ. ಅನೇಕ ಶತಮಾನಗಳು ವ್ಯಾಸಂಗಮಾಡಿದಾಗ್ಯೂ ಇನ್ನೂ ವ್ಯಾಸಂಗಮಾಡುವ ಗ್ರಂಥಗಳು ಎಷ್ಟೋ ಇರುವವು. ಅದು ಹಾಗ್ಯಾಗಾದರೂ ಇರಲಿ. ಈ ಭಾಷೆಯನ್ನು ಪಕ್ವಮಿಸಿದ್ದರಿಂದ ನಾನು ಧನ್ಯನಾದೆನು. ಮೃಗಗಳಿಗೂ, ಮನುಷ್ಯನಿಗೂ ಜ್ಞಾನದ ವಿಷಯದಲ್ಲಿ ಎಷ್ಟು ತಾರತಮ್ಯವಿರುವದೋ ಸಾಮಾನ್ಯ ಮನುಷ್ಯರಿಗೂ ಉದ್ಗ್ರಂಥಾವಲೋಕನ ಮಾಡಿದವರಿಗೂ ಅಷ್ಟು ವ್ಯತ್ಯಾಸವಿರುವುದು. ಇಂಥ ಗ್ರಂಥಾವಲೋಕನವನ್ನು ಮಾಡುವುದರಲ್ಲಿ ಉಪೇಕ್ಷಿಸತಕ್ಕವರು ಬಹಳ ದುರದೃಷ್ಟವಂತರು. ಯಾಕಂದರೆ, ದೇವರು ಕೊಟ್ಟ ಶಕ್ತಿಯನ್ನು ವಿನಿಯೋಗಿಸಿ ತಿಳಿದುಕೊಳ್ಳತಕ್ಕದ್ದನ್ನೆಲ್ಲಾ ತಿಳಿದುಕೊಂಡು ಸರ್ವೋತ್ತಮವಾದ ಸುಖವನ್ನು ಪಡೆವದು ಇವರಿಗೆ ಲಭ್ಯವಾಗುವುದಿಲ್ಲ. ಇವರು ಬಹಳ ದುರದೃಷ್ಟವಂತರಲ್ಲವೆ ?

ಅರ್ವಾಚೀನ ಕರ್ಣಾಟಕ ಸಾಹಿತ್ಯದ ಬೆಳವಣಿಗೆ.

ಕರ್ಣಾಟಕ ಭಾಷಾಜ್ಞಾನದಲ್ಲಿ ಪಾಶ್ಚಾತ್ಯಪಂಡಿತರೊಳಗೆ ಮೊದಲನೆಯವರೆಂದು ಕೀರ್ತಿಗೊಂಡವರಾದ ಮೆ। ಎಲ್. ರೈಸ್ ಸಾಹೇಬರವರು, ತಾವು ಬರೆದ ಸಾಹಿತ್ಯದ ಚರಿತ್ರೆಯಲ್ಲಿ ಕರ್ಣಾಟಕ ಸಾಹಿತ್ಯದ ಚರಿತ್ರವನ್ನು ಮೂರು ಭಾಗಗಳನ್ನಾಗಿ ವಿಭಾಗಿಸಿರುವರು– " ಗ್ರಂಥಲೇಖನದ ಉದ್ದೇಶದಿಂದ ಕರ್ಣಾಟಕ ಭಾಷೆಯಲ್ಲಿ ಪ್ರಥಮತಃ ಅಧ್ಯವಸಾಯವನ್ನು ಮಾಡಿದವರು ಜೈನರು. ಕ್ರಿ. ಶ. ೧೩೦೦ ನೆಯ ವರ್ಷದವರೆಗೆ ಜೈನರಲ್ಲದೆ ಇತರರು ಯಾರೂ ಕನ್ನಡದಲ್ಲಿ ಗ್ರಂಥಗಳನ್ನು ಬರೆದಂತೆ ತೋರಲಿಲ್ಲ.

೧. ರೈಸ್ ಸಾಹೇಬರು ಈ ಚರಿತ್ರೆಯನ್ನು ಸಂಗ್ರಹಿಸುವದರಲ್ಲಿ ಮೊದಲನೆಯವರಾದುದರಿಂದಲೂ, ಅವರು ತೋರುವಮಟ್ಟಿನಮೇಲೆ ಬರೆದಿರುವುದರಿಂದಲೂ ಹೀಗೆ ಹೇಳಿರುವರು. ಈಚೀಚೆಯ ಶೋಧನೆಗಳಿಂದ ಈ ಅಭಿಪ್ರಾಯವು ತಪ್ಪೆಂದು ನಿರ್ಣೀತವಾಯಿತು. ಕವಿಕಾಮದೇವನ ಶೃಂಗಾರರತ್ನಾಕರದ ಪೀಠಿಕೆಯನ್ನು ನೋಡಿರಿ.

ಸಂಸ್ಕೃತ ಅಭ್ಯಾಸವನ್ನು ಮಾಡಿದ್ದಲ್ಲದೆ ವೇದಶಾಸ್ತ್ರ ಪುರಾಣೇತಿಹಾಸಗಳನ್ನೆಲ್ಲಾ ಚೆನ್ನಾಗಿ ವ್ಯಾಸಂಗಮಾಡಿದರು. ಹೀಗೆ ೨೦ ವರ್ಷಗಳು ವ್ಯಾಸಂಗಮಾಡಿ ಅನಂತರ ನಮ್ಮ ವೇದಗಳನ್ನೂ, ಅನೇಕ ಕಾವ್ಯಗಳನ್ನೂ ಇವರು ಇಂಗ್ಲಿಷಿಗೆ ತರ್ಜುಮೆಮಾಡಿ ಇರುತ್ತಾರೆ. ಇಂಥಾ ಅದ್ಭುತಕೃತ್ಯಗಳನ್ನೇಕಗಳು ಇವರ ಸ್ಮೃತಿಪಥಕ್ಕೆ ಬಂದುದ ೀದೆ ವ್ಯಾಸಂಗಮಾಡತಕ್ಕ ವಯಸ್ಸು ವಿಚಾರಿಸಿದ್ದಾಗ್ಯೂ ಮೆ॥ ಆರ್ನಲ್ಡ್‌ರವರು ಜರ್ಮನ್ ಭಾಷೆಯನ್ನು ಉಪಕ್ರಮಿಸಿದರು. ಈ ಪ್ರಪಂಚದ ಭಾಷೆಗಳಲ್ಲೆಲ್ಲಾ ಈ ಭಾಷೆಯು ಶ್ರೇಷ್ಠಾಂತ ವೃದ್ಧಿಗೆ ಬಂದಿರುತ್ತದೆ. ಲೋಕದಲ್ಲಿರತಕ್ಕ ಯಾವಯಾವ ಭಾಷೆಗಳಲ್ಲಿ ಯಾವ ಯಾವ ಉನ್ನ್ರಂಥಗಳಿರುವುವೋ ಅವುಗಳೆಲ್ಲಾ ಜರ್ಮನ್ ಭಾಷೆಗೆ ತರ್ಜುಮೆ ಯಾಗಿರುತ್ತದೆ. ಮೆ॥ ಆರ್ನಲ್ಡ್‌ರವರು ನೀಭರ್‌ರವರ ರೋಮ್ ಚರಿತ್ರೆಯನ್ನು ಓದಬೇಕೆಂದು ಜರ್ಮನ್ ಭಾಷೆಯನ್ನು ವ್ಯಾಸಂಗಮಾಡುವುದಕ್ಕೆ ಉಪಕ್ರಮಿಸಿದರು. ಈ ವ್ಯಾಸಂಗದಿಂದ ಜ್ಞಾತವ್ಯನಾದ ಅನೇಕ ಶಾಸ್ತ್ರಗಳಿಗೆ ಪ್ರವೇಶವುಂಟಾಯಿತು. ಅನೇಕ ಹೊಸ ಪ್ರಪಂಚಗಳು ಇವರ ದೃಷ್ಟಿಪಥಕ್ಕೂ ಸ್ಮೃತಿಪಥಕ್ಕೂ ಬಂದುವು. ಈ ಭಾಷಾಪರಿಚಯವನ್ನು ಮಾಡುವುದರಲ್ಲಿ ಇವರು ಪ್ರತಿದಿವಸವೂ ಪ್ರತಿ ನಿಮಿ ಷವೂ ಚಿತ್ರವಿಚಿತ್ರನಾದ ಗ್ರಂಥಗಳನ್ನೂ ಅವಲೋಕಿಸುತ್ತಾ, ಅನನ್ಯಸಾಧಾರಣ ನಾದ ಗ್ರಂಥಾವಲೋಕನ ಸುಖವನ್ನು ಅನುಭವಿಸುತ್ತಾ, ಸ್ವರ್ಗಸುಖಕ್ಕಿಂತಲೂ ಗ್ರಂಥಾ ವಲೋಕನ ಸುಖವು ವಿಶೇಷನಾದುದೆಂದು ಭಾವಿಸುವ ಸ್ಥಿತಿಗೆ ಬಂದರು. ಆಗ ಇವರು ಬರೆದಿರತಕ್ಕ ಒಂದು ಲೇಖನವು ಕೇಳತಕ್ಕುದಾಗಿದೆ. ಅವರು ಬರೆದಿರುವುದೇನೆಂದರೆ :—

"ನೀಭರ್‌ರವರ ಚರಿತ್ರೆಯನ್ನೋದಬೇಕೆಂದು ನಾನು ಬಹಳ ಶ್ರಮಪಟ್ಟು ಜರ್ಮನ್ ಭಾಷೆಯನ್ನು ಅಭ್ಯಾಸಮಾಡಿದೆ. ನನ್ನ ಪುಣ್ಯೋದಯದಿಂದ ಈ ಚರಿತ್ರೆಯನ್ನೋದಬೇಕೆಂಬ ಆಶೆಯು ನನಗೆ ಉಂಟಾಯಿತು. ಆದರೆ ಇದರಿಂದ ನನಗೆ ಉಂಟಾ ಗಿರತಕ್ಕ ಲಾಭವು ಅನ್ಯಾದೃಶವಾದುದು. ಈ ಚರಿತ್ರೆಯಲ್ಲಿ ನೀಭರ್‌ರವರು ಅದ್ಭುತ ವಾದ ಶಕ್ತಿಯನ್ನೂ, ಲೋಕವ್ಯವಹಾರ ಜ್ಞಾನವನ್ನೂ, ಧರ್ಮಾಧರ್ಮ ವಿಚಕ್ಷಣ ಯನ್ನೂ ತೋರಿಸಿರುತ್ತಾರೆ. ಆದರೆ ಜರ್ಮನ್ ಭಾಷೆಯನ್ನು ತಿಳಿದುಕೊಂಡದ್ದರಿಂದ ನನಗೆ ಆದ ಪ್ರಯೋಜನವು ಈ ಗ್ರಂಥಾವಲೋಕನವಮಾತ್ರವೇ ಅಲ್ಲ. ಜರ್ಮನ್ ಭಾಷೆ ಯು ಸಕಲ ವಿದ್ಯೆಗಳಿಗೂ, ಸಕಲ ಶಾಸ್ತ್ರಗಳಿಗೂ ಜನ್ಮಸ್ಥಾನವಾಗಿರುವುದು. ಈ

ಬರೆದ " ವ್ಯಾಕರಣೋಪನ್ಯಾಸಮಂಜರಿ " ಎಂಬ ನೂತನವಾದ ಪುಸ್ತಕದಲ್ಲಿ ಅನೇಕ ಕಾನೇಕ ಕಾರಣಗಳನ್ನು ಕೊಟ್ಟು ಮೆ॥ ರೈಸ್ ಸಾಹೇಬರ ಕಾಲ್ಪನಿಕವಾದ " ಪೂರ್ವದ ಹಳೆಗನ್ನಡವು " ಇರಲೇ ಇಲ್ಲವೆಂದು ಸ್ಪಷ್ಟಗೊಳಿಸಿದರು. ಈ ವಿಷಯವನ್ನು ಮೆ॥ ರಾ॥ ರಘುನಾಥರಾಯರವರು ಸಂಪೂರ್ಣವಾಗಿ ಪರಿಶೋಧಿಸಿ ಯೋಗ್ಯವಾದ ಆಧಾರಗಳ ಸಹಾಯದಿಂದ ತರ್ಕಿಸಿ ನಿರ್ಣಯಗೊಳಿಸಿ, ಕರ್ಣಾಟ ವಿದ್ವಾಂಸರಲ್ಲಿ ಬಹುಪಕ್ಷದವರ ಮತವನ್ನು ತಮ್ಮ ಕಡೆಗೆ ಸೆಳೆದುಕೊಂಡಿರುವುದರಿಂದ ಇನ್ನು ಆ ವಿಷಯವನ್ನು ಕುರಿತು ಇಲ್ಲಿ ವಿಪುಲವಾಗಿ ಬರೆಯುವ ಆವಶ್ಯಕತೆ ತೋರುವುದಿಲ್ಲ. ಗ್ರಂಥಗಳನ್ನು ಬರೆದಿರುವ ' ಹಳೆಗನ್ನಡ ' ಕ್ಕಿಂತಲೂ ಪ್ರಾಚೀನವಾದ ಒಂದು ' ಹಳೆಗನ್ನಡ ' ವಿರಲಿಲ್ಲವೆಂದು ನಾವು ಖಂಡಿತವಾಗಿ ಹೇಳಲಾರೆವು. ಆದರೆ ಮೆ॥ ರೈಸ್ ಸಾಹೇಬರು ಹೇಳುವಂತೆ ಕರ್ಣಾಟಭಾಷೆಯು ಗ್ರಂಥಸ್ಥವಾಗಿ ನಿಂತಮೇಲೆ ಈ ಪೂರ್ವದ ಹಳೆಗನ್ನಡವು ಪ್ರಚಾರದಲ್ಲಿ ಇದ್ದಿತೆಂದು ನಾವು ಒಪ್ಪುವದಿಲ್ಲ. ಪೂರ್ವದ ಹಳೆಗನ್ನಡವಿದ್ದರೂ ಅದು ಕೇವಲ ಮಾತನಾಡುವ ಭಾಷೆಯಾಗಿಯೇ ಇತ್ತಲ್ಲದೆ ಗ್ರಾಂಥಿಕಭಾಷೆಯಾಗಿರಲಿಲ್ಲವೆಂಬ ವಿಷಯದಲ್ಲಿ ಸಂದೇಹವಿಲ್ಲ. ಹಾಗೆ ಇರುತ್ತಿದ್ದರೆ ಆ ಭಾಷೆಯಲ್ಲಿ ಬರೆದ ಕನ್ನಡ ಗ್ರಂಥಗಳು ಏಕೆ ಇಲ್ಲ? ೮ ನೆಯ ಶತಕದ ಪೂರ್ವದಲ್ಲಿಯೇ ಬರೆದ ಶಾಸನಗಳು ಕೂಡ ಪೂರ್ವದ ಹಳೆಗನ್ನಡದಲ್ಲಿ ಬರೆಯಲ್ಪಟ್ಟ ಹಾಗೆ ಮೆ॥ ರೈಸ್ ಸಾಹೇಬರು ತೋರಿಸಲಿಲ್ಲ. ನೃಪತುಂಗನ ಗ್ರಂಥಗಳ ಭಾಷೆಗೂ ತದನಂತರದಭಾಷೆಗೂ ಒಂದೆರಡು ವಿಷಯದಲ್ಲಿ ಅಲ್ಪಸ್ವಲ್ಪ ಭೇದ ತೋರುವುದಾದರೂ ಅದು ಭಾಷೆಗಳನ್ನು ಪ್ರತ್ಯೇಕಿಸತಕ್ಕಷ್ಟು ದೊಡ್ಡ ಭೇದವಲ್ಲ. ಲಿಂಗಾಯತರು ಗ್ರಂಥಗಳನ್ನು ಬರೆದ ಕನ್ನಡಕ್ಕೂ ಬ್ರಾಹ್ಮಣರು ಬರೆದ ಕನ್ನಡಕ್ಕೂ ತೋರುವ ಭೇದವು ಬಹಳ ಸ್ವಲ್ಪವಾಗಿದೆ. ಅಷ್ಟು ಭೇದವು ಕೂಡ ನೃಪತುಂಗಾದಿಗಳು ಬರೆದ ಗ್ರಂಥಗಳ ಭಾಷೆಗೂ, ಅಮೇಲೆ ಬರೆದ ಹಳೆಗನ್ನಡ ಗ್ರಂಥಗಳ ಭಾಷೆಗೂ ತೋರುವುದಿಲ್ಲ. ಈ ಎಲ್ಲಾ ವಿಷಯಗಳನ್ನು ಎಣಿಸಿನೋಡಿದರೆ ಮೆ॥ ರೈಸ್ ಸಾಹೇಬರು ಹೇಳುವ ಪೂರ್ವದ ಹಳೆಗನ್ನಡವೆಂಬುದು ಇರಲೇ ಇಲ್ಲವೆಂದೂ, ಇದ್ದರೂ ಅದು ಕೇವಲ ಮಾತ

೧. ಕರ್ಣಾಟಕ ಭಾಷೆಯು ಕಡಮೆಯ ಪಕ್ಷಕ್ಕೆ ೬ ನೆಯ ಶತಕದಲ್ಲಾದರೂ ಗ್ರಂಥಸ್ಥವಾಗಿ ನಿಂತಿರಬೇಕೆಂಬ ವಿಷಯದಲ್ಲಿ ಸಂದೇಹವಿಲ್ಲ. ಸುಮಾರು ಕ್ರಿ. ಶ. ೫೫೦ ರಲ್ಲಿ ಶ್ರೀವರ್ಧದೇವನು ಚೂಡಾಮಣಿ ಎಂಬ ಗ್ರಂಥವನ್ನು ಬರೆದಂತೆ ಮೆ॥ರೈಸ್ ಸಾಹೇಬರು ಬರೆದಿರುವರು.

ಜೈನಕವಿಗಳು ೨ ಶತಕಗಳವರೆಗೆ ಮುಖ್ಯವಾಗಿ ಲಿಂಗಾಯತರೆಂಬ ಶೈವರೇ ಗ್ರಂಥಕರ್ತರಾಗಿ ಪ್ರಸಿದ್ಧಿಗೆ ಬಂದರು. ಕ್ರಿ. ಶ. ೧೫೦೦ ರಿಂದ ಈಚೆಗೆ ಬ್ರಾಹ್ಮಣರೂ ಕ್ರೈಸ್ತರೂ ಅನೇಕಾನೇಕ ಕನ್ನಡಗ್ರಂಥಗಳನ್ನು ಬರೆದು ಕರ್ಣಾಟಕ ಗ್ರಂಥ ಸಮೂಹವನ್ನು ವೃದ್ಧಿಯಾಯವನ್ನು ಬೆಳೆಯಿಸಿದರು. ಕ್ರಿ. ಶ. ೧೩೦೦ ರ ಅನಂತರದಲ್ಲಿಯೂ ಜೈನರು ಬರೆದ ಗ್ರಂಥಗಳು ಅಲ್ಲಲ್ಲಿ ತೋರುತ್ತಿರುವುವಾದರೂ, ಅವರು ಪೂರ್ವದಷ್ಟು ಪ್ರಸಿದ್ಧಿಗೆ ಬರಲೇ ಇಲ್ಲ. ಜೈನೇತರರೇ ಗ್ರಂಥರೇಖನದಲ್ಲಿ ಪ್ರಧಾನರಾಗಿದ್ದರು. (ಕರ್ಣಾಟಕ ಶಬ್ದಾನುಶಾಸನದ ಪೀಠಿಕೆ—ಪುಟ. ೧೩.) ಕೆಲಕೆಲವು ಪ್ರಾಚೀನ ಜೈನಗ್ರಂಥಗಳಲ್ಲಿ ತಾನು ಹೊಸಗನ್ನಡದಿಂದ ಬರೆದಿರುವೆನೆಂದು ಉಕ್ತವಾಗಿರುವುದರಿಂದ ಈಗ ನಾವು ಜೈನರ ಭಾಷೆಯನ್ನು ಹಳೆಗನ್ನಡವೆಂದು ಕರೆಯುತ್ತಿರುವೆವಾದರೂ ಜೈನರು ಕೂಡ ಆ ಕಾಲದಲ್ಲಿ ಹೊಸಗನ್ನಡದಿಂದಲೇ ಬರೆಯುತ್ತಿದ್ದರೆಂದೂ, ಅವರ ಕಾಲದಲ್ಲಿಯೂ ಹಳೆಗನ್ನಡವೆಂಬ ಬೇರೊಂದು ಇದ್ದಿರಬೇಕೆಂದೂ ಮೈ॥ ರೈಸ್ ಸಾಹೇಬರು ಪ್ರತಿಪಾದಿಸಿ, ಈ ಪೂರ್ವದ ಹಳೆಗನ್ನಡವು ಸುಮಾರು ಕ್ರಿ. ಶ. ೯ ನೆಯ ಶತಕದವರೆಗೆ ಇದ್ದಿರಬಹುದೆಂದು ಬರೆದರು. "ಕ್ರಿ. ಶ. ೯ ರಿಂದ ೧೫ ನೆಯ ಶತಕದವರೆಗೂ ಹಳೆಗನ್ನಡವೆಂದು ನಾವು ಸಾಮಾನ್ಯವಾಗಿ ಕರೆಯುವ ಭಾಷೆಯು ಪ್ರಚಾರದಲ್ಲಿದ್ದಿತು. ಈಕಾಲದಲ್ಲಿ ಜೈನಧರ್ಮಾನುಯಾಯಿಗಳೂ ವರಕವಿಗಳೂ ಆದ ವಿದ್ವತ್‌ಶಿರೋಮಣಿಗಳನೇಕರು ಒಬ್ಬರಹಿಂದೊಬ್ಬರಾಗಿ ಎಡೆಬಿಡದೆ ಗ್ರಂಥಗಳನ್ನು ಬರೆದು ಕರ್ಣಾಟಕ ಭಾಷೆಯನ್ನು ಉಚ್ಚಾವ್ಯಯಸ್ಥಿತಿಗೆ ತಂದರು. ಈ ಕವಿಗಳೆಲ್ಲರೂ ತಮ್ಮ ಕಾಲಕ್ಕೆ ಪೂರ್ವದಲ್ಲಿ ಪ್ರಚಾರಗೊಂಡಿದ್ದ ಭಾಷೆಯನ್ನು ಹಳೆಗನ್ನಡವೆಂದೂ, ತಾವು ಗ್ರಂಥಗಳಲ್ಲಿ ಬರೆದ ಭಾಷೆಯನ್ನು ಹೊಸಗನ್ನಡವೆಂದೂ ಕರೆದಿರುವರು. ಆದುದರಿಂದ ಕನ್ನಡ ಭಾಷೆಯ ಚರಿತ್ರವನ್ನು ಮೂರುಬಾಗಗಳನ್ನಾಗಿ ವಿಭಾಗಿಸುವ ಅವಶ್ಯಕತೆ ಇದೆ."
(ಕ. ಶಬ್ದಾನುಶಾಸನದ ಪೀಠಿಕೆ. ಪುಟ ೬.)

ಈ ಅಭಿಪ್ರಾಯವನ್ನು ಮೈ॥ ರೈಸ್ ಸಾಹೇಬರು ಬರೆದಕಾಲದಲ್ಲಿ ಕನ್ನಡಿಗರೊಳಗೆ ಪರಿಶೋಧನಾಚಾತುರ್ಯವುಳ್ಳ ವಿದ್ವಾಂಸರಿರದುದರಿಂದಾಗಲೀ, ಇದ್ದರೂ ಅಂತಹವರು ಆಕಡೆಗೆ ಲಕ್ಷ್ಯಕೊಡದುದರಿಂದಾಗಲಿ, ಅಥವಾ ಈ ಸಿದ್ಧಾಂತವು ಆಪಾತತಃ ಸರಳವಾಗಿ ತೋರಿಬಂದುದರಿಂದಾಗಲೀ, ಯಾರೊಬ್ಬರೂ ಅದನ್ನು ಖಂಡಿಸಲು ಯತ್ನಿಸಿದಂತೆ ತೋರಲಿಲ್ಲ. ಈಚೆಗೆ ಮೈ॥ ರಾ॥ ಆರ್. ರಘುನಾಥರಾಯರು ತಾವು

ಬರೆದ " ವ್ಯಾಕರಣೋಪನ್ಯಾಸವೆಂಬರಿ " ಎಂಬ ನೂತನವಾದ ಪುಸ್ತಕದಲ್ಲಿ ಅನೇಕ ಕಾರಣೀಕ ಕಾರಣಗಳನ್ನು ಕೊಟ್ಟು ಮೆ॥ ರೈಸ್ ಸಾಹೇಬರ ಕಾಲ್ಪನಿಕನಾದ " ಪೂರ್ವದ ಹಳೆಗನ್ನಡವು " ಇರಲೇ ಇಲ್ಲವೆಂದು ಸ್ಪಷ್ಟಗೊಳಿಸಿದರು. ಈ ವಿಷಯವನ್ನು ಮೆ॥ ರಾ॥ ರಘುನಾಥರಾಯರವರು ಸಂಪೂರ್ಣವಾಗಿ ಪರಿಶೋಧಿಸಿ ಯೋಗ್ಯವಾದ ಆಧಾರಗಳ ಸಹಾಯದಿಂದ ತರ್ಕಿಸಿ ನಿರ್ಣಯಗೊಳಿಸಿ, ಕರ್ಣಾಟ ವಿದ್ವಾಂಸರಲ್ಲಿ ಬಹುಪಕ್ಷೆದವರ ಮತವನ್ನು ತಮ್ಮ ಕಡೆಗೆ ಸೆಳೆದುಕೊಂಡಿರುವುದರಿಂದ ಇನ್ನು ಆ ವಿಷಯವನ್ನು ಕುರಿತು ಇಲ್ಲಿ ವಿಪುಲವಾಗಿ ಬರೆಯುವ ಆವಶ್ಯಕತೆ ತೋರುವುದಿಲ್ಲ. ಗ್ರಂಥಗಳನ್ನು ಬರೆದಿರುವ ' ಹಳೆಗನ್ನಡ ' ಕ್ಕಿಂತಲೂ ಪ್ರಾಚೀನವಾದ ಒಂದು ' ಹಳೆಗನ್ನಡ ' ವಿರಲಿಲ್ಲವೆಂದು ನಾವು ಖಂಡಿತವಾಗಿ ಹೇಳಲಾರೆವು. ಆದರೆ ಮೆ॥ ರೈಸ್ ಸಾಹೇಬರು ಹೇಳುವಂತೆ ಕರ್ಣಾಟಭಾಷೆಯು ಗ್ರಂಥಸ್ಥವಾಗಿ ನಿಂತಮೇಲೆ ಈ ಪೂರ್ವದ ಹಳೆಗನ್ನಡವು ಪ್ರಚಾರದಲ್ಲಿ ಇದ್ದಿತೆಂದು ನಾವು ಒಪ್ಪುವದಿಲ್ಲ. ಪೂರ್ವದ ಹಳೆಗನ್ನಡವಿದ್ದರೂ ಅದು ಕೇವಲ ಮಾತನಾಡುವ ಭಾಷೆಯಾಗಿಯೇ ಇತ್ತಲ್ಲದೆ ಗ್ರಾಂಥಿಕಭಾಷೆಯಾಗಿರಲಿಲ್ಲವೆಂಬ ವಿಷಯದಲ್ಲಿ ಸಂದೇಹವಿಲ್ಲ. ಹಾಗೆ ಇರುತ್ತಿದ್ದರೆ ಆ ಭಾಷೆಯಲ್ಲಿ ಬರೆದ ಕನ್ನಡ ಗ್ರಂಥಗಳು ಏಕೆ ಇಲ್ಲ? ೯ ನೆಯ ಶತಕದ ಪೂರ್ವದಲ್ಲಿಯೇ ಬರೆದ ಶಾಸನಗಳು ಕೂಡ ಪೂರ್ವದ ಹಳೆಗನ್ನಡದಲ್ಲಿ ಬರೆಯಲ್ಪಟ್ಟ ಹಾಗೆ ಮೆ॥ ರೈಸ್ ಸಾಹೇಬರು ತೋರಿಸಲಿಲ್ಲ. ನೃಪತುಂಗನ ಗ್ರಂಥಗಳ ಭಾಷೆಗೂ ತದನಂತರದಭಾಷೆಗೂ ಒಂದೆರಡು ವಿಷಯದಲ್ಲಿ ಅಲ್ಪಸ್ವಲ್ಪ ಭೇದ ತೋರುವುದಾದರೂ ಅದು ಭಾಷೆಗಳನ್ನು ಪ್ರತ್ಯೇಕಿಸತಕ್ಕಷ್ಟು ದೊಡ್ಡ ಭೇದವಲ್ಲ. ಲಿಂಗಾಯತರು ಗ್ರಂಥಗಳನ್ನು ಬರೆದ ಕನ್ನಡಕ್ಕೂ ಬ್ರಾಹ್ಮಣರು ಬರೆದ ಕನ್ನಡಕ್ಕೂ ತೋರುವ ಭೇದವು ಬಹಳ ಸ್ವಲ್ಪವಾಗಿದೆ. ಅಷ್ಟು ಭೇದವು ಕೂಡ ನೃಪತುಂಗಾದಿಗಳು ಬರೆದ ಗ್ರಂಥಗಳ ಭಾಷೆಗೂ, ಅಮೇಲೆ ಬರೆದ ಹಳೆಗನ್ನಡ ಗ್ರಂಥಗಳ ಭಾಷೆಗೂ ತೋರುವುದಿಲ್ಲ. ಈ ಎಲ್ಲಾ ವಿಷಯಗಳನ್ನು ಎಣಿಸಿನೋಡಿದರೆ ಮೆ॥ ರೈಸ್ ಸಾಹೇಬರು ಹೇಳುವ ಪೂರ್ವದ ಹಳೆಗನ್ನಡವೆಂಬುದು ಇರಲೇ ಇಲ್ಲವೆಂದೂ, ಇದ್ದರೂ ಅದು ಕೇವಲ ಮಾತ

೧. ಕರ್ಣಾಟಕ ಭಾಷೆಯು ಕಡಮೆಯ ಪಕ್ಷಕ್ಕೆ ೬ ನೆಯ ಶತಕದಲ್ಲಾದರೂ ಗ್ರಂಥಸ್ಥವಾಗಿ ನಿಂತಿರಬೇಕೆಂಬ ವಿಷಯದಲ್ಲಿ ಸಂದೇಹವಿಲ್ಲ. ಸುಮಾರು ಕ್ರಿ. ಶ. ೫೫೦ ರಲ್ಲಿ ಶ್ರೀವರ್ಧದೇವನು ಚೂಡಾಮಣಿ ಎಂಬ ಗ್ರಂಥವನ್ನು ಬರೆದಂತೆ ಮೆ॥ರೈಸ್ ಸಾಹೇಬರು ಬರೆದಿರುವರು.

ಅ ಬಳಿಕ ಸುಮಾರು ೨೦ ಶತಕಗಳವರೆಗೆ ಮುಖ್ಯವಾಗಿ ಲಿಂಗಾಯತರೆಂಬ ಶೈವರೇ ಗ್ರಂಥಕರ್ತರಾಗಿ ಪ್ರಸಿದ್ಧಿಗೆ ಬಂದರು. ಕ್ರಿ. ಶ. ೧೫೦೦ ರಿಂದ ಈಚೆಗೆ ಬ್ರಾಹ್ಮಣರೂ ವೈಷ್ಣವರೂ ಅನೇಕಾನೇಕ ಕನ್ನಡಗ್ರಂಥಗಳನ್ನು ಬರೆದು ಕರ್ಣಾಟಕ ಗ್ರಂಥ ಸಮುದಾಯವನ್ನು ಬೆಳೆಯಿಸಿದರು. ಕ್ರಿ. ಶ. ೧೩೦೦ ರ ಅನಂತರದಲ್ಲಿಯೂ ಜೈನರು ಬರೆದ ಗ್ರಂಥಗಳು ಅಲ್ಲಲ್ಲಿ ತೋರುತ್ತಿರುವುವಾದರೂ, ಅವರು ಪೂರ್ವದಷ್ಟು ಪ್ರಸಿದ್ಧಿಗೆ ಬರಲೇ ಇಲ್ಲ. ಜೈನೇತರರೇ ಗ್ರಂಥರಚನದಲ್ಲಿ ಪ್ರಧಾನರಾಗಿದ್ದರು. (ಕರ್ಣಾಟಕ ಶಬ್ದಾನುಶಾಸನದ ಪೀಠಿಕೆ—ಪುಟ. ೧೩) ಕೆಲಕೆಲವು ಪ್ರಾಚೀನ ಜೈನಗ್ರಂಥಗಳಲ್ಲಿ ತಾನು ಹೊಸಗನ್ನಡದಿಂದ ಬರೆದಿರುವೆನೆಂದು ಉಕ್ತವಾಗಿರುವುದರಿಂದ ಈಗ ನಾವು ಜೈನರ ಭಾಷೆಯನ್ನು ಹಳಗನ್ನಡವೆಂದು ಕರೆಯುತ್ತಿರುವೆವಾದರೂ ಜೈನರು ಕೂಡ ಆ ಕಾಲದಲ್ಲಿ ಹೊಸಗನ್ನಡದಿಂದಲೇ ಬರೆಯುತ್ತಿದ್ದರೆಂದೂ, ಅವರ ಕಾಲದಲ್ಲಿಯೂ ಹಳೆಗನ್ನಡವೆಂಬ ಬೇರೊಂದು ಇದ್ದಿರಬೇಕೆಂದೂ ಮೈ॥ ರೈಸ್‌ಸಾಹೇಬರು ಪ್ರತಿಪಾದಿಸಿ, ಈ ಪೂರ್ವದ ಹಳೆಗನ್ನಡವು ಸುಮಾರು ಕ್ರಿ. ಶ. ೯ ನೆಯ ಶತಕದವರೆಗೆ ಇದ್ದಿರಬಹುದೆಂದು ಬರೆದರು. "ಕ್ರಿ. ಶ. ೯ ರಿಂದ ೧೫ ನೆಯ ಶತಕದವರೆಗೂ ಹಳೆಗನ್ನಡವೆಂದು ನಾವು ಸಾವಧಾನ್ಯವಾಗಿ ಕರೆಯುವ ಭಾಷೆಯು ಪ್ರಚಾರದಲ್ಲಿದ್ದಿತು. ಈ ಕಾಲದಲ್ಲಿ ಜೈನಧರ್ಮಾನುಯಾಯಿಗಳೂ ವರಕವಿಗಳೂ ಆದ ವಿದ್ವತ್‌ಶಿರೋಮಣಿಗಳನೇಕರು ಒಬ್ಬರಹಿಂದೊಬ್ಬರಾಗಿ ಎಡೆಬಿಡದೆ ಗ್ರಂಥಗಳನ್ನು ಬರೆದು ಕರ್ಣಾಟಕ ಭಾಷೆಯನ್ನು ಉಜ್ಜ್ವಾಲಾವಸ್ಥಿತಿಗೆ ತಂದರು. ಈ ಕವಿಗಳೆಲ್ಲರೂ ತಮ್ಮ ಕಾಲಕ್ಕೆ ಪೂರ್ವದಲ್ಲಿ ಪ್ರಚಾರಗೊಂಡಿದ್ದ ಭಾಷೆಯನ್ನು ಹಳೆಗನ್ನಡವೆಂದೂ, ತಾವು ಗ್ರಂಥಗಳಲ್ಲಿ ಬರೆದ ಭಾಷೆಯನ್ನು ಹೊಸಗನ್ನಡವೆಂದೂ ಕರೆದಿರುವರು. ಆದುದರಿಂದ ಕನ್ನಡ ಭಾಷಾಯಾ ಚಾರಿತ್ರವನ್ನು ಮೂರುಭಾಗಗಳನ್ನಾಗಿ ವಿಭಾಗಿಸುವ ಅವಶ್ಯಕತೆ ಇದೆ." (ಕ. ಶಬ್ದಾನುಶಾಸನದ ಪೀಠಿಕೆ. ಪುಟ ೬.)

ಈ ಅಭಿಪ್ರಾಯವನ್ನು ಮೈ॥ ರೈಸ್‌ಸಾಹೇಬರು ಬರೆದಕಾಲದಲ್ಲಿ ಕನ್ನಡಿಗರೊಳಗೆ ಪರಿಶೋಧನಾಚಾತುರ್ಯವುಳ್ಳ ವಿದ್ವಾಂಸರಿರದುದರಿಂದಾಗಲೀ, ಇದ್ದರೂ ಅಂತಹವರು ಅಕಡೆಗೆ ಲಕ್ಷ್ಯಕೊಡದುದರಿಂದಾಗಲಿ, ಅಥವಾ ಈ ಸಿದ್ಧಾಂತವು ಅಪಾತತಃ ಸರಳವಾಗಿ ತೋರಿಬಂದುದರಿಂದಾಗಲೀ, ಯಾರೊಬ್ಬರೂ ಅದನ್ನು ಖಂಡಿಸಲು ಯತ್ನಿಸಿದಂತೆ ತೋರಲಿಲ್ಲ. ಈಚೆಗೆ ಮು॥ ರಾ॥ ಆರ್. ರಘುನಾಥರಾಯರು ತಾವು

ವಿದ್ಯಾಭ್ಯಾಸ

೧ನೆಯ ಪ್ರಕರಣ.

ಅಮೂಲ್ಯವಾದ ಜ್ಞಾನವಾವುದು ?

(೧) ಕಾಲಕ್ರಮದಲ್ಲಿಉಡಿಗೆ ತೊಡಿಗೆಗಳಿಗಿಂತಲೂ ಅಲಂಕಾರವು ಮೊದಲಾಗಿರುವುದೆಂಬುದು ನಿಜಾಂಶವಾಗಿರುತ್ತದೆ. ಜನರು ಶರೀರಶ್ರಮೆಯನ್ನು ಎಣಿಸದೆ ಅಲಂಕಾರಕ್ಕೆ ಗಮನ ಕೊಡುವರು. ಕೆಲವು ಕಾಡುಜನಗಳು ಬಹಳ ಯಾತನೆಯನ್ನೂ ಸಹಿಸಿ ಮೈಮೇಲೆಲ್ಲಾ ಹಚ್ಚೆಯನ್ನು ಹಾಕಿಸಿಕೊಳ್ಳುವರು. ಅತ್ಯಂತ ಶೀತೋಷ್ಣ ಕಾಲಗಳಲ್ಲೂ ಇವರು ಅಚ್ಛಾದನವನ್ನು ಅಪೇಕ್ಷಿಸುವುದಿಲ್ಲ. ದಕ್ಷಿಣಅಮೆರಿಕದ ಓರಿನೋಕೊ ನದೀತೀರದಲ್ಲಿ ವಾಸಿಸುವ ಅನಾಗರಿಕರು ಶರೀರಾನುಕೂಲ್ಯವನ್ನು ಲೆಕ್ಕಿಸದೆ ಒಂದು ಪಕ್ಷದವರೆಗೂ ಶ್ರಮಿಸಿ, ಬಣ್ಣವನ್ನು ಸಂಪಾದಿಸಿ, ಪ್ರಾಶಸ್ತ್ಯಾಪೇಕ್ಷಿತರಾಗಿ ಅಲಂಕರಿಸಿಕೊಳ್ಳುವರು. ಇವರಲ್ಲಿ ಸ್ತ್ರೀಯರು ಬಟ್ಟೆಯಚ್ಛಿಂದಿಯನ್ನಾದರೂ ಮೈಮೇಲೆಸಾಕಿಕೊಳ್ಳದೆ ನಿಶ್ಶಂಕರಾಗಿ ಹೊರಗೆ ಹೊರಟರೂ, ಬಣ್ಣದಿಂದ ಅಲಂಕರಿಸಿಕೊಳ್ಳದಿರುವುದು ಮರ್ಯಾದೆಗೆ ಬಹಳ ಕುಂದಕವೆಂದು ಎಣಿಸುವರು. ಆರಣ್ಯಕರು ಬಣ್ಣದ ಗುಂಡುಗಳ ಕಿರುಮುಟ್ಟುಗಳಿಗೆ ಹೆಚ್ಚು ಬೆಲೆಯನ್ನು ಕೊಡುವರಲ್ಲದೆ ಬಟ್ಟೆ ದುಪ್ಪಟಿಗಳಿಗೆ ಕೊಡುವುದಿಲ್ಲ. ಚಲ್ಲಣ ಅಂಗಿಗಳನ್ನು ಕಾಡುಜನಗಳಿಗೆ ಕೊಟ್ಟಲ್ಲಿ ಅವುಗಳ ಉಪಯೋಗವನ್ನೇ ತಿಳಿಯದೆ ಹಾಸ್ಯಾಸ್ಪದವಾಗಿರಿಸಿಕೊಳ್ಳುವರು. ಇಂತಹ ಕಥೆಗಳಿಂದಲೇ ಉಪಯೋಗಕ್ಕಿಂತಲು ಅಲಂಕಾರವೇ ಶ್ರೇಷ್ಠವೆಂಬ ಅಭಿಪ್ರಾಯವು ಸಂಪೂರ್ಣವಾಗಿ ವ್ಯಕ್ತವಾಗುತ್ತದೆ. ಇನ್ನೂ ಅತಿಶಯವಾದ ಉದಾಹರಣೆಗಳಿರುವುವು. ಕ್ಯಾಪ್ಟೆನ್ ಸ್ಪೀಕ್ ಎಂಬುವನು ತನ್ನ ಆಫ್ರಿಕಾ ದೇಶಸ್ಥರಾದ ಪರಿಜನಗಳ ವಿಷಯದಲ್ಲಿ ಹೇಳಿರುವುದು ನಿದರ್ಶನವಾಗಿರುತ್ತದೆ. ಈ ಜನರು ಬಿಸಿಲಿನಜಳವು ಹೆಚ್ಚಾಗಿರುವಾಗ ಅಡಿನ ಚರ್ಮದ ಹೊದಿಕೆಗಳನ್ನು ಹಾಕಿಕೊಂಡು ನೆರಿಯುವದೂ, ಮಳೆಗಾಲದಲ್ಲಿ ಒದ್ದೆಯಾಗಿ ಥಳಿಯಾಗಿದ್ದಾಗ್ಯೂ ಅವರು ಉಡುಪುಗಳನ್ನು ತೆಗೆದು ಮಡಿಸಿ ಭದ್ರಪಡಿಸಿ ಬರೀಬೆತ್ತಲೆಯಾಗಿರುವುದೂ ಆಶ್ಚರ್ಯವಲ್ಲವೇ ! ಅನಾದಿಕಾಲದಿಂದಲೂ ಜನರ ಸ್ಥಿತಿಯನ್ನು ನೋಡಿದರೆ ಅಲಂಕಾರದಿಂದಲೇಉಡುಪು ವೃದ್ಧಿಹೊಂದಿತೆಂಬುವುದು ಸ್ಪಷ್ಟ

ನಾಡುವ ಭಾಷೆಯು ಬಂದು ಭೇದವಾಗಿರಬಹುದಲ್ಲದೆ ಗ್ರಾಂಥಿಕಭಾಷೆಯಾಗಿರಲಿಲ್ಲ ವೆಂದೂ ವಿಶದವಾಗುವುದು. ಹೇಗೂ ನನ್ನಯಮಂಗನಿಗಿಂತ ಪ್ರಾಚೀನರಾದ ಕವಿಗಳು ಬರೆದ ಗ್ರಂಥಗಳು ದೊರೆತು ಅವುಗಳ ಭಾಷೆಯೇ ಪ್ರತ್ಯೇಕವೆಂದು ತೋರಿಬರುವವರೆಗೆ ಮ॥ ರಾ॥ ರಘುನಾಥರಾಯರ ಅಭಿಪ್ರಾಯವನ್ನೇ ಧಾರಾಳವಾಗಿ ಅಂಗೀಕರಿಸಬಹುದು.

ಮೆ॥ ರೈಸ್‌ಸಾಹೇಬರು ಹೇಳಿರುವ ಉಳಿದ ಎರಡು ಭಾಗಗಳು ನ್ಯಾಯವಾಗಿವೆ. ಜೈನರು ಬರೆದ ಭಾಷೆಗೂ ಲಿಂಗಾಯತರು ಬರೆದ ಭಾಷೆಗೂ ತುಂಬಾ ಭೇದವಿದೆ. ಆದುದರಿಂದ ಜೈನ ಕನ್ನಡವನ್ನು ಹಳಗನ್ನಡವೆಂದೂ ಲಿಂಗಾಯತ ಮತ್ತು ಬ್ರಾಹ್ಮಣ ಕನ್ನಡವನ್ನು ಹೊಸಗನ್ನಡವೆಂದೂ ಪ್ರತ್ಯೇಕಿಸುವುದು ಅತ್ಯಂತ ಉಪಯೋಗಕರವಾಗಿದೆ. ಲಿಂಗಾಯತ ಬ್ರಾಹ್ಮಣ ಕನ್ನಡಗಳಿಗೂ ಅಲ್ಪಸ್ವಲ್ಪ ಭೇದವಿದ್ದರೂ ಅದನ್ನು ಉಪಭೇದಗಳಲ್ಲಿ ಸೇರಿಸಬಹುದೇಹೊರತು ಆ ಭಾಷೆಗಳಿಗೆ ಬೇರೆ ಬೇರೆ ಹೆಸರುಗಳನ್ನು ಕೊಡುವುದು ಪ್ರಶಸ್ತವಾಗಿ ತೋರುವುದಿಲ್ಲ. ಆದರೆ ಈಗ ಪ್ರಕೃತದಲ್ಲಿ ನಾವು ಮೇಲೆ ನಾಡುವ ಮತ್ತು ಗ್ರಂಥಗಳನ್ನು ಬರೆಯುವ ಭಾಷೆಯನ್ನು ಹೊಸಗನ್ನಡವೆಂದು ಕರೆಯುವುದರಿಂದಲೂ, ಲಿಂಗಾಯತರೂ, ಜೈನರೂ ೧೮ ನೆಯ ಶತಕದ ಮೊದಲಿಂದ ೧೯ನೆಯ ಶತಕದ ವರೆಗೆ ಬರೆದ ಗ್ರಂಥಗಳ ಭಾಷೆಗೂ ಅರ್ವಾಚೀನ ಗ್ರಂಥಗಳ ಭಾಷೆಗೂ ಎಷ್ಟೋ ಪ್ರಭೇದಗಳಿರುವುದರಿಂದಲೂ, ಈ ಎರಡು ಭಾಷೆಗಳನ್ನು ಹೊಸಗನ್ನಡವೆಂಬ ಒಂದೇ ಹೆಸರಿಂದ ಕರೆದು ಒಂದೇ ವರ್ಗದಲ್ಲಿ ಸೇರಿಸುವುದು ಸರಿಯಲ್ಲವೆಂದು ನಾವು ತಿಳಿಯುವೆವು. ಈಗಿನ ಕನ್ನಡವನ್ನು ' ಹೊಸಗನ್ನಡ ' ವೆಂದೂ, ಲಿಂಗಾಯತರ ಕನ್ನಡವನ್ನು ' ನಡುಗನ್ನಡ ' ವೆಂದೂ ಪ್ರತ್ಯೇಕಿಸುವುದು ಅವಶ್ಯಕವಾಗಿದೆ. ಲಿಂಗಾಯತರ ಕನ್ನಡವನ್ನು " ನಡುಗನ್ನಡ " ವೆಂದು ಕರೆಯುವುದೇ ಆಲೋಚಿಸಿ ನೋಡಿದರೆ ಯೋಗ್ಯವೆಂದು ನಮಗೆ ತೋರುತ್ತಿದೆ. ಹೀಗೆ ಅಂದಿನಿಂದ ಇಂದಿನವರೆಗೆ ಬೆಳೆಯುತ್ತ ಬಂದ ಕರ್ಣಾಟಕ ಭಾಷೆಯನ್ನು ಹಳೆಗನ್ನಡ (೧೮ ನೆಯ ಶತಕದ ಪರ್ಯಂತ) ನಡುಗನ್ನಡ (೧೯ ನೆಯ ಶತಕದ ವರೆಗೆ) ಮತ್ತು ಹೊಸಗನ್ನಡ ಎಂದು ಮೂರು ಭಾಗಗಳನ್ನಾಗಿ ವಿಭಾಗಿಸಿದಂತಾಯಿತು. (ಸಶೇಷ.)

R. M. B.

---

೧. ಈ ವಿಷಯವನ್ನು ಕುರಿತು ಮ॥ ರಘುನಾಥರಾಯರವರು ತಮ್ಮ ವ್ಯಾಕರಣೋಪನ್ಯಾಸಮಂಜರಿಯಲ್ಲಿ ವಿಸ್ತಾರವಾಗಿ ಬರೆದಿರುವುದರಿಂದ ಹೆಚ್ಚಿನ ಸಂಗತಿಗಳನ್ನು ತಿಳಿಯಲು ಬಯಸುವವರು ಆ ಪುಸ್ತಕವನ್ನು ಓದಿ ನೋಡುವುದು ಯೋಗ್ಯವಾಗಿದೆ.

ದೇಹವನ್ನು ವಸ್ತ್ರಭರಣಗಳಿಂದಲಂಕರಿಸುವಂತೆ, ಅವರ ಮಕ್ಕಳ ಮನಸ್ಸನ್ನು ಅಲಂಕರಿಸುವರು. ಓರಿನೋಕೋದೇಶದವನು ತನ್ನ ಕುಟ್ರೋರವನ್ನು ಬಿಡುವುದಕ್ಕೆ ಮೊದಲು ಬಣ್ಣದ ಪ್ರಯೋಜನವನ್ನು ತಿಳಿಯದೇ ಅಪಮಾನವನ್ನು ಹೊಗಲಾಡಿಸಿಕೊಳ್ಳುವುದಕ್ಕಾಗಿ ಹಾಕಿಕೊಳ್ಳುವನು. ತದ್ವತ್ ಒಬ್ಬ ಹುಡುಗನಿಗೆ ಲ್ಯಾಟಿನ್ ಗ್ರೀಕ್ ಭಾಷೆಯಲ್ಲಿ ಶಿಕ್ಷಿಸುವುದು ಅಭಾಷೆಗಳ ನಿಜವಾದ ಬೆಲೆಯನ್ನು ತಿಳಿಸುವುದಕ್ಕಲ್ಲ. ಈ ಭಾಷಾಂತರಪರಿಜ್ಞಾನವಿಲ್ಲವೆಂಬ ಅಪಖ್ಯಾತಿ ಪರಿಹಾರಾರ್ಥವಾಗಿಯೂ, ಗೌರವಯುಕ್ತವಸನವನ್ನುಡುವುದಕ್ಕೂ ಸಾಮುದಾಯಿಕ ಔನ್ನತ್ಯವನ್ನುಂಟುಮಾಡಿ ಅಧಿಕ ಶುಲ್ಕವಾದ ಮಸ್ಲಿನ್‌ನನ್ನು ಅನುಭವಿಸುವುದಕ್ಕೂ ಅವನಿಂದ ಬಿರುದಾಗಿ ಅಭ್ಯಾಸಿಸಲ್ಪಡುತ್ತದೆ.

(3) ಸ್ತ್ರೀಯರ ವಿಷಯದಲ್ಲಿ ಈ ಸಾದೃಶ್ಯವು ಇನ್ನೂ ಸ್ಪಷ್ಟವಾಗಿ ಕಾಣುವುದು. ಮಾನಸಿಕ ಮತ್ತು ಶಾರೀರಿಕ ಸಂಸ್ಕಾರಗಳಲ್ಲಿ ಅಲಂಕಾರಾಂಶವು ಪುರುಷರಿಗಿಂತ ಸ್ತ್ರೀಯರಲ್ಲಿ ಅತಿಶಯವಾಗಿ ವ್ಯಾಪಿಸಿರುವುದು. ಪೊದಲು ಗಂಡಸರಲ್ಲಿಯೂ ಹೆಂಗಸರಲ್ಲಿಯೂ ಶರೀರಾಲಂಕಾರಕ್ಕೆ ಸಮವಾದ ಗಮನವು ಕೊಡಲ್ಪಟ್ಟಿತ್ತು. ನಾಗರಿಕತೆಯುಳ್ಳ ಸಮೀಪಕಾಲದಲ್ಲಿ ಪುರುಷರು ಅವರ ಉಡುಪಿಗೆ ಸೊಬಗನ್ನು ಹೆಚ್ಚಿಸದೆ ಅನುಕೂಲತೆಯನ್ನು ಉದ್ದಟುಮಾಡಿರುವರು. ಇವರ ವಿದ್ಯಾಭ್ಯಾಸದಲ್ಲಿಯೂ ಸಹ ಅಲಂಕಾರಕ್ಕಿಂತ ಪ್ರಯೋಜನವು ಹೆಚ್ಚಿತವಾಗಿರುವುದು. ಸ್ತ್ರೀಯರಲ್ಲಿ ಈ ಎರಡು ವಿಷಯಗಳಲ್ಲಿಯೂ ಅಷ್ಟು ವ್ಯತ್ಯಾಸವಾಗಿಲ್ಲ. ಓಲೆ, ಉಂಗುರ, ಕಡಗಗಳನ್ನು ಧರಿಸುವುದೂ ಜಡೆಯನ್ನು ಅತ್ಯಾದರದಿಂದ ರಚಿಸುವುದೂ ಆಗಾಗ್ಗೆ ಬಣ್ಣ ಹಾಕಿಕೊಳ್ಳುವುದೂ, ಉಡಿಗೆಗಳನ್ನು ಮೋಹಜನಕವಾಗುವಂತೆ ಶ್ರಮದಿಂದ ಸರಿಪಡಿಸುವುದೂ ಲೋಕಾನ್ವವರ್ತನೆಗೋಸ್ಕರ ಅಧಿಕ ಸೌಖ್ಯವನ್ನು ಹೊಂದುವುದೂ ಸ್ತ್ರೀಯರಿಗೆ ಉಡಿಗೆತೊಡಿಗೆಯಲ್ಲಿ ಉಳ್ಳ ಅನುಕೂಲತೆಗಳ ಅಪೇಕ್ಷೆಗಿಂತಲೂ ಪ್ರಾಶಸ್ತ್ಯಾಪೇಕ್ಷೆಯು ಅತಿಶಯವನ್ನು ತೋರ್ಪಡಿಸುವುವು. ಇದಲ್ಲದೆ ವಿದ್ಯಾಭ್ಯಾಸದಲ್ಲಿ ಸಹ ಇದೇ ಪ್ರಕಾರ ಶೃಂಗಾರ ಸಾಧನಗಳಿಗೆ ಆಧಿಕ್ಯವನ್ನುಂಟುಮಾಡಿರುವುದು ಪ್ರಯೋಜನಾಂಶವು ಅಲಂಕಾರಕ್ಕಧೀನವಾಗಿರುವುದೆಂಬುದನ್ನು ತೋರಿಸುತ್ತದೆ. ನರ್ತನ, ನಡತೆ, ಪಿಯಾನೋಭಾರಿಸುವುದು, ಹಾಡುವುದು ಚಿತ್ರ ಬರೆಯುವುದು ಇವುಗಳಿಗೆ ಹೆಚ್ಚಾದ ಕಾಲವನ್ನು ವಿನಿಯೋಗಿಸುವರು. ಇಟಾಲಿಯನ್ ಜರ್ಮನ್ ಭಾಷೆಗಳನ್ನು ಸ್ತ್ರೀಯರು ಕಲಿಯುವುದಕ್ಕೆ ಅನೇಕ ಕಾರಣಗಳಿದ್ದಾಗ್ಯೂ ಈ ಭಾಷಾಜ್ಞಾನವು ಸ್ತ್ರೀಲಕ್ಷಣವಾಗಿರುವು

ನಾಗಿ ತೋರುತ್ತದೆ. ಆಧುನಿಕರಾಜಸ್ತ್ರೀಯರು ಬಟ್ಟೆಯಶಾಖಕಿಂತಲೂ ಚಲ್ವಿಕೆಗೂ ಗುಡುಸಿನ ಅನುಕೂಲತೆಗಿಂತಲೂ ರಚನಾಚಾತುರ್ಯಕ್ಕೂ ಹೆಚ್ಚು ಅಪೇಕ್ಷೆಪಡ ಕಾದಂಬ ಪಂಗಾರವೇ ಶ್ರೇಷ್ಠವೆಂಬುದು ಸ್ಪಷ್ಟಪಡುವುದಿಲ್ಲವೆ?

(2) ಶ್ರೀತನ್ಯನ್ಯಾಪಾರಕಲ್ಲಾಯಾಸ್ತ್ರೀಯಂಕಾರವೈಚಿತ್ರ್ಯಮುಖ್ಯತೆಯನ್ನು ಹೊಂದಿರ ವುದು ಸೋಜಿಗವಾಗಿರುವುದು. ಕಾಯಿಕಸುಖದಹಾಗೆ ಮಾನಸಿಕ ಸಂಪಾದ್ಯದಲ್ಲಿಯೂ ಪ್ರಯೋಜನಕ್ಕಿಂತಲೂ ಡಂಭದ ಆಡಿಮೆಯಾಗಿರುವುದು. ಸ್ವರಾತನಕಾಲದಲ್ಲಿಲ್ಲದೆ ಈಗಿನ ಸಮ್ಯಶಕ್ತದಲ್ಲಿಯೂ ಸ್ವಾರ್ಥಸುಖಪ್ರದಾಯಕವೆನಿಸಿದ ಜ್ಞಾನವು ಶ್ರೀಸ್ವಭಾವವನ್ನು ಕೊಡತಕ್ಕ ಜ್ಞಾನವೆಂದು ಅಂಗೀಕರಿಸಲ್ಪಡುವುದು. ಗ್ರೀಕ್ ಭಾಷೆಯ ಶಾಲೆಗಳಲ್ಲಿ ಸಂಗೀತ ಕಾವ್ಯಾಲಂಕಾರಗಳೂ, ಸಾಕ್ರಟೀಸನ ಕಾಲಕ್ಕಿಂತಲೂ ಪ್ರಾಚೀನವಾದ, ಡಾಂಭಿಕಗಸವಳೆಸಾಧ್ಯ ತತ್ವಶಾಸ್ತ್ರವೂ ಮುಖ್ಯವಾದ ಬೋಧನಾಂಶಗಳಾಗಿದ್ದುವು. ಸಾಂಸಾರಿಕ ಕೃತ್ಯಗಳಿಗೆ ಉಪಯೋಗಕರವಾದ ವಿಜ್ಞಾನವು ಹೀನಸ್ಥಿತಿಯಲ್ಲಿ ಇದ್ದಿತ್ತು. ಈಗಿನಕಾಲದ ನಮ್ಮ ಸ್ವಂತ ಸಕಲವಿದ್ಯಾನಿಲಯಗಳಲ್ಲಿಯೂ ಇದೇ ವಿಷಯವಾಗಿ ವಿಷಯವಾಸವು ಸ್ಥಿರಪಟ್ಟಿರುತ್ತದೆ. ಒಬ್ಬ ವಿದ್ಯಾರ್ಥಿಯು ತಾನು ಕಲಿತ ಲ್ಯಾಟಿನ್ ಗ್ರೀಕ್ ಭಾಷೆಯನ್ನು ಲೌಕಿಕ ವ್ಯವಹಾರದಲ್ಲಿ ಶತಾಂಶದಲ್ಲಿ ಒಂದು ಭಾಗವನಾದರೂ ಉಪಯೋಗಕರವಾದ ಕೆಲಸದಲ್ಲಿ ಪ್ರಯೋಗಿಸುವುದಿಲ್ಲ ಹೇಮ ಹೇಳುವುದು ಸಾಮಾನ್ಯವಾಗಿದೆ. ಲಂಗಡಿಯುಲ್ಲಾ ಗಲೀ ಕಥೋರಿಯುಲ್ಲಾ ಗಲಿ ಅವನ ಉಸ್ಮ ಅಥವಾ ಸಂಸಾರವನ್ನು ಸರಿಪಡಿಸಿಕೊಳ್ಳುವುದಲ್ಲಾಗಲೀ ಅವನು ಒಂದು ಬ್ಯಾಂಕ್ ಅಥವಾ ರೈಲಿಗೆ ಮುಖ್ಯಸ್ಥನಾಗಿ ಕೆಲಸಮಾಡಿದ್ದರಲ್ಲಾಗಲಿ ಅನೇಕ ಸಂವತ್ಸರಗಳು ಶ್ರಮಪಟ್ಟು ಸಾಧಿಸಿದ ಈ ಜ್ಞಾನವು ಕೆಲಂಚಿವೂ ಸಹಾಯಕನಾಗಿರುವುದಿಲ್ಲ. ಈ ಕಾರಣದಿಂದ ಪ್ರತ್ಯಕ್ಷವಾಗಿ ಈ ಭಾಷಾಜ್ಞಾನವು ಅವನ ಸ್ಥಿತಿಯಲ್ಲಿ ಹೆಚ್ಚುತವಾಗಬಹುದು. ಕದಾಚಿತ್ ಅವನು ಟ್ಯಾಟಿನ್ ವಾಕ್ಯಾನುಕರಣಕ್ಕೆ ಅವಕಾಶ ಕೊಟ್ಟಾಗಲೂ ಅಥವಾ ಒಂದು ಗ್ರೀಕ್ ಇತಿಹಾಸವನ್ನು ವಾಚಿಸಿದಾಗಲೂ ಅದು ಅಡಂಬರಪ್ರದರ್ಶಕವಾಗಿರುತ್ತದೆಯೇ ಹೊರತು ವಿಚಾರಣಾಯೋಗ್ಯವಾದ ನನ್ನು ವ್ಯಕ್ತಪಡಿಸುವುದಕ್ಕೆ ಅಷ್ಟು ಅವಶ್ಯಕವಾಗಿರುವುದಿಲ್ಲ. ಬಾಲಕರಿಗೆ ಪಾಶ್ಚಾತ್ಯ ಭಾಷಾಭ್ಯಾಸವನ್ನು ಮಾಡಿಸುವದರ ಮುಖ್ಯೋದ್ದೇಶವು ಲೋಕಾಭಿಪ್ರಾಯವಾಗಿರುವಂಥ ಕೋಸರವೇ ಆಗಿರುತ್ತದೆ. ಪಾಡಿಕೆಯಾದ ಪದ್ಧತಿಯನ್ನು ಅನುಸರಿಸಿ ತಪ್ಪು

ರೋಮ್ ಪಟ್ಟಣದಿಂದ ಒಂದು ಪ್ರಸಿದ್ಧವಾದ ನಾಟಕಶಾಲೆಯಲ್ಲಿ ಮಂತ್ರ ಹಾಕುವುದಕ್ಕೆ ನಿಷ್ಕರ್ಷೆಯಾಯಿತು. ಸೆಲಿನಿಯು, ಒಬ್ಬ ಹುಡುಗನು, ಇನ್ನೂ ಇಬ್ಬರು ಮೂವರು ಅಲ್ಲಿಗೆ ಹೋದರು. ಪೂಜಾರಿಯು ನೆಲದಮೇಲೆ ಮಂಡಲಗಳನ್ನು ಬರೆದು ಮಂತ್ರಗಳನ್ನು ಹೇಳಿ, ಪರಿಮಳ ದ್ರವ್ಯಗಳನ್ನೂ ಗಿಡಮೂಲಿಕೆಗಳನ್ನೂ ಸುಟ್ಟನು. ಹೊಗೆಯೆದ್ದಿತು. ಗಿಡಮೂಲಿಕೆಗಳ ಧೂಮದಿಂದ ಅಲ್ಲಿದ್ದವರಿಗೆ ಸ್ವಲ್ಪ ಜ್ಞಾನತಪ್ಪಿ ಚಿತ್ತಭ್ರಮಣೆಯುಂಟಾಯಿತು. ಸ್ವಲ್ಪ ಕಾಲದಲ್ಲೇ—ಅದ್ಭುತಾಕಾರವಾದ ಪಿಶಾಚಗಳು ನಾಟಕಶಾಲೆಯಲ್ಲಿ ತುಂಬಿಕೊಂಡಂತೆ ತೋರಿದುವು. ಸೆಲಿನಿ ಮುಂತಾದವರು ಆಶ್ಚರ್ಯಪಟ್ಟರು. ಕೆಲವು ಪಿಶಾಚಗಳು ನೋಟಕರನ್ನು ಹೆದರಿಸುತ್ತಾ, ಅವರೆ ಮೈಮೇಲೆ ಬೀಳುವಂತೆ ಕಾಣಿಸಿಕೊಂಡವು. ಅಲ್ಲಿದ್ದ ಹುಡುಗನು ಬಹಳ ಭಯಪಟ್ಟು ನಡುಗಲಾರಂಭಿಸಿದನು. ಬುದ್ಧಿಶಾಲಿಯಾದ ಸೆಲಿನಿಯು ಅವು ಕೃತಕ ಪಿಶಾಚಗಳಾಗಿರಬಹುದೆಂದು ಯೋಚಿಸಿ, "ಕಾಣುವ ಆಕಾರಗಳು ಪಿಶಾಚಗಳಲ್ಲ. ಬರೀ ಹೊಗೆ ಮತ್ತು ಛಾಯೆ" ಎಂದು ಹೇಳಿ ಹುಡುಗನಿಗೆ ಧೈರ್ಯ ಕೊಟ್ಟನು.

ಯಂತ್ರಕಾಚಗಳ ವಿಷಯವು ಆ ಪೂಜಾರಿಗೆ ಸ್ವಲ್ಪಮಟ್ಟಿಗೆ ತಿಳಿದಿತ್ತು; ವಿಕಾರರೂಪಗಳು ಹೊಗೆಯಲ್ಲಿ ಪ್ರತಿಫಲಿಸುವಂತೆ ಚಿತ್ರಗಳನ್ನು ಕನ್ನಡಿಗಳಿಂದ ಪೂಜಾರಿಯು ತೋರಿಸಿರಬಹುದೆಂದನೇಕರು ಊಹಿಸುವರು.

ಹದಿನೇಳನೆಯ ಶತವಾನದಲ್ಲಿ ರೋಮ್ ಪಟ್ಟಣದಲ್ಲಿ "ಕಿರಚರ್" (Kircher) ಎಂಬ ಮತ್ತೊಬ್ಬ ಪೂಜಾರಿಯಿದ್ದನು. ಈತನು ಬಹಳ ವಿದ್ಯಾವಂತನು. ಲ್ಯಾಟಿನ್ ಭಾಷೆಯಲ್ಲಿ ಅನೇಕ ಗಂಥಗಳನ್ನೂ ಲಾಂದ್ರದಿಂದ ಚಿತ್ರತೋರಿಸುವ ವಿಷಯವನ್ನೂ ಬರೆದಿದ್ದನು. ಕೇಳಿದವರಿಗೂ ನೋಡಿದವರಿಗೂ ಭಯವನ್ನುಂಟುಮಾಡುವ ಉದ್ದೇಶವು ಕಿರಚರನಿಗಿತ್ತೆಂದು ತೋರುತ್ತದೆ. ಏಕೆಂದರೆ ತನ್ನ ಲಾಂದ್ರಕ್ಕೆ "ಮ್ಯಾಜಿಕ್" (ಯಕ್ಷಿಣಿ) ಎಂದು ಹೆಸರಿಟ್ಟನು. ಚಿತ್ರತೋರಿಸುವ ಕೊಟಡಿಯಲ್ಲಿ ಕತ್ತಲೆಮಾಡಿ ಮಧ್ಯದಲ್ಲಿ ತೆರೆಹಾಕಿ ಒಂದುಕಡೆಯಲ್ಲಿ ತನ್ನ ಲಾಂದ್ರವನ್ನಿಟ್ಟು ಕೂತುಕೊಂಡು ಮತ್ತೊಂದು ಕಡೆಯಲ್ಲಿ ನೋಟಕರನ್ನು ಕೂಡಿಸುತ್ತಿದ್ದನು. ಲಾಂದ್ರದ ಬೆಳಕು ತೆರೆಯಮಧ್ಯರಂಧ್ರದಲ್ಲಿ ಪ್ರವೇಶಿಸಿ, ನೋಟಕರಿದಿರಿಗಿರುವ ಬಿಳೀ ಪರದೆಯಮೇಲೆ ಪ್ರತಿಬಿಂಬನವನ್ನು ತೋರಿಸುತ್ತಿತ್ತು. ಅಂತಹ ಪ್ರತಿಬಿಂಬವು ಹೇಗೆ ಉಂಟಾದುದೆಂದು ನೋಟಕರು ತಿಳಿದುಕೊಳ್ಳಲಾರದೆ ಆಶ್ಚರ್ಯಪಡುತ್ತಿದ್ದರು.

ದೆಂಬುದೇ ಮುಖ್ಯತತ್ವವಾಗಿರುತ್ತದೆ. ಈ ಭಾಷೆಯಲ್ಲಿರತಕ್ಕ ಪುಸ್ತಕಗಳನ್ನು ಓದಿ ಪೂರ್ಣತಾ ನವನ್ನು ಹೊಂದುವುದಿಲ್ಲ. ಅವುಗಳಲ್ಲಿ ರಚಿತವಾಗಿರುವ ರಾಗಗಳನ್ನು ವಾತ್ರ ಅಭ್ಯಾಸವಾಡಿಕೊಳ್ಳುವರು.

ಇದ್ದುಮಟ್ಟಿನ ಪಾರಂಗತತ್ವದಿಂದ ಜನಾಂತಿಕವಾದ ಶ್ಲಾಘನೆಯನ್ನು ಹೊಂದುವರು. ರಾಜರ ಜನನ ಮರಣ ವಿವಾಹಗಳನ್ನು ಇಂತಹ ಇತರ ಚಾರಿತ್ರದ ಅಲ್ಪಸಂಗತಿಗಳನ್ನು ಕಂಠಪಾಠವಾಡಿಕೊಳ್ಳುವರು. ಇಂತಹ ಜ್ಞಾನದಿಂದ ಹೆಚ್ಚು ಪ್ರಯೋಜನವು ಉಂಟಾಗುವುದಿಲ್ಲ. ಆದರೆ ಜನಸಂಘವು ಇವುಗಳನ್ನು ತಿಳಿಯುವುದು ಈಕ್ಷಮವಿದ್ಯಾಭ್ಯಾಸದ ಅಂಗವೆಂತಲೂ ಇಂತಹ ಜ್ಞಾನವಿಲ್ಲದೇ ಇರುವುದು ನಿಂದಾಸ್ಪದವೆಂತಲೂ ಯೋಚಿಸುತ್ತದೆ.

ಹುಡುಗಿಯರಿಗೆ ಓದುವುದು ಬರೆಯುವುದು ಅಕ್ಷರಸಂಯೋಜನ (ಸ್ಪೆಲಿಂಗ) ವ್ಯಾಕರಣ, ಗಣಿತ, ಹೊಲಿಗೆಗಳನ್ನು ಕಲಿಸಿದರೆ ಅವರ ಸಾಂಸಾರಿಕ ವ್ಯಾಪಾರಕ್ಕೆ ಸಾಕಾಗಬಹುದು ಜ್ಞಾನವನ್ನುಂಟುಮಾಡಿದಂತೆ ಎಣಿಸುವರು. ಇವುಗಳಲ್ಲಿಯೂ ಕೆಲವು ನಿಜವಾದ ಅತ್ಯೇಯ ಸುಖಕ್ಕೆ ಸಂಬಂಧಿಸದೆ ಲೋಕರ ಒಳ್ಳೆಯ ಅಭಿವ್ಯಾಯಗಳನ್ನು ಅನುಸರಿಸಿರುವುವು.

M. S.

ಮ್ಯಾಜಿಕ್ ಲ್ಯಾಂಟರನ್.

"ಮ್ಯಾಜಿಕ್ ಲ್ಯಾಂಟರನ್" ಮೂಲಕ ನಾನಾ ಚಿತ್ರಗಳನ್ನೂ ಪದಾರ್ಥಗಳನ್ನೂ ತೋರಿಸುವುದು ಅದ್ಭುತವೆಂದು ಅನೇಕರಿಗೆ ಗೊತ್ತಿರಬಹುದು. "ಮ್ಯಾಜಿಕ್ ಲ್ಯಾಂಟರನ್" ಎಂದರೆ ಯಕ್ಷಣೀಪ್ರದೀಪ, ಅಥವಾ ವಿಸಾಯಾದೀಪ ಎಂದು ಪದಶಃ ಅರ್ಥವಾಗುತ್ತದೆ. ಈ ಹೆಸರು ಬಂದ ಕಾರಣವನ್ನು ಪ್ರದೀಪದ ಪೂರ್ವವೃತ್ತಾಂತ ವಿಚಾರದಿಂದ ತಿಳಿಯಬಹುದು.

ಪದಿನಾರನೆಯ ಶತವಾನದಲ್ಲಿ ಇಟಲಿ ದೇಶದ ಫ್ಲಾರೆನ್ಸ್ ಪಟ್ಟಣದಲ್ಲಿ "ಸೆಲಿನಿ" (Cellini)ಎಂಬ ಒಬ್ಬ ಲೆಕ್ಕಸಾಲಿಗನಿದ್ದನು. ಇವನು ಕಲ್ಲಿನಲ್ಲೂ ಚಿತ್ರಕೆಲಸವನ್ನು ಮಾಡುತ್ತಿದ್ದನು. ಒಬ್ಬ ಪೂಜಾರಿಯು ಇವನಿಗೆ ಪಿಶಾಚಗಳನ್ನು ತೋರಿಸುವೆನೆಂದು ಹೇಳಿದನು. ಸೆಲಿನಿಯು ಅವುಗಳನ್ನು ನೋಡುವುದಕ್ಕೆ ಒಪ್ಪಿಕೊಂಡನು.

ಹೆಚ್ಚು ಪ್ರಯೋಜನಕಾರಿಗಳಾಗಿಯೂ ಉತ್ತಮ ಮಾದರಿಯಲ್ಲಿಯೂ ಇರುವ ವ್ಯಾಪಾರದ ಪದಾರ್ಥಗಳು ಸೊಪ್ಪು ಮರದ ತೊಗಟೆ ವ್ಯಾಘ್ರ ಚರ್ಮಗಳಾಗಿದ್ದವು. ಈಗಿನವು ರಸನಾದಬಟ್ಟೆಗಳನ್ನು ನೆಯ್ದು ಸೊಗಸಾದ ಉಡುಪುಗಳನ್ನು ಮಾಡುವರು. ಪೂರ್ವಕಾಲದಲ್ಲಿ ಆಯುಧಗಳು ಕಲ್ಲುಗಳಿಂದ ಮಾಡಲ್ಪಟ್ಟು ಒರಟಾಗಿದ್ದವು. ಈ ಕಾಲದಲ್ಲಿ ಉಕ್ಕಿನಿಂದ ಬಹು ಹರಿತವಾದ ಉಪಯೋಗವಾದ ನಾನಾವಿಧ ಆಯುಧಗಳನ್ನು ಮಾಡುವರು. ಪೂರ್ವಿಕರು ದೊಡ್ಡ ಮರದ ತುಂಡಿನ ಮಧ್ಯಭಾಗದಲ್ಲಿ ಸ್ವಲ್ಪ ಗುಣಿ ತೋಡಿ ನಾವೆ ಮಾಡುತ್ತಿದ್ದರು. ಈಗಿನವರ ಹೆಸರಿಗೆ ಹಡಗಾದರೋ ನೋಡುವುದಕ್ಕೆ ಬಹು (ಸುಂ)ದರವಾಗಿಯೂ ಒಳ್ಳೆಯ ಮನೆಯಂತೆ ಅನುಕೂಲತೆಯುಳ್ಳದ್ದಾಗಿಯೂ ಬಹುಭಾರವಾಗಿ ಬಹುದೂರ ಹೋಗತಕ್ಕದ್ದಾಗಿಯೂ ಇರುವುದು.

ಹಾಗೆಯೇ ಕಿರಚರನು ಪೂರ್ವದಲ್ಲಿ ಮಾಡಿದ್ದ ಇಂದ್ರಜಾಲದ ಲಾಂದ್ರವು ಅಪರಿಷ್ಕೃತವಾಗಿತ್ತು. ಕ್ರಮಕ್ರಮೇಣ ಜನರ ಬುದ್ಧಿ ಚಾತುರ್ಯದಿಂದ ನಾನಾವಿಧವಾಗಿ ಬದಲಾವಣೆಗಳನ್ನು ಹೊಂದಿ ಅಭಿವೃದ್ಧಿಗೆ ಬಂದಿರುವ ಈಗಿನ ಲಾಂದ್ರಗಳಾದರೋ ಬಹುಚಮತ್ಕೃತವಾಗಿಯೂ ಹೆಚ್ಚು ಪ್ರಯೋಜನಕರವಾಗಿಯೂ ಇರುವುವು. ಮುಂದಕ್ಕೆ ಇನ್ನೂ ಉತ್ಕೃಷ್ಟಸ್ಥಿತಿಗೆ ಬರಬಹುದು.

ಯಕ್ಷಿಣಿಯ ಲಾಂದ್ರದ ಪ್ರಯೋಜನಗಳು :—ಯಕ್ಷಿಣಿಯ ಲಾಂದ್ರದಿಂದ ಜನರಿಗೆ ಬಗೆಬಗೆಯಾದ ಚಿತ್ರಗಳನ್ನು ತೋರಿಸಿ ಜ್ಞಾನವನ್ನೂ ವಿನೋದವನ್ನೂ ಉಂಟು ಮಾಡಬಹುದು; ಮತ್ತು ಅನೇಕ ಶಾಸ್ತ್ರ ವಿಷಯಗಳನ್ನು ಚೆನ್ನಾಗಿ ಬೋಧಿಸುವುದಕ್ಕೆ ಅನುಕೂಲವಾಗಿರುತ್ತದೆ. ಆದುದರಿಂದ ಪಾಠಶಾಲೆಗಳಿಗೆ ಈ ಉಪಕರಣವು ಅತ್ಯಂತ ಪ್ರಯೋಜನಕರವಾದುದು. ಅನೇಕ ವಿಷಯಗಳು ಬಾಯಿಮಾತಿನಲ್ಲಿ ಹೇಳಿಕೊಟ್ಟರೂ ಅಥವಾ ಪುಸ್ತಕದಲ್ಲೋದಿಸಿದರೂ ಅಷ್ಟು ಸುಲಭವಾಗಿ ಗೊತ್ತಾಗುವುದಿಲ್ಲ. ಪ್ರದರ್ಶನಮಾಡುವುದರಿಂದ ಅವುಗಳು ಅತಿ ಸುಲಭವಾಗಿಯೂ ಸ್ಪಷ್ಟವಾಗಿಯೂ ತಿಳಿಯುವುವಲ್ಲದೆ ಹೆಚ್ಚು ಕಾಲ ಜ್ಞಾಪಕದಲ್ಲಿಯೂ ಇರುತ್ತವೆ. ಚರಿತ್ರೆ, ಭೂತನಿಷ್ಣ್ಯ, ನೀತಿಶಾಸ್ತ್ರ, ಪ್ರಾಣಿಶಾಸ್ತ್ರ, ಭೂಗೋಳ, ಖಗೋಳ ಪದಾರ್ಥವಿಜ್ಞಾನ, ರಸಾಯನ ಶಾಸ್ತ್ರ, ಶಾರೀರಕಶಾಸ್ತ್ರ ಇತ್ಯಾದಿ ನಾನಾಶಾಸ್ತ್ರ ವಿಷಯಗಳನ್ನು ಬಾಲಿಕಾಬಾಲಕರಿಗೆ ಲಾಂದ್ರದ ಸಹಾಯದಿಂದ ಮನಸ್ಸಿಗೆ ಹಿಡಿಯುವಂತೆ ಬೋಧಿಸಬಹುದು. ಆದು

ಶಿರಚರನಂತೆ ಸನ್ನಿವೇಶದಲ್ಲಿ ಮುಖ್ಯವಾಗಿ ಎಂದು ಕವಿದುದರಿಂದಲೂ ಪುಷ್ಪಶಾಲ್ಮಲಿಯ ಸುಖವಾದ ಪಾಠಗಳನ್ನು ತೋರಿಸುವುದಾಗಿ ಸಟಸುತ್ತಿದ್ದ ಇಂದ್ರ ಜಾಲಿಗಳೆಲ್ಲರೂ ಧೂತಕಸ್ಪದಿಯೊಳಗೆ ಮಚ್ಚು ಲತಾಂದ್ರಗಳ ಮಂತ್ರಿಯ ವಿಶ್ವಾಚಾರಾಕಾರಗಳನ್ನು ತೋರಿಸುತ್ತಿದ್ದರೆಂದರೂ ಯಕ್ಷಿಣೀಪ್ರದೀಪವೆಂಬ ಹೆಸರುಂಟಾಯಿತು. ಈಗಲೂ ಹಳೇ ಪದ್ಧತಿಯು ವಿಚಾರಣೆಯಲ್ಲಿರುವುದು ಅದರ ಅರ್ಥವಾದರೋ ಬದಲಾಯಿಸಿಕೊಂಡಿದೆ. ಪುಷ್ಪಶಾಲ್ಮಲಿಯ ಪ್ರದರ್ಶನವೆಂಬ ಪದವು ಅನೇಕವಿಧವಾಗಿದುವುದು ಈಗ ಅದರಿಂದ ಅನೇಕಾಕಾರಗಳನ್ನು ವಿಚಿತ್ರವಾದ ಚಿತ್ರಗಳನ್ನು ತೋರಿಸುವುದಲ್ಲದೆ ನಾನಾವಿಧವಾದ ಶಿಲ್ಪ ಸ್ಪದಪ್ಪಂತ ಇದೇ ಸಿಗಳನ್ನು ಸೂಕ್ಷ್ಮವಸ್ತುಗಳನ್ನು ಚರಿತ್ರೆಯ ಸಂಗತಿಗಳನ್ನು ರಾಜನೀತಿಯ ಕ್ರಮಗಳನ್ನು ವಿದ್ಯಾರ್ಥಿಗಳಿಗೆ ತೋರಿಸಲಿಕ್ಕೆ ಇನ್ನೂ ಅನೇಕ ವಿಷಯಗಳನ್ನು ತೋರಿಸಬಹುದು.

ಶಿರಚರನು ಅಂಧಪ್ರದೇಶದ ಒಂದು ಮೂಲದ ಪೆಟ್ಟಗೆಯನ್ನಾಗಿರಿಸಿತ್ತು. ಆ ಪೆಟ್ಟಿಗೆಯ ಒಂದು ಪಾರ್ಶ್ವದಲ್ಲಿ ಬಾಗಿಲಿತ್ತು. ಅದರ ಮುಮ್ಮಂದಿಗಡೆಯಲ್ಲಿ ಒಂದಾ ರಂಧ್ರವೂ ಆ ರಂಧ್ರದಲ್ಲಿ ಒಂದು ಕೆಂಪುಳವಿಯುವ ಕೋಲಿಗೆ ಬಂದು ಯಂತ್ರಕಾಣವೂ ಇದ್ದುವು. ಒಳಗಡೆಯಲ್ಲಿ ವಿದ್ಯುದ್ದೀಪವನ್ನಿಡುತ್ತಿದ್ದನು. ಬೆಳಕನ್ನೆಲ್ಲಾ ಒಂದೇಕಡೆಗೆ ಸೇರಿಸಿ ಬಲ ಪಡಿಸುವುದಕ್ಕೆ ಹಿಂದೆ ಪ್ರತಿಫಲನಿಯನ್ನಿಡುತ್ತಿದ್ದನು. ಹೊಗೆ ಹೋಗುವುದಕ್ಕೆ ಪೆಟ್ಟಿಗೆಯಮೇಲೆ ಒಂದು ಕೊಳವೆ ಇತ್ತು. ತೋರಿಸಬೇಕಾದ ಚಿತ್ರಗಳು ಉದ್ದುದ್ದವಾದ ಕಸ್ತೂರಿಕೊಂಡುಗಳಮೇಲೆ ಬಣ್ಣದಿಂದ ಬರೆಯಲ್ಪಟ್ಟಿದ್ದುವು. ಚಿತ್ರಗಳನ್ನಿಡುವುದಕ್ಕೆ ಮುಂದೆನ ಕೊಳವೆಯೊಳಗೆ ಸಂದುಸಂದಿರುತ್ತಿದ್ದವು. ಹೀಗೆ ಶಿರಚರನು ತೋರಿಸುತ್ತಿದ್ದ ಚಿತ್ರಗಳು ಈಗಿನ ಚಿತ್ರಗಳಷ್ಟು ಉತ್ಕೃಷ್ಟವಲ್ಲದಿದ್ದರೂ, ಆದಿನಕಾಲಕ್ಕೆ ಅವುಗಳೇ ನೂತನವಾಗಿದ್ದು ದರಿದ್ರ ಅನೇಕ ದೊಡ್ಡಮನುಷ್ಯರೂ, ವಿದ್ಯಾವಂತರೂ, ಹಣಗಾರರೂ ಶಿರಚರನ ಪ್ರಜೆಯನ್ನು ನಶಾಡಿಸಿ ಬರುತ್ತಿದ್ದರು. ಈತನು ರೋಮ್ ಪಟ್ಟಣದ ವಿದ್ಯಾಶಾಲೆಯೊಂದರಲ್ಲಿ ಚಿತ್ರಗಳನ್ನು ತೋರಿಸುತ್ತಿದ್ದನು.

ಪುರಾತನರ ಅವಶ್ಯಗಳಿಗೂ ಈಗಿನವರ ಕಾರ್ಯಗಳಿಗೂ ಬಹು ವ್ಯತ್ಯಾಸವಿರುವುದು. ಪ್ರಾಚೀನರ ಕೆಲಸವು ಈಗಿನವರಷ್ಟು ನಯನಾಜೂಕಲ್ಲ. ಒರಟಾದ ಪದಾರ್ಥಗಳನ್ನು ಹೇಗೆ ಬುದ್ಧಿಕೊಡಬೇಕೆಂದು ಕ್ರಮಕ್ರಮವಾಗಿ ಬದಲಾಯಿಸುತ್ತಲೂ ಅಭಿವೃದ್ಧಿಪಡಿಸುತ್ತಲೂ ಬಂದುದರಿಂದ ಈಕಾಲದ ವಸ್ತುಗಳು ಮೊದಲಿನವುಗಳಿಗಿಂತ

ಅರಿಯುತ್ತೇವೆ. ಆದರೆ ನೀರನ್ನು ನಾಲಿಗೆ ಮೂಗು ಇವುಗಳಿಂದಲೂ ತಿಳಿಯಬಹುದಲ್ಲವೆ ? ಎಂದರೆ ನಾಲಿಗೆ ಮೂಗು ಇವುಗಳಿಗೆ ವಿಷಯಗಳಾದ ರುಚಿ- ಗಂಧ ಎಂಬುವು ಭೂಮಿಯ ಅಂಶಗಳೇ ಆಗಿರುವುದರಿಂದ ನೀರಿನ ಸಹಜವಾದ ಧರ್ಮಗಳಲ್ಲವು. ಆದುದರಿಂದ ನೀರು ರಸನೇಂದ್ರಿಯ ಘ್ರಾಣೇಂದ್ರಿಯಗಳಿಗೆ ಪ್ರತ್ಯಕ್ಷವಾಗುವುದಿಲ್ಲ.

ಮೇಲೆ ಹೇಳಿದ ನಾಲ್ಕು ವಸ್ತುಗಳಲ್ಲಿ ಬೆಂಕಿಯು, ಉಳಿದ ಮೂರು ವಸ್ತುಗಳಂತೆ ಪ್ರತ್ಯೇಕವಾಗಿ ತೋರುವುದಿಲ್ಲ. ಅವುಗಳಲ್ಲಿ ಸೇರಿ ಕೊಂಡೇ ಇರುವುದು. ಭೂಮಿ, ನೀರು, ಗಾಳಿ ಇವುಮೂರು, ಯಾವುದೋಒಂದು ಮೂಲವಸ್ತುವಿನ ಘನದ್ರವಾದಿ ಮೂರುಅವಸ್ಥಾ ವಿಶೇಷಗಳೆಂದು ಕೆಲವರು ಹೇಳಬಹುದು. ಆದರೆ ಅನಿಕಲ್ಲು, ನೀರು, ಅವಿ ಎಂಬ ಅವಸ್ಥಾವಿಶೇಷಗಳಿಗೆ ಪರಸ್ಪರ ಸಂಬಂಧವಿರುವ ಹಾಗೆ ಭೂಮಿ, ನೀರು, ಗಾಳಿಗಳಿಗೆ ಅಂತಹ ಸಂಬಂಧವು ತೋರುವುದಿಲ್ಲ. ನಾವು ಯಾವುದಾದರೂ ಒಂದು ಅದ್ಭುತವಾದ ಪದಾರ್ಥವನ್ನು ನೋಡಿದಾಗ—"ಆಃ ಇದು ಬಹಳಚೆನ್ನಾಗಿದೆ, ಇದು ಹೇಗೆ ಉಂಟಾಯಿತು ?" ಎಂದು ಅದನ್ನು ತಿಳಿಯಲು ತವಕಪಡುತ್ತೇವೆಯಲ್ಲವೆ ! ನಮ್ಮ ಸುತ್ತುಮುತ್ತಲೂ ಸಾಧಾರಣವಾಗಿರುವ ಅದ್ಭುತ ವಸ್ತುಗಳಿಗಿಂತಲೂ ಪರಮಾದ್ಭುತಗಳಾಗಿ, ಅಂತಹ ಅದ್ಭುತ ಪರಂಪರೆಗಳಿಗೆ ಆಶ್ರಯಗಳಾದ ಭೂಮಿ ಮೊದಲಾದ ಭೂತಗಳ ಉತ್ಪತ್ತಿಕ್ರಮವನ್ನು ತಿಳಿಯುವುದು ನಮಗೆ ಅತ್ಯಂತಾವಶ್ಯಕವಲ್ಲವೆ ? ಅವುಗಳ ಉತ್ಪತ್ತಿಯನ್ನು ತತ್ವಜ್ಞಾನಿಗಳು ಬೇರೆಬೇರೆ ವಿಧದಿಂದ ನಿರೂಪಿಸಿರುವರು —" ಪೃಥಿವ್ಯಾದಿ ಭೂತಗಳು ಪರಮಾಣು ಮಯಗಳು, ಅನಾದಿಗಳು ಎಂದರೆ ಅವುಗಳಿಗೆ ಆದಿ (ಉತ್ಪತ್ತಿ) ಇಲ್ಲ. ಆದುದರಿಂದಲೇ ' ನಾಸತೋವಿದ್ಯತೇಭಾವೋ ನಾಭಾವೋವಿದ್ಯತೆಸತಃ ' ಎಂಬಂತೆ ಅವುಗಳು ಯಾವಾಗಲೂ ಸದ್ರೂಪಗಳೇ ಆಗಿರುವುದರಿಂದ ಅವುಗಳಿಗೆ ನಾಶವೇ ಇಲ್ಲ. ಆದರೆ 'ನಾಶವಾಯಿತು' ಎಂದು ಸಾಮಾನ್ಯವಾಗಿ ಜನಗಳು ಹೇಳುವ ಮಾತಿನಲ್ಲಿ ನಾಶವಾಗುವುದೆಂದರೆ—ಮಣ್ಣು ಗಡಿಗೆಯಾಗುವಂತೆಯೂ, ಗಡಿಗೆ ಮಣ್ಣಾಗುವಂತೆಯೂ, ನೀರು ಮಂಜಿನಗಡ್ಡೆಯಾಗುವಂತೆಯೂ, ಮಂಜಿನಗಡ್ಡೆ ನೀರಾಗುವಂತೆಯೂ, ರೂಪಾಂತರವಾಗವುದೆಂದರ್ಥವಲ್ಲದೆ ಬೇರೆ ಅಲ್ಲ. ಆದುದರಿಂದ ವಸ್ತುಗಳೆಲ್ಲವೂ ಶಾಶ್ವತಗಳು—ಎಂದು ಕೆಲವರು ಹೇಳುವರು. ಇನ್ನು ಕೆಲವರು ಭೂತಗಳಿಗೆ ಉತ್ಪತ್ತಿ ವಿನಾಶಗಳುಂಟು. ಗಡಿಗೆಯು ಒಡೆದು ಮಣ್ಣಿನ ರೂಪವಾದರೂ ಗಡಿಗೆಯು ಇಲ್ಲದ ರೀತಿಯಾಯ್ತಲ್ಲವೆ? ಆ ಮಣ್ಣೂ

ಬರಿಂದ ವಿದ್ಯಾಶಾಲೆಗಳಲ್ಲಿ ಯಷ್ಟಿಣಿಯು ಲಾಂದ್ರಗಳಿರುವುದು ಅತ್ಯವಶ್ಯಕವು. ಸಣ್ಣ ಪದಾರ್ಥಗಳನ್ನು, ಲಾಂದ್ರವು ದೊಡ್ಡದಾಗಿ ಕಾಣುವಂತೆ ಮಾಡುವುದು. ಕಾಗ ಅಥವಾ ಹಲಿಗೆಯಮೇಲೆ ಬರೆದ ಚಿತ್ರ, ಅಂಕೆರೂಪ, ಅಕ್ಷರಗಳಿಗಿಂತ ಲಾಂದ್ರದ ಪ್ರಕಾಶವು ದೊಡ್ಡದಾಗಿಯೂ ಸ್ಪಷ್ಟವಾಗಿಯೂ ಕಾಣುವುದರಿಂದ ನೋ ಕರು ಮುಪ್ಪಿನಲ್ಲಿ ಚೆನ್ನಾಗಿ ನಾಟುವುದು. ಇದಲ್ಲದೆ ಏಕಕಾಲದಲ್ಲಿ ಲಾಂದ್ರದ ಪ್ರ ರ್ಶನವನ್ನು ಅನೇಕರು ನೋಡಬಹುದು.

ಲಾಂದ್ರದ ಪ್ರದರ್ಶನಕ್ಕೆ ಬೇಕಾದ ಉಪಕರಣಗಳಾವವೆಂದರೆ:—

(1) ಲಾಂದ್ರ (2) ಪರದೆ (3) ಚಿತ್ರಪಟಗಳು (4) ಓದುವ ದೀಪ (5) ಶಾ ಸಿದ್ಧಾಂತಗಳನ್ನು ವಿವರಿಸುವುದಕ್ಕೆ ಸೇರಾಗುವ ನಾನಾ ಯಂತ್ರಗಳು ಇತ್ಯಾ ಸಾಮಗ್ರಿಗಳು.

ಪಂಚ ಭೂತಗಳು.

ನಮ್ಮ ಪಂಚೇಂದ್ರಿಯಗಳ ಸಹಾಯದಿಂದ "ಈ ಪ್ರಪಂಚವು ಯಾವ ಯಾ ವಸ್ತುಗಳಿಂದ ಕೂಡಿದೆ." ಎಂಬುದನ್ನು ತಿಳಿಯುತ್ತೇವೆ. ಹೀಗೆ ನಾವು ಪ್ರ ತ್ಯಕ್ಷೀಕರಿಸುವ ಈ ಪ್ರಪಂಚವು, ನೆಲ, ನೀರು, ಗಾಳಿ, ಬೆಂಕಿ ಎಂಬೀ ಮುಖ್ಯವಾದ ಅ ಯವಗಳಿಂದ ಕೂಡಿದೆ. ಈ ನಾಲ್ಕು ಅಂಗಗಳೂ ತಿಲತಂಡುಲ ರೂಪದಿಂದ ಒಟ್ಟಾ ಸೇರಿಕೊಂಡಿವೆ. ಇವುಗಳಲ್ಲಿ ಯಿಕ್ಕ ಮೂರು ವಸ್ತುಗಳಿಗಿಂತಲೂ, ಭೂಮಿಯ ಭಾಗವು ಮನುಷ್ಯನಿಗೆ ಹೆಚ್ಚಾಗಿ ಬೇಕಾಗಿರುವುದರಿಂದ, ಈ ನಾಲ್ಕರ ಸಮುದಾಯ ವಾಗಿದ್ದರೂ ಈ ಪ್ರಪಂಚಕ್ಕೆ "ಭೂಲೋಕ" ಎಂದು ಭೂಮಿಯೊಂದರ ಹೆಸರಿನ ದರೇ ಮನುಷ್ಯನು ಸಂಕೇತವಾಡಿ ಕೊಂಡಿರುವನು. ಈ ನಾಲ್ಕರಲ್ಲಿ ಎಲ್ಲವೂ ನವ ಪಂಚೇಂದ್ರಿಯಗಳಿಗೆ ಗೋಚರವಾಗುವುದಿಲ್ಲ. ಅವುಗಳ ಸ್ವಭಾವಕ್ಕನುಗುಣವಾ ಅಯಾ ಇಂದ್ರಿಯಗಳಿಗೆ ಮಾತ್ರ ಗೋಚರನಾಗುತ್ತವೆ. ಹೇಗೆಂದರೆ—ನೆಲವನ್ನು ನಾವು ಕಣ್ಣಿನಿಂದ ನೋಡುವುದರಿಂದಲೂ, ಮೂಗಿನಿಂದ ಮೂಸುವುದರಿಂದಲೂ ನಾಲಗೆಯಿಂದ ಸವಿಯುವದರಿಂದಲೂ, ಕಿವಿಯಿಂದ ಕೇಳುವದರಿಂದಲೂ, ತ್ವಗಿಂದ್ರಿಯದಿಂದ ಮುಟ್ಟುವದರಿಂದಲೂ, ತಿಳಿಯುತ್ತೇವೆ. ನೀರು, ಬೆಂಕಿ ಇವಗಳನ್ನು ಕಣ್ ತ್ವಗಿಂದ್ರಿಯ ಎಂಬ ಎರಡರಿಂದಲೂ, ಗಾಳಿಯನ್ನು ತ್ವಗಿಂದ್ರಿಯ ಮಾತ್ರದಿಂದಲೂ

ಕೈಗಾರಿಕೆಯೆವಿದ್ಯಾಭ್ಯಾಸ.

ಪೀಠಿಕೆ.

ಜನಗಳ ಉಪಯೋಗಕ್ಕೆ ಅವಶ್ಯಕವಾದ ಅನೇಕ ಪದಾರ್ಥಗಳು ಮನುಷ್ಯರ ಕೈಗಳಿಂದಲೇ ನಿರ್ಮಿತವಾಗುವುವು. ಈ ಪದಾರ್ಥಗಳನ್ನು ಮಾಡುವ ಶಕ್ತಿಯನ್ನು ಅಭ್ಯಾಸದಿಂದ ಸಂಪಾದಿಸಬಹುದು. ಈಗ ಪಾಠಶಾಲೆಯಲ್ಲಿ ಬಾಲಕರು ಗಣಿತ, ಭೂಗೋಳ, ಚರಿತ್ರೆ ಮುಂತಾದ ಶಾಸ್ತ್ರಗಳನ್ನು ಅಭ್ಯಾಸಿಸಿ, ಅವುಗಳಲ್ಲಿ ವಿಶೇಷವಾದ ಜ್ಞಾನವನ್ನು ಹೊಂದುವರು. ಈ ಶಾಸ್ತ್ರಜ್ಞಾನಕ್ಕೆ ಸಾಧಾರಣ ವಿದ್ಯೆಯೆಂದು (General Education) ಹೇಳುವರು. ಶಾಸ್ತ್ರಪಾಠಶಾಲೆಗಳಲ್ಲಿ (in colleges) ಈ ವಿಧವಾದ ವಿದ್ಯಾವ್ಯಾಸಂಗದಿಂದ ಅನೇಕರು ಘನವಾದ ಪಾಂಡಿತ್ಯವನ್ನು ಹೊಂದಿರುತ್ತಾರೆ. ಹೀಗೆ ಜ್ಞಾನಾಧಿಕ್ಯತೆಯನ್ನು ಕೊಡುವುದರಿಂದ ಈ ವಿದ್ಯಾಭ್ಯಾಸವು ಉತ್ತಮವಾದುದೇ ಸರಿ. ಆದರೆ ಇದಕ್ಕಿಂತ ಸುಲಭವಾಗಿಯೂ ಅತ್ಯಂತಪ್ರಯೋಜನಕಾರಿಯಾಗಿಯೂ ಇರುವ ವಿದ್ಯೆಯು ಮತ್ತೊಂದು ಭಾಗವಿರುವುದು. ಇದೇ ಕೈಗಾರಿಕೆ. ಇದರ ಅಭ್ಯಾಸದಿಂದ ಕಣ್ಣು, ಕೈ, ಬುದ್ಧಿ ಮುಂತಾದವು ಏಕರೀತಿಯಾದ ಪಟುತ್ವವನ್ನು ಹೊಂದುವುವು. ಅಲ್ಲದೆ ಹತ್ತಿಯು ಹಸನಾದ ಬಟ್ಟೆಯ ರೂಪವನ್ನೂ, ತುಬಟವು ನಯವಾದ ಶಾಲಿನ ರೂಪವನ್ನೂ, ಐದುವುವು. ಅರೂಪವಾದ ಲೋಹದ ಮುದ್ದೆಯೂ ಕೂಡ ಮನುಷ್ಯನ ಜಾಣ್ಮೆಯಿಂದ ಧರಿಸುವುದಕ್ಕೆ ಯೋಗ್ಯವಾದ, ಮನೋಹರವಾದ ರೂಪಗಳನ್ನೈದುವುದು. ಈ ಜಾಣ್ಮೆಯನ್ನು ಜನರೆಲ್ಲರೂ ಕಲಿಯುವುದು ಅವಶ್ಯಕ. ಆದುದರಿಂದ ಬಾಲಕರಿಗೆ ಮೇಲೆ ಹೇಳಿದ ಸಾಧಾರಣ ವಿದ್ಯೆಯೊಂದಿಗೆ ವಿಶೇಷವಿದ್ಯೆ ಎಂದು ಎಣಿಸಬೇಕಾದ ಕೈಗಾರಿಕೆಗಳಲ್ಲಿ ಯಾವುದಾದರೂ ಒಂದು ಕೆಲಸವನ್ನು ಕಲಿಸುವುದು ಅತ್ಯಾವಶ್ಯಕ.

ಈ ವಿದ್ಯೆಯಿಂದ ಜನರಿಗೆ ಜೀವನೋಪಾಯಕ್ಕೂ ದೇಹ ಸೌಖ್ಯಕ್ಕೂ ಅನುಕೂಲ ಉಂಟಾಗುವುದು. ಹಿಂದೂಸ್ಥಾನದಲ್ಲಿ, ಮುಖ್ಯವಾಗಿ ನಮ್ಮ ದೇಶದಲ್ಲಿ, ಜನರು ನೆಲವನ್ನೇ ನಂಬಿರುವರು, ಎಂದರೆ ವ್ಯವಸಾಯ (ಆರಂಭ) ದಿಂದಲೇ, ವಿಶೇಷವಾಗಿ ಜೀವಿಸುವರು. ಭೂಮಿಯನ್ನೇ ನಂಬಿರುವ ನಾವು ಈಜೆಗೆ ಕ್ಷಾಮ ಭೀತಿಯಿಂದ

ಗಟ್ಟಿಯವಾದರೀತಿಯನ್ನು ಬಿಟ್ಟು ಘನವಸ್ತುವಾಗಬಹುದು. ಹೀಗೆಯೇ ಹಿಂದೆಹಿಂದೆ ಹೋಗುತ್ತಾ ಹೋಗುತ್ತಾ, ಪೃಥಿವ್ಯಾದಿಗಳು ಈಗ ನಮ್ಮ ಇಂದ್ರಿಯಗಳಿಗೆ ಗೋಚರವಾಗುವ ದಶೆಯನ್ನು ಬಿಟ್ಟು ಕಟ್ಟಕಡೆಗೆ ಅಗೋಚರ ದಶೆಯನ್ನು ಹೊಂದ ಬಹುದು. ಇಂತಹ ಅಭಾವದಶೆಗೇ ನಾಶವೆಂದು ಹೆಸರು. ಹೀಗೆಲ್ಲಾ ವಸ್ತುಗಳ ಉದಯಾವಗಳಿಗೆ ದೇವರೇ ಮುಖ್ಯಕಾರಣನು. ಜಾಡರ ಹುಳದಿಂದ ದಾರಗಳು ಹೊರಗೆ ಹೊರಟುಬಂದು ತಿರುಗಿ ಅದರೊಳಗೆ ಸೇರಿಕೊಳ್ಳುವಂತೆ ದೇವರಿಂದಲೇ ಲೋಕವೆಲ್ಲಾ ಉಂಟಾಗಿ ಕಡೆಗೆ ಅವನಲ್ಲಿಯೇ ಏಕವಾಗುವುದು—ಎಂದು ಹೇಳುವರು. ಈಯಂ ಶವು ಭರತಖಂಡದ ಆರ್ಯರ ಮುಖ್ಯಪ್ರಮಾಣವಾದ ಶ್ರುತಿಯಲ್ಲಿಯೂ ಹೇಳಿದೆ. "ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಸ್ಸಂಭೂತಃ. ಆಕಾಶಾದ್ವಾಯುಃ. ವಾಯೋರಗ್ನಿಃ. ಅಗ್ನೇರಾಪಃ. ಅದ್ಭ್ಯಃ ಪೃಥಿವೀ." (ತೈತ್ತಿರೀಯೋಪನಿಷತ್ತು) ಇದರಲ್ಲಿರುವಂತೆ ದೇವರಿಂದ ಆಕಾಶ, ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ನೀರು, ನೀರಿನಿಂದ ಭೂಮಿ ಉಂಟಾದವೆಂಬ ಕ್ರಮವು ಪದಾರ್ಥಶೋಧನೆಯಲ್ಲಿ ಪ್ರಚಂಡರೆನಿಸಿಕೊಂಡಿರುವ ಈಗಿನ ಪಾಶ್ಚಾತ್ಯ ಪಂಡಿತರಿಗೂ ವಿಚಾರಣೀಯವಾಗಿದೆ. ಅವರು ವಾಯುವಿನಿಂದ ನೀರುಆಗುವುದನ್ನು ಕಂಡುಹಿಡಿದಿದಾರೆಯಾದ್ದರಿಂದ ನೀರಿನಿಂದ ನೆಲವಾದುದೇ ಮುಂತಾದ ಕ್ರಮವನ್ನು ಇನ್ನೂ ವಿಚಾರಮಾಡಿಲ್ಲ. ಮತ್ತು ಆಕಾಶವನ್ನು ಅವರು ಒಂದು ವಸ್ತುವನ್ನಾಗಿ ಎಣಿಸಿಲ್ಲ. ನಮ್ಮವರು ಅದನ್ನೂ ಒಂದು ಭೂತವನ್ನಾಗಿ ಹೇಳುವರು. ಇದೆಲ್ಲವನ್ನೂ ಪರಿಕಿಸಿ ನೋಡಲು, ಪ್ರಪಂಚದ ಸ್ವರೂಪವು ಪರಮಾಶ್ಚರ್ಯವಾಗಿ ತೋರುವುದಲ್ಲದೆ ಅದನ್ನು ಎಷ್ಟು ಅರಿತರೂ ಸ್ವಲ್ಪವೇ ಆಗಿದೆ.

ಶ್ರೀನಿವಾಸರಾಘವಾಚಾರ್ಯ

ಪಂಡಿತ, ಶಿವಮೊಗ್ಗ.

ಗೌರ್ನಮೆಂಟ್ ನಾರ್ಮಲ್ ಸ್ಕೂಲ್, ಮೈಸೂರು.

ವ್ಯವಸಾಯ-ಶಾಸ್ತ್ರ.

I. ಫಲವತ್ತಾದ ಮಣ್ಣಿಗಿರಬೇಕಾದ ಗುಣಗಳನ್ನು ತಿಳಿಸಿ.

II. (1) ನೀರು ಸಸಿಗಳಿಗೆ ಅತ್ಯಾವಶ್ಯಕವೆಂಬುದು ಹೇಗೆ ನಿಮಗೆ ಗೊತ್ತಾಗುತ್ತದೆ ?

(2) ಯಾವ ಸಸ್ಯಾಹಾರ ವಸ್ತುಗಳನ್ನು ಗೊಬ್ಬರಗಳ ಮೂಲಕ ಆಗಾಗ್ಗೆ ಮಣ್ಣಿನಲ್ಲಿ ಸೇರಿಸುತ್ತಿರುವುದು ಅವಶ್ಯಕ ?

III. ನೀರೂ ವಾಯುವೂ ಮಣ್ಣಿನಲ್ಲಿ ಪ್ರವೇಶ ಮಾಡುವುದರಿಂದಾಗುವ ಪ್ರಯೋಜನಗಳನ್ನು ತಿಳಿಸಿ.

IV. ಮಣ್ಣನ್ನು ಆಳವಾಗಿ ಹದಗೊಳಿಸುವುದರಿಂದಾಗುವ ಪ್ರಯೋಜನಗಳನ್ನು ತಿಳಿಸಿ.

V. ಯಾವ ಅಂಶಗಳಲ್ಲಿ ಸೀಮೆಯ ನೇಗಲು ನಾಡು ನೇಗಲಿಗಿಂತಲೂ ಉತ್ತಮ?

VI. (1) ದನಕರುಗಳ ಗೊಬ್ಬರ ಮಾಡುವುದರಲ್ಲಿ ರೈತರು ಯಾವ ವಿಷಯಗಳಿಗೆ ಗಮನ ಕೊಡುವುದಿಲ್ಲ. ಕೊಡಬೇಕಾಗಿರುವುದು ಏಕೆ ಮುಖ್ಯ ?

(2) ಕೊಟ್ಟಿಗೆಗಳಲ್ಲಿಯೇ ಗೊಬ್ಬರವನ್ನು ಮಾಡುವ ಕ್ರಮದಲ್ಲಿರುವ ಅನುಕೂಲಗಳನ್ನು ತಿಳಿಸಿ.

VII. ದನಕರಗಳ ಗೊಬ್ಬರವನ್ನು ಮಣ್ಣಿಗೆ ಹಾಕುವುದರಿಂದಾಗುವ ಪ್ರಯೋಜನಗಳನ್ನೆಲ್ಲಾ ತಿಳಿಸಿ.

ಯಾವಾಗಲೂ ನಡೆಯುತ್ತಿರುವವು. ಕಾಲಕಾಲದಲ್ಲಿ ಮಳೆಗಳ ಅಭಾವದಿಂದಲೂ, ಬೆಳೆಗಳ ವೃದ್ಧಿಯಿಂದಲೂ ಜೀವನೋಪಾಯವೇ ದುಸ್ತರವಾಗಿ ಪರಿಣಮಿಸಿರುವುದು. ಈ ಅವಸ್ಥೆಯನ್ನು ತಪ್ಪಿಸಲಾಡಿಸಿಕೊಂಡು ಇತರ ಜನಾಂಗಗಳಂತೆ ಕೈಗಾರಿಕೆಯಲ್ಲಿ ಪ್ರವೀಣರಾಗಿ ನಮ್ಮ ದೇಶದಲ್ಲಿ ಸಿಕ್ಕುವ ಬೆಳೆಯನ್ನು ನಾವೇ ಉಪಯೋಗಿಸಿಕೊಂಡ ವಾಣಿವಾರದಲಿ ಮುಖಂಡರಾಗಿ ಸುಖವಾಗಿರಬೇಕಾದರೆ, ಕೈಗಾರಿಕೆಯ ಸಂಬಂಧವಾದ ವಿದ್ಯಾವ್ಯಾಸಂಗವನ್ನು ಅವಶ್ಯಕವಾಗಿ ಮಾಡಬೇಕು. ಕೇವಲ ಶ್ರೀಮಂತರಾಗಿರುವವರಿಗೂ ಕೂಡ ಕೈಗಲಸದ ವಿದ್ಯಾಭ್ಯಾಸವು ಮೇಲೆ ಹೇಳಿದಂತೆ ಮೂರು ವಿಧವಾದ ಬುದ್ಧಿ ಕೌಶಲ್ಯವನ್ನು ವೃದ್ಧಿ ಮಾಡುವುದಲ್ಲದೆ ಇದರ ಅಭ್ಯಾಸದಿಂದ ಶರೀರಕ್ಕೆ ಬಲವೂ ಆರೋಗ್ಯವೂ, ಉಂಟಾಗುವುವು. ಆದರೆ ಬಡವರಾದವರಿಗೆ ಈ ವಿದ್ಯಾಭ್ಯಾಸವು ಪ್ರಕೃತದಲ್ಲಿ ಬಹಳ ಅವಶ್ಯಕವಾಗಿರುತ್ತದೆ. ಏಕೆಂದರೆ ಇಂಗ್ಲೀಷು ಭಾಷೆಯಲ್ಲಿ ಪಾಂಡಿತ್ಯವನ್ನು ಹೊಂದದಿದ್ದರೆ ಇವಕ್ಕಾಗಿ ಅನೇಕ ದ್ರವ್ಯವನ್ನೂ, ಕಾಲವನ್ನೂ, ಕೂಡ ವ್ಯಯ ಮಾಡಿದ್ದಾಗ್ಯೂ ಅವಕ್ಕೆ ತಕ್ಕ ಸಂಪಾದನೆಯು ಕಡಿಮೆ. ಆದರೆ ಕೈಕೆಲಸವಿದ್ಯೆಗೆ ಭಾಷಾಜ್ಞಾನವನ್ನು ಕಲಿಯುವ ಅವಶ್ಯಕವಿಲ್ಲ. ಈ ವಿದ್ಯಾವ್ಯಾಸಂಗಕ್ಕೆ ಅಮ್ಮ ದ್ರವ್ಯವೂ ಬೇಕಾಗಿರುವುದಿಲ್ಲ. ಇದು ಸ್ವಲ್ಪಕಾಲದಲ್ಲಿಯೇ ಪ್ರಯೋಜನಕರವಾಗುವುದು. ಆದುದರಿಂದ ವಿದ್ಯೋಪಕಾರವೇ ಮುಖ್ಯವಾದುದೆಂದು ಯಾವ ಮಹನೀಯರು ಹೇಳುತ್ತಾರೋ ಆ ಮಹಾನುಭಾವರುಗಳು ದ್ರವ್ಯಮೂಲಕವಾಗಿ ಸಹಾಯ ಮಾಡುವುದಕ್ಕಿಂತ ಈ "ಕೈಗಾರಿಕೆ" ವಿದ್ಯಾದಾನವನ್ನು ಮಾಡಿದಲ್ಲಿ ಬಹಳ ಜನರು ಇದರಿಂದ ಸುಖವನ್ನನುಭವಿಸುವರು.

ಹೇಗೆಂದರೆ:—ನಮ್ಮಗಳ ಪರಸ್ಪರ ಉಪಯೋಗಕ್ಕೋಸ್ಕರ ನಾವು ಅನೇಕ ವಿಧವಾದ ವಸ್ತುಗಳನ್ನು ಅಪೇಕ್ಷಿಸುತ್ತೇವೆ. ಅವು ಯಾವುವೆಂದರೆ:—ಬಟ್ಟೆಗಳು, ಮನೆ, ಪೆಟ್ಟಿಗೆ, ಮಂಚ, ಕುರ್ಚಿ ಮುಂತಾದ ಮರದ ಸಾಮಾನುಗಳು. ನೇಗಲು, ಗುಳ, ಕೊಡಲಿ, ಬಾಚಿ ಮೊದಲಾದ ವ್ಯವಸಾಯದ ಸಾಮಾನುಗಳು. ತಪ್ಪಲೆ, ಚಂಬು, ಪಂಚಪಾತ್ರೆ ಮೊದಲಾದ ಅಡಿಗೆ ಪಾತ್ರೆಗಳು. ಬಾಚಣಿಗೆ, ಬೀಗ, ಭರಣಿ, ಹಗ್ಗ, ಚಾಪೆ, ಬೆತ್ತದಿಂದ ಮಾಡಿದ ಪೆಟ್ಟಿಗೆ, ಬೊಂಬೆ, ನಗ ಮುಂತಾದ ಇತರ ಸಾಮಾನುಗಳು. ಇವುಗಳನ್ನು ಮಾಡುವ ರೀತಿಯನ್ನೂ ಇದಕ್ಕೆ ಬೇಕಾದ ಅಭ್ಯಾಸವನ್ನೂ ನಾವೇ ಏಕೆ ಮಾಡಬಾರದು

ಎಂ. ವಿ. ಶ್ರೀನಿವಾಸ ಐಂಗಾರ್. ಬಿ. ಎ.
ಸೂಪರೆಂಟೆಂಡೆಂಟ್, ಇಂಡಸ್ಟ್ರಿಯಲ್ ಸ್ಕೂಲ್

[ಸಶೇಷ]

ಕರನ್ನು ನೋಡಿ ನನಗೆ ಆಶ್ಚರ್ಯವಾಯಿತು. ಆದರೆ ನನ್ನನ್ನು ನೋಡಿ ಅವರಿಗುಂಟಾದ ಆಶ್ಚರ್ಯವು ನನ್ನ ಆಶ್ಚರ್ಯಕ್ಕೆ ಸಮನಾಗಿದ್ದುದೆಂತಲೇ ಭಾವಿಸುವೆನು.

ಅವರು ಆವರದಿಂದ ಕೊಟ್ಟ ಆಹಾರವಸ್ತುಗಳನ್ನು ಸ್ವೀಕರಿಸಿ ನೀವೆಲ್ಲರೂ ಇಲ್ಲಿರಲು ಕಾರಣವೇನು ಎಂದು ನಾನು ಕೇಳಿದೆನು. ಅದಕ್ಕೆ ನಾವು, ಈ ದ್ವೀಪಕ್ಕೆ ಒಡೆಯನಾದ ಒಬ್ಬ ಮಹಾರಾಜನ ಕದುರೆಯ ಚಾಕರರು. ಪ್ರತಿವರ್ಷದಲ್ಲಿಯೂ ಈ ಬಯಲಿನಲ್ಲಿ ನಮ್ಮ ಮಹಾರಾಜರ ಕುದುರೆಗಳನ್ನು ಮೇಯಿಸಲು ನಾವು ಬರುವೆವು. ನಾಳೆಯದಿವಸ ನಾವೆಲ್ಲರೂ ಇಲ್ಲಿಂದ ಹೊರಟುಹೋಗುತ್ತಿದ್ದೆವು. ನೀನು ಬರವ್ರದು. ಒಂದು ದಿನ ತಡವಾಗಿದ್ದರೆ, ಆಹಾರವಿಲ್ಲದೆ ನಿರ್ಜನಪ್ರದೇಶವಾದ ಈ ಅರಣ್ಯದಲ್ಲಿ ನಾಶವಾಗಬೇಕಾಗಿತ್ತು. ಊಟು, ಈ ಕಾಡಿಗೆ ಬಹುದೂರದಲ್ಲಿರುವುದು. ತಿಳಿದವರ ಸಹಾಯವಿಲ್ಲದೆ ನವೆಂಡಯುನ ರಾಜಧಾನಿಗೆ ದಾರಿಯು ಗೊತ್ತಾಗುತ್ತಿರಲಿಲ್ಲ, ಎಂದು ಅವರು ಉತ್ತರವನ್ನು ಕೊಟ್ಟು ನನಗೆ ಸಮಾಧಾನ ಪಡಿಸಿದರು.

ಮರುದಿನ ರಾಜಧಾನಿಗೆ ಆವರೆಲ್ಲರೂ ಹೊರಡಲು ನನ್ನೆನ್ನೂ ಜತೆಯಲ್ಲಿಯೆ ಕರೆದುಕೊಂಡು ಹೋಗಿ ಅವರ ಮಹಾರಾಜನಿಗ ನನ್ನನ್ನು ಒಪ್ಪಿಸಿದರು. ನಾನು ಆವನಿಗೆ ಅಡ್ಡ ಬಿದ್ದೆನು. ನಾನು ಯಾರೆಂದೂ ಅವರ ದೇಶಕ್ಕೆ ಹೇಗೆ ಬಂದೆನೆಂದೂ ಕೇಳಿದರು. ನನ್ನ ಸಮಾಚಾರವನ್ನೆಲ್ಲಾ ಅವರ ಮನಸ್ಸು ಒಪ್ಪುವಂತೆ ಹೇಳಲು ನನ್ನ ಕಷ್ಟಕ್ಕಾಗಿ ಅವರು ಬಹಳ ಪಶ್ಚಾತ್ತಾಪಪಟ್ಟು, ನನಗೆ ಯಾವಕೊರತೆಯೂ ಉಂಟಾಗದಂತೆ ನೋಡಿಕೊಳ್ಳಬೇಕೆಂದು ಒಡನೆಯೆ ಅಲ್ಲಿನ ಅಧಿಕಾರಿಗಳಿಗೆ ಆಜ್ಞಾಪಿಸಿದರು. ಅವರು ಅದೇಮೇರಿಗೆ ಬಹಳ ಜಾಗರೂಕತೆಯಿಂದ ನನ್ನ ಪರಾಂಬರಿಕೆಯನ್ನು ತೆಗೆದ ಕೊಳ್ಳುತಿದ್ದರು



ಆ ಅಲೆಗಳ ಹೊಡೆತಕ್ಕೆ ಸಿಕ್ಕಿಬಿದ್ದವನಾಗಿ ಒಂದು ಹಗಲು ಒಂದು ರಾತ್ರಿಯ ಸ್ವಲ್ಪಾ ಕಳೆದೆನು. ಅಷ್ಟಕ್ಕೇ ನನ್ನ ಶಕ್ತಿಯು ಕುಂದಿದುದರಿಂದ ನನ್ನ ಪ್ರಾಣವನು ಉಳಿಸಿಕೊಳ್ಳುವ ಆಶೆಯನ್ನೇ ನಾನು ತೊರೆದಿದ್ದೆನು. ಆಶ್ಚರ್ಯವೆಯೆ ನನ್ನ ಪುಣ್ಯದಿಂದ ಆನುಕೂಲವಾಗಿ ಒಂದು ದೊಡ್ಡ ಅಲೆಯು ಸವಿಾಪದಲ್ಲಿದ್ದ ಒಂದು ದ್ವೀಪದ ಕರೆಗೆ ನನ್ನನ್ನು ತಳ್ಳಿತು. ಆ ಕರೆಯು ಎತ್ತರವಾಗಿಯೂ ಕಡಿದಾಗಿಯೂ ಇತ್ತು. ನನ್ನ ಕೈಗೆ ಸಿಕ್ಕುವಹಾಗೆ ಮರದಬೇರುಗಳು ಅಲ್ಲಿ ಇರದಿದ್ದರೆ ನನಗೆ ಆ ದಡವನ್ನು ಏರಲಿಕ್ಕೂ ಆಗುತಿರಲಿಲ್ಲ. ಹಸಿವಿನಿಂದಲೂ, ಆಯಾಸದಿಂದಲೂ ಶಕ್ತಿಹೀನನಾಗಿದ್ದಾಗ್ಯೂ, ತಿನ್ನುವದಕ್ಕೆ ಯೋಗ್ಯವಾದ ಗೆಡ್ಡೆಗೆಣಸುಗಳನ್ನು ಹುಡುಕಲು ಸೂರ್ಯನು ಉದಯಿಸಿದಮೇಲೆ, ಹಾಗೆಯೆ ತೆವಳಿ ಕೊಂಡು ಹೊರಟೆನು. ಆಹಾರಯೋಗ್ಯವಾದ ಗೆಡ್ಡೆ ಗೆಣಸುಗಳು ಸಿಕ್ಕಿದುವು. ಅಲ್ಲದೆ ನನ್ನ ಪುಣ್ಯವಶಾತ್ ನಾನು ಜೇತರಿಸಿಕೊಳ್ಳಲು ಅನುಕೂಲವಾಗುವಂತೆ ನಿರ್ಮಲವಾದ ನೀರಿನ ಚಿಲುಮೆಯೊಂದು ಹತ್ತಿರದಲ್ಲಿಯೇ ಸಿಕ್ಕಿತು. ಇವುಗಳಿಂದ ನಾನುಬಹಳವಾಗಿ ಜೇತರಿಸಿಕೊಂಡೆನು. ತರುವಾಯ ಆದ್ವೀಪದಲ್ಲಿ ಹಾಗೆಯೆ ಸ್ವಲ್ಪ ಮುಂದೆ ಹೋಗಲು ಬಂದು ಸೊಗಸಾದ ಬಯಲು ಕಂಡುಬಂದಿತು. ಅಲ್ಲಿ ಕೆಲವು ಕುದುರೆಗಳು ಮೇಯುತಿದ್ದುದನ್ನೂ ನೋಡಿದೆನು. ಆಗ ಆಕುದುರೆಗಳು ಇದ್ದೆಡೆಗೆ ಹೋದೆನು. ಅಲ್ಲಿ ಯಾವನೋ ಮನುಷ್ಯನು ಬಂದು 'ನೀನು ಯಾರು ?' ಎಂದು ಕೇಳಿದನು. ನನ್ನ ವೃತ್ತಾಂತವನ್ನೆಲ್ಲಾ ಅವನಿಗೆ ಹೇಳಲು, ಅವನು ನನ್ನ ಕೈಯನ್ನು ಹಿಡಿದು ಸವಿಾಪದಲ್ಲಿದ್ದ ಒಂದು ಗುಹೆಗೆ ಕರೆದುಕೊಂಡು ಹೋದನು. ಅಲ್ಲಿದ್ದ ಅನೆ

ವಿದ್ಯಾದಾಯಿನಿ.

ಭಾಗ ೯.] ಮೇ ೧೯೦೧. [ಸಂಚಿಕೆ ೫.

ಎಡಿಟರವರ ನೋಟ್ಸ್.

ದೇಶಭಾಷಾಭಿವೃದ್ಧಿಗಾಗಿ, ನಮ್ಮ ವಿದ್ಯಾಭ್ಯಾಸದ ಇಲಾಖೆಯ ಮೇಲ್ವಿಚಾರಣೆ ಕರ್ತರಾದ ಮೆ॥ ಭಾಭಾ ಸಾಹೇಬರವರು ಮಾಡುತಿರುವ ಏರ್ಪಾಡು ಬಹು ಶ್ಲಾಘ್ಯಕರವಾಗಿದೆ. ಇದರಿಂದ, ಕನ್ನಡ ಪಾಠಶಾಲೆಗಳ ನಾಲ್ಕು, ಐದನೆಯ ತರಗತಿಗಳಲ್ಲಿ ಚೆನ್ನಾಗಿ ಓದತಕ್ಕವರಿಗೆ ವೇತನವು ದೊರೆಯುವುದು. ಇದುವರೆಗೂ, ಎಫ್. ಎ. ಬಿ. ಎ. ತರಗತಿಗಳಲ್ಲಿ ಚೆನ್ನಾಗಿ ಓದುತಕ್ಕವರಿಗೆ ಪ್ರೋತ್ಸಾಹ ಉಂಟಾಗುವಂತೆ ವೇತನವನ್ನು ಕೊಡುತಿದ್ದರು. ಇಂಗ್ಲೀಷ್ ಅಭ್ಯಾಸ ಮಾಡುವವರಿಗೆ ಪ್ರೋತ್ಸಾಹ ಪಡಿಸುವ ರೀತಿಯಲ್ಲಿ ದೇಶಭಾಷೆಯಾದ ಕನ್ನಡವನ್ನು ವೃದ್ಧಿಗೊಳಿಸಬೇಕೆಂಬ ಆದರದಿಂದ, ಕನ್ನಡ ವಿದ್ಯಾರ್ಥಿಗಳಿಗೂ ವೇತನವು ದೊರೆಯುವಂತೆ ಏರ್ಪಡಿಸಿದುದಕ್ಕಾಗಿ ಮೆ॥ ಭಾಭಾ ಸಾಹೇಬರವರಿಗೆ ಕನ್ನಡಿಗರೆಲ್ಲರೂ ಕೃತಜ್ಞರಾಗಿರುವೆವು.

***

ನಮ್ಮ ದೇಶದಲ್ಲಿ ವಿದ್ಯೆಯು ವಿಶೇಷ ಪ್ರಾಚುರ್ಯಕ್ಕೆ ಬರಬೇಕೆಂಬುದು ದೇಶೀಯರ ಕೋರಿಕೆಯಷ್ಟೆ. ಈ ಅಭಿಪ್ರಾಯದಿಂದ ದೇಶೀಯರಲ್ಲಿ ವಿದ್ಯಾಪಕ್ಷೆ ಪಾತಿಗಳು ಆಗಾಗ್ಗೆ ಬುದ್ಧಿವಂತರಾಗಿಯೂ, ಬಡವರಾಗಿಯೂ ಇರುವ ವಿದ್ಯಾರ್ಥಿಗಳಿಗೆ, ವಿದ್ಯಾಭ್ಯಾಸಮಾಡಲು ಅನುಕೂಲವಾಗುವಂತೆ ವೇತನಗಳನ್ನೂ, ಪುಸ್ತಕಗಳನ್ನೂ ಯಥೋಚಿತವಾಗಿ ಕೊಡುತಿರುವರು. ಹೀಗೆ ವಿದ್ಯಾಪಕ್ಷೆಪಾತಿಗಳು ಕೊಡುವ ದ್ರವ್ಯವನ್ನು ಒಂದು ಫಂಡನ್ನಾಗಿ, ಏರ್ಪಡಿಸಿ, ಹುಜೂರು ಖಜಾನೆಯಲ್ಲಿಟ್ಟು ಅದರಲ್ಲಿ ಬರುವ ಬಡ್ಡಿಯನ್ನು ವಿದ್ಯಾರ್ಥಿಗಳ ಉಪಯೋಗಾರ್ಥ ವಿನಿಯೋಗಿಸಬೇಕೆಂಬ ಉದ್ದೇ

ನಾನು ಪಾಸುಪಾಗದವಾದುದರಿಂದ ಆ ಪಟ್ಟಣದ ಸಾಹುಕಾರರೊಡನೆ ವಿಶೇಷ
ವಾಗಿ ಬೆರೆದು ಹೊಸಬರಾರಾದರೂ ಬಂದಲ್ಲಿ ನನ್ನ ಪಟ್ಟಣವಾದ ಬಾಗದಾದ್‌ನ ಯೋ
ಕ್ಷೇಮವೇನಾದರು ತಿಳಿದರೂ ತಿಳಿಯಬರುವುದೆಂದು ವಿಚಾರಿಸುತ್ತ ನಾನು ಊರಿಗೆ
ಹೋಗಲು ಅನುಕೂಲಿಸುವ ಸಮಯವನ್ನೇ ಕಾಯುತಿದ್ದೆನು. ರಾಜಧಾನಿಯು
ಸಮುದ್ರತೀರದಲ್ಲಿತ್ತು. ರಾಜಧಾನಿಗೆ ಸೇರಿದ್ದ ದೇವು ಅನುಕೂಲವಾಗಿದ್ದುದರಿಂದ
ನನ್ನನ್ನು ದೇಶದಿಂದ ಪ್ರತಿದಿವಸವೂ ಹಡಗುಗಳು ಬಂದು ಅಲ್ಲಿ ನಿಲ್ಲುತಿದ್ದವು. ಇದು
ನನಗೆ ಅನುಕೂಲವಾಗಿತ್ತು. ನಾನು ಆಸಂಸ್ಥಾನದ ಪಂಡಿತ ಮಂಡಲಿಗೆ ಆಗಾಗ್ಗೆ
ಹೋಗಿ ಅವರು ಮಾಡುತಲಿದ್ದ ಶಾಸ್ತ್ರಾರ್ಥ ವಿಚಾರವನ್ನು ಕೇಳಿ ಸಂತೋಷಪಡುತ
ಲಿದ್ದೆನು. ಹಾಗೆಯೆ ಮಹಾರಾಜರ ಆಸ್ಥಾನಕ್ಕೆ ಹೋಗಿ, ಅವರ ದರ್ಶನವನ್ನು
ತೆಗೆದುಕೊಂಡು, ಅವರ ಪರಿವಾರಕ್ಕೆ ಸೇರಿದ ಸಂಸ್ಥಾನದ ಅಧಿಕಾರಿಗಳೊಡನೆಯೂ,
ಸಾಮಂತರಾಜರೊಡನೆಯೂ, ಪೋಷ್ಯವರ್ಗದ ಇತರ ಜನರೊಡನೆಯೂ, ತಪ್ಪದೆ
ಮಾತನಾಡಿಕೊಂಡು ಬರುದ್ದಿತ್ತಿನು. ನನ್ನ ದೇಶದ ಆಡಳಿತ, ಜನರ ನಡೆನುಡಿ ಮುಂತಾ
ದವುಗಳ ವಿಷಯವಾಗಿ ಸಾವಿರಾರು ಪ್ರಶ್ನೆಗಳನ್ನು ಆಸ್ಥಾನದಲ್ಲಿ ಅವರು ನನ್ನನ್ನು
ಕೇಳುತ್ತಿದ್ದರು. ಅವರ ದೇಶದ ವಿಷಯವಾಗಿ ಅವಶ್ಯಕವಾಗಿ ತಿಳಿಯಬೇಕಾಯಿದೆ
ಯೆನ್ನು ತಿಳಿದುಕೊಳ್ಳಬೇಕೆಂಬ ಆಶೆಯಿಂದ ನಾನೂ ಅವರನ್ನು ಕೇಳುತ್ತಿದ್ದೆನು.

ಬರೆಯಲ್ಪಟ್ಟಿದ್ದ ಅನೇಕ ಗ್ರಂಥಗಳನ್ನು ವ್ಯಾಸಂಗ ಮಾಡಿದರು. ಈ ಚರಿತ್ರೆಗಳ ವ್ಯಾಸಂಗವನ್ನು ಮಾಡತಕ್ಕ ಕಾಲದಲ್ಲಿ ತಾವು ವ್ಯಾಸಂಗಮಾಡುತ್ತಿದ್ದ ಗ್ರಂಥಕರ್ತರು ತಮ್ಮ ಗ್ರಂಥಗಳಿಗೆ ಆಧಾರರೂಪವಾಗಿ ಯಾವಯಾವ ಭಾಷೆಯಲ್ಲಿ ಯಾವಯಾವ ಗ್ರಂಥಗಳನ್ನು ಸೂಚಿಸಿ ಇದ್ದರೋ ಆಯಾಯ ಗ್ರಂಥಗಳನ್ನು ಆ ಭಾಷೆಯಲ್ಲೇ ಓದಿ ತಿಳಿದುಕೊಳ್ಳಬೇಕೆಂದು ನಾವು ಪೂರ್ವದಲ್ಲಿ ಸೂಚಿಸಿದಂತೆ ಅನೇಕ ಯೂರೋ ಪಿಯರ್ ಭಾಷೆಗಳನ್ನು ವ್ಯಾಸಂಗಮಾಡಿ ಅವುಗಳಲ್ಲಿರತಕ್ಕ ಚರಿತ್ರೆಗಳನ್ನು ಮಾತ್ರವೇ ಅಲ್ಲದೆ ಆ ಭಾಷೆಯಲ್ಲಿರತಕ್ಕ ಮತಸಂಬಂಧವಾದ ಗ್ರಂಥಗಳನ್ನೆಲ್ಲಾ ವ್ಯಾಸಂಗಮಾಡಿದರು. ಯೂರೋಪ್‌ಖಂಡದಲ್ಲಿ ತುರುಕರ ದೇಶದಲ್ಲಿ ವಿನಾ ಉಳಿದ ಕಡೆಗಳಲ್ಲೆಲ್ಲಾ ಕ್ರಿಸ್ತಮತವು ಪ್ರಚಾರದಲ್ಲಿರುವುದು. ಆದರೆ ಈ ಕ್ರಿಸ್ತಮತದಲ್ಲಿ ಪ್ರಾಟಸ್ಟೆಂಟ್, ರೋಮ್‌ಕ್ಯಾಥಲಿಕ್, ಗ್ರೀಕ್‌ಚರ್ಚ್ ಎಂಬ ೩ ದೊಡ್ಡ ಭೇದಗಳುಂಟು. ಇದಲ್ಲದೆ ಮೂರು ಭೇದಗಳಲ್ಲಿಯೂ ಅನೇಕ ಉಪಭೇದಗಳುಂಟು. ಈ ಭೇದಗಳನ್ನೆಲ್ಲಾ ಇವರು ಚೆನ್ನಾಗಿ ವ್ಯಾಸಂಗಮಾಡಿದ್ದಲ್ಲದೆ ಅವುಗಳ ಧರ್ಮಪುಸ್ತಕಗಳನ್ನು ಡಾಕ್ಟರ್ ವ್ಹೈಟ್ಲ್ಲಯವರೇ ಮೊದಲಾದ ವೇದಾಂತಿಗಳೊಡನೆ ಚರ್ಚೆಮಾಡಿ ಸಂಶಯಾಸ್ಪದವಾದ ಅನೇಕ ವಿಷಯಗಳನ್ನು ಸ್ಥಿರೀಕರಿಸಿದರು. ಕ್ರಿಸ್ತ ಸಿದ್ಧಾಂತಗಳ ವಿಷಯದಲ್ಲಿ ಅನೇಕ ವರ್ಷಗಳು ವ್ಯಾಸಂಗಮಾಡಿ ಅವುಗಳ ತತ್ವವನ್ನು ಚೆನ್ನಾಗಿ ತಿಳಿದುಕೊಂಡು ತುಚ್ಛವಾದ ವಿಷಯಗಳಲ್ಲಿ ಭೇದಗಳಿದ್ದಾಗ್ಯೂ ಮುಖ್ಯವಾದ ವಿಷಯಗಳಲ್ಲಿ ಐಕಮತ್ಯವು ಎಲ್ಲಾ ಸಿದ್ಧಾಂತಗಳಲ್ಲೂ ಇರುವದನ್ನು ಗೊತ್ತುಮಾಡಿ ತಮ್ಮ ಸಿದ್ಧಾಂತವನ್ನು ಜನರಿಗೆ ಬೋಧಿಸುವ್ರದಕ್ಕೆ ಉಪಕ್ರಮಿಸಿದರು. ಈ ಉಪನ್ಯಾಸಗಳು ಮೂರು ದೊಡ್ಡ ಪುಸ್ತಕಗಳಾಗಿ ಮುದ್ರಿಸಲ್ಪಟ್ಟಿವೆ. ಕ್ರಿಸ್ತಮತದ ಬೇರೆಬೇರೆ ಪಂಗಡಗಳಿಗೆ ಪರಸ್ಪರ ದ್ವೇಷವು ಕಡಮೆಯಾಗುವ್ರದಕ್ಕೂ ಸ್ನೇಹವು ಹೆಚ್ಚುವ್ರದಕ್ಕೂ ಇವರ ಉಪನ್ಯಾಸಗಳು ಬಹಳ ಸಾಧಕವಾದುವು.

ಮತಗ್ರಂಥಗಳು ದೇವರನ್ನು ಅವನ ಸೃಷ್ಟಿ ಸ್ಥಿತಿ ಲಯ ಕ್ರಮಗಳನ್ನೂ ಅವನ ದುಷ್ಟನಿಗ್ರಹ ಶಿಷ್ಟಪರಿಪಾಲನೆಯ ವಿಧಾನಗಳನ್ನೂ, ಇಹಪರ ಸಾಧನೆಗಳಾಗಬೇಕಾದರೆ ಅವನ ಆಜ್ಞೆಗಳನ್ನು ಜನರು ಹೇಗೆ ಅನುಷ್ಠಾನದಲ್ಲಿ ತರಬೇಕೋ ಅದನ್ನೂ ಸೂಚಿಸುತ್ತವೆ. ಈ ವಿಷಯಗಳನ್ನು ಆರ್ನಲ್ಡ್‌ರವರ ಉಪನ್ಯಾಸಗಳಂತೆ ಬೋಧಿಸುವ ಕ್ರಿಸ್ತಮತ ಗ್ರಂಥಗಳೇ ಅಪೂರ್ವವೆಂದು ಅನೇಕ ವಿದ್ವಾಂಸರು ಭಾವಿ

ಶದಿಂದ, ಸರ್ಕಾರದವರ ಅನುಮತಿಯನ್ನು ಪಡೆದು ಒಂದು ಫಂಡನ್ನು ಮಾಡಿರುವರು. ವಿದ್ಯಾಪ್ರಸಾರಕರು. ಈ ಫಂಡನ್ನು ವೃದ್ಧಿಗೊಳಿಸಿ, ವಿದ್ಯಾ ಪ್ರಾಚುರ್ಯಕ್ಕೆ ಸಹಕಾರಿಗಳಾಗುವರೆಂದು ನಾವು ಕೋರುವೆವು.

* * *

ಈ ಸಂವತ್ಸರದ ಕನ್ನಡ ಪಾಠಶಾಲೆಗಳ ನಾಲ್ಕು ಏಜನಿಯು ತಥಗತಿಗಳಲ್ಲಿ ಚೆನ್ನಾಗಿ ಓದುವ ಐವತ್ತು ಮಂದಿ ವಿದ್ಯಾರ್ಥಿಗಳಿಗೆ ತಿಂಗಳಿಗೆ ಎರಡು ರೂ. ನಂತೆ ವೇತನವು ದೊರೆಯುವುದು. ದೇಶಭಾಷಾಭಿವೃದ್ಧಿಯಲ್ಲಿ ಆಸೆಯುಳ್ಳ ಮಹನೀಯರು ಈ ಫಂಡನ್ನು ವೃದ್ಧಿಗೊಳಿಸಿದ ಹಾಗೆಲ್ಲಾ, ವೇತನವನ್ನು ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯೂ ವೃದ್ಧಿಯನ್ನೈದುವುದು.

* * *

ಬೊಂಬಾಯಿ, ಮದ್ರಾಸ್, ಮುಂತಾದ ಯುನಿವರ್ಸಿಟಿಗಳಲ್ಲಿ, ವಿದ್ಯಾಭಿವೃದ್ಧಿಗಾಗಿ, ದ್ರವ್ಯವನ್ನು ಮಹನೀಯರು ಅನೇಕರು ಕೊಟ್ಟಿರುವರು. ಈ ದೇಶೀಯರು, ಸ್ವದೇಶಾಭಿವೃದ್ಧಿಗಾಗಿ ಯಥೋಚಿತ ಸಹಾಯವನ್ನು ಮಾಡಿ, ದೇಶದ ಏಳಿಗೆಗೆ ಮಾರ್ಗವನ್ನು ಮಾಡುವರೆಂದು ನಾವು ದೃಢವಾಗಿ ನಂಬುವೆವು.

ಆರ್ನಲ್ಡ್‌ರವರ ಚರಿತ್ರೆ.

ಆರ್ನಲ್ಡ್‌ರವರು ಲೇಲಾಹ್ಯಾಂ ಪಟ್ಟಣದಲ್ಲಿ ಪಾಠಕರಾಗಿದ್ದಾಗ ವಿರಾಮಕಾಲಗಳಲ್ಲಿ ತಾವು ವ್ಯಾಸಂಗಮಾಡಿದ್ದ ಬೇರೆಬೇರೆ ಭಾಷೆಗಳ ಒಂದೇ ಅರ್ಥವುಳ್ಳ ಶಬ್ದಗಳು ಹೇಗೆ ಹುಟ್ಟಿದುವು? ಅವುಗಳಲ್ಲಿ ರೂಪಭೇದಗಳೂ ಅರ್ಥಾಂತರಗಳೂ ಹೇಗೆ ಉಂಟಾದುವು? ಇವುಗಳನ್ನು ಆಯಾಯ ಭಾಷೆಗಳಲ್ಲಿ ಪ್ರಸಿದ್ಧಗಳಾಗಿದ್ದ ನಿಘಂಟುಗಳ ಸಹಾಯದಿಂದ ವ್ಯಾಸಂಗ ಮಾಡುತ್ತಿದ್ದರು. ಈ ವ್ಯಾಸಂಗವನ್ನು ಕೆಲವು ವರ್ಷಗಳಲ್ಲಿ ಪೂರೈಸಿ ತಾವು ಶೋಧಿಸಿ ನಿರ್ಣಯ ಮಾಡಿದ ವಿಷಯಗಳನ್ನು ಬರೆದು ಇಟ್ಟು, ತರುವಾಯ ಗ್ರೀಸ್ ಮತ್ತು ರೋಮ್ ದೇಶಗಳ ಚರಿತ್ರೆಗಳ ವಿಷಯದಲ್ಲಿ

ರದವರು ಪ್ರಜೆಗಳನ್ನು ದ್ವೇಷಿಸಿದರೆ ಪ್ರಜೆಗಳು ಸರಕಾರದವರನ್ನು ದ್ವೇಷಿಸುವರು. ಈ ಪ್ರೀತಿ ದ್ವೇಷಗಳು ಪರಸ್ಪರ ಸಂಬಂಧವುಳ್ಳವುಗಳು. ಪರಸ್ಪರ ಪ್ರೀತಿಯಿಂದ ಪರಸ್ಪರ ಸೌಖ್ಯವು ಹೆಚ್ಚುವುದು. ಪರಸ್ಪರ ದ್ವೇಷದಿಂದ ದ್ವೇಷಿಸತಕ್ಕ ಉಭಯತ್ರರಿಗೂ ಅನಿರ್ವಚನೀಯವಾದ ಕಷ್ಟಗಳು ಪ್ರಾಪ್ತವಾಗುವುವು. ಅದುದರಿಂದ ಅಧಿಕಾರಬಲವುಳ್ಳ ಸರಕಾರದವರು ಸಾಂಕುಶಪ್ರವರ್ತಕರಾಗಿ ಪ್ರಜೆಗಳ ಯೋಗಕ್ಷೇಮಚಿಂತೆಯಲ್ಲಿ ಅಸಕ್ತಿಯುಳ್ಳವರಾಗಬೇಕು. ಸರಕಾರದವರಿಗೂ ಪ್ರಜೆಗಳಿಗೂ ಇಂಥಾ ಸೌಹಾರ್ದ ಹೃದಯವನ್ನುಂಟುಮಾಡತಕ್ಕದ್ದು ರಾಜಧರ್ಮಜ್ಞರಿಗೆ ಮುಖ್ಯಕರ್ತವ್ಯವು.''

ಈ ಲೇಖನದಲ್ಲಿ ತೋರುವ ಅಭಿನಾಮವು ಮೆ॥ ಆರ್ನಲ್ಡ್‌ರವರಿಗೆ ಬಹಳವಾಗಿ ಹೆಚ್ಚುತ್ತಾ ಬಂದಿತು. ತಾವು ವ್ಯಾಸಂಗಮಾಡಿದ್ದ ಚರಿತ್ರೆಗಳ ಬಲದಿಂದ ರಾಜರೂ ಪ್ರಜೆಗಳೂ ಪರಸ್ಪರವಾಗಿ ಯಾವರೀತಿಯುಲ್ಲಿ ನಡೆದುಕೊಂಡರೆ ಉಭಯತ್ರರೂ ವೃದ್ಧಿಗೆ ಬರುವರೋ, ಹೇಗೆ ಪರಸ್ಪರ ದ್ವೇಷವುಳ್ಳವರಾದರೆ ಹೀಗೆ ದ್ವೇಷಿಸುವರು ಪೂರ್ವಕಾಲದಲ್ಲಿ ಅನರ್ಥಗಳಿಗೆ ಗುರಿಯಾಗಿದ್ದರೋ ಅದನ್ನೆಲ್ಲಾ ಪರಿಶೀಲಿಸಿ ಉಪನ್ಯಾಸಗಳ ಪೂರ್ವಕವಾಗಿಯೂ ಪ್ರಚಾರಪಡಿಸಿ ಪ್ರಜೆಗಳಿಗೂ ಪ್ರಭುಗಳಿಗೂ ಇದ್ದ ಪರಸ್ಪರ ದ್ವೇಷವನ್ನು ಕಡಮೆ ಮಾಡಿ ಪರಸ್ಪರ ಮೈತ್ರಿಯನ್ನು ಹೆಚ್ಚಿಸಿ ಸಾಂಕುಶ ಪ್ರವರ್ತನೆಗೆ ಬಹಳವಾಗಿ ಸಹಾಯ ಮಾಡಿದರು.

M. V.

ಯಾವ ಜ್ಞಾನವು ಬಹುಮೂಲ್ಯವಾದುದು ?

4. ಶಾರೀರಕಾಚರಣೆಯಲ್ಲಿಯೂ ಮಾನಸಿಕಾಚರಣೆಯಲ್ಲಿಯೂ ಪ್ರಯೋಜನಕ್ಕಿಂತ ಅಲಂಕಾರವೆ ಪುರಸ್ಸರವಾದುದೆಂಬುವ ನಿಶ್ಚಯವನ್ನು ಜೆನ್ನಾಗಿ ಗ್ರಹಿಸಲು ಅದರ ಮೂಲಕಾರಣವಿಚಾರವು ಅವಶ್ಯಕವಾಗಿರುತ್ತದೆ. ಅದಾವುದೆಂದರೆ ಅನಾದಿಯಿಂದ ಈಗಿನವರೆಗೂ ಒಬ್ಬರ ಅಪೇಕ್ಷೆಗಿಂತ ಸಂಘಾಪೇಕ್ಷೆಯೇ ಪ್ರಬಲವಾಗಿರುತ್ತದೆ. ಮತ್ತು ಜನವಶೀಕರಣವೇ ಸಮುದಾಯದ ಮುಖ್ಯ ಕಾರ್ಯವಾಗಿದೆ. ರಾಜರು, ಮಂತ್ರಾ

ಸುತ್ತಾರ. ಇಂಥಾ ಗುಣಾತಿಶಯಗಳು ಇವರ ಗ್ರಂಥದಲ್ಲಿರುವುದರಿಂದಲೇ ಪರಸ್ಪರ ದ್ವೇಷವನ್ನು ಭಿನ್ನವಾದ ಸಿದ್ಧಾಂತಾವಲಂಬಿಗಳಲ್ಲಿ ತಗ್ಗಿಸಿ ಸೌಹಾರ್ದವನ್ನು ಉಂಟು ಮಾಡಿದರು.

ಈ ರೀತಿಯಲ್ಲಿ ಅಧ್ಯಾತ್ಮಿಕ ವಿಚಾರದಲ್ಲಿ ಪರಸ್ಪರ ಮೈತ್ರಿಯನ್ನುಂಟುಮಾಡಿ ರಾಜಕೀಯ ವಿಷಯಗಳನ್ನು ವ್ಯಾಸಂಗಮಾಡಲುಪಕ್ರಮಿಸಿದರು. ಈ ವಿಚಾರವು ಅಗಾಧವಾದ ಸಮುದ್ರದಂತೆ ಇತ್ತು. ರಾಜ್ಯಭಾರವನ್ನು ಮಾಡತಕ್ಕವರು ಮತ್ತು ಪ್ರಜೆಗಳು ಇಂದ್ರಿಯಪರವಶರಾಗಿಯೂ, ಸ್ವಕಾರ್ಯಧುರಂಧರರಾಗಿಯೂ, ಪರಸ್ಪರ ದ್ವೇಷಿಷ್ಣುಗಳು ಅನೇಕ ಪಂಗಡಗಳುಳ್ಳವರಾಗಿಯೂ, ಸರ್ವತ್ರ ಸಮದೃಷ್ಟಿ ಇಲ್ಲದವರಾಗಿಯೂ, ಧರ್ಮೈಕ ಪಕ್ಷಪಾತತ್ವವನ್ನರಿಯದವರಾಗಿಯೂ, ದುಷ್ಟವಾದ ಸಮಯಾಚಾರಗಳಿಗೆ ಅಧೀನರಾಗಿಯೂ ಇದ್ದರು. ಸರಕಾರದವರು ತಮ್ಮ ಕರ್ತವ್ಯವನ್ನು ಸರಿಯಾಗಿ ವಿಚಾರ್ಯವಾಡಿಕೊಂಡು ಸರಕಾರಕ್ಕೆ ನಿಜವಾದ ಕಾರಣಭೂತರಾದ ಪ್ರಜೆಗಳ ಯೋಗಕ್ಷೇಮಚಿಂತೆಯನ್ನು ಸರಿಯಾಗಿ ಮಾಡುತ್ತಿರಲಿಲ್ಲ. ಸರಕಾರದವರ ಕಿರಿಕಿರಿಯನ್ನು ತಡೆಯಲಾರದೆ ಜನಗಳು ದೊಂಬಿಮಾಡುತ್ತಿದ್ದರು. ಹೀಗೆ ದೊಂಬಿ ಮಾಡತಕ್ಕವರನ್ನು ರಾಜದ್ರೋಹಿಗಳೆಂದು ಸರಕಾರದವರು ಶಿಕ್ಷಿಸುತ್ತಿದ್ದರು. ಫ್ರಾನ್ಸ್ ದೇಶದಲ್ಲಿ ನಿರಂಕುಶವಾಗಿ ನಡೆಯುತ್ತಿದ್ದ ರಾಜರುಗಳಮೇಲೂ, ರಾಜರ ಪರಿಜನಗಳಮೇಲೂ ಜನಗಳು ಪ್ರತಿಭಟಿಸಿ ಅವರಿಗೆ ಪರಾಜಯವನ್ನುಂಟುಮಾಡಿ ಅವರಿಗೆ ಶಿಕ್ಷೋದಗಳನ್ನು ಮಾಡಿಸಿ ಅವರ ಕಡೆಯ ದೊಡ್ಡಮನುಷ್ಯರಿಗೆಲ್ಲಾ ಅರ್ಥಹಾನಿ ಮಾನಹಾನಿ ಮತ್ತು ಪ್ರಾಣಹಾನಿಗಳಾಗುವಂತೆ ಮಾಡುತ್ತಿದ್ದರು. ಈ ಅನರ್ಥಗಳನ್ನೆಲ್ಲಾ ನೋಡಿ ಆರ್ನಲ್ಡ್‌ರವರು ಬಹಳ ವಿಷಾದವನ್ನುಪಟ್ಟು ಸರಕಾರದವರಿಗೂ ಪ್ರಜೆಗಳಿಗೂ ಪರಸ್ಪರ ಪ್ರೀತಿಯುಂಟಾಗುವಂತೆ ಮಾಡಬೇಕೆಂದು ಬಹಳವಾಗಿ ಪ್ರಯತ್ನಪಟ್ಟರು. ಆ ಕಾಲದಲ್ಲಿ ಅವರು ಬರೆದಿರತಕ್ಕ ಒಂದು ಲೇಖನವು ಅವರ ಮನೋಭಾವವನ್ನು ಸ್ಪಷ್ಟಪಡಿಸುತ್ತದೆ.

ಅವರು ಹೇಳಿರುವುದೇನೆಂದರೆ:

" ಈ ದೇಶದ ಸ್ಥಿತಿಯನ್ನೂ, ಸರ್ಕಾರದವರಿಗೂ ಪ್ರಜೆಗಳಿಗೂ ಇರತಕ್ಕ ಸಂಬಂಧವನ್ನೂ ನೋಡಿದರೆ ನನಗೆ ಬಹಳ ಸಂಕಟ ಉಂಟಾಗುತ್ತದೆ. ಸರಕಾರದವರು ಪ್ರಜೆಗಳನ್ನು ಪ್ರೀತಿಸಿದರೆ ಪ್ರಜೆಗಳು ಸರಕಾರದವರನ್ನು ಪ್ರೀತಿಸುವರು. ಸರಕಾ

ರುವುದು. ಜೀವಿತಕಾಲದಲ್ಲೆಲ್ಲಾ ನಮ್ಮ ನೈಜಗುಣವಲ್ಲದೆ ಜನಾಭಿಪ್ರಾಯವೇ ಚರ್ಚಾಸ್ಪದವಾಗಿರುವಂತೆಯೇ ವಿದ್ಯಾಭಿವೃದ್ಧಿಯಲ್ಲೂ ಲೋಕದ ಮೆಚ್ಚಿಕೆ ಹೊರತು ಜ್ಞಾನದ ಆಂತರಿಕ ಗುಣವು ಯೋಚಿಸಲ್ಪಡುವುದಿಲ್ಲ. ಇದೇ ನಮ್ಮ ಪ್ರತ್ಯಕ್ಷಾಭಿಪ್ರಾಯವಾಗಿರುವುದರಿಂದ ಜ್ಞಾನದ ವ್ಯಕ್ತಪ್ರಯೋಜನವು ಎಣಿಸಲ್ಪಡುವುದಿಲ್ಲ. ಕಿರಾತನು ತನ್ನ ಹಲ್ಲನ್ನು ಅರದಿಂದುಜ್ಜಿ ಉಗುರುಗಳಿಗೆ ಬಣ್ಣ ಹಾಕಿಕೊಳ್ಳುವುದರಿಂದುಂಟಾದುದನ್ನು ಯೋಚಿಸುವದಿಲ್ಲವಷ್ಟೆ!

5 ನಮ್ಮ ವಿದ್ಯಾಭ್ಯಾಸದ ಅಪರಿಮ್ಮೃತ ಅವಿವೃತ್ತ ಲಕ್ಷಣಕ್ಕೆ ಇನ್ನೂ ಹೆಚ್ಚಾದ ಪ್ರಮಾಣ ಅವಶ್ಯಕವಾದಲ್ಲಿ ನಾನಾವಿಧ ಕಲೆಗಳ ಪ್ರಯೋಜನ ತಾರತಮ್ಯವು ಇದುವರೆಗೂ ಚರ್ಚಾಂಶವಾಗಿಯೇ ಇರದೆ ಇರುವುದೂ ಕ್ರಮವರಿತು ಚರ್ಚಿಸಲ್ಪಟ್ಟು ವ್ಯಕ್ತಫಲ ಉಂಟಾಗದೆ ಇರುವುದೂ ದೃಷ್ಟಾಂತವಾಗಿರುವವು. ಅನ್ಯೋನ್ಯ ಸಂಬಂಧ ಗುಣಜ್ಞಾನ ಪರಿಮಿತಿಯು ತತ್ಕಾಲದವರೆಗೂ ನಿರ್ಧರವಾಗಿಲ್ಲ. ಇಂಥಾ ಪ್ರಮಾಣವೇ ಎಂಬುವುದು ಕೂಡ ಸ್ಪಷ್ಟವಾಗಿ ಗೋಚರವಾಗಿಲ್ಲ. ಇದಲ್ಲದೆ ಇಂಥಾ ಇಯತ್ತೆಯು ಅವಶ್ಯಕತೆಯು ಯಾರ ಅವಗಾಹಕ್ಕೂ ಬಂದಿಲ್ಲ. ಒಂದು ವಿಷಯದ ಪುಸ್ತಕಗಳನ್ನು ಓದುತ್ತಾರೆ. ಇನ್ನೊಂದು ವಿಷಯದಲ್ಲಿ ಉಪನ್ಯಾಸಗಳನ್ನು ಕೇಳುತ್ತಾರೆ. ಇಂಥಾ ವಿದ್ಯೆಗಳಲ್ಲಿ ನಮ್ಮ ಮಕ್ಕಳು ಶಿಕ್ಷಿತರಾಗಬೇಕೆಂದೂ, ಅಂಥಾ ವಿದ್ಯೆಗಳು ಅನಾವಶ್ಯಕಗಳೆಂದೂ ದೃಢಮನಸ್ಕರಾಗುತ್ತಾರೆ. ಇದಕ್ಕೆಲ್ಲಾ ಲೋಕಾಚರಣೆಯೂ, ಅಭಿರುಚಿಯೂ, ಸ್ವಾಭಿನಿವೇಶವೂ ಪ್ರೇರಕಗಳಾಗಿರುವುವು. ಕಲಿಯುವುದಕ್ಕೆ ನಿಜವಾಗಿ ಬಹುಮೂಲ್ಯವಾದ ವಿಷಯಗಳು ಯಾವವೆಂಬುದನ್ನು ಸಕಾರಣವಾಗಿ ನಿರ್ಧರಿಸುವುದರ ಅತ್ಯಾಧಿಕ್ಯವನ್ನು ಗಣನೆಗೇ ತರುವುದಿಲ್ಲ. ಒಂದುಜ್ಞಾನವು ಗೌರವವುಳ್ಳದು ಮತ್ತೊಂದು ಅಲ್ಲವೆಂದು ಆಗಾಗ್ಗೆ ಚರ್ಚೆಯು ಎಲ್ಲಾ ಸಂಘಗಳಲ್ಲಿಯೂ ನಡೆಯುವುದು ನಿಜವೇ ಸರಿ. ಆದರೆ ಅಂಥಾ ಜ್ಞಾನದ ಪ್ರಯೋಜನ ಪರಿಮಿತಿಯು ಉಪಾರ್ಜನೆಗೆ ವ್ಯಯವಾಗತಕ್ಕಷ್ಟು ಕಾಲಕ್ಕನುಗುಣವಾಗಿದಿಯೆ ? ಇಂಥಾ ಕಾಲವಿನಿಯೋಗಕ್ಕರ್ಹವಾದ ಅಧಿಕ ಗುರುತ್ವವುಳ್ಳ ಇತರ ವಿಷಯಗಳಿಲ್ಲವೆ ? ಈ ಪೃಚ್ಛಾಂಶಗಳು ಯೋಚಿಸಲ್ಪಟ್ಟುದೇ ಆದರೆ ಸ್ವಕೀಯಪೂರ್ವಾನುರಾಗವನನುಸರಿಸಿ ಸಂಕ್ಷೇಪವಾಗಿ ತೀರ್ಮಾನಿಸಲ್ಪಡುವುವು. ಸಾಹಿತ್ಯ ಗ್ರಂಥಗಳ ಮತ್ತು ಗಣಿತಶಾಸ್ತ್ರದ ಪರಸ್ಪರ ಯೋಗ್ಯತಾ ತಾರತಮ್ಯವನ್ನು ಕುರಿತು ಸ್ಥಿರವಾದ ವಿವಾದವು ಆಗಿಂದಾಗ್ಗೆ ಪುನರಾವಿ

ಲೋಚನಾ ಸಭೆ, ನಿಯುಮಿತಾಧಿಕಾರಿ, ಇವರ ಪ್ರಭುತ್ವವಲ್ಲದೆ ಇನ್ಯಾವ ಪ್ರಭುತ್ವವೂ ಇಲ್ಲವೆಂದು ಸಾವಯವನ್ನನಾಗಿ ಊಹಿಸುವುದು ಸಮಂಜಸವಲ್ಲ. ಪುರುಷನಾಗಲಿ ಸ್ತ್ರಿಯಾಗಲಿ ರಾಜ್ಯಭಾರವನ್ನು ಅಥವಾ ಇತರಾಧಿಕಾರವನ್ನು ಹೊಂದಬೇಕೆಂಬದಾಗಿ ಪ್ರಯತ್ನಿಸುವ ಪರಿಷದಗಳಲ್ಲೆಲ್ಲಾ ಈ ಅಭಿಜ್ಞಾ ಪ್ರಭುತ್ವದೊಂದಿಗೆ ಅನಭಿಜ್ಞಾ ಪ್ರಭುತ್ವವು ಬೆರೆದಿದೆ. ಕೆಲವರಲ್ಲಿ ಶ್ರೇಷ್ಠತೆಯನ್ನು ಸಿಕೊಳ್ಳುವುದಕ್ಕೂ ಅವರಿಂದ ಸನ್ಮಾನವನ್ನು ಪಡೆಯುವುದಕ್ಕೂ, ತಮಗಿಂತ ಮೇಲಾದವರ ಪ್ರೀತಿಗೆ ಪಾತ್ರರಾಗುವುದಕ್ಕೂ ಸರ್ವರು ಶ್ರಮಪಡುತ್ತಾರೆ. ಇದರಲ್ಲೇ ಜೀವಿತಕಾಲ ಶಕ್ತಿಯನ್ನೆಲ್ಲಾ ಕಳೆಯುತ್ತಾರೆ. ಧನಾಜ್ಞನೆನ್ನಿಂದಲೂ, ಡಾಂಭಿಕ ವೃತ್ತಿಯಿಂದಲೂ, ಉಡುಪಿನ ಸೊಬಗಿನಿಂದಲೂ ಬುದ್ಧಿಶಕ್ತಿ ಪ್ರಕಾಶನದಿಂದಲೂ ಪ್ರತಿ ಮನುಷ್ಯನೂ ಇತರರನ್ನು ವಶ್ಯವಾಡಿಕೊಳ್ಳಲು ಯತ್ನಿಸುವನು; ಮತ್ತು ಈ ಕಾರಣದಿಂದ ಜನಸಂಘವನ್ನು ಕ್ರಮದಲ್ಲಿಡಬೇಕಾಗಿರುವ ನಾನಾವಿಧ ನಿರ್ಬಂಧ ಜಾಲದಲ್ಲಿ ನಿಯುಕ್ತ ಸಹಾಯಕನಾಗಿರುವನು. ಯುದ್ಧದಲ್ಲಿ ಭಯಂಕರವಾದ ಬಣ್ಣವನ್ನು ಹಾಕಿಕೊಂಡು ಕಟಿಸೂತ್ರದಲ್ಲಿ ಮಸ್ತಕಚರ್ಮವನ್ನಿಟ್ಟು ಇತರರಿಗೆ ಭಯವನ್ನುಂಟುಮಾಡಲು ಉದ್ದೇಶಿಸುವವನು ಕಿರಾತಕಾಸ್ಥಿಯೊಬ್ಬನೆ. ಅಲ್ಲು-ಬಹು ಶ್ರಮದಿಂದ ವಸ್ತ್ರಮಾಲ್ಯಾದಿಗಳನ್ನು ಧರಿಸಿ ನಯ ನಜೆ ನುಡಿ ಮುಂತಾದ ಶೃಂಗಾರಗಳಿಂದ ಇತರರನ್ನು ಮೋಹಗೊಳಿಸಲು ಉಜ್ಜುಗಿಸುವವಳು ಸೊಗಸಗಾತಿಯೊಬ್ಬಳೇ ಅಲ್ಲ,—ಪಂಡಿತನೂ, ಚರಿತ್ರಿಗಾರನೂ, ತತ್ವಜ್ಞಾನಿಯೂ ಅವರವರ ವಿದ್ಯಾ ಕುಶಲತೆಗಳನ್ನು ವಶೀಕರಣಕ್ಕೆ ಉಪಯೋಗಿಸುವರು. ಸ್ವಕೀಯ ಗುಣಾತಿಶಯಗಳನ್ನು ಸಂಪೂರ್ಣವಾಗಿ ಸರ್ವತ್ರ ಆಟೋಪವಿಲ್ಲದೆ ಪ್ರಕಾಶ ಪಡಿಸುವುದರಲ್ಲಿ ಯಾರೂ ಕೈಪ್ಪಿಯನ್ನು ಹೊಂದುವುದಿಲ್ಲ. ಆದರೆ ನಮ್ಮ ಪ್ರತಿಭಾಪಾಗಲ್ಭ್ಯವನ್ನು ಇತರರ ಮನಸ್ಸಿಗೆ ಹಿತವಾಗುವಂತೆ ಪ್ರಕಟಿಸಿ ಯಾವುದಾದರೂ ಒಂದು ಮಾರ್ಗದಿಂದ ಅವರನ್ನು ಸ್ವಾಧೀನಪಡಿಸಿಕೊಳ್ಳಲು, ಅತ್ಯಾಕುರೇಚ್ಛೆಯುಳ್ಳವರಾಗಿರುತ್ತೇವೆ. ಇದರಿಂದಲೇ ನಮ್ಮ ವಿದ್ಯಾಭ್ಯಾಸ ಲಕ್ಷಣವು ನಿರ್ಧರಿಸಲ್ಪಟ್ಟದೆ. ಯಾವ ಜ್ಞಾನವು ಬಹು ಮೂಲ್ಯವಾದುದು ಎಂಬುವುದು ಯೋಚನೆಗೆ ವಿಷಯವಾಗಿಲ್ಲ. ಆದರೆ ಯಾವುದರಿಂದ ಅತ್ಯಧಿಕವಾದ ಶ್ಲಾಘನೆಯೂ, ಘನತೆಯೂ, ಮರ್ಯಾದೆಯೂ ಉಂಟಾಗುವುದೋ ಅವುದು ಸಂಘದಲ್ಲಿ ಔನ್ನತ್ಯಕ್ಕೂ ಪ್ರಾಬಲ್ಯಕ್ಕೂ ಹೆಚ್ಚಾದ ಸಾಧನವಾಗಿರುವುದೋ—ಯಾವುದು ಅತ್ಯಾಡಂಬರಕರವಾಗಿರುವುದೋ, ಅಂಥಾ ಜ್ಞಾನವೇ ಉಪಾಸಿತವಾಗಿ

ದಿಸಬಹುದಾದ ಅಧಿಕ ಪ್ರಯೋಜನವಾದ ಜ್ಞಾನಕ್ಕೆ ಬದಲಾಗಿ ಇಂಥಾ ವಿಷಯವನ್ನು ತಿಳಿವುದಕ್ಕೆ ತನ್ನ ವಯುಸ್ಸಿನಲ್ಲಿ ಕೆಲವು ಕಾಲವನ್ನು ವಿನಿಯೋಗಿಸಬೇಕೆಂಬ ಅಭಿಪ್ರಾಯವನ್ನು ಯಾರೂ ಸಹಿಸುವುದಿಲ್ಲ. ಇಲ್ಲಿ ಯೋಗ್ಯತಾ ತಾರತಮ್ಯ ಪರೀಕ್ಷೆಯೇ ಅಪೇಕ್ಷಣೀಯವೂ ನಿಷ್ಕೃಷ್ಟವೂ ಆದುದೆಂದು ತಿಳಿದಿದ್ದರೆ, ಎಲ್ಲಾ ವಿಷಯಗಳಲ್ಲಿಯೂ ಇಂಥಾ ಪರೀಕ್ಷೆಯೇ ನಿಯತವೆಂದು ತಿಳಿದಿರಬೇಕಲ್ಲವೆ? ಎಲ್ಲಾ ಅಂಶಗಳಲ್ಲಿಯೂ ನಾವು ಪೂರ್ಣಜ್ಞಾನವನ್ನು ಹೊಂದಲು ಸಾಕಾದಷ್ಟು ಕಾಲವಿದ್ದಲ್ಲಿ ಚಿಂತೆಗೆ ಅವಕಾಶವಿರುತ್ತಿರಲಿಲ್ಲ. ಪುರಾತನವಾದ ಗೀತದಲ್ಲಿ ಹೇಳಿರುವುದೇನೆಂದರೆ:—

ಪೂರ್ವಕಾಲದಲ್ಲಿದ್ದಂತೆ ಮನುಷ್ಯನು ದೃಢಾಂಗನಾಗಿ ದಿವ್ಯ ಸಹಸ್ರ ವರ್ಷಗಳ ವರೆಗೂ ಜೀವಿಸುವ್ರದಾದರೆ, ಆತುರವೂ, ಚಿಂತೆಯೂ ಇಲ್ಲದೆ ಅವ ವಿಷಯಗಳನ್ನು ತಿಳಿಯಲಾರನು? ಮತ್ತು ಅವಕಾರ್ಯಗಳನ್ನು ಮಾಡಲಾರನು? ನಮ್ಮ ಆಯುಸ್ಸು ಅಲ್ಪವಾಗಿರುವುದರಿಂದ ಜ್ಞಾನಸಂಪಾದನೆಗೆ ಕಾಲವು ಕೊಂಚವಾಗಿಯೆ ಇರುವುದನ್ನು ಮರೆಯಕೂಡದು. ಇಂಥಾ ಆಯುಸ್ಸು ಕಡಮೆಯಾಗುವುದರಿಂದಲೂ, ಜೀವನೋಪಯುಕ್ತಕಾರ್ಯದಿಂದಲೂ, ನಮ್ಮ ಕಾಲವು ಇನ್ನೂ ಅಲ್ಪವಾಗಿರುವುದರಿಂದ ಇರತಕ್ಕ ಕಾಲವೆನ್ನು ಅತ್ಯಂತ ಪ್ರಯೋಜನಕರವಾದ ಜ್ಞಾನಾರ್ಜನೆಗೆ ಉಪಯೋಗಿಸುವುದು ಮುಖ್ಯವಾಗಿ ಯೋಚಿಸತಕ್ಕದ್ದಾಗಿದೆ. ಲೋಕರೀತಿಯಿಂದಾಗಲೀ ಮನಶ್ಚಾಂಚಲ್ಯದಿಂದಾಗಲೀ ಪ್ರೇರಿತವಾದ ಒಂದು ವಿಷಯಾಭ್ಯಾಸದಲ್ಲಿ ಕಾಲಹರಣ ಮಾಡುವುದಕ್ಕೆ ಮೊದಲು, ಇದರ ಫಲಪ್ರಯೋಜನಕ್ಕೂ, ಇದೇ ಕಾಲವನ್ನು ಇತರ ಕಲಾಧ್ಯಯನದಲ್ಲಿ ವಿನಿಯೋಗಿಸುವುದರಿಂದುಂಟಾಗುವ ನಾನಾವಿಧ ಫಲಿತಾಂಶಗಳಿಗೂ ಇರುವ ಬೆಲೆಯು ತಾರತಮ್ಯವನ್ನು ಚೆನ್ನಾಗಿ ಹೋಲಿಸಿ ನೋಡುವುದು ನಿಸ್ಸಂದೇಹವಾಗಿ ಬುದ್ಧಿವಂತಿಕೆಯ ಲಕ್ಷಣವಾಗಿರುವುದು.

M. S.

ವಾಯು.

ನಮ್ಮ ಮೇಲೂ, ಸುತ್ತಲೂ, ಅತ್ಯುತ್ಕೃಷ್ಟ ಪರ್ವತ ಶಿಖರಗಳ ಮೇಲೂ, ಅಗಾಧವಾದ ಗಣಿಗಳಲ್ಲಿಯೂ, ನಾವು ವಾಯುವಿನಿಂದ ಆವರಿಸಲ್ಪಟ್ಟಿರುವೆವು.

ಭಾವಿಸುವುದನ್ನು ನಾವು ಕಲಿಯಬೇಕಾಗಿದೆ. ಮುಖ್ಯವಾಗಿ ಈ ವಿವಾದವು ನಿರ್ದೇಶಿತ ವಾದ ಲಕ್ಷಣವನ್ನು ಅಂದಿಸಿದೆ ಅಶಾಸ್ತ್ರೀಯವಾಗಿ ನಿರ್ಣಯಿಸಲ್ಪಡುವುದು. ವ್ಯವಹಾರಾಂಶವು ಯಾವ ಪ್ರಧಾನಪ್ರಶ್ನೆಯ ವಿಷಯಕ್ಕೆ ಭಾಗವಾಗಿದೆಯೋ ಅದಕ್ಕೆ ಹೋಲಿಸಿದಲ್ಲಿ ಅಲ್ಪವಾಗಿರುವುದು ಗಣಿತಾಭ್ಯಾಸ ಉತ್ತಮವೋ, ಕಾವ್ಯಾದಿಗಳ ಅಭ್ಯಾಸ ಉತ್ತಮವೋ ಎಂಬುವುದನ್ನು ನಿರ್ಣಯಿಸುವುದು ಸರಿಯಾದ ಅಭ್ಯಸನೀಯ ವಿಷಯವಾ ನಿಕ್ಕಮಾಡಿಕೆಯನ್ನೆಲ್ಲಾ ನಿರ್ಣಯಿಸಿದಂತೆ ಆಯಿತೆಂದು ಊಹಿಸುವುದು ಹೇಗಿರುವ ದೆಂದರೆ ಅಲುಗೆಡ್ಡಿಗಿಂತ ಗೋಧಿಯು ಪುಷ್ಟಿಕರವೇ ಎಲ್ಲವೇ ಎಂಬುವ ದನ್ನು ನಿಶ್ಚಯಿಸುವುದರಲ್ಲಿ ವಿಷಯವನ್ನೆಲ್ಲಾ ನಿರ್ಧರಿಸಿದಂತೆ ಆಯಿತೆಂದು ಭಾವಿಸಿದಹಾಗೆ ಇರುವುದು.

6. ಉತ್ಕೃಷ್ಟವೆಂದು ನಾವು ವಿವಾದಿಸುವ ವಿಷಯವು ಇಂಥಿಂಥಾ ಜ್ಞಾನಕ್ಕೆ ಬೆರೆಯುಂಟೇ ಇಲ್ಲವೇ ಎಂಬುವುದೇ ಅಲ್ಲ—ಆದರೆ ಜ್ಞಾನದ ತಾರತಮ್ಯದ ಯೋಗ್ಯತೆ ಎವುದು ಎಂಬುದು: ತಾವು ಪಡೆದಿರುವ ಪ್ರಯೋಜನಗಳ ಪರಿಯಾಪ್ತಿಯೇ ಪರಿಮಿತ ಎಂಬುವುದನ್ನು ಸಂಪೂರ್ಣವಾಗಿ ಮರೆತು, ಒಂದು ಕಲಾಪರಿಶ್ರಮದಿಂದ ತನಗುಂಟಾದ ಕೆಲವು ಪ್ರಯೋಜನಗಳ ನಾಮೋಚ್ಚಾರಣೆಯಿಂದಲೇ ಅಭ್ಯಸ್ತ ವಿಷಯವು ಸಮಂಜಸವೆಂದು ಜನರು ಊಹಿಸುವರು. ಅಭ್ಯಾಸ ಮಾಡತಕ್ಕ ವಿದ್ಯೆಗಳೆಲ್ಲಾ ಅಲ್ಪಸ್ವಲ್ಪವಾದ ಬೆರೆಯು ಇದ್ದೇ ಇರುವುದು. ವಂಶಾವಳೀ ಶಾಸ್ತ್ರ (ಚರಿತ್ರಾ) ಭ್ಯಾಸದಲಿ ಒಂದು ವರ್ಷದ ವರೆಗೂ ಬುದ್ಧಿಯನ್ನು ವ್ಯಯಮಾಡಿದರೆ ಪುರಾತನ ಸಂಪ್ರದಾಯಗಳ ಮತ್ತು ಅಗಿನ ನೀತಿವರ್ಗಗಳ ಪರಿಜ್ಞಾನವು ಹೆಚ್ಚಾಗಿ ಉಂಟಾಗುವುದರಲ್ಲಿ ಸಂದೇಹವಿಲ್ಲ. ಇಂಗ್ಲೆಂಡ್ ದೇಶದಲ್ಲಿ ಊರಿಂದೂರಿಗಿರುವ ದೂರ ಪ್ರಭೇದವನ್ನು ಒಬ್ಬನು ತಿಳಿದಿದ್ದೇ ಆದರೆ ಅವನ ತಿಳುವಳಿಕೆಗೆ ಬಂದಿರತಕ್ಕ ಸಹಸ್ರಾಂಶಗಳಲ್ಲಿ ಒಂದೆರಡಾದರೂ ಅವನ ಜೀವಮಾನದ ದೇಶ ಸಂಚಾರ ನಿರ್ಣಯ ಕಾಲದಲ್ಲಿ ಸ್ವಲ್ಪ ಪ್ರಯೋಜನಕರವಾಗುವುದು. ದೇಶದ ಏಕಭಾಗಕ್ಕೆ ಸಂಬಂಧಿಸಿದ ಅಲ್ಪ ವೃತ್ತಾಂತವನ್ನೆಲ್ಲಾ ಸಂಗ್ರಹಿಸುವುದು ಲಾಭಕರ ಕಾರ್ಯವೆಲ್ಲದ್ದಾದರೂ, ಒಂದಾನೊಂದು ಸಮಯದಲ್ಲಿ ಪರಂಪರಾಪ್ರಾಪ್ತ ಉದಾಹರಣೆಗೆ ಉಪಯೋಗವಾದ ಸಂಗತಿಯನ್ನು ನಿಶ್ಚಯಿಸುವುದಕ್ಕೆ ಸಹಾಯಕರವಾಗುವುದು. ಆದರೆ ಈ ಉದಾಹರಣೆಗಳಲ್ಲಿ ಶ್ರಮಕ್ಕೆ ತಕ್ಕ ಮೌಲ್ಯ ಪ್ರಯೋಜನವಿಲ್ಲವೆಂಬುದನ್ನು ಎಲ್ಲರೂ ಒಪ್ಪುವರು. ಒಬ್ಬ ಬಾಲಕನು ಸಂಪೂ

ಹೆಚ್ಚಾಗಿರುವಂತೆ ತಿಳಿದುಬರುವುದು. ಇದರಿಂದಲೇ ೧೦೦ ಭಾಗ ವಾಯುವಿನಲ್ಲಿ ೨೧ ಭಾಗ ಆಕ್ಸಿಜನ್ ಇರುವುದೆಂದು ಗೊತ್ತಾಗುವುದು.

ವಾಯುವಿನಲ್ಲಿ ನೈಟ್ರೋಜನ್, ಆಕ್ಸಿಜನ್ ಮಾತ್ರವೇ ಅಲ್ಲದೆ, ಬೇರೆ ಪದಾರ್ಥಗಳಿರುವವೆಂದು ಹೇಳಿದೆವಷ್ಟೆ. ಈ ಪದಾರ್ಥಗಳು ವಾಯುವಿನಲ್ಲಿ ಕೆಲವುಕಡೆ ಹೆಚ್ಚಾಗಿಯೂ, ಕೆಲವುಕಡೆ ಕಡಮೆಯಾಗಿಯೂ ಇರುವುದುಂಟು. ಇದಕ್ಕೆ ಕ್ಲಿಪ್ತವಾದ ಪ್ರಮಾಣವು ಇರುವುದಿಲ್ಲ. ಆದರೆ ಈ ಪದಾರ್ಥಗಳಲ್ಲಿ ಕೆಲವು ಬಹಳ ಮುಖ್ಯವಾದುವುಗಳು. ಆಕ್ಸಿಜನ್ ಎಂಬುವುದು ಪ್ರಾಣವನ್ನೂ, ಜ್ವಾಲೆಯನ್ನು ಪೋಷಿಸತಕ್ಕದ್ದೆಂದು ನಾವು ಹೇಳಿದೆವಷ್ಟೆ. ಆಕ್ಸಿಜನ್ ಇಲ್ಲದೆ ಇರತಕ್ಕ ಸ್ಥಳದಲ್ಲಿ ದೀಪವು ಉರಿಯುವುದಿಲ್ಲ. ಪ್ರಾಣಿಗಳು ಬದುಕುವುದಿಲ್ಲ. ಮೇಲೆ ನಾವು ಹೇಳಿದ ಪರೀಕ್ಷೆಯಲ್ಲಿ ಆಕ್ಸಿಜನ್‌ನ್ನು ಫಾಸ್ಫರಸ್ ಎಂಬುವುದು ಆಕರ್ಷಿಸಿದ ತರುವಾಯ ಆ ಪಾತ್ರೆಗೆ ಒಂದು ದೀಪವನ್ನು ತೋರಿಸಿದರೆ ದೀಪವು ಆರಿಹೋಗುವುದು. ಒಂದು ಇಲಿ ಮೊದಲಾದ ಪ್ರಾಣಿಗಳಲ್ಲಿ ಯಾವದಾದರೊಂದು ಪ್ರಾಣಿಯನ್ನು ಬಿಟ್ಟರೆ ಆ ಪ್ರಾಣಿಯು ಕೂಡಲೇ ಸಾಯುವುದು. ಇದು ಆಕ್ಸಿಜನ್ನಿನ ಅಭಾವದಿಂದ ಉಂಟಾಗತಕ್ಕ ಕೆಲಸವಾಗಿರುವುದು. ವಾಯುವಿನಲ್ಲಿ ಕಾರ್ಬಾನಿಕ್ ಆಸಿಡ್ ಗ್ಯಾಸ್ ಎಂಬ ಒಂದು ಪದಾರ್ಥವು ಇರುವುದು. ಇದು ಕಾರ್ಬನ್ ಅಂದರೆ ಇಂಗಾಲ, ಮತ್ತು ಆಕ್ಸಿಜನ್ ಅಂದರೆ ಆಮ್ಲ, ಈ ಎರಡು ಪದಾರ್ಥಗಳು ಸೇರಿದ ಒಂದು ಪದಾರ್ಥವಾಗಿರುವುದು. ಇದು ವಿಷಮಯವಾದುದು. ಇದು ೨೫೦೦ ಭಾಗ ವಾಯುವಿನಲ್ಲಿ ಒಂದು ಭಾಗವು ಇರುವುದು. ಇದು ಈ ಪ್ರಮಾಣಕ್ಕಿಂತಲೂ ಹೆಚ್ಚಾದರೆ, ಪ್ರಾಣಿಗಳು ಬದುಕುವುದಿಲ್ಲ ಜ್ವಾಲೆಯು ಉಂಟಾಗುವುದೂ ಇಲ್ಲ.

ವಾಯುವಿನಲ್ಲಿ ಪರಮಾಣು ರೂಪವಾದ ದೂಳು ಸೇರಿರುವುದು. ಒಂದು ಕತ್ತಲೆಮನೆಗೆ ಒಂದು ಬಿಸಲುಕೋಲನ್ನು ಬಿಟ್ಟುಕೊಂಡರೆ ಅದರಲ್ಲಿ ಈ ದೂಳು ಸಂಚಾರ ಮಾಡುತ್ತಿರುವುದು ದೃಷ್ಟಿಪಥಕ್ಕೆ ಬೀಳುವುದು. ಈ ಪರಮಾಣುಗಳು ವಾಯುವಿನಲ್ಲಿ ಹಿಂದಕ್ಕೂ ಮುಂದಕ್ಕೂ ಸಂಚರಿಸುತ್ತಿರುವುದು. ವಿಶೇಷ ಬೆಳಕಿರತಕ್ಕ ಸ್ಥಳದಲ್ಲಿ ಇವುಗಳು ಕಾಣುವುದಿಲ್ಲ. ಕತ್ತಲೆಮನೆಯಲ್ಲಿ ಬೆಳಕನ್ನು ಬಿಟ್ಟುಕೊಂಡಾಗ ಮಾತ್ರ ಇವುಗಳು ಗೊತ್ತಾಗುವುವು. ಭೂತಕನ್ನಡಿಯನ್ನು ಹಾಕಿಕೊಂಡು ನೋಡಿದರೆ ಇವುಗಳೆಲ್ಲಾ ದೂಳಿನ ಪರಮಾಣುಗಳೆಂದು ಗೊತ್ತಾಗುವುವು. ಇದದೆಲ್ಲ

ವಾಯುವು ಕಣ್ಣಿಗೆ ಕಾಣುವುದಿಲ್ಲ. ಆದರೂ ಸ್ಪರ್ಶೇಂದ್ರಿಯಕ್ಕೆ ಗೊತ್ತಾಗುವುದು. ವಾಯುವಿಲ್ಲದ ಸ್ಥಳವೇ ಅಪೂರ್ವ. ಇದು ನಮ್ಮ ಪ್ರಪಂಚವನ್ನು ಆವರಿಸಿಕೊಂಡು ಇದೆ. ಹೀಗೆ ಆವರಿಸಿಕೊಂಡಿರತಕ್ಕ ವಾಯುವಿಗೆ ವಾಯುಮಂಡಲವೆಂದು ಹೆಸರು. ಮೇಘಗಳು, ಮಳೆ, ಹಿಮ, ಆಲಿಕಲ್ಲುಗಳು, ಗುಡುಗು, ಮಿಂಚು, ಸಿಡಿಲು ಮೊದಲಾದ ವುಗಳಿಗೆಲ್ಲಾ ಈ ವಾಯುಮಂಡಲವೇ ವಾಸ್ತವಸ್ಥಾನ. ಸಸ್ಯಾದಿಗಳಿಗೂ ಪ್ರಾಣಿಗಳಿಗೂ ವಾಯುವೇ ಪೋಷಕವಾದುದು. ವಾಯುವೆಂದರೇನು? ಈ ಪ್ರಪಂಚದಲ್ಲಿ ನಮ್ಮವರಷ್ಟಂಗವಾತ್ಮಕವಾದ ಪದಾರ್ಥಗಳಿಗೆ ಇದರಿಂದ ಪ್ರಯೋಜನವೇನು?

ಪೂರ್ವಕಾಲದಲ್ಲಿ ಭೂತವಸ್ತುಗಳಲ್ಲಿ ವಾಯುವೊಂದೆಂದು ತಿಳಿಯಲ್ಪಟ್ಟಿತ್ತು. ವಸ್ತು ಶಾಸ್ತ್ರಜ್ಞರು ಪರೀಕ್ಷಿಸಿ ಇದು ಭೂತವಸ್ತುವೆಲ್ಲವೆಂದು ಗೊತ್ತು ಮಾಡಿರುವರು. ವಾಯುವು ವಿಶ್ರವಸ್ತುವು. ಇದನ್ನು ಬೇಕಾದವರು ಪರೀಕ್ಷಿಸಿ ಗೊತ್ತು ಮಾಡಬಹುದು. ವಾಯುವಿನಲ್ಲಿ ನೈಟ್ರೋಜನ್, ಮತ್ತು ಆಕ್ಸಿಜನ್ ಎಂಬ ಅನಿಲಾವಸ್ಥೆಯಲ್ಲಿರತಕ್ಕ ಎರಡು ಪದಾರ್ಥಗಳುಂಟು. ಆಕ್ಸಿಜನ್ ಎಂಬುವುದು ಪ್ರಾಣಪೋಷಣೆಗೂ ದೀಪಕ್ಕು ಉರಿಯನ್ನು ಪೋಷಿಸುವುದಕ್ಕೂ ಸಾಧಕನಾದುದು. ಈ ಎರಡು ವಾಯುವಿನಲ್ಲಿ ಮುಖ್ಯವಾದ ಅಂಶಗಳು. ಇವಲ್ಲದೆ ಕಾರ್ಬಾನಿಕ್ ಆಸಿಡ್ ಗ್ಯಾಸ್ ನೀರಿನ ಆವಿ, ಧೂಳು, ಮೊದಲಾದ ಇತರ ಪದಾರ್ಥಗಳು ವಾಯುವಿನಲ್ಲಿ ವಿಶ್ರವಾಗಿರುವುದು. ಒಂದು ಗಾಜಿನ ಪಾತ್ರೆಯಲ್ಲಿ ಫಾಸ್ಫರೆಸ್ ಎಂಬ ಭೂತವಸ್ತುವಾದ ರಂಜಕದ್ರವ್ಯವನ್ನು ಉರಿಯುವಹಾಗೆ ಮಾಡಿದರೆ ನೈಟ್ರೋಜನ್ ಮತ್ತು ಆಕ್ಸಿಜನ್ ಎಂಬ ವಾಯುವಿನ ಅಂಶಗಳನ್ನು ಪ್ರತ್ಯೇಕಿಸುವುದು ಸುಲಭ. ಆ ಗಾಜಿನ ಪಾತ್ರೆಯು ವಾಯುವಿನಲ್ಲಿರುವ ಆಕ್ಸಿಜನ್ ಎಂಬುವುದನ್ನು ಅದರಲ್ಲಿ ಫಾಸ್ಫರೆಸ್ ಆಕರ್ಷಿಸುವುದು. ಹೀಗೆ ಆಕರ್ಷಿಸಿ ಅದೇ ಫಾಸ್ಫರೆಸ್ ಮತ್ತು ಆಕ್ಸಿಜನ್ ಎರಡೂ ಸೇರಿ ಒಂದು ವಿಶ್ರವಸ್ತುವಾಗುವುದು. ನೈಟ್ರೋಜನ್ ಎಂಬ ಪದಾರ್ಥವು ಆ ಪಾತ್ರೆಯಲ್ಲಿರುವ ವಾಯುವಿನಲ್ಲಿಯೇ ಇರುವುದು. ಅದರ ಪ್ರಮಾಣವು ೧೦೦ ರಲ್ಲಿ ೭೯ ಭಾಗಗಳು ಇರುವುವು. ಉಳಿದ ಭಾಗವು ಆಕ್ಸಿಜನ್ ಎಂಬುವುದು. ಈ ಪಾತ್ರೆಯಲ್ಲಿ ಆಕ್ಸಿಜನ್ ಅಂಶವನ್ನು ಆಕರ್ಷಿಸುವುದಕ್ಕೆ ಮುಂಚೆ ಫಾಸ್ಫರಸ್‌ನ ಎಷ್ಟು ಪ್ರಮಾಣವಿತ್ತೋ ಅದನ್ನು ಗೊತ್ತು ಮಾಡಿ ಅನಂತರ ಫಾಸ್ಫರಸ್, ಆಕ್ಸಿಜನ್ ಎರಡೂ ಸೇರಿ ಒಂದು ವಿಶ್ರವಸ್ತುವಾದ ಮೇಲೆ ಅದರ ತೂಕವೆಷ್ಟಿರುವುದೋ ಅದನ್ನು ಪರೀಕ್ಷಿಸಿದರೆ ೧೦೦ ಕ್ಕೆ ೭೯ ಭಾಗ

ಅರ್ವಾಚೀನ ಕರ್ಣಾಟಕ ಸಾಹಿತ್ಯದ ಬೆಳವಣಿಗೆ.

(೨೪ ನೆಯ ಪುಟದಿಂದ ಮುಂದೆ)

ಮೆ॥ ರೈಸ್ ಸಾಹೇಬರು ಕರ್ಣಾಟಕ ಗ್ರಂಥಗಳನ್ನು ಪ್ರಯಾಸಪೂರ್ವಕವಾಗಿ ಶೋಧಿಸಿ ಅಯಾ ಕವಿಗಳ ಕಾಲಗಳನ್ನು ನಿರ್ಣಯಿಸಿ ಬರೆದ ಸಂಗತಿಗಳು ಬಹಳ ಅಮೂಲ್ಯವಾಗಿವೆ. ಇದರ ಮೊದಲು ಬೇರೆ ಯಾರೂ ಈ ವಿಷಯದಲ್ಲಿ ಬರೆದಿರದಿರುವುದರಿಂದ ಇವರ ಪರಿಶೋಧನೆಯಲ್ಲಿ ಅಲ್ಲಲ್ಲಿ ಕೆಲವು ದೋಷಗಳು ಕಂಡು ಬರುವುದು ಸಾಧ್ಯವಾದರೂ ಅವು ಅಷ್ಟೊಂದು ಮಹತ್ವದುವುಗಳಲ್ಲ. ಭಾಷಾಶೈಲಿಯನ್ನು ಪರೀಕ್ಷಿಸಿದರೂ ಉದಯೋಗಿಸಿದ ವೃತ್ತ ಪದ್ಯಗಳ ರೀತಿಯನ್ನು ನೋಡಿದರೂ ಗ್ರಂಥಗಳಲ್ಲಿ ವರ್ಣಿತವಾದ ವಿಷಯಗಳನ್ನೆಣಿಸಿ ನೋಡಿದರೂ ಮೆ॥ ರೈಸ್ ಸಾಹೇಬರು ಸಾಹಿತ್ಯ ಚರಿತ್ರೆಯನ್ನು ಜೈನ ಮತ್ತು ಜೈನೇತರವೆಂದು ವಿಂಗಡಿಸಿದುದೇ ಸರ್ವಸಮ್ಮತವಾದ ವಿಭಾಗಗಳೆಂದು ಹೇಳುವುದಕ್ಕೆ ಅಕ್ಷೇಪವಿರಲಾರದು. ಭಾಷಾ ಚರಿತ್ರೆಯಲ್ಲಿ ಲಿಂಗಾಯುತ ಮತ್ತು ಬ್ರಾಹ್ಮಣ ಭಾಷೆಗಳಿಗೆ ಭೇದವಿಲ್ಲವೆನ್ನಬಹುದಾದರೂ ಸಾಹಿತ್ಯದ ಚರಿತ್ರೆಯಲ್ಲಿ ಒಂದಿಷ್ಟು ಹೆಚ್ಚು ವ್ಯತ್ಯಾಸವಿರುವಂತೆ ತೋರುತ್ತಿದೆ ಆದರೂ ಇಲ್ಲಿಕೂಡ ಜೈನ ಮತ್ತು ಲಿಂಗಾಯುತ ಗ್ರಂಥಗಳಿಗಿರುವಷ್ಟು ಹೆಚ್ಚು ಕಡಮೆ ಲಿಂಗಾಯುತ ಮತ್ತು ಬ್ರಾಹ್ಮಣಗ್ರಂಥಗಳಿಗೆ ತೋರದುದರಿಂದ, ಬ್ರಾಹ್ಮಣ ಗ್ರಂಥಗಳ ಕಾಲವನ್ನು ಉಪಭಾಗವಾಗಿ ಪ್ರತ್ಯೇಕಿಸಿದುದೇ ಸರಿಯೆನ್ನಬೇಕು. ಮೆ॥ ರೈಸ್ ಸಾಹೇಬರು ಸಾಹಿತ್ಯದ ಚರಿತ್ರೆಯನ್ನು ಬರೆಯುತ್ತಿದ್ದ ಕಾಲದಲ್ಲಿ ಕರ್ಣಾಟಕ ಸಾಹಿತ್ಯದ ಉತ್ತರಾಭಿವೃದ್ಧಿಯು ಸುಚಿಹ್ನಗಳು ತೋರುತ್ತಿದ್ದುವು. ಆದರೂ ಅವರು ಅದರ ಬೆಳವಣಿಗೆಯು ಯಾವ ರೂಪದಿಂದ ಅಥವಾ ಯಾವ ಮಾರ್ಗದಿಂದ ಹೋಗಬಹುದೆಂಬುದನ್ನು ಅರಿತವರಾಗಿರಲಿಲ್ಲ. ಇದಲ್ಲದೆ ಈ ದೇಶದ ಅರ್ವಾಚೀನ ಸಾಹಿತ್ಯವನ್ನು ಇಷ್ಟು ಕ್ಷಿಪ್ರದಲ್ಲಿಯೇ ಪ್ರತ್ಯೇಕಭಾಗವಾಗಿ ವಿಂಗಡಿಸತಕ್ಕ ಯೋಗ್ಯತೆಯು ಅದಕ್ಕೆ ಉಂಟಾಗಬಹುದೆಂದೂ ಅವರಿಗೆ ಗೊತ್ತಾಗುವುದಕ್ಕೆ ಅಸ್ಪದವಿರಲಿಲ್ಲ. ಆದರೆ ಹೀಗೆ ಆಧುನಿಕಸಾಹಿತ್ಯವನ್ನು ಬೇರೆಯಾಗಿ ವಿಂಗಡಿಸಿ ಅದಕ್ಕೆ ಪ್ರತ್ಯೇಕವಾದ ಅಭಿಧಾನವನ್ನು ಕೊಡುವುದು ಅನುಕೂಲವಾದುದೆಂದೂ ಅನೇಕ ಕಾರಣಗಳಿಂದ ಅತ್ಯಾವಶ್ಯಕವೆಂದೂ

ವಾಯುವಿನಲ್ಲಿ ಸಸಿಗಳ ಮತ್ತು ಪ್ರಾಣಿಗಳ ಸೂಕ್ಷ್ಮವಾದ ಬೀಜಗಳು ದೂಳಿನಂತೆಯೇ ಸೇರಿಕೊಂಡಿರುವುವು. ಇವುಗಳು ನೆಲದಲ್ಲಿ ಸೇರಿದಾಗ ಸಸ್ಯಾದಿಗಳಾಗಿಯೂ, ಇತರ ಪ್ರಾಣಿಗಳಾಗಿಯೂ ಪರಿಣಮಿಸುವುವು. ಅನೇಕ ಸಾಂಕ್ರಾಮಿಕ ರೋಗಗಳ ಬೀಜಗಳೂ ಕೂಡ ಬಹಳ ಸೂಕ್ಷ್ಮವಾದ ರೂಪದಲ್ಲಿ ವಾಯುವಿನಲ್ಲಿರುವುದುಂಟು. ಅದನ್ನು ಉಸಿರಿನಿಂದ ನಾವು ದೇಹಕ್ಕೆ ತೆಗೆದುಕೊಂಡಾಗ ಅದು ನಮ್ಮ ಶ್ವಾಸ ಕೋಶಗಳ ಮಾರ್ಗವಾಗಿ ರಕ್ತವನ್ನು ಹೀರಿ ಆ ಸಾಂಕ್ರಾಮಿಕ ರೋಗಕ್ಕೆ ನಮ್ಮನ್ನು ಗುರಿ ಮಾಡುವುದುಂಟು. ರೋಗಗಳಿಗೆ ಕಾರಣಭೂತವಾದ ಈ ಪರಮಾಣುಗಳನ್ನು ನಿವಾರಿಸುವುದಕ್ಕೆ ನಮ್ಮಿಂದಾಗುವುದಿಲ್ಲ. ಆದರೆ ಮಳೆ ಮಂಜು ಈ ಪರಮಾಣುಗಳೆಲ್ಲಾ ನೆಲಕ್ಕೆ ಸೇರಿಸಲ್ಪಡುತ್ತವೆ. ಇದರಿಂದಲೇ ಚೆನ್ನಾಗಿ ಮಳೆಯಾದಾಗ ವಾಯುವು ನಿರ್ಮಲವಾಗುವುದು ವಾಯುವಿನಲ್ಲಿದ್ದ ಸೂಕ್ಷ್ಮವಾದ ಅನೇಕ ರೋಗಗಳಿಗೆ ಕಾರಣಭೂತಗಳಾದ ವಿಷವಸ್ತುವಾದ ಪದಾರ್ಥಗಳೆಲ್ಲಾ ನೆಲಕ್ಕೆ ಬಿದ್ದು ಗೊಬ್ಬರವಾಗಿ ಪರಿಣಮಿಸಿವೆ. ಈ ಪದಾರ್ಥಗಳನ್ನು ಹಿಡಿದು ಪರೀಕ್ಷಿಸಬಹುದು. ಮಳೆಯು ಹುಟ್ಟುವ ಕಾಲದಲ್ಲಿ ಬಂದು ಪಾತ್ರೆಯನ್ನು ವೈದಾನದಲ್ಲಿಟ್ಟರೆ ವಾಯುಮಂಡಲದಲ್ಲಿ ಸೇರಿಕೊಂಡಿರತಕ್ಕ ಎಲ್ಲಾ ಪದಾರ್ಥಗಳನ್ನೂ ತೆಗೆದು ಮಳೆಹನಿಗಳು ಆ ಪಾತ್ರೆಗೆ ಬೀಳುವುವು. ಅನಂತರದಲ್ಲಿ ಆ ಪಾತ್ರೆಯನ್ನು ಬೆಂಕಿಯಮೇಲಿಟ್ಟು ನೀರನ್ನು ಆವಿಯು ರೂಪವಾಗಿ ಹೊರಡಿಸಬಿಟ್ಟರೆ ಬಹಳ ಸೂಕ್ಷ್ಮವಾದ ಸ್ಫಟಿಕಾಕೃತಿಯುಳ್ಳ ಉಪ್ಪಿನಂತೆ ಇರುವ ಪದಾರ್ಥಗಳು ನಿಲ್ಲುವುವು. ಇದನ್ನು ಭೂತಕನ್ನಡಿಯಿಂದ ನೋಡಿದರೆ ಸ್ಪಷ್ಟವಾಗಿ ಗೊತ್ತಾಗುವುವು ಈ ಪದಾರ್ಥಗಳೆಲ್ಲಾ ಮನುಷ್ಯನಿಗೆ ಬಾಧಕವಾಗಿದ್ದಾಗ್ಯೂ ಸಸ್ಯಾದಿಗಳಿಗೆ ಬಹಳ ಉಪಯೋಗವಾದವುಗಳು. ಇದರಿಂದಲೇ ಎಷ್ಟು ನೀರು ಹಾಯಿಸಲ್ಪಟ್ಟಾಗ್ಯೂ ಸಸ್ಯಾದಿಗಳು ಮಳೆಯನ್ನು ಅಪೇಕ್ಷಿಸುವುವು. ನಾವು ಹಾಯಿಸಕ್ಕೆ ನೀರಿನಿಂದ ಆಗುವ ಪ್ರಯೋಜನಕ್ಕಿಂತಲೂ ಮಳೆಯ ನೀರಿನಿಂದ ಹೆಚ್ಚು ಪ್ರಯೋಜನವನ್ನುಂಟುಮಾಡುವುದಕ್ಕೆ ವಾಯುಮಂಡಲದಲ್ಲಿರತಕ್ಕ ಸೂಕ್ಷ್ಮವಾದ ಗೊಬ್ಬರಕ್ಕೆ ಅನುಕೂಲವಾದ ಪದಾರ್ಥಗಳು ಸಸ್ಯಾದಿಗಳಿಗೆ ಸಿಕ್ಕುವದೇ ಮುಖ್ಯ ಕಾರಣ

ವಾನದ ಅರ್ಧಕಾಲದವರೆಗೆ (ಕ್ರಿ. ಶ. ೧೩೦೦ ರಿಂದ ೧೮೫೦ ವರೆಗೆ) ಮೆ॥ ರೈಸ್ ಸಾಹೇಬರು "ಹೊಸಗನ್ನಡ" ವೆಂದೂ ನಾವು ನಡುಗನ್ನಡವೆಂದೂ ಹೆಸರು ಕೊಟ್ಟ ಭಾಷೆಯಲ್ಲಿಯೇ ಸಾವಮಾನ್ಯವಾಗಿ ಗ್ರಂಥಗಳನ್ನು ಬರೆಯುತ್ತಿದ್ದರು. ಇದರಲ್ಲಿಯೂ ೧೬ನೆಯ ಶತವಮಾನದ ಪರ್ಯಂತ ನಡುಗನ್ನಡದ ಪೂರ್ವಭಾಗವೆಂದೂ ಆ ಮೇಲೆ ೧೮೫೦ ರವರೆಗೆ ಉತ್ತರಾರ್ಧವೆಂದೂ ಎರಡು ಅಲ್ಪಸ್ವಲ್ಪ ಭೇದಗಳನ್ನುಳ್ಳ ಭಾಷೆಗಳನ್ನು ಚೆನ್ನಾಗಿ ಶೋಧಿಸಿದರೆ ಕಂಡು ಹಿಡಿಯಬಹುದು. ನಾವು ಹೊಸಗನ್ನಡವೆಂದು ಕರೆಯುವ, ಎಂದರೆ ಪ್ರಕೃತದಲ್ಲಿ ನಾವು ಮೊತನಾಡುವ ಮತ್ತು ವಚನಗ್ರಂಥಗಳನ್ನು ಬರೆಯುವ ಭಾಷೆಗೂ ಮೇಲೆ ಹೇಳಿದ ನಡುಗನ್ನಡ ಭಾಷೆಗೂ ಅನೇಕಾನೇಕ * ಭೇದಗಳಿವೆ. ಈ ಕಡೆಗೆ ಮೆ॥ ರೈಸ್ ಸಾಹೇಬರ ಲಕ್ಷ್ಯ ಹೋದಂತೆ ಕಾಣಲಿಲ್ಲ. ಅವರು ಹಳೆಗನ್ನಡದ ತರುವಾಯ ಅಂದಿನಿಂದ ಇಂದಿನವರೆಗೆ ಪ್ರಚಾರದಲ್ಲಿರುವ ಕನ್ನಡವನ್ನೆಲ್ಲಾ 'ಹೊಸಗನ್ನಡ' ವೆಂತಲೇ ಕರೆದಿರುವರು. ಮೆ॥ ರೈಸ್ ಸಾಹೇಬರು ವಿಶೇಷವಾದ ಆಧಾರಗಳಿಲ್ಲದೆ ಉಂಟುಮಾಡಿದ 'ಪೂರ್ವದ ಹಳೆಗನ್ನಡ' ವನ್ನು ಮಾತ್ರ ನಮ್ಮ ಲೆಕ್ಕದಿಂದ ಬಿಟ್ಟು ಯೋಚಿಸಿದರೆ ಕರ್ಣಾಟಕ ಭಾಷೆಯ ಮತ್ತು ಸಾಹಿತ್ಯದ ಚರಿತ್ರೆಗಳಿಗೆ ಒಂದಕ್ಕೊಂದು ಪರಸ್ಪರ ಸಂಬಂಧವಿದ್ದಂತೆಯೂ, ಭಾಷೆಯ ಚರಿತ್ರೆಯೂ ಸಾಹಿತ್ಯದ ಚರಿತ್ರೆಯೂ ಎಡೆಬಿಡದೆ ಒಂದೇರೀತಿಯಾಗಿ ಮುಂವರಿಸಿದಂತೆಯೂ ತೋರುವುದು. ಅದನ್ನು ಈ ಕೆಳಗಣ ಪಟ್ಟಿಯಿಂದ ನೋಡಿ ತಿಳಿಯಬಹುದು.

(A) ‡ ೬ ನೆಯ ಶತವಾನದಿಂದ ೧೪

೫ನೆಯ ಶತವಾನದ ಆದಿಯವರೆಗೆ	ಜೈನರಕಾಲ.	ಹಳೆಗನ್ನಡ.

* ಈ ವಿಷಯವನ್ನು ಕುರಿತು ಮೆ॥ ರಘುನಾಥರಾಯರು ಬರೆದ ವ್ಯಾಕರಣೋಪನ್ಯಾಸ ಮಂಜರಿಯ ೭ ನೆಯ ಭಾಗದಲ್ಲಿ ಚೆನ್ನಾಗಿ ಬರೆಯಲ್ಪಟ್ಟಿರುವುದರಿಂದ ವಾಚಕರು ಅದನ್ನು ನೋಡಬಹುದು.

‡ ಕರ್ಣಾಟಕ ಗ್ರಂಥಗಳು ಈ ಕಾಲಕ್ಕಿಂತಲೂ ಮೊದಲೇ ಹುಟ್ಟಿರಬಹುದಾದರೂ, ಅವುಗಳ ವಿಷಯವಾಗಿ ಇನ್ನು ಚೆನ್ನಾಗಿ ತಿಳಿದಿಲ್ಲವೆಂಬುದರಿಂದ ೬ ನೆಯ ಶತವಾನವೆಂದು ಬರೆಯುವುದೇಕಾಯಿತು.

ನಾವು ತಿಳಿಯುವೆವು. ''ಗದ್ಯಪದ್ಯ ವಾಙ್ಮಯವಾದ ಚಂಪು ಗ್ರಂಥಗಳೇ ಜೈನ ಕಾಲದಲ್ಲಿ ಪ್ರಸಿದ್ಧವಾಗಿದ್ದುವು. ಲಿಂಗಾಯತರು ರಗಳೆ ಷಟ್ಪದಿಗಳನ್ನು ಪ್ರಚಾರದಲ್ಲಿ ತಂದರು'' ಎಂಬುದಾಗಿ ಮೆ॥ ರೈಸ್ ಸಾಹೇಬರು ಬರೆದಿರುವರು. ಇದು ಅಕ್ಷರಶಃ ನಿಜವಲ್ಲವಾದರೂ ಒಟ್ಟನಮೇಲೆ ಯೋಚಿಸಿದರೆ ಒಪ್ಪತಕ್ಕ ಮಾತಾಗಿದೆ. ಲಿಂಗಾಯತರು ಪ್ರಚಾರಕ್ಕೆ ತಂದ ರಗಳೆ ಷಟ್ಪದಿಗಳನ್ನೇ ಇಟ್ಟುಕೊಂಡು ಬ್ರಾಹ್ಮಣರೂ ಕಾವ್ಯಗಳನ್ನು ಬರೆದರಲ್ಲದೆ ಅವರು ನೂತನವಾದ ಯಾವ ಛಂದಸ್ಸನ್ನೂ ರಚಿಸಲಿಲ್ಲ. ಈ ಕಾರಣದಿಂದಲೇ ಲಿಂಗಾಯತ ಮತ್ತು ಬ್ರಾಹ್ಮಣಗ್ರಂಥಗಳೊಳಗೆ ಅಷ್ಟೊಂದು ಹೆಚ್ಚುಕಡಮೆ ಇಲ್ಲವೆಂದೂ, ಇದ್ದರೂ ಅದು ಅಷ್ಟೊಂದು ವಿಶೇಷವಲ್ಲವೆಂದೂ, ಮೇಲೆ ಹೇಳಿದೆವು. ಅರ್ವಾಚೀನ ಕಾಲದಲ್ಲಿ ಚಂಪು ಕಾವ್ಯಗಳಾಗಲೀ ಇತರ ವರ್ಣಕ ಪ್ರಬಂಧಗಳಾಗಲೀ ವಿಶೇಷವಾಗಿ ಹುಟ್ಟದಂತೆ ತೋರಲಿಲ್ಲ; ಹುಟ್ಟಿದ ಕೆಲವು ಹಿಂದಿನ ಕಾಲಗಳಲ್ಲಿ ಬರೆಯುಲ್ಪಟ್ಟ ಗ್ರಂಥಗಳಷ್ಟು ಪ್ರಸಿದ್ಧವಾಗಿಯೂ ಇಲ್ಲ. ಈ ಕಾಲವು ಪ್ರಾರಂಭವಾಗಿ ಬರೀ ೨೦—೩೫ ವರ್ಷಗಳು ಮಾತ್ರ ಕಳೆದು ಹೋಗಿರುವುದರಿಂದ ಅದರ ಲಕ್ಷಣಗಳನ್ನು ಕುರಿತು ಅಷ್ಟೊಂದು ಧೈರ್ಯದಿಂದ ಇಲ್ಲಿ ಬರೆಯುವುದು ಸಾಧ್ಯವಿಲ್ಲವಾದರೂ ಈ ಭಾಗವು ರೂಪಕಗಳಿಂದಲೂ ಗದ್ಯಗ್ರಂಥಗಳಿಂದಲೂ ವಿಶೇಷಿಸಲ್ಪಡತಕ್ಕುದಾಗಿದೆ ಎಂಬ ಈಗಿನ ಕಾಲಸ್ಥಿತಿಯನ್ನು ನೋಡಿ ಹೇಳಬಹುದು. ಈ ರೂಪಕಗಳೂ ಗದ್ಯಪ್ರಬಂಧಗಳೂ ಈವೊದಲು ಇಷ್ಟು ಜೆನ್ನಾಗಿ ಪ್ರಚಾರಕ್ಕೆ ಬಂದಿರಲಿಲ್ಲವೆಂದೂ, ಈ ಮೊದಲು ಇಂತಹ ಗ್ರಂಥಗಳನ್ನು ಯಾರೊಬ್ಬರೂ ಬರೆದಿರಲಿಲ್ಲವೆಂದಾ, ಈ ಅರ್ವಾಚೀನಕಾಲದಲ್ಲಿಯೇ ಇವು ನೂತನವಾಗಿ ಹುಟ್ಟಿದುವೆಂದೂ ಕರ್ಣಾಟಕ ಸಾಹಿತ್ಯದ ಚರಿತ್ರೆಯನ್ನು ಓದಿದ ಎಲ್ಲರೂ ಬಲ್ಲರು. ಆದುದರಿಂದಲೇ ಈ ಕಾಲವನ್ನು ಇದರ ಹಿಂದಣ ಕಾಲಗಳಿಂದ ಪ್ರತ್ಯೇಕಿಸುವುದು ಅವಶ್ಯವಾಯಿತು.

ಈಗ ಕರ್ಣಾಟಕ ಭಾಷಾ ಚರಿತ್ರೆಯನ್ನು ನೋಡ ಹೋದರೂ ಇದೇ ಚಮತ್ಕಾರವು ನಮ್ಮ ಕಣ್ಣಿಗೆ ಬೀಳುತ್ತಿದೆ. ಮೆ॥ ರೈಸ್ ಸಾಹೇಬರು ಹೇಳಿದ 'ಪೂರ್ವದ ಹಳೆಗನ್ನಡ'ವನ್ನು ಪ್ರಕೃತಕ್ಕೆ ಒತ್ತಟ್ಟಿಗಿಟ್ಟು, ಆ ಮುಂದಿನ ಚರಿತ್ರೆಯನ್ನು ನೋಡಿದರೆ ಹಳೆಗನ್ನಡವು ೧೮ ನೆಯ ಶತವರ್ಷದ ಆದಿ ಭಾಗದವರೆಗೆ ಗ್ರಾಂಥಿಕ ಭಾಷೆಯಾಗಿ ಪ್ರಚಾರದಲ್ಲಿತ್ತೆಂದು ತೋರುವುದು. ಆ ತರುವಾಯ ಲಿಂಗಾಯತರ ಮತ್ತು ಬ್ರಾಹ್ಮಣರ ಕಾಲದಲ್ಲಿ ಎಂದರೆ ೧೮ ನೆಯ ಶತವರ್ಷದ ಮೊದಲ್ಗೊಂಡು ೧೯ ನೆಯ ಶತ

ಕೈಗಾರಿಕೆಯ ವಿದ್ಯಾಭ್ಯಾಸ

ನಮ್ಮಗಳ ವರ್ಣಾಶ್ರಮಕ್ಕೆ ನಾಲ್ಕು ವಿಧವಾದ ವ್ಯಾಪಾರಗಳು ಪೂರ್ವದಿಂದಲೇ ನಿರ್ಮಿತವಾಗಿರುತ್ತವೆ. ಇದರಿಂದ ಪರಸ್ಪರ ಸಹಾಯವೂ ಇತ್ತು. ಮತ್ತ ಸಂಬಂಧವಾದ ವೃತ್ತಾಂತಗಳನ್ನು ಜನಗಳಿಗೆ ತಿಳಿಸುವುದಕ್ಕೆ ಒಂದು ವರ್ಣವೂ, ಜನಗಳಿಗೆ ಶತ್ರುಭೀತಿಯನ್ನು ಹೋಗಲಾಡಿಸಿ ಅವರಿಗೆ ಸುಖವನ್ನುಂಟುಮಾಡುವುದಕ್ಕೆ ಒಂದು ವರ್ಣವೂ, ನಮ್ಮ ಪೋಷಣೆಗೆ ಬೇಕಾದ ಸಾಮಾನುಗಳನ್ನು ತಮ್ಮ ಕೈಯಿಂದಲೇ ಆಗಲಿ, ಇತರರ ಕೈಯಿಂದಲೇ ಆಗಲಿ ಒದಗಿಸಿಕೊಡುವುದಕ್ಕೆ ಒಂದು ವರ್ಣವೂ, ಸೇವಾವೃತ್ತಿ ಮುಂತಾದುದನ್ನು ಮಾಡುವುದಕ್ಕೆ ಮತ್ತೊಂದು ವರ್ಣವೂ ಸಹಾ ಏರ್ಪಡಿಸಲ್ಪಟ್ಟಿದ್ದವು ಕಾಲಭೇದದಿಂದ ವರ್ಣಾಶ್ರಮವೂ ನಿಂತಿತು. ಅವರವರ ವೃತ್ತಿಯೂ ಬದಲಾಯಿಸಿತು. ಆದುದರಿಂದ ಈಗಿನ ಕಾಲಕ್ಕೆ ಅನುಗುಣವಾಗಿರುವ ಜೀವನವು ಯಾವುದೋ, ಅದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕಾಗಿರುತ್ತದೆ. ಯೂರೋಪು, ಅಮೆರಿಕ, ಜಪಾನ್ ಮುಂತಾದ ಪ್ರದೇಶಗಳಲ್ಲಿ ಕೈಗಾರಿಕೆಯ ವಿದ್ಯಾಭ್ಯಾಸಕ್ಕೆ ಬಹಳ ಪ್ರಾಶಸ್ತ್ಯವನ್ನೂ ಕೊಟ್ಟು, ಅದಕ್ಕೆ ಸಂಬಂಧವಾದ ಅನೇಕ ಶಾಲೆಗಳನ್ನೂ, ಕಾರ್ಖಾನೆಗಳನ್ನೂ ಇಟ್ಟಿರುವರು. ಇಲ್ಲಿ ಅನೇಕ ಬಾಲಕರು ಬೇರೆಬೇರೆ ಕಸಬುಗಳನ್ನು ಕಲಿತು, ಅವುಗಳಿಗೆ ಬೇಕಾದ ಅನೇಕ ಯಂತ್ರಗಳ ಉಪಯೋಗವನ್ನೂ ಕಲಿಯುವರು. ಆದರೆ ನಮ್ಮ ದೇಶದಲ್ಲಿ ಪೂರ್ವಿಕರು ಅತ್ಯಾಶ್ಚರ್ಯಕರವಾಗಿ ಮಾಡಿರುವ ಕೆಲಸಗಳನ್ನು ನಾವು ಈಗಲೂ ದೇವಾಲಯಗಳಲ್ಲಿಯೂ, ಅರಮನೆಗಳಲ್ಲಿಯೂ ಮತ್ತು ಇತರ ಪ್ರದೇಶಗಳಲ್ಲಿಯೂ ನೋಡಿ ತಿಳಿಯಬಹುದು. ಈಗ ನಮ್ಮಲ್ಲಿ ಈ ಪ್ರಾಶಸ್ತ್ಯವು ಏಕೆ ಕಾಣಿಸುವುದಿಲ್ಲ ?

ಏಕೆಂದರೆ:—ಈ ದೇಶದಲ್ಲಿ ನಮ್ಮ ಪೂರ್ವಿಕರು ತಮ್ಮಗಳ ಕೈಗಳಿಂದಲೇ, ಬಹಳ ಯುಕ್ತಿಯಿಂದ ಅನೇಕ ಆಶ್ಚರ್ಯವಾದ ಕೆಲಸಗಳನ್ನು ನಿಧಾನವಾಗಿ ಬಹಳ ಆಲೋಚನೆಯಿಂದ ಮಾಡುತ್ತಿದ್ದರು. ಇಂಥಾ ಆಶ್ಚರ್ಯಕರವಾದ ಕೆಲಸಕ್ಕೆ ತಕ್ಕ ಹಾಗೆ ರಾಜಾಂಗಗಳಲ್ಲಿ ಇವರಿಗೆ ಅನೇಕ ಬಹುಮಾನವೂ, ಪ್ರೋತ್ಸಾಹವೂ ದೊರೆಯುತಲಿತ್ತು. ಆದರೆ ಸ್ವಲ್ಪ ಕಾಲದಿಂದೀಚಿಗೆ ಇವರುಗಳಿಗೆಲ್ಲಾ ಯಂತ್ರವೆಂಬ ಮೃತ್ಯುವು ಪ್ರಾಪ್ತವಾಗಿ, ಇವರು ಅತಿ ಚಮತ್ಕಾರದಿಂದಲೂ, ಆಲೋಚನೆಯಿಂ

(B) ೧೪೦೦ರಿಂದ ೧೯ನೆಯ ಶತವಾನದ ಅರ್ಧದವರೆಗೆ — ಲಿಂಗಾಯತರು ಬ್ರಾಹ್ಮಣರು — ಗಳಕಾಲ — ನಡುಗನ್ನಡ — ಪೂರ್ವಾರ್ಧ / ಉತ್ತರಾರ್ಧ

(C) ೧೯ನೆಯ ಶತವಾನದ ಉತ್ತರಾರ್ಧ ವೊದಲೊಂಡು ಇವತ್ತಿನವರೆಗೆ. — ಅರ್ವಾಚೀನಕಾಲ — ಹೊಸಗನ್ನಡ.

ಇಷ್ಟೇ ಅಲ್ಲದೆ ಒಂದು ಭಾಷೆಯಲ್ಲಿ ಫಕ್ಕನೆ ಬದಲಾವಣೆಗಳುಂಟಾಗಬೇಕಾದರೆ ಅದಕ್ಕೆ ಅನೇಕ ಕಾರಣಗಳಿರಬೇಕು. ಸ್ವಾಭಾವಿಕವಾಗಿ ಗ್ರಂಥಗಳ ಅಥವಾ ವಾತ ನಾಡುವ ಭಾಷೆ ಮೆಲ್ಲಮೆಲ್ಲನೆ ಬದಲಾಗುವುದೊಂದು ವಿಶೇಷವಲ್ಲ. ಆದರೆ ಕರ್ಣಾ ಟಕ ಭಾಷೆಯು ಮತ್ತು ಸಾಹಿತ್ಯದ ಚರಿತ್ರೆಯನ್ನು ನೋಡಿದರೆ ಈ ಬದಲಾವಣೆಗಳು ಅಕಸ್ಮಿಕವಾಗಿ ಉಂಟಾದಂತೆ ತೋರುತ್ತಿದೆ. ಹಾಗಾದರೆ 'ಪೂರ್ವದ ಹಳೆಗನ್ನಡ' ವು ಸ್ವಲ್ಪ ಕಾಲದೊಳಗಾಗಿ 'ಹಳೆಗನ್ನಡ' ಕ್ಕೆ ಬದಲಾದುದರಲ್ಲಿ ರಹಸ್ಯವೇನು? ಇದನ್ನು ಮೆ॥ ರೈಸ್ ಸಾಹೇಬರು ನಮಗೆ ಎಲ್ಲಿಯೂ ಹೇಳಿಲ್ಲ. ಈಗ ನಾವು ಮೇಲೆ ವಿವರಿಸಿದ ಮೂರು ಕಾಲಗಳಲ್ಲಿಯೂ ಭಾಷೆ ಮತ್ತು ಗ್ರಂಥಲೇಖನ ರೀತಿಗಳಲ್ಲಿ ಬದ ಲಾವಣೆಗಳುಂಟಾದುದಕ್ಕೆ ಪ್ರಬಲವಾದ ಕಾರಣಗಳಿವೆ. ಇವನ್ನು ಈ ಮುಂದೆ ವಿವ ರಿಸುವೆವು. ಹೀಗಾದುದರಿಂದ ಮೆ॥ ರೈಸ್ ಸಾಹೇಬರು ಕಲ್ಪಿಸಿದ, 'ಪೂರ್ವದ ಹಳೆ ಗನ್ನಡ' ವೆಂಬುದು ಇರಲೇ ಇಲ್ಲವೆಂದೂ, ಇದ್ದರೂ ಅದು ಗ್ರಾಂಥಿಕಭಾಷೆಯಾಗಿರಲಿಲ್ಲ ವೆಂದೂ ಮೇಲೆ ನಾವು ಹೇಳಿದ ಮೂರು ಭಾಗಗಳೇ ಸ್ವಭಾವವಿರುದ್ಧವಲ್ಲವಾದುದ ರಿಂದ ನ್ಯಾಯವಾದವುಗಳೆಂದೂ ಸಿದ್ಧಾಂತವಾಗುವುದು. (ಸಶೇಷ)

M.B.

ಮತ್ತು ಸ್ವಭಾಷೆಯನ್ನು ಕಲಿಯುವುದರೊಂದಿಗೆ ಯಾವುದಾದರೂ ಒಂದು ಕೈ ಗೆಲಸವನ್ನು ಕಲಿಯುವುದು ಅವಶ್ಯಕವಾಗಿರುತ್ತದೆ. ಸ್ಕೂಲು ಮತ್ತು ಕಾಲೇಜುಗಳಲ್ಲಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗದೆ, ಇರುವವರಿಗೂ, ಕೇವಲ ಬಡವರಿಗೂ, ಮತ್ತು ಇಂಗ್ಲೀಷು ಭಾಷೆಯನ್ನು ಕಲಿತು ಇದರಿಂದ ಯಾವ ಪ್ರಯೋಜನವನ್ನೂ ಹೊಂದದೆ ಕಷ್ಟಪಡುತ್ತಿರುವವರಿಗೂ ಕೈಗಾರಿಕೆ ಕೆಲಸವು ಉತ್ತಮವಾದುದು. ಇದರಿಂದ (ಕೈಗಾರಿಕೆಯಿಂದ) ಉಂಟಾಗತಕ್ಕ ಫಲಗಳು:—(೧) ಕಣ್ಣು, ಕೈ, ಬುದ್ಧಿ, ಮುಂತಾದ ವುಗಳ ಪಟುತ್ವ. (೨) ನಮಗೆ ಬೇಕಾದ ಸಾಮಾನುಗಳನ್ನು ನಾವೇ ಮಾಡಿಕೊಳ್ಳುವುದರಲ್ಲಿ ಉಂಟಾಗುವ ಸಂತೋಷ (೩) ಲಾಭ (೪) ಸ್ವಾತಂತ್ರ್ಯ (೫) ಮನಸ್ಸಿಗೆ ತೃಪ್ತಿ. (೬) ದೇಹಕ್ಕೆ ಆರೋಗ್ಯ. ಇದು (ಯೂನಿವರ್ಸಿಟಿ ಸರ್ಟಿಫಿಕೇಟ್)ಸರ್ವ ಭಾಷಾಸ್ಥಾನದ ಯೋಗ್ಯತಾ ಪತ್ರಗಳಿಗಿಂತಲೂ, ಅತ್ಯಂತ ಪ್ರಯೋಜಕನಾಗಿರುವುದು. ಈ ವಿಷಯವಾಗಿ ಲಾರ್ಡ್ ರೋಸ್‌ಬರಿ ಎಂಬುವರು ಹೇಳುವುದೇನಂದರೆ—* "ಪ್ರಕೃತದಲ್ಲಿ ಕೈಗಾರಿಕೆ ವಿದ್ಯೆಯೇ ವಿದ್ಯೆ. ಈ ವಿದ್ಯೆಯನ್ನು ಪ್ರಚುರಪಡಿಸತಕ್ಕ ಶಾಲೆಗಳೇ ವಿದ್ಯಾಶಾಲೆ." ಈ ವಿದ್ಯೆಯನ್ನು ಪ್ರಚುರಪಡಿಸುವ ಉದ್ದಿಶ್ಯ ಬೊಂಬಾಯಿ ಕಲ್ಕತ್ತಾ, ಮದ್ರಾಸು ಮುಂತಾದ ಅನೇಕ ವಿದ್ವತ್ಸಂಘದವರು (University) ಕೈಗಾರಿಕೆ ಪಾಠಶಾಲೆಗಳನ್ನು ಏರ್ಪಡಿಸಿರುತ್ತಾರೆ. ಈ ಸ್ಥಳಗಳಲ್ಲಿ ಅನೇಕರು ಸರ್ಕಾರದಿಂದ ಈ ವಿದ್ಯಾಭ್ಯಾಸಕ್ಕೆ ಬೇಕಾದ ಸಹಾಯಗಳನ್ನು ಹೊಂದಿ, ಕೈಗೆಲಸಗಳಲ್ಲಿ ತೇರ್ಗಡೆಯಾಗಿ, ಇತರ ದೇಶಗಳಲ್ಲೆಲ್ಲಾ ಪ್ರಚುರಪಡಿಸುತಲಿದಾರೆ. ಬಾಲಕರಿಗೆ ಪ್ರತಿಯೊಂದು ಪಾಠಶಾಲೆಗಳಲ್ಲಿಯೂ ವಿದ್ಯಾಭ್ಯಾಸದೊಂದಿಗೆ ಅದಕ್ಕಾಗಿ ಇಟ್ಟಿರುವ ಕ್ಲುಪ್ತಕಾಲದಲ್ಲಿ ಸ್ವಲ್ಪ ಕಾಲವನ್ನು ಕೈಗಾರಿಕೆ ವಿದ್ಯಾಭ್ಯಾಸಕ್ಕಾಗಿ ಉಪಯೋಗಿಸಿ ಕೊಂಡು, ಆ ಕಾಲದಲ್ಲಿ ನಕ್ಷೆ ಬರಿಯುವುದು, ಸುಲಭನಾದ ವಸ್ತುಗಳನ್ನು ಚಿತ್ರಿಸುವುದು, ಅಲ್ಲದೆ ಹಾಗೆ ಚಿತ್ರಿಸಿದ ವಸ್ತುವನ್ನು ನಿರ್ಮಾಣಮಾಡುವುದು, ಹೇಗೆಂದರೆ:—ಮಣ್ಣಿನಲ್ಲಿ, ಬೊಂಬೆ ಮುಂತಾದುದನ್ನೂ, ಲೋಹಗಳಲ್ಲಿ ಪಾತ್ರೆ ಪಪಾರ್ಥಗಳನ್ನೂ, ಮರದಲ್ಲಿ, ಕಾಲುಮಣೆ, ಮೇಜು, ಬೆಂಚು, ಕುರ್ಚಿ ಮುಂತಾದವುಗಳನ್ನೂ ಮಾಡಿಸಬೇಕು. ಹೀಗೆ ಮಾಡಿಸೋಣದರಿಂದ ವ್ಯಾಯಾಮದಂತೆ (Gymnastics) ಅಂಗಸಾಧನೆಯುಂಟಾಗುವುದು. ಆದರೆ ಉತ್ಸಾಹವು ಅದಕ್ಕಿಂತಲೂ ಹೆಚ್ಚಿಸುವುದು.

M. V. S. (ಸಶೇಷ)

---

* Lord Rosebery:-"The best Education of the present day is Technical Education and the best University is a work shop"

ದಲೂ ಮಾಡುತ್ತಿದ್ದ ಕೆಲಸಗಳೆನ್ನೆಲ್ಲಾ ಕಷ್ಟವಿಲ್ಲದಂತೆ ಬಹಳ ಶೀಘ್ರವಾಗಿಯೂ, ಅಧಿಕವಾಗಿಯೂ ತಾವೇ ಮಾಡುತ್ತಾ ಬಂದವು. ಹೀಗೆ ಮಾಡೋಣದರಿಂದ ಪದಾರ್ಥಗಳು ಅಗ್ಗವಾದುವು. ಇದರಿಂದ ಎಲ್ಲರೂ "ಅಗ್ಗದ ಆಸೆಗೆ ಮುಗ್ಗಿದಜೋಳ" ಎಂಬಂತೆ ಈ ಅಗ್ಗವಾದುದನ್ನೇ ಅಪೇಕ್ಷಿಸುತ್ತಾ ಬಂದರು. ಇದರಿಂದ ಅನೇಕ ವ್ಯಾಪಾರಾದಿಗಳು ಕೆಟ್ಟುಹೋಗಿ ಕೆಲಸಗಾರರಿಗೆ ಜೀವನವು ಪ್ರಯಾಸವಾಯಿತು. ಆಗಿನ ಕಾಲದಂತೆ ಪ್ರೋತ್ಸಾಹವೂ ದೂರಾಗುದುದರಿಂದ ಈಗಿನ ಕಾಲದ ಕೆಲಸಗಾರರು ಕೆ. ಕೆಲಸದಲ್ಲಿ ಆಗಿನಂತೆ ಶ್ರದ್ಧೆಯುಳ್ಳವರಾಗಿಲ್ಲ.—ಈ ಕಾರಣಗಳಿಂದಲೇ ಅಂಥಾ ವಿಶೇಷತ್ವವು ಈಗ ಕಾಣಬರುವುದಿಲ್ಲ.

ಈಗ ನಾವು ಉಪಯೋಗಿಸುವ ವಸ್ತುಗಳು ಎಂದರೆ—ಬಟ್ಟೆಗಳು, ಬರೆಯುವದಕ್ಕೆ ಬೇಕಾದ ಪೆನ್ಸಿಲ್ ಸೀಸದಕಡ್ಡಿ, ಲೇಖಣಿ, ಕಾಗದಗಳೂ, ಬೆಂಕಿಕಡ್ಡಿ, ಸಾಬೂನೇ ಮೊದಲಾದ ಆವಶ್ಯಕವಾದ ವಸ್ತುಗಳೂ ಸಹಾಯಂತ್ರಗಳ ಸಹಾಯದಿಂದಲೇ ನಿರ್ಮಿತವಾಗುವುವು. ಇಂಥಾ ಆವಶ್ಯಕವಾದ ಪದಾರ್ಥಗಳನ್ನು ಜಾಗ್ರತೆಯಲ್ಲಿ ನಿರ್ಮಿಸುವ ಯಂತ್ರಗಳಿಲ್ಲದಿದ್ದರೆ, ಈ ಪದಾರ್ಥಗಳು ಇಷ್ಟು ಸುಲಭವಾಗಿ ಹೇಗೆತಾನೇ ಸಿಕ್ಕುವುವು? ಆದುದರಿಂದ ಈಗ ಕೈಗಾರಿಕೆಯನ್ನು ಕಲಿಯಲಪೇಕ್ಷಿಸುವ ಬಾಲಕರು ಈಗಿನ ಕಾಲಕ್ಕೆ ತಕ್ಕ ಹಾಗೆ ಕೈಗೆಲಸಗಳ ಜೊತೆಗೆ ಅಂಥಾ ಕೆಲಸಗಳ ಅನುಕೂಲಕ್ಕಾಗಿ ಕಲಿಸಿರುವ ಯಂತ್ರ ಪರಿಜ್ಞಾನವನ್ನೂ ಹೊಂದಿದರೆ ಕೆಲಸಗಳನ್ನು ಸುಲಭವಾಗಿಯೂ, ಚೆನ್ನಾಗಿಯೂ, ಸ್ವಲ್ಪ ಕಾಲದಲ್ಲಿಯೇ ಮಾಡಬಹುದು. ಹೇಗೆಂದರೆ:—ಒಂದು ಮರದ ತೊಲೆಯನ್ನು ಹಲಿಗೆಗಳಾಗಿ ಕೈಯಿಂದಲೇ ಕೊಯ್ಯಬೇಕಾದರೆ ಮೂರು ದಿನಗಳು ಕಷ್ಟಪಡಬೇಕು. ಇದೇ ಕೆಲಸವನ್ನು ಒಂದು ಗರಗಸದ ಯಂತ್ರದ ಸಹಾಯದಿಂದ ಮೂರು ಘಂಟೆಗಳ ಕಾಲದಲ್ಲಿಯೇ ಮಾಡಬಹುದು. ಅಷ್ಟಂತೆಯೇ ಮನುಷ್ಯರ ಕೈನಿಂದ ಹದಿನೈದು ದಿವಸಗಳಲ್ಲಿ ಆಗುವ ಪಂಚೆ ಮುಂತಾದ ಬಟ್ಟೆಗಳನ್ನು ಆಯಾ ಯಂತ್ರದ ಸಹಾಯದಿಂದ ಆರು ಘಂಟೆಗಳ ಕಾಲದಲ್ಲಿಯೇ ಮಾಡಬಹುದು. ಆದುದರಿಂದ ತಾನು ಸ್ವತಃ ಕಷ್ಟಪಟ್ಟು ಮಾಡುವ ಕೈಗಾರಿಕೆಯ ಕೆಲಸದಿಂದ ಸಂಪಾದಿಸಬಹುದಾದ ಆದಾಯಕ್ಕಿಂತ ಹತ್ತು ಪಾಲು ಹೆಚ್ಚು ಆದಾಯವನ್ನು ಯಂತ್ರದ ಸಹಾಯದಿಂದ ಹೊಂದಲು ಸಂಶಯವಿರುವುದಿಲ್ಲ. ಆದಕಾರಣ ನಮ್ಮ ದೇಶದಲ್ಲಿ ಬಾಲಕರು ಪಾಠಶಾಲೆಗಳಲ್ಲಿ ದೇಶಭಾಷೆ

III. (1) ಧನುಸ್ಸಿನ ವಿಷಯವಾದ ಪೂರ್ವಕಥೆಯನ್ನು ಬರೆಯಿರಿ ವಿಶ್ವಾಮಿತ್ರನ ಸಂಗಡ ರಾಮನು ಇರುವದಕ್ಕೆ ಕಾರಣವೇನು ?

(2) ಸ್ಯಮಂತಕೋಪಾಖ್ಯಾನವನ್ನು ನಿಮ್ಮ ಸ್ವಂತಮಾತುಗಳಿಂದ ಸಂಕ್ಷೇಪವಾಗಿ ಬರೆಯಿರಿ.

(3) ರಾಮನಿಗೆ ಭರತನು ಹೇಳಿದ ಸಮಾಧಾನೋಕ್ತಿಗಳನ್ನೂ ಅದಕ್ಕೆ ಶ್ರೀ ರಾಮನ ಪ್ರತ್ಯುತ್ತರವನ್ನು ಬರೆಯಿರಿ.

(4) ವ್ಯಸನಯುಕ್ತವಾದ ರಾಮನಮುಖ, ವಂಶಕೀರ್ತಿಗೆ ಹೊಲ್ಲೆಹ ಈ ವಾಕ್ಯಗಳಿಗೆ ಯಾವ ಉಪಮಾನಗಳನ್ನು ಹೇಳಿದೆ.

IV. (1) ಪಡಿಯರ, ಅಂತಪುರ, ಬಿನ್ನಪ, ಪತಿವ್ರತೆ, ಆಶ್ಚರ್ಯ, ಬೆಮೆ, ಸುಧೆ, ರಾಯ ಘಟ ಚೌಮೂಲೆ ಹೊಕ್ಕರಣೆ ಬಿಂಗಾರಿ, ಸಿರಿ, ಮುತ್ತು. ಇವುಗಳನ್ನು ವಿಂಗಡಿಸಿ ತತ್ಸಮಗಳಿಗೆ ತದ್ಭವಗಳನ್ನು ತದ್ಭವಗಳಿಗೆ ತತ್ಸಮಗಳನ್ನು ಬರೆಯಿರಿ.

(2) ಸೀತಾವನಿಃಕಾಂತಂ, ವಸುಮತೀಗರ್ಭಸಂಜಾತೆ, ಪಶುಪತಿಬ್ರಹ್ಮೇಂದ್ರ ಶಿಖಿಮುಖರು ಅಸಹ್ಯ ತಾಪತ್ರಯವಿದೂರನು. ಈ ಸಮಾಸಗಳ ವಿಗ್ರಹ ವಾಕ್ಯವನ್ನು ಬರೆಯಿರಿ.

ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ರವರ ಆಫೀಸಿನಿಂದ.

ಬೆಂಗಳೂರು.

C. No. 19. 8—4—901

ಎಲ್ಲಾ ಡೆ॥ ಇ॥ಸ್ಪೆಕ್ಟರುಗಳಿಗೂ ಮತ್ತು ಹಿಂದೂಸ್ಥಾನಿ ಸ್ಕೂಲ್‌ಗಳ ಅ॥ ಡೆ॥ ಇನ್‌ಸ್ಪೆಕ್ಟರುಗಳಿಗೂ;—

ಎಲ್ಲಾ ಎ. ವಿ. ಸ್ಕೂಲುಗಳೂ, ತಾಲ್ಲೂಕು ಹೆಡ್‌ಕ್ವಾರ್ಟರುಗಳ ವರ್ನಾಕ್ಯುಲರ್ ಸ್ಕೂಲುಗಳೂ, ಪ್ರತಿವರ್ಷವೂ ಬೇಸಿಗೆಕಾಲದಲ್ಲಿ ಏಪ್ರೆಲ್ ೧೦ ನೇ ತಾರೀಖಿನಿಂದ ಮೇ ೧೦ ನೇ ತಾರೀಖಿನವರೆವಿಗೂ (ಎರಡು ದಿನಗಳೂ ಸೇರಿ) ಮುಚ್ಚಲ್ಪಡುವವು.

ಗೌರ್ಮೆಂಟ್ ನಾರ್ಮಲ್‌ಸ್ಕೂಲ್ ನ್ಯೂಸೂರು.

೧. ಕನ್ನಡಭಾಷಾ ಪದ್ಯಕಾವ್ಯ.

I. (a) ನಿಖಿಲಾಪರವರ್ಣನೆ, ಸಂಮಂತಕೋಪಾಖ್ಯಾನ, ಇವುಗಳು ಯಾವಕಥೆಗೆ ಸಂಬಂಧಪಟ್ಟವುಗಳು ಯಾರು ಯಾರಿಗೆ, ಹೇಳಿದರು ? ರಚಿಸಿದ ಕವಿಗಳು ಯಾರು ? ಕಾಲಸಹಿತ ವಿವರಿಸಿ.

(b) ಈ ಪದ್ಯದ ತಾತ್ಪರ್ಯವನ್ನು ಬರೆಯಿರಿ.

ಸಕಲಜೀವಕದಯಾಪರನಾಗಿರಗತಿಯಿಲ್ಲ । ನಾವನೆಮ್ಮುಳಿದಕಾಳಾಹಿಯಂ ಮಿಪ್ಪುದನ । ಧಾತವಂಧಗಧಗಿಪಕಾಳ್ಕಿಚ್ಚ ನೊಳಹಾಯ್ದು ನಾವನಾಂತಂಸಿ ಪಿಲ್ಲೇ ॥ ಅವಿಮೃಷ್ಟತ್ವನಾಯುಸ್ಪಳಿಸತಿಂದಿಗನ । ಗಾನಕರ್ತವ್ಯವಾ ಜ್ಞಾಪಿಸಲ್ವೇಳ್ಕುಮೆಂ । ದಾವೀಗದರತನುರವಣಿಸಿಬಸಗೂಳೆರಾಮನಿಂತು ಬಿಸುಸುಯ್ದೊಂದನು ॥

c) ಈ ಪದ್ಯದ ಪ್ರತಿಪದದ ಅರ್ಥವನ್ನೂ ಬರೆಯಿರಿ.

ದೇವನಾಣತಿಯೆಂದುಜರರ್ಕೆದೆಯಳಿಕನರ । ದೇವಮಣಿಯೆನಗೆಕಣ ತ್ತಲೆಯಿ ದೇನಡರಿ। ತೋವ್ಪೊಬವುಗೂಂಡದೀನಲ್ಲಲಧಪವಡಯ್ದಿಪ್ಪ ಳಪಕಾರ್ತನಾರಿ। ನಾವನ್ನದಿವಾಕರಾನ್ವಯದೊಳಕಟಕಟದು । ದೈವವಿಪಾಪಂವಂಚಿಸಿದು ದೆನ್ನನೀಗಳೇ ॥ ಗ್ಪವೆನಾನೆಂಬುಮರುಳ್ಳಾಯ್ಗಚ್ಚಿದವನಂತೆಕಳವಳಂಗೊಂ ಶುಮನದೆ ॥

II. (1) ಗಿಳಿಯನ್ನು ಬಿಕ್ಷಿಸಬಾಯಿಗೆ ಕೊಟ್ಟಹಾಗೆ, ನಾಯಿಬೊಗಳಿದರೆ ದೇವ ಲೋಕಹಾಳೆ, ಸಂಸಾರಮೆಯಸಾರಂ, ಈಗಾದೆಗಳು ಯಾವೆಸಂದರ್ಭಗ ಳಲ್ಲಿ ಏಕೆ ಉಪಯೋಗಿಸಲಟ್ಟವೆ ?

(2) ನಂಬಬಲ್ಲುದ ದೈವವನುಜಯವ್ಯ, ಹರ್ಮರಸದೆಡೆಯೊಳಾದೇಶಿಸಿದವನಾವರ್ಂ ಶೋಕರಸವ ಈ ವಾಕ್ಯಗಳ ಮುಖ್ಯತಾತ್ಪರ್ಯವೇನು ?

(3) ತೆಪ್ಪನೆ, ವಿಲಗ, ಬಲ್ಮತನ, ಎಡರ್, ಅಸಿ, ದಂದುಗ, ಪುಳಿನಭೇಲನ, ಕೈಮೆ ಬಸಗೆವರೆ, ರಂಜಣಿಗೆ, ಸಡುಕ:. ಗುಂಜೆ, ಅಣಂ ಇವುಗಳಿಗೆ ಅರ್ಥವೇನು ?

(4) ನರಸಿಂಹ, ಕಂಜ, ಶಿವಸಖ ಬೊಮಿಜಾತೆ, ಇವುಗಳ ಅವಯವಾರ್ಥವನ್ನೂ ಸೋಮ, ಕೃಷ್ಣ, ಹರಿ, ಅಂಬರ ಇವುಗಳಿಗೆ ನಾನಾರ್ಥಗಳನ್ನು ಬರೆಯಿರಿ

III (1) ಧನುಸ್ಸಿನ ವಿಷಯವಾದ ಪೂರ್ವಕಥೆಯನ್ನು ಬರೆಯಿರಿ ವಿಶ್ವಾಮಿತ್ರನ ಸಂಗಡ ರಾಮನು ಇರುವದಕ್ಕೆ ಕಾರಣವೇನು ?

(2) ಸ್ಯಮಂತಕೋಪಾಖ್ಯಾನವನ್ನು ನಿಮ್ಮ ಸ್ವಂತವಾತುಗಳಿಂದ ಸಂಕ್ಷೇಪವಾಗಿ ಬರೆಯಿರಿ.

(3) ರಾಮನಿಗೆ ಭರತನು ಹೇಳಿದ ಸವಾಧಾನೋಕ್ತಿಗಳನ್ನೂ, ಅದಕ್ಕೆ ಶ್ರೀ ರಾಮನ ಪ್ರತ್ಯುತ್ತರವನ್ನು ಬರೆಯಿರಿ.

(4) ವ್ಯಸನಯುಕ್ತವಾದ ರಾಮನಮುಖ, ವಂಶಕೀರ್ತಿಗೆ ಹೊಲ್ಲೆಹ ಈ ವಾಕ್ಯಗಳಿಗೆ ಯಾವ ಉಪಮಾನಗಳನ್ನು ಹೇಳಿದೆ.

IV. (1) ಪಡಿಯರ, ಅಂತಪುರ, ಬಿನ್ನಪ, ಪತಿವ್ರತೆ, ಆಕ್ಷೌರ್ಯ, ಬೆಮೆ, ಸುಧೆ, ರಾಯ ಘಟ ಚೌಮೂಲೆ ಹೊಕ್ಕರಣೆ ಬಿಂಗಾರಿ, ಸಿರಿ, ಮುತ್ತು. ಇವುಗಳನ್ನು ವಿಂಗಡಿಸಿ ತತ್ಸಮಗಳಿಗೆ ತದ್ಭವಗಳನ್ನು ತದ್ಭವಗಳಿಗೆ ತತ್ಸಮಗಳನ್ನು ಬರೆಯಿರಿ.

(2) ಸೀತಾಮನೋಕಾಂತಂ, ವಸುಮತೀಗರ್ಭಸಂಜಾತೆ, ಪಶುಪತಿಬ್ರಹ್ಮೇಂದ್ರ ಶಿಬಿಯಮರು ಅಸಹ್ಯ ತಾಪತ್ರಯವಿದೂರನು. ಈ ಸಮಾಸಗಳ ವಿಗ್ರಹ ವಾಕ್ಯವನ್ನು ಬರೆಯಿರಿ.

ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ರವರ ಆಫೀಸಿನಿಂದ.

ಬೆಂಗಳೂರು.

C. No. 19. 8—4—901

ಎಲ್ಲಾ ಡೆ॥ ಇ॥ಸ್ಪೆಕ್ಟರುಗಳಿಗೂ ಮತ್ತು ಹಿಂದೂಸ್ಥಾನಿ ಸ್ಕೂಲ್‌ಗಳ ಲಿ॥ ಡೆ॥ ಇನ್‌ಸ್ಪೆಕ್ಟರುಗಳಿಗೂ;—

ಎಲ್ಲಾ ಎ. ವಿ. ಸ್ಕೂಲುಗಳೂ, ತಾಲ್ಲೂಕು ಹೆಡ್‌ಕ್ವಾರ್ಟರುಗಳ ವರ್ನಾಕ್ಯುಲರ್ ಸ್ಕೂಲುಗಳೂ, ಪ್ರತಿವರ್ಷವೂ ಬೇಸಿಗೆಕಾಲದಲ್ಲಿ ಏಪ್ರೆಲ್ ೧೦ ನೇ ತಾರೀಖಿನಿಂದ ಮೇ ೨೦ ನೇ ತಾರೀಖಿನವರೆವಿಗೂ (ಎರಡು ದಿನಗಳೂ ಸೇರಿ) ಮುಚ್ಚಲ್ಪಡುವವು.

ಗೌರ್ಮೆಂಟ್ ನಾರ್ಮಲ್ ಸ್ಕೂಲ್ ಮೈಸೂರು.

೧. ಕನ್ನಡಭಾಷಾ ಪದ್ಯಕಾವ್ಯ.

(a) ನಿಖಿಲಾಪ್ತರವರ್ಣನ, ಸ್ಯಮಂತಕೋಪಾಖ್ಯಾನ, ಇವುಗಳು ಯಾವಕವಿಗೆ ಸಂಬಂಧಪಟ್ಟವುಗಳ ಯಾರು ಯಾರಿಗೆ, ಹೇಳಿದರು ? ರಚಿಸಿದ ಕವಿಗಳು ಯಾರು ಕಾಲಸಹಿತ ವಿವರಿಸಿ.

(b) ಈ ಪದ್ಯದ ತಾತ್ಪರ್ಯವನ್ನು ಬರೆಯಿರಿ.

ಶವವಂಕೇಸರಿಯುಬಾಯೊಳಗೆತಲೆಯಿಟ್ಟ। ನಾವವಮಾಳಿದಕಾಳಾಹಿಯಂ ನುಟ್ಟದನೆ । ದಾವವಂಧಗಧಗಿಪಕಾಳ್ಗಿಚ್ಚನೊಳಹಾಯ್ದ ನಾವನಾಂತಂ ನಿಲ್ಗೇ ॥ ಭವಿಮೂಢಾತ್ಮನಾಯುಸ್ಸಳಿಸಿತಿಂದಿಗೆನ ಗಾವಕರ್ತವ್ಯವಾ ಜ್ಞಾಪಿಸಲ್ಕೇಳ್ಕುಮೀ । ದಾವೀಗಭರತನುರವಣಿಸಿಬಿಸಗೊಳೆರಾಮನಿಂತು ಬಿಸುಸಾಯ್ದಂದನು ॥

(c) ಈ ಪದ್ಯದ ಪ್ರತಿಪದದ ಅರ್ಥವನ್ನೂ ಬರೆಯಿರಿ.

ದೇವನಾಣತಿಯೆಂದುಚರರೆದೆಬಳಿಕನರ । ದೇವಮಣಿಯಿವಗೆಕಣ ತ ಲೆನು ದೇನಡರಿ। ತೋವೊಬಿವೆಗೊಂಡದೇನಲಲದಿಪವಿದಮಿಯಿಟ ಳಪಕೀರ್ತಿನಾರಿ। ಪಾವನದಿವಾಕರಾನ್ವಯದೊಳಕಟಕಟದು । ದೈವವಿಧಾನಮಿಂತಿರದು ದೆನ್ನನೀಗಳೇ ॥ ಗೆವೆನಾನೆಂಬುಮಾರುಳಾಯ ಚಿ ದವವಂತೆಕಳವಳಂಗೊಂ ಡುಮನದೆ ॥

II. (1) ಗಿಣಿಯನ್ನು ಬೆಕ್ಕಿನಬಾಯಿಗೆ ಕೊಟ್ಟಹಾಗೆ, ನಾಯಿಬೊಗಳಿದರೆ ದೇವಲೋಕಹಾಳೆ, ಏಸಾರವಿಯಸಾರ, ಈಗಾದೆಗಳು ಯಾವಸಂದರ್ಭಗಳಲ್ಲಿ ಏಕೆ ಉಪಯೋಗಿಸಲ್ಪಟ್ಟವೆ ?

(2) ಸಂಬಬಲ್ಲುದೆ ದೈವವನುಜಯವ್ರ, ಹರ್ಮರಸದೆಡೆಯೊಳಾದೇಶಿಸಿದವನಾವರ್ಮ ಶೋಕರಸವ ಈ ವಾಕ್ಯಗಳ ಮುಖ್ಯತಾತ್ಪರ್ಯವೇನು ?

(3) ತೆಪ್ಪನೆ, ವಿಲಗ, ಬಲ್ಯತನ, ಎಡರ್, ಅಸಿ, ದಂದುಗ, ಪುಳಿನಖೇಲನ, ಕೈಮೆ ಬಸಗೆವರೆ, ದಂಜಣಿಗೆ, ಪಡುಕ, ಗುಂಜೆ, ಅಣಂ ಇವುಗಳಿಗೆ ಅರ್ಥವೇನು ?

(4) ನರಸಿಂಹ, ಕಂಜ, ಶಿವಸಖ ಭೂಮಿಜಾತೆ, ಇವುಗಳ ಅವಯವಾರ್ಥವನ್ನೂ ಸೋಮ, ಕೃಷ್ಣ, ಹರಿ, ಅಂಬರ ಇವುಗಳಿಗೆ ನಾನಾರ್ಥಗಳನ್ನು ಬರೆಯಿರಿ

ಸಿಂದ್‌ಬಾದ್ ನಾವಿಕನ ಕಥೆ.

ಆ ರಾಜನಿಗೆ ಸೇರಿದ ಕ್ಯಾಸಲ್ ಎಂಬ ದ್ವೀಪ ಒಂದಿರುವುದು. ಆದ್ವೀಪದಲ್ಲಿ ಒಳ್ಳೆ ಮಧ್ಯರಾತ್ರಿಯಲ್ಲಿ ತಪ್ಪದೆ ಶಂಖ, ಭೇರಿ ನಾದವು ಕೇಳಿ ಬರುವುದೆಂತಲೂ, ನಾವಿಕರೆಲ್ಲರೂ ಆ ದ್ವೀಪವು ಪೆಗ್ಗಿಯಲ್ ಎಂಬ ಪಿಶಾಚನ ವಾಸಸ್ಥಾನವೆಂದು ಭಾವಿಸುವರೆಂತಲೂ ನನಗೆ ತಿಳಿಸಿದರು. ವಿಪರೀತ ಧ್ವನಿಯನ್ನು ಕೇಳಬೇಕೆಂತಲೂ ಆ ವಿಚಿತ್ರನಾದ ದ್ವೀಪವನ್ನು ನೋಡಬೇಕೆಂತಲೂ ನಿಶ್ಚಯಿಸಿ ಆ ದ್ವೀಪಕ್ಕೆ ನಾನು ಹೊರಟೆನು. ಆ ಮಾರ್ಗದಲ್ಲಿ ನಾನು ನೋಡಿದ ಆಶ್ಚರ್ಯವೇನೆಂದು ಹೇಳಲಿ! ಒಂದೊಂದು ವಿಾನು ನೂರು, ಇನ್ನೂರು ಅಡಿ ಉದ್ದ. ನೋಡುವುದಕ್ಕೆ ಭಯಂಕರ, ಆದರು ತೂಂದರೆಯನ್ನು ಕೊಡತಕ್ಕವುಗಳಲ್ಲ. ಅವುಗಳಿಗೇ ಗಾಬರಿ. ಎರಡು ಕಡ್ಡಿಗಳನ್ನು ತೆಗೆದುಕೊಂಡು ಸದ್ದುಮಾಡಿದರೆ ಸಾಕು, ಇಲ್ಲದಿದ್ದರೆ ಎರಡು ಹಲಗೆಗಳನ್ನು ತೆರೆದುಕೊಂಡು ತಟ್ಟಿದರೂ ಆಯಿತು. ಭುರ್ರನೆ ಆ ಅದ್ಭುತಾಕಾರದ ವಿಾನುಗಳೆ ಹಾರಿ ಹೋಗುತಿದ್ದವು. ಇವುಗಳೊಡನೆ ಒಂದು ಅಡಿ ಉದ್ದ ಗೂಬೆಯಹಾಗೆ ಮುಖವುಳ್ಳ ಸಣ್ಣ ಸಣ್ಣ ವಿಚಿತ್ರನಾದ ವಿಾನುಗಳನ್ನೂನೋಡಿದೆನು.

ನಾನು ಕ್ಯಾಸಲ್ ದ್ವೀಪದಿಂದ ಹಿಂದಿರುಗಿಬಂದ ಸ್ವಲ್ಪ ದಿನಗಳಲ್ಲಯೆ ಒಂದು ದಿವಸ ಸಮುದ್ರದ ಕರೆಯಲ್ಲಿ ತಿರುಗಾಡುತಿದ್ದೆನು. ನನ್ನನ್ನು ಬಿಟ್ಟುಹೋದ ಹಡಗು ನಾನು ಹೇಳಿಕೊಳ್ಳಲಾರೆ. ಇದೋ! ನಿನ್ನ ಸರಕುಗಳು ಅಲ್ಲಿರುವವು ಅವುಗಳನ್ನು ತೆಗೆದುಕೊಂಡು ನಿನ್ನ ಮನಸ್ಸು ಬಂದಂತೆ ಉಪಯೋಗಿಸಬಹುದು' ಎಂದನು. ಆ ರೇವಿಗೆ ಬರುತಿದ್ದಂತೆ ಕಾಣಬಂದಿತು. ಜೆನ್ನಾಗಿ ದೃಷ್ಟಿಸಿ ನೋಡಲು ಅದು

ಎಲ್ಲಾ ತಾಲ್ಲೂಕುಗಳ ಬ್ರಾಂಚ್ ಮತ್ತು ಹೋಬಳೀ ಸ್ಕೂಲುಗಳೂ ಎಪ್ರಿಲ್ ೧೧ರಿಂದ ಮೇ ೨೦ ರವರೆಗೆ, ಪ್ರಾತಃಕಾಲ ೭ ಘಂಟೆಯಿಂದ ಹತ್ತೂಕಾಲು ಘಂಟೆ ವರಿವಿಗೂ ಮಧ್ಯೆ ೯ ಘಂಟೆಯಿಂದ ೯—೧೫ ರವರಿಗಿನ ೧೫ ನಿಮಿಷಗಳ ವಿರಾಮದೊಡನೆ ನಡಾಡಲ್ಪಡತಕ್ಕದ್ದು. ಮತ್ತು ಮೊದಲನೇ ಮೂರುಪಾಠಗಳೂ ಪ್ರತಿಯೊಂದೂ ೪೦ ನಿಮಿಷಗಳಂತೆಯೂ ಕೊನೇ ಎರಡು ಪಾಠಗಳು ಪ್ರತಿಯೊಂದೂ ೩೦ ನಿಮಿಷಗಳಂತೆಯೂ ನಡಯಿಸಲ್ಪಡುವುದು

(ರುಜು) ಹೆಚ್. ಜೆ. ಭಾಭಾ.

ಇನ್‌ಸ್ಪೆಕ್ಟರ್ ಜನರಲ್.

ಸೂಚನೆ ಮತ್ತು ಸಮಾಚಾರಗಳು.

1. ವರ್ನಾಕ್ಯುಲರ್ ಸ್ಕೂಲುಗಳ IV ಮತ್ತು V ನೇ ತರಗತಿಯ ವಿದ್ಯಾರ್ಥಿಗಳಿಗೆ. ಮೂರು, ಮೂರು ರೂಪಾಯಿ ನಂತೆ 50 ವೇತನಗಳನ್ನು ಗೌರ್ನಮೆಂಟೆ ವರು ದಯಪಾಲಿಸರುತ್ತಾರೆ. ಫಂಡು ಹೆಚ್ಚಾದಹಾಗೆಲ್ಲಾ ಇವು ಕೊಡಲ್ಪಡುವುವ್ಕ

2. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗವಾಡಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮ ॥ ರಾ ॥ ಬಿ. ಕೆ. ಶ್ರೀನಿವಾಸೈಂಗಾರ್ರಿಗೆ, ಎಂ. ಎ ಪರೀಕ್ಷೆಗೆ ಓದಲು ೨ ವರುಷಗಳ ವರಿವಿಗೂ ಮಾಹೆಯಾನ್ನಾ 25 ರೂಪಾಯಿನಂತೆ ವಿದ್ಯಾರ್ಥಿ ವೇತನವು ಕೊಡಲ್ಪಡುತ್ತೆ.

3. ತುಮಕೂರು ಎಂಪ್ರೆಸ್ ಗರ್ಲಸ್ಕೂಲ್ಲಿನ IV ಮತ್ತು V ನೇ ತರಗತಿಯಲ್ಲಿ ವ್ಯಾಸಂಗವಾಡುವ ಬಡವರು, ಬುದ್ಧಿವಂತರೂ ಆದ ಐದು ಜನ ವಿದ್ಯಾರ್ಥಿನಿಯರಿಗೆ ಪ್ರತಿಯೊಬ್ಬರಿಗೂ 3 ರೂಪಾಯಿನಂತೆ ವೇತನವು ಮಂಜೂರ್ಮಾಡಲ್ಪಟ್ಟಿರುತ್ತೆ.

4. ಎಫ್. ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಶ್ರೀಮತಿ. ಶ್ರೀರಂಗಮ್ಮ ಮತ್ತು ಸುಬ್ಬಮ್ಮ ಎಂಬುವರಿಗೆ ಅವರು ಪರೀಕ್ಷೆಯಲ್ಲಿ ತೇರ್ಗಡೆಯಾದ ಲಾಗಾಯಿತು ಮಾಹೆಯಾನಾ 15ಂ ರೂಪಾಯಿ ತಲಬಿನ ಮೇಲೆ ಮಹಾರಾಣಿ ಕಾಲೇಜಿನಲ್ಲಿ ಸಹಾಯೋಪಾಧ್ಯಾಯಿನಿಯರನ್ನಾಗಿ ನೇಮಿಸಿರುತಾರೆ.

5. ಬೊಂಬಾಯಿನ ಚಿತ್ರಕಲಾಶಾಲೆಯಲ್ಲಿ ವ್ಯಾಸಂಗವಾಡಲು. ಮಾಹೆಯಾನಾ 15 ರೂಪಾಯಿಗಳಂತೆ ೨ ವರುಷಗಳವರಿವಿಗೂ. ಅಬ್ದುಲ್ ಅಜೀಜ್ ರವರಿಗೆ ವೇತನವು ಮಂಜೂರ್ಮಾಡಲ್ಪಟ್ಟಿರುತ್ತೆ.

6. ತಾರೀಖು 1—3—901 ರಲಾಗಾಯಿತು ಮಾಹೆಯಾನಾ 20 ರೂಪಾಯಿಗಳಂತೆ ತಿರುವಕೂಡ್ಲು ನರಸಿಪುರದ ತಾಲೂಕು ಸೋಸಲೇ ಇಂಗ್ಲಿಷ ಸ್ಕೂಲಿಗೆ ಒಂದು ವರ್ಷದ ಮಟ್ಟಿಗೆ ಸಹಾಯ ದ್ರವ್ಯವು ಮಂಜೂರ್ಮಾಡಲ್ಪಟ್ಟಿರುತ್ತೆ.

ವಿದ್ಯಾದಾಯಿನಿ

ಭಾಗ. ೯.] ಜುಲೈ. ೧೯೦೧. [ಸಂಚಿಕೆ. ೬.

ಎಡಿಟರವರ ನೋಟ್ಸ.

"ಸಂಘೇ ಶಕ್ತಿಃ ಕಲೌಯುಗೇ" ಎಂಬ ಮಾತಿನಂತೆ ಈಗಿನ ದಿನಗಳಲ್ಲಿ ಎಲ್ಲಿ ನೋಡಿದರೂ, ಜನರುಗಳು ಒಂದಾಗಿ ಸೇರುವುದೂ, ಹಾಗೆ ಸೇರಿ ಮಹತ್ತರವಾದ ಕಾರ್ಯಗಳನ್ನು ಸುಲಭವಾಗಿ ಸಿದ್ಧಿಗೊಯ್ಯುವುದೂ ಕಂಡುಬರುತ್ತಿದೆ. ಇದಕ್ಕೆ ಧಾರವಾಡದ "ಕರ್ಣಾಟಕ ವಿದ್ಯಾವರ್ಧಕ ಸಂಘ" ವನ್ನು ಒಂದು ಲಕ್ಷ್ಯವನ್ನಾಗಿ ತೆಗೆದುಕೊಳ್ಳಬಹುದು. ಕರ್ಣಾಟ ದೇಶವು ನಾಲ್ಕೈದು ಸರಕಾರದವರ ಕೈಕೆಳಗೆ ವಿಭಾಗಗಳಾಗಿರುವುದು ಅನೇಕರಿಗೆ ತಿಳಿದೇ ಇದೆ. ಇದರಲ್ಲಿ ಉತ್ತರಕನ್ನಡೀಯವೆಂಬ ಕಾರವಾರ ಜಿಲ್ಲೆಯೂ, ಧಾರವಾಡ, ಬೆಳಗಾಂವ್ರು, ಬಿಜಾಪುರವೆಂಬ ಮೂರು ಜಿಲ್ಲೆಗಳೂ ಬೊಂಬಾಯಿ ಅಧಿಸತ್ಯದನರಿಗೆ ಅಧೀನವಾಗಿವೆ. ಕಾರವಾರ ಹೊರತು ಮಿಕ್ಕ ಮೂರು ಜಿಲ್ಲೆಗಳನ್ನು ದಕ್ಷಿಣಮಹಾರಾಷ್ಟ್ರವೆಂದೂ ಕರೆಯುವುದುಂಟು. ಏಕೆಂದರೆ, ಹಿಂದೆ ಮರಾಟ ಸಾಮ್ರಾಜ್ಯದ ಕಾಲದಲ್ಲಿ ಬಹಳ ವರ್ಷಗಳವರೆಗೆ ಈ ಜಿಲ್ಲೆಗಳು ಮರಾಟರ ರಾಜ್ಯದ ದಕ್ಷಿಣಭಾಗವಾಗಿದ್ದುವು. ಈಗಲೂ ಈ ಜಿಲ್ಲೆಗಳಲ್ಲಿ ಅಲ್ಲಲ್ಲಿ ಮರಾಟರಾಜ್ಯದ ಭಗ್ನಾವಶೇಷಗಳಾದ ಚಿಕ್ಕಚಿಕ್ಕ ಸಂಸ್ಥಾನಗಳಿದ್ದುವು, ಮರಾಟರ ಮತ್ತು ಮರಾಟೀ ಭಾಷೆಯ ಪ್ರಾಬಲ್ಯವು ಅಧಿಕವಾಗಿದೆ ಹೀಗಾಗಿ ಈ ಪ್ರಾಂತ್ಯದ ಜನರಲ್ಲಿ ಮುಕ್ಕಾಲುಪಾಲು ಜನರು ಕನ್ನಡಿಗರಾದರೂ, ಅವರಿಗೆ ತಮ್ಮ ಮಾತೃ ಭಾಷೆ ಕನ್ನಡವೆಂದಾಗಲೀ, ಅದನ್ನು ತಾವು ಅಭಿಮಾನದಿಂದ ಕಾಣಬೇಕೆಂದಾಗಲೀ, ಗೊತ್ತಿಲ್ಲದಂತೆಯೇ ಇತ್ತು.

ಈ ದೋಷವನ್ನು ಹೋಗಗೊಳಿಸಿ ತಮ್ಮ ದೇಶದಲ್ಲಿಯೂ ಕನ್ನಡವನ್ನು ಪ್ರಚಾರಕ್ಕೆ ಬರುವಂತೆ ಮಾಡಬೇಕೆಂಬ ಸದುದ್ದೇಶವುಳ್ಳವರಾಗಿ ಅಭಿಮಾನಶಾಲಿಗಳಾದ ಮು||

ಬಸೋರ ಪಟ್ಟಣದಲ್ಲಿ ಹತ್ತಿದ್ದ ಹಡಗೇ ಆಗಿತು. ತತ್‌ಕ್ಷಣವೇ ಆ ಹಡಗಿನ ಅಧಿಕಾರಿಯು ಗುರುತು ಹಿಡಿದನು ಒಡನೆಯೆ ಅವನಲ್ಲಿಗ ಹೋಗಿ ನನ್ನ ಸಾಮಾನುಗಳನ್ನು ಕೊಡಿಸಿದು ಕಳಿದನು. 'ನಾನು ಸಿಂದ್‌ಬಾದನು, ಆ ಹಸರನ್ನು ಬರೆದಿರುವ ಮೂಟೆಗಳು ನನ್ನವು. ಕೊಡು' ಎಂದ.

ಆ ಹಡಗಿನ ಅಧಿಕಾರಿಯು ನಾನು ಹೀಗೆ ಹೇಳಿದುದನ್ನು ಕೇಳಿದೊಡನೆಯೆ, ಅರ! ಅಲ್ಲಾ!! ಈ ಕಾಲದಲ್ಲಿ ನಾವು ಯಾರನ್ನು ನಂಬುವುದು? ನನ್ನ ಈ ಕಣ್ಣುಗಳಿಂದಲೇ ಸಿಂದ್‌ಬಾದನು ಮುಳುಗಿಹೋದುದನ್ನು ನೋಡಿದೆನು. ನನ್ನ ಹಾಗೆ ನೋಡಿದವರೂ ಇಲ್ಲೆ, ಇನ್ನೂ, ಅನೇಕಮಂದಿ ಇರುವರು. ಹೀಗಿರುವಾಗ ನೀನು ಬಂದು ಆ ಸಿಂದ್‌ಬಾದನು ತಾನು ಎಂದು ಹೇಳುವೆ. ಇದು ಎಂತಹ ಮೋಸ! ನಿನ್ನದಲ್ಲದ ಸ್ವತ್ತನ್ನು ಅಪಹರಿಸುವುದಕ್ಕೆ ಇದು ಏನು ಯೋಚನೆ!" ಎಂದನು ಆಗ ನಾನು "ಯಾಜಮಾನ! ಸ್ವಲ್ಪ ಸಾವಧಾನದಿಂದ ಕೇಳು, ನಾನು ಹೇಳುವುದನ್ನೆಲ್ಲಾ ದಯವಿಟ್ಟು ಲಾಲಿಸು, ಎಂದು ಮೃದುವಾಗಿ ಕೇಳಿಕೊಳ್ಳಲು ಅವನು ನನ್ನ ಮಾತನ್ನೆಲ್ಲಾ ಕೇಳಿ, ಕೊನೆಗ ನಾನು ಮೋಸಗಾರನಲ್ಲವೆಂದು ನಂಬಿದನು. ಇಷ್ಟರಲ್ಲಿಯೆ ನನ್ನ ಗುರುತುಳ್ಳ ಅನೇಕರು ಆ ಹಡಗಿನಿಂದ ಬಂದು ಗುರುತು ಹಿಡಿದು, ನಾನು ಬದುಕಿರುವುದನ್ನು ನೋಡಿ ಬಹಳ ಸಂತೋಷಪಟ್ಟರು. ಹಡಗಿನ ಯಜಮಾನನು ಕೊನೆಗೆ ನನ್ನ ಗುರುತನ್ನು ಚೆನ್ನಾಗಿ ತಿಳಿದು, ನನ್ನನ್ನು ತಬ್ಬಿಕೊಂಡು 'ನಿನ್ನನ್ನು ಕಾಪಾಡಿದ ದೇವರ ಮಾಹಾತ್ಮ್ಯವು ಎಂತಹದು! ದೇವರು ದೊಡ್ಡವನು. ನನ್ನ ಸಂತೋಷವನ್ನು ನಾನು ಹೇಳಿಕೊಳ್ಳಲಾರೆ. ಇದೋ! ನಿನ್ನ ಸರಕುಗಳು ಅಲ್ಲಿರುವುವು. ಅವುಗಳನ್ನು ತೆಗೆದುಕೊಂಡು ನಿನ್ನ ಮನಸ್ಸು ಬಂದಂತೆ ಉಪಯೋಗಿಸಬಹುದು' ಎಂದನು.

ಸಿಂಹಾಚಾರ್ಯರವರೂ, ಪಂಡಿತ ರಾಘವಾಚಾರ್ಯರವರೂ ಹೋಗಿದ್ದರು. ಮ॥ ರಾ॥ ನರಸಿಂಹಾಚಾರ್ಯರವರು ಕನ್ನಡದಲ್ಲಿ ಅಸಾಧಾರಣವಾದ ಪಾಂಡಿತ್ಯವುಳ್ಳವರಾಗಿರುವುದು ಮಾತ್ರವೇ ಅಲ್ಲದೆ, ಕನ್ನಡಭಾಷೆಯ ಉತ್ತರೋನ್ನತಿಯ ವಿಷಯದಲ್ಲಿ ವಿಶೇಷವಾದ ಕುತೂಹಲವಿಶಿಷ್ಟರಾಗಿರುವುದರಿಂದ, ವಾರ್ಷಿಕಸಭೆ ಕೂಡಿದ ಕಾಲದಲ್ಲಿ ಅತ್ಯಂತೋತ್ತೇಜಕವಾದ ಮತ್ತು ಪ್ರೌಢವಾದ ಒಂದು ಭಾಷಣವನ್ನು ಮಾಡಿ ಸಭಿಕರನ್ನು ಮೆಚ್ಚಿಸಿದರು.

ಮ॥ ನರಸಿಂಹಾಚಾರ್ಯರವರು ಮೂತನಾಡಿದುದರಲ್ಲಿ ಧಾರವಾಡದವರು ಮಾತ್ರವೇ ಅಲ್ಲದೆ ಕನ್ನಡಿಗರೆಲ್ಲರೂ ಲಕ್ಷ್ಯವಿಟ್ಟು ಕೇಳತಕ್ಕ ಹಲವು ಅಂಶಗಳಿದ್ದುವು—ಅವುಗಳಲ್ಲಿ ಈ ಕೆಳಗೆ ಕೊಟ್ಟ ೫ ಅಂಶಗಳು ಮುಖ್ಯವಾಗಿವೆ.

(೧) ಮೈಸೂರಿನ ಕರ್ಣಾಟಕ ಪಂಡಿತ ಪರೀಕ್ಷೆಯು ಮದರಾಸ್ ಎಫ್. ಎ. ಪರೀಕ್ಷೆಯಷ್ಟು ಕಠಿನವಾಗಿದೆ. ಆ ಪರೀಕ್ಷೆಯನ್ನು ಧಾರವಾಡದಲ್ಲಿಯೂ ನಡೆಯಿಸಲು ಏರ್ಪಾಟು ಮಾಡಿಕೊಳ್ಳುವುದರಿಂದ ಅಲ್ಲಿಯೂ ಕನ್ನಡದ ಜ್ಞಾನವು ಹೆಚ್ಚುವುದು.

(೨) ಮೈಸೂರಿನವರು ತೆಲುಗು, ತಮಿಳು, ಬಂಗಾಳೀ ಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತಿಸುತ್ತಿರುವರ. ಧಾರವಾಡದವರು ಮರಾಟೀ, ಗುಜರಾತೀ, ಉರ್ದು ಗ್ರಂಥಗಳನ್ನು ಕನ್ನಡಿಸಲು ಪ್ರಯತ್ನವಿಡಬೇಕು.

(೩) ಕನ್ನಡ ಹಾಡುಗಳನ್ನೂ, ಜನೋದಾಹರಣೆಯ ಕಥೆಗಳನ್ನೂ (Lyrics and Folklore) ಸಂಗ್ರಹಿಸಿ ಮುದ್ರಿಸಲು ಪ್ರತಿಯೊಬ್ಬರೂ ಯತ್ನಿಸಬೇಕು. ಉಪಾಧ್ಯಾಯರುಗಳು ಈ ಕಾರ್ಯವನ್ನು ನಾಡಲು ಇರುವಷ್ಟು ಸೌಕರ್ಯವು ಬೇರೊಬ್ಬರಿಗೆ ಇರುವುದಿಲ್ಲ.

(೪) ಪ್ರಾಚೀನ ಮತ್ತು ನೂತನ ಗ್ರಂಥಗಳ ಮತ್ತು ರಚಕರುಗಳ ಚರಿತ್ರೆಗಳನ್ನು ವಾಗ್ಭೂಷಣವೇ ಮೊದಲಾದ ಪತ್ರಿಕೆಗಳಲ್ಲಿ ಆಗಿಂದಾಗ ಪ್ರಕಟಿಸಬೇಕು. ಇದನ್ನೂ ಶಿಕ್ಷಕರುಗಳೇ ಸುಲಭವಾಗಿ ಮಾಡಬಹುದು.

(೫) ಕನ್ನಡಭಾಷೆಯನ್ನು ಉಜ್ಜೀವಿತಾವಸ್ಥೆಗೆ ತರಲು ಎಲ್ಲರೂ ಪ್ರಯತ್ನಿಸಬೇಕು. ಬ್ರಾಹ್ಮಣರಿಗೆ ಇದು ಮಾತೃಭಾಷೆ ಮಾತ್ರವೇ. ಲಿಂಗಾಯತರಿಗೆ ಇದು ಮಾತೃಭಾಷೆಯಲ್ಲದೆ ಮತಭಾಷೆಯೂ ಆಗಿರುವುದರಿಂದ ಅವರು ಈ ಭಾಷೆಯನ್ನು ಅಭಿವೃದ್ಧಿಗೆ ತರುವುದರಲ್ಲಿ ವಿಶೇಷವಾಗಿ ಪ್ರಯತ್ನಿಸುವುದು ಅವರುಗಳ ಕರ್ತವ್ಯವಾಗಿದೆ.

ವೆಂಕಟರಂಗೋಕಟ್ಟಿ, ಮು॥ ರಾಮಚಂದ್ರ ಹನುಮಂತ ದೇಶಪಾಂಡೆ, ಎಂ. ಎ. ಯ ವರೇ ಮೊದಲಾಗಿ ದೊಡ್ಡ ಮನುಷ್ಯರುಗಳನೇಕರು ಸೇರಿ ಕ್ರಿ. ಶ. ೧೮೯೦ ನೆಯ ವರ್ಷದಲ್ಲಿ, ಧಾರವಾಡದಲ್ಲಿ " ಕರ್ಣಾಟಕ ವಿದ್ಯಾವರ್ಧಕ ಸಂಘ " ವೆಂಬ ಸಂಸ್ಥೆಯನ್ನು ಸ್ಥಾಪಿಸಿದರು. ಮು॥ ದೇಶಪಾಂಡೆಯವರೇ ಬಹಳ ಕಾಲದವರೆಗೆ ಈ ಸಂಘದ ಕಾರ್ಯದರ್ಶಿತ್ವವನ್ನು ವಹಿಸಿ, ತಮ್ಮ ಅಸಾಧಾರಣವಾದ ಬುದ್ಧಿಕೌಶಲ್ಯದಿಂದ ಸಂಘವನ್ನು ಉರ್ಜಿತಾವಸ್ಥೆಗೆ ತಂದು ಸಭಿಕರುಗಳ ಸಂಖ್ಯೆಯ ಬೆಳೆಯುವಂತೆ ಮಾಡಿದರು. ಈಗಿನ ಕಾರ್ಯದರ್ಶಿಗಳಾದ ಮು॥ ನಾರಾಯಣರಾವ್ ಕರಗುದರಿ ಬಿ. ಎ. ಯಲ್. ಯಲ್. ಬಿ. ಯವರೂ, ಮು॥ ದೇಶಪಾಂಡೆಯವರನ್ನೇ ಅನುಸರಿಸಿ, ಸಂಘವನ್ನು ಉಚ್ಚ ದಶೆಗೆ ಬರಗೊಳಿಸುವುದರಲ್ಲಿ ಪೂರ್ಣತತ್ಪರರಾಗಿರುವರು. ಈಚೀಚೆಗೆ ಪ್ಲೇಗಿನ ಹಾವಳಿಯ ದೆಸೆಯಿಂದ ಸಂಘದ ಕಾರ್ಯಗಳು ಕ್ಲಪ್ತಕಾಲಗಳಲ್ಲಿ ನಡೆಯುವುದಕ್ಕೆ ಅನುಕೂಲವಾಗುವುದಿಲ್ಲವಾದರೂ, ಸಂಘವು ಉತ್ತರೋತ್ತರ ಅಭಿವೃದ್ಧಿ ಹೊಂದು ತಿರುವುದರಲ್ಲಿ ಸಂದೇಹವಿಲ್ಲ. ಸಂಘವು ಸ್ಥಾಪಿಸಲ್ಪಟ್ಟು ೧೦ ವರ್ಷಗಳಾದರೂ ಸಭಾಸದರ ಉತ್ಸಾಹವು ಪೂರ್ವದಂತೆಯೇ ಉದ್ದೀಪ್ತವಾಗಿರುವುದು. ಈ ಸಂಘ ಸ್ಥಾಪನದಿಂದೀಚೆಗೆ ಧಾರವಾಡಪ್ರಾಂತ್ಯದ ಕನ್ನಡಿಗರಲ್ಲಿ ಅಭಿಮಾನ ಬೆಳೆದು ಕರ್ಣಾಟಕ ಗ್ರಂಥಗಳ ವ್ಯಾಸಂಗವೂ ನೂತನರಚನೆಯೂ ಹೆಚ್ಚು ಹೆಚ್ಚಾಗುತ್ತ ಹೋಗಿದೆ. ಈ ಕಾರಣದಿಂದ ಬೊಂಬಾಯಿ ಸರಕಾರದವರೂ ಸಂಘದವೇಲೆ ಕೃಪಾದೃಷ್ಟಿಯುಳ್ಳವರಾಗಿ ಅಲ್ಪ ಸ್ವಲ್ಪ ಸಹಾಯವನ್ನೂ ಮಾಡಲು ತೊಡಗಿರುವರು. ಸಂಘದವರು ಪ್ರತಿ ವರ್ಷವೂ ಅಚ್ಚು ಹಾಕಿಸುವ ' ರಿಪೋರ್ಟ್ ' ನಲ್ಲಿ ಬೊಂಬಾಯಿ ಕರ್ಣಾಟಕದಲ್ಲಿ ಆಯಾ ವರ್ಷ ನೂತನವಾಗಿ ಅಚ್ಚಾದ ಪುಸ್ತಕಗಳ ಮತ್ತು ಅವುಗಳ ರಚಕರುಗಳ ಹೆಸರುಗಳನ್ನೂ ಸೇರಿಸಿದರೆ ಈ ಪ್ರಾಂತ್ಯದವರಿಗೆ ಬಹಳ ಅನುಕೂಲವಾಗಬಹುದು.

ಸಂಘದವರು ಪ್ರತಿವರ್ಷವೂ ವಾರ್ಷಿಕೋತ್ಸವದ ಸಮಯದಲ್ಲಿ ಕನ್ನಡದಲ್ಲಿ ಪರೀಕ್ಷೆಗಳನ್ನು ನಡೆಯಿಸಿ, ಉಚಿತಗಳನ್ನು ಹಂಚುವುದುಂಟು. ನಮ್ಮ ಮೈಸೂರು ಸರ್ಕಾರದವರು ಮೊದಲಿಂದಲೂ ಸಂಘದಮೇಲೆ ಪ್ರೀತರಾಗಿದ್ದು ಸಂಘದ ಕಡೆಯಿಂದ ಅಚ್ಚಾಗುವ ಪುಸ್ತಕಗಳಿಗೆ ಆಶ್ರಯ ಕೊಡುವುದಲ್ಲದೆ, ವರ್ಷಂಪ್ರತಿ ಒಬ್ಬ ' ಆಫಿಸರ್ ' ರನ್ನೂ ಒಬ್ಬ ಪಂಡಿತರನ್ನೂ ಸಂಘದ ಪರೀಕ್ಷೆಯ್ಕರುಗಳ ಯೋಗ್ಯತೆಯನ್ನು ನಿರ್ಣಯಿಸುವುದಕ್ಕಾಗಿ ಕಳುಹಿಸುತ್ತಿರುವರು. ಇದರಂತೆ ಈ ವರ್ಷ ಮು॥ ಎಸ್. ಜಿ. ನರ

ಕೊಂಡು ಈ ಸಿದ್ಧಾಂತಗಳನ್ನು ತಿಳಿಸಿದನೆಂಬದಾಗಿಯೂ ಆರ್ನಲ್ಡ್‌ರವರು ತಾತ್ಪರ್ಯ ಪಟ್ಟಿದ್ದರು.

ಪ್ರಥಮತಃ ರಾಜ್ಯಭಾರ ವಿಷಯಗಳಲ್ಲಿ ಮತಗ್ರಂಥಗಳೇ ಧರ್ಮಾಧರ್ಮ ಮಾರ್ಗಪ್ರದರ್ಶನಕ್ಕೆ ಸಾಧನಗಳಾಗಿದ್ದವು. ಸಿವಿಲ್ ಮತ್ತು ಕ್ರಿಮಿನಲ್ ಶಿಕ್ಷೆರಕ್ಷಣೆಗಳು ಈ ಗ್ರಂಥಗಳಿಗೆ ಅನುಸಾರವಾಗಿಯೇ ನಡೆಯುತ್ತಿದ್ದವು. ಆದರೆ ಮತಗಳಲ್ಲಿ ಭೇದಗಳು ಹುಟ್ಟಿದಹಾಗೆಲ್ಲಾ ಈ ಧರ್ಮಗಳಲ್ಲಿ ವ್ಯತ್ಯಾಸಗಳುಂಟಾಗುತ್ತಾ ಬಂದದ್ದರಿಂದ ಕ್ರಮಕ್ರಮವಾಗಿ ಸಕಲ ಮತ ಸಾಮಾನ್ಯವಾಗಿರತಕ್ಕ ಧರ್ಮಗಳನ್ನು ಸೇರಿಸಿ ಲೌಕಿಕ ವಿದ್ವಾಂಸರಾದವರು ಕಾನೂನುಗಳನ್ನು ಮಾಡಿ ಅವುಗಳನ್ನು ಆಚರಣೆಗೆ ತರುತ್ತಾಬಂದರು. ಆಚಾರಗಳಿಗೋಸ್ಕರ ಹುಟ್ಟಿದ ಕ್ರಿಸ್ತಮತವು ಕ್ರಮಕ್ರಮವಾಗಿ ರಾಜತಂತ್ರಗಳನ್ನು ಒಳಗೊಳ್ಳುವಂತೆ ಮಾಡಲ್ಪಟ್ಟಿತು. ಮತಗ್ರಂಥಗಳು ಸದಾಚಾರಗಳನ್ನು ನಿಷ್ಕರ್ಷೆ ಮಾಡಿ ಧರ್ಮಮಾರ್ಗವನ್ನು ಪ್ರದರ್ಶನ ಮಾಡಿ ಅಧರ್ಮ ಮಾರ್ಗಕ್ಕೆ ನಿರೋಧವನ್ನು ಉಂಟುಮಾಡಬೇಕು. ಪಾಶ್ಚಾತ್ಯರಲ್ಲಿ ಕ್ರಿಸ್ತಮತವು ಈ ಕೆಲಸಗಳಲ್ಲಿ ಸ್ವಲ್ಪ ಔದಾಸೀನ್ಯವನ್ನೂ, ರಾಜತಂತ್ರಗಳಲ್ಲಿ ಹೆಚ್ಚಾದ ಶ್ರದ್ಧೆಯನ್ನೂ ತೋರಿಸುತ್ತಾ ಬಂತು. ಇದರ ಜೊತೆಗೆ ಪ್ರಪಂಚವೆಲ್ಲಾ ಕ್ರಿಸ್ತಮತಕ್ಕೆ ಸೇರುವಂತೆ ಮಾಡಲ್ಪಡಬೇಕೆಂಬ ಅಭಿಲಾಷೆಯು ಈ ಮತಸ್ಥರಿಗೆ ಉಂಟಾಯಿತು. ಈ ವಿಷಯದಲ್ಲಿ ಬ್ರಿಟಿಷ್ ಧರ್ಮಶಾಸ್ತ್ರಕ್ಕೆ ಪಿತೃಪಾತ್ರಯರಾದ ಮಾ॥ ಬ್ಲ್ಯಾಕ್‌ಸ್ಟನ್‌ರವರು ಆಶೆಯನ್ನು ಕುರಿತು, ಬರೆಯುವಾಗ್ಯೆ "ಪ್ರಪಂಚವೆಲ್ಲಾ ಕ್ರಿಸ್ತಮತಕ್ಕೆ ಸೇರಬೇಕೆಂಬ ಅಭಿಲಾಷೆಯು ಜಗದ್ಗುರುವೆಂದು ಹೆಸರಿಟ್ಟುಕೊಂಡಿರತಕ್ಕ ಪೋಪ್‌ಗೂ ಪಿಶಾಚಕ್ಕೂ ಸಮರ್ಪಕವಾದದ್ದೇ ಹೊರತು, ಯುಕ್ತಾಯುಕ್ತ ವಿವೇಚನವುಳ್ಳ ಜನಗಳಿಗೆ ತಕ್ಕದ್ದಲ್ಲ. ಮತಾಭಿಮಾನಿಗಳು ತಮ್ಮ ಮತ ಧರ್ಮಗಳನ್ನು ಪ್ರಕಾಶಪಡಿಸಬೇಕೇ ಹೊರತು ಇತರ ಮತಸ್ಥರನ್ನು ಚತುರೋಪಾಯಗಳಿಂದಲೂ ತಮ್ಮ ಮತಕ್ಕೆ ಸೇರಿಸಿಕೊಳ್ಳುವ ಪ್ರಯತ್ನವನ್ನು ಮಾಡುವುದು ಯೋಗ್ಯವಾದದ್ದಲ್ಲ. ಬಲಾತ್ಕಾರವಾಗಿ ಸೇರಿಸಲ್ಪಟ್ಟವರು ಸುಲಭವಾಗಿ ಹೊಸ ಮತಧರ್ಮ ಪರಿತ್ಯಾಗವನ್ನು ಮಾಡುವರು" ಎಂದು ಹೇಳಿರುವರು. ಈ ಅಂಶವನ್ನು ಆರ್ನಲ್ಡ್‌ರವರು ಪರಾಲೋಚಿಸಿ ಅವರ ಮತಸಂಬಂಧವಾದ ಉಪನ್ಯಾಸಗಳ ಮೊದಲನೇ ಪುಸ್ತಕದಲ್ಲಿ ವಿಸ್ತಾರವಾಗಿ ಬರೆದಿರುವರು. ಅದರ ಪೀಠಿಕೆಯಲ್ಲಿ ಅವರು ಹೇಳಿರುವದೇನಂದರೆ:—ಕ್ರಿಸ್ತಮತಸಿದ್ಧಾಂತಗಳಲ್ಲಿ ಅನೇಕ ಸದ್ಧ

ಆರ್ನಲ್ಡ್‌ರವರ ಚರಿತ್ರೆ.

ಆರ್ನಲ್ಡ್‌ರವರು ಮತವಿಚಾರದಲ್ಲಿ ಪೂರ್ಣ ಪ್ರಜ್ಞೆಯುಳ್ಳವರಾಗಿದ್ದರು. ಕ್ರಿಸ್ತಮತದಲ್ಲಿರತಕ್ಕ ಭೇದಗಳನ್ನೂ ಆಚಾರ ವ್ಯತ್ಯಾಸಗಳನ್ನೂ, ಪರಸ್ಪರ ನ್ಯೂನತೆಗಳನ್ನೂ ನೋಡಿ ಇದಕ್ಕೆ ಅಜ್ಞಾನವೇ ಮುಖ್ಯಕಾರಣವೆಂದು ತಿಳಿದುಕೊಂಡು ಪರಸ್ಪರ ವಿರೋಧಗಳನ್ನು ಕಡಮೆ ಮಾಡುವ ಪ್ರಯತ್ನದಲ್ಲಿ ಬದ್ಧಾದರರಾಗಿದ್ದರು. ೧೮೨೬ನೇ ಇಸವಿಯಲ್ಲಿ ಮತ ದ್ವೇಷಗಳನ್ನು ತಪ್ಪಿಸಬೇಕೆಂಬ ಕುತೂಹಲವು ಇವರಿಗೆ ಉಂಟಾಯಿತು. ಹಾಗೆ ತಪ್ಪಿಸುವುದಕ್ಕೆ ವಿದ್ಯಾಭಿವೃದ್ಧಿಯೂ ಜ್ಞಾನಾಭಿವೃದ್ಧಿಯೂ ಮುಖ್ಯಕಾರಣಗಳೆಂದು ಭಾವಿಸಿದ್ದರು. ಪರಸ್ಪರ ಮತದ್ವೇಷಗಳನ್ನು ತಪ್ಪಿಸಬೇಕೆಂಬ ಅಭಿಪ್ರಾಯದಿಂದ ಕ್ರಿಸ್ತಮತದ ಪರಸ್ಪರ ವಿರುದ್ಧವಾದ ಶಾಖೆಗಳನ್ನು ಕೂಲಂಕಷವಾಗಿ ಓದಿ ಅವುಗಳಲ್ಲಿರತಕ್ಕ ಪರಸ್ಪರ ಭೇದಗಳನ್ನು ನಿಷ್ಕರ್ಷಿಸಿ ತಮ್ಮ ಶಾಖೆಗಳೇ ಸತ್ಯವಾದವುಗಳೆಂಬದಾಗಿಯೂ, ತನಗೆ ವಿರೋಧವಾದವರ ಸಿದ್ಧಾಂತಗಳು ಅನನ್ಯಯವಾದವುಗಳೆಂಬದಾಗಿಯೂ ದುರಭಿಮಾನದಿಂದ ಪ್ರವರ್ತಿಸತಕ್ಕವರ ಲೇಖನಗಳನ್ನೂ, ವಾಕ್ಯಾರ್ಥಗಳನ್ನೂ ನೋಡಿ ಅವುಗಳನ್ನು ಪರಿಶೀಲಿಸಿ ಪಾಟು ಮಾಡಬೇಕೆಂದು ಬಹಳವಾಗಿ ಕುತೂಹಲವಟ್ಟರು. ಕುರುಡರನ್ನು ನೋಡುವಂತೆ ಮಾಡುವುದು ಹಾಗೆ ಕಷ್ಟವೋ ಹಾಗೆಯೇ ದುರಭಿಮಾನವಾದ ಪ್ರತಿನಿವಿಷ್ಟರಾದ ಜನಗಳು ಈ ಪಾದುರಭಿಮಾನವನ್ನು ಬಿಟ್ಟು ಎಲ್ಲಾ ಸಿದ್ಧಾಂತಗಳಲ್ಲಿಯೂ ಸಮನ್ವಯಿಯುಳ್ಳವರಾಗುವಂತೆ ಮಾಡುವುದು ಕಷ್ಟವಾಗಿ ತೋರುತ್ತಾ ಇತ್ತು. ಎಲ್ಲಾ ಕ್ರಿಸ್ತ ಉಪಮತ ಸಿದ್ಧಾಂತಗಳಲ್ಲಿಯೂ ಗುಣದೋಷಗಳನ್ನು ಪರೀಕ್ಷಿಸಿ, ದೋಷಗಳನ್ನು ಬಿಟ್ಟು ಗುಣಾಂಶಗಳನ್ನು ಅವಲಂಬಿಸುವಂತೆ ಮಾಡುತ್ತಾ ಬಂದರು. ಕ್ರಿಸ್ತಸಿದ್ಧಾಂತವು ಸಾಕ್ಷಾತ್ತಾಗಿ ದೇವರಿಂದ ಮನುಷ್ಯನಿಗೆ ಉಪದೇಶಿಸಲ್ಪಟ್ಟಿತು ಎಂಬುವ ವಿಷಯವು ಇವರಿಂದ ಸಂಪೂರ್ಣವಾಗಿ ಪರೀಕ್ಷಿಸಲ್ಪಟ್ಟಿತು. ಕ್ರಿಸ್ತಮತಸ್ಥರಲ್ಲಿ ತ್ರಿಮೂರ್ತಿಗಳೆಂಬದಾಗಿ ಇಟ್ಟುಕೊಂಡು ಇವರೆ ಜಗದೀಶ್ವರನು, ಅವನ ಮಗನಾದ ಕ್ರಿಸ್ತನು, ಆತ್ಮನು ಇವೇ ತ್ರಿಮೂರ್ತಿಗಳು. ಜಗದೀಶ್ವರನು ಒಬ್ಬ ಮನುಷ್ಯನು ಇನ್ನೊಬ್ಬ ಮನುಷ್ಯನಿಗೆ ಉಪದೇಶಿಸುವಂತೆ ಕ್ರಿಸ್ತ ಸಿದ್ಧಾಂತಗಳನ್ನು ಉಪದೇಶಿಸಲಿಲ್ಲವೆಂಬದಾಗಿಯೂ, ಆತ್ಮಸ್ವರೂಪದಿಂದ ಈ ಸಿದ್ಧಾಂತವನ್ನು ಬೇರೆವರ ಮನಸ್ಸಿಗತನಾಗಿಸ್ಪ

ವನ್ನು ತೆಗೆದುಕೊಂಡು ಇಂಗಾಲಾಮ್ಲವನ್ನು ಬಿಡುವುವು. ಸಸ್ಯಗಳು ಪ್ರಾಣಿಗಳು ಪರಸ್ಪರ ಉಪಕಾರಿಗಳಾಗಿರುವುವು. ಸಸ್ಯಾದಿಗಳು ಸತ್ತು ಕೊಳೆಯಲುಪಕ್ರಮಿಸಿದಾಗ ಅವುಗಳ ಇಂಗಾಲಾಂಶವು ವಾಯುವಿನ ಆಮ್ಲದೊಡನೆ ಸೇರಿ ವಾಯುಮಂಡಲಾಂತರ್ಗತವಾಗಿರುವುದು. ಹೀಗೆಯೇ ಪ್ರಾಣಿಗಳು ಸತ್ತು ಸುಡಲ್ಪಟ್ಟಾಗಲೂ ಕೊಳೆತು ವಾಯುಮಂಡಲವನ್ನು ಸೇರಿದಾಗಲೂ ಇಂಗಾಮ್ಲವೂ ವಾಯುಮಂಡಲವನ್ನು ಸೇರುವುದು. ಇದು ಅನಿಲಾವಸ್ಥೆಯಲ್ಲಿ ವಾಯುಮಂಡಲದಲ್ಲಿದ್ದು ಅಲ್ಲಿಂದ ಮಳೆಬಂದಾಗ ಮಳೆ ನೀರಿನೊಡನೆ ಭೂಮಿಗೆ ಬೀಳುವುದು. ಇದು ಅತ್ಯುತ್ತಮ ಗೊಬ್ಬರವಾಗಿ ಪರಿಣಮಿಸುವುದು. ಆದುದರಿಂದಲೆ ಸಸ್ಯಾದಿಗಳಿಗೆ ಬರೀ ನೀರಿಗಿಂತಲೂ ಮಳೆಯ ನೀರಿನಿಂದ ವಿಶೇಷಪ್ರಯೋಜನವುಂಟಾಗುವುದು.

ಅಗ್ನಿಪರ್ವತಗಳ ಪ್ರದೇಶದಲ್ಲಿ ಭೂಮಿಯಿಂದ ಇಂಗಾಲಾಮ್ಲವು ವಿಶೇಷವಾಗಿ ಹೊರಡುವುದು. ಪ್ರಪಂಚದಲ್ಲಿ ಎಲ್ಲೆಲ್ಲಿಯೂ ವಿಶೇಷವಾಗಿ ಇರುವ ಸಸ್ಯಾದಿಗಳಿಗೆ ಬೇಕಾದ ಇಂಗಾಲವು ಬೇಕಾದಮಟ್ಟಿಗೂ ಸಿಕ್ಕುವಂತೆ ವಾಯುಮಂಡಲವೆಲ್ಲಾ ಈ ವಾಯುವಿನ ಅಂಶದಿಂದ ತುಂಬಲ್ಪಡುವುದು. ಆದಾಗ್ಯೂ ವಾಯುವಿನಲ್ಲಿ ಈ ಅಂಶವು ಆಮ್ಲಜನಕ ಮತ್ತು ಹೈಡ್ರಜನಕಗಳೊಡನೆ ಹೋಲಿಸಿದರೆ ಬಹಳ ಅಲ್ಪವಾಗಿರುವುದು. ೧೦,೦೦೦ ವಾಯುವಿನ ಅಂಶದಲ್ಲಿ ೪ ಭಾಗ ಇಂಗಾಲಾಂಶಮಾತ್ರ ಇರುವುದು. ಇಷ್ಟು ಕೊಂಚವಿದ್ದಾಗ್ಯೂ ಸಸ್ಯಾದಿಗಳು ಕೋಮಲವಾಗಿ ಬೆಳೆಯುವುದಕ್ಕೆ ವಾಯುಮಂಡಲದಿಂದ ಅನುಕೂಲನಾಗತಕ್ಕ ಇಂಗಾಮ್ಲವು ಸಾಕಾಗುತ್ತದೆ.

ವಾಯುವಿನಲ್ಲಿ ಸೇರಿಕೊಂಡಿರತಕ್ಕ ಬೇರೆ ಒಂದು ಭಾಗಕ್ಕೆ ನೀರಿನ ಆವಿ ಎನ್ನುತ್ತಾರೆ. ನೀರನ್ನು ಕಾಸಿದರೆ ಅದು ಹೊಗೆಯಂತೆ ಪಾತ್ರೆಯನ್ನು ಬಿಟ್ಟು ಹೊರಡುವುದು. ಕ್ರಮೇಣ ಅದು ವಾಯುಮಂಡಲದಲ್ಲಿ ಅದೃಶ್ಯವಾಗುವುದು. ನೀರನ್ನು ಅವಿಚ್ಛಿನ್ನವಾಗಿ ಕಾಸುತ್ತಿದ್ದರೆ ಪಾತ್ರೆಯಲ್ಲಿರತಕ್ಕ ನೀರೆಲ್ಲಾ ಆವಿಯರೂಪವಾಗಿ ವಾಯುಮಂಡಲವನ್ನು ಸೇರುವುದು. ಹೀಗೆ ಸೇರುವ ನೀರಿನ ಆವಿಯಿಂದ ವಾಯುಮಂಡಲದಲ್ಲಿ ಪ್ರತ್ಯಕ್ಷವಾದ ಬದಲಾವಣೆ ಏನೂ ಇರುವುದಿಲ್ಲ. ಒಂದು ಕೊಠಡಿಯಲ್ಲಿ ನೀರನ್ನು ಕಾಸಿ ನೀರೆಲ್ಲಾ ಆವಿಯಾಗುವಂತೆ ಮಾಡಿ ವಾಯುಸಂಚಾರಕ್ಕೆ ಅವಕಾಶವಿಲ್ಲದಂತೆ ಮಾಡಿದ್ದಪಕ್ಷದಲ್ಲಿ ಅದು ಆ ಕೊಠಡಿಯ ವಾಯುವಿನಲ್ಲಯೇ ಇರುವುದು. ಅದನ್ನು ವಾಯುವಿನಿಂದ ತೆಗೆಯುವುದು ಸುಲಭ. ಆ ಕೊಠಡಿಗೆ ತಣ್ಣಗಿರ

ರ್ಮಗಳು ಹೇಳಲ್ಪಟ್ಟವೆ. ಅವುಗಳನ್ನು ಅನುಷ್ಠಿಸಿದವರಿಗೆ ಇಹಪರಸಾಧನೆಗಳಿ ರಡೂ ಉಂಟು. ಅವುಗಳನ್ನು ಜನಗಳಿಗೆ ಸ್ಪಷ್ಟವಾಗಿ ತಿಳಿಯುವಂತೆ ಪುಷ್ಟೀಕ ರಿಸಿ ಈ ಗ್ರಂಥದಲ್ಲಿ ಬರೆದಿರುವೆನು ಈ ಧರ್ಮಗಳನ್ನೆಲ್ಲಾ ಬಲಾತ್ಕಾರದಿಂದ ಅನು ಷ್ಠಾನಕ್ಕೆ ತರುವುದು ಕಷ್ಟ. ಇದರ ಗುಣಾಂಶವು ಗೊತ್ತಾದಕೂಡಲೇ ಜನಗಳು ತಾವಾಗಿಯೇ ಬೇಕಾದದ್ದನ್ನು ಅನುಷ್ಠಾನಕ್ಕೆ ತಂದುಕೊಳ್ಳುವರು. ಪರಮತದ್ವೇಷ ವನ್ನು ತೋರಿಸದೆ ನಮ್ಮ ಮತದಲ್ಲಿರತಕ್ಕ ಸಿದ್ಧಾಂತಗಳ ಗುಣಗಳನ್ನು ವಿಮರ್ಶೆ ಮಾಡಿ ಹೇಳುವುದು ನಮ್ಮ ಧರ್ಮ. ಅದನ್ನು ಅನುಸರಿಸಿ ನಡಿಯುವದರ ವಿಷಯ ದಲ್ಲಿ ಜನರಿಗೆ ಇಚ್ಛಿಕವಾಗಿಗಬೇಕು ಮತಾವಲಂಬನೀಯವಾದ ವೇಷವು ಮುಖ್ಯ ವೆಲ್ಲ; ಅನುಷ್ಠಾನವೇ ಮುಖ್ಯವಾದದ್ದು. ಮತವಿಷಯದಲ್ಲಿ ವೇಷಧಾರಿಗಳು ಕೋಟ್ಯಂತರವಿರುವರು. ಅವರಿಂದ ಪ್ರಪಂಚಕ್ಕೆ ಯಾವ ಪ್ರಯೋಜನವೂ ಇಲ್ಲ. ಸಮಸ್ತ ಮತಧರ್ಮಗಳನ್ನೂ ತಿಳಿದುಕೊಂಡು ಒಂದನ್ನೂ ಅನುಷ್ಠಿಸದೇ ಇರುವ ಜನಗಳಿಗಿಂತ ಸರ್ವಜ್ಞರಲ್ಲದೇ ಇದ್ದಾಗ್ಯೂ ಒಂದೆರಡು ಧರ್ಮಗಳನ್ನಾದರೂ ತಿಳಿದು ಕೊಂಡು ಅದನ್ನು ಮನೋವಾಕ್ಕಾಯಗಳಲ್ಲಿ ಅನುಷ್ಠಾನಕ್ಕೆ ತಂದುಕೊಂಡಿರುವವರು ಪೂಜ್ಯರು

ಆರ್ನಲ್ಡ್‌ರವರ ಈ ಅಭಿಪ್ರಾಯವು ಬಹಳ ಶ್ಲಾಘ್ಯವಾದದ್ದು. ನಮ್ಮ ದೇಶ ದಲ್ಲಿ ಅನೇಕ ಮತಸ್ಥರಿರುತ್ತಾರೆ. ಈ ಮತಗಳಿಗೆ ಸೇರಿದವರಲ್ಲಿ ೧೦೦ ಕ್ಕೆ ೯೯ ಜನ ವೇಷಧಾರಿಗಳು. ಮತೋಕ್ತವಾದ ಧರ್ಮಗಳನ್ನು ಅನುಷ್ಠಾನದಲ್ಲಿ ತಂದುಕೊಂಡಿ ರುವವರು ಬಹಳ ಅಪೂರ್ವ. ವಾಗಾಡಂಬರದಲ್ಲಿ ವಶಿಷ್ಠರಿಗೆ ಸಮಾನನಾಗಿಯೂ, ಅನುಷ್ಠಾನದಲ್ಲಿ ವಾಲ್ಮೀಕ್ಯರಾಗಿಯೂ ಇರತಕ್ಕವರಿಂದ ಯಾವಮತಧರ್ಮಗಳುತಾನೇ ಪ್ರಚಾರಕ್ಕೆ ಬರುವವು. ಆರ್ನಲ್ಡ್‌ರವರು ಧರ್ಮಗಳ ಅನುಷ್ಠಾನ ವಿಷಯದಲ್ಲಿ ಬರೆದಿ ರತಕ್ಕ ಸಂಗತಿಯನ್ನು ಪರ್ಯಾಲೋಚಿಸುವುದು ನಮಗೂ ಕರ್ತವ್ಯವಾದದ್ದು.



ವಾಯು

ವಾಯು ವಿನೆಲ್ಲರುವ ಇಂಗಾಲಾಮ್ಲದಿಂದ ಬೆಳಕುಳ್ಳಕಾಲದಲ್ಲಿ ಸಸ್ಯಾದಿಗಳು ಇಂಗಾಲವನ್ನು ತೆಗೆದುಕೊಂಡು ಅಮ್ಲ (ಆಕ್ಸಿಜೆ) ಬಿಡುವುದು ಪ್ರಾಣಿಗಳು ಅಮ್ಲ

ಮೆಗಳಿಗೂ, ಕಾಲಿವೆಗಳಿಗೂ, ನದಿಗಳಿಗೂ, ಸರೋವರಗಳಿಗೂ ಕಾರಣವಾಗಿ ಪರಿಣಮಿಸುವುದಲ್ಲದೆ ಸಸ್ಯಾದಿಗಳಿಗೂ ಪ್ರಾಣಿಗಳಿಗೂ ಮುಖ್ಯಜೀವನವಾಗಿ ಏರ್ಪಟ್ಟಿರುವುದು. ಹೀಗೆ ನಿರಂತರವಾಗಿ ಪ್ರಪಂಚವಲ್ಲಿರತ್ಕ ಜಲವು ಆವಿಯು ರೂಪವನ್ನೂ ಜಲರೂಪವನ್ನೂ, ಅಲಿಕಲ್ಲು ಹಿಮ ಮೊದಲಾದ ರೂಪಗಳಿನ್ನೂ ಹೊಂದಿ ಭೂಮಿ ಆಕಾಶಗಳಲ್ಲಿ ಸಂಚರಿಸುತ್ತಾ ಇರುವದೇ ಈ ಭೂಮಂಡಲದ ಜೀವರಾಶಿಗಳಿಗೆ ಆಧಾರವಾಗಿರುವದು. ನೀರಿನ ಆವಿಯು ೧೦೦೦ ಭಾಗ ವಾಯುವಿನಲ್ಲಿ ಸುಮಾರು ೪ ರಿಂದ ೧೪ ಭಾಗದಷ್ಟುಂಟು.

೩೬ನೆಯ ಪ್ರಕರಣ.

ಪ್ರದೀಪ ಅಥವಾ ಲಾಂದ್ರ
THE LANTERN.

ಲಾಂದ್ರದ ವಿಷಯವನ್ನು ತಿಳಿಯಬೇಕಾದರೆ ಮೊದಲು ಅದರ ಅಂಗ ವಿವರಣವನ್ನು ಗೊತ್ತುಮಾಡಿಕೊಳ್ಳಬೇಕು. ಪ್ರದೀಪಕ್ಕೆ ಮುಖ್ಯವಾದ ಅಂಗಗಳಾವುವೆಂದರೆ—(೧) ಗೂಡು (೨) ದೀವಿಗೆ ಅಥವಾ ದೀಪ (೩) ಯಂತ್ರಕಾಚಗಳು (೪) ರಂಗವ್ರ. ೩೬ನೆಯ ಚಿತ್ರವನ್ನು ನೋಡಬೇಕು.

ಗೂಡು (ಗೂ) ಇತರ ಮೂರು ಅಂಗಗಳಿಗೂ ಆಶ್ರಯವಾಗಿದೆ. ಇದರೊಳಗೆ (ದೀ) ಇಡಲ್ಪಡುತ್ತದೆ. ಈ ದೀವಿಗೆಯು ಬೇಕಾಗುವ ಬೆಳಕನ್ನು ಕೊಡುತ್ತದೆ. ಯಂತ್ರಕಾಚಗಳೆರಡಿವೆ. ಒಂದು ದೊಡ್ಡದು, ಮತ್ತೊಂದು ಚಿಕ್ಕದು. ದೊಡ್ಡದಾದ ಕಾಚವು. (ರಾ) ಬೆಳಕನ್ನು ಚದರದಂತೆ ಒಟ್ಟುಮಾಡುತ್ತದೆ; ಆದುದರಿಂದ ಇದಕ್ಕೆ ರಾಶಿ ಎಂದು ಹೆಸರು. ಚಿಕ್ಕದಾದ ಕಾಚವು (ದ) ಚಿತ್ರವನ್ನು ಪರದೆಯಮೇಲೆ ದೊಡ್ಡದಾಗಿ ಕಾಣುವಂತೆ ಮಾಡುತ್ತದೆ. ಇದಕ್ಕೆ ದರ್ಶಕವೆಂದು ಹೆಸರು. ಇವೆರಡು ಯಂತ್ರಕಾಚಗಳು ಗೂಡಿನ ಮುಂಭಾಗದಲ್ಲಿಡಲ್ಪಟ್ಟಿವೆ. ಇವ್ರಗಳ ಮಧ್ಯದಲ್ಲಿ ರಂಗ

ತಕ್ಕ ಹಿಮದ ಗಡ್ಡೆಯನ್ನು ಒಂದು ಪಾತ್ರೆಯಲ್ಲಿ ಹಾಕಿ ಅದನ್ನು ತಟ್ಟೆಯಿಲ್ಲಿಟ್ಟರೆ ವಾ
ಯುವಿನಲ್ಲಿರತಕ್ಕ ನೀರಿನ ಆವಿಯು ಈ ಶೈತ್ಯದಿಂದ ದ್ರವಾವಸ್ಥೆಯನ್ನು ಹೊಂದಿ ಆ
ಪಾತ್ರೆಯಮೇಲೆ ಜಲಕಣಗಳಾಗಿ ಕೂತುಕೊಂಡು ಹನಿಗಳಾಗಿ ತಟ್ಟೆಗೆ ಹರಿಯು
ವದು. ಚಳಿಗಾಲದಲ್ಲಿ ಕಿಟಕಿಯ ಗಾಜುಗಳಿಂದ ಜಲಕಣಗಳು ತೊಟ್ಟಕ್ಕುವುದೇ ಇದ
ಕ್ಕೆ ದೃಷ್ಟಾಂತವಾಗಿರುವುದು. ನಮ್ಮ ದೇಶವು ಉಷ್ಣರಾಜ್ಯವಾದುದರಿಂದ ನಮ್ಮ
ಮನೆ ಒಳಗಿನ ವಾಯುವಿನಲ್ಲಿರತಕ್ಕ ನೀರಿನ ಆವಿಯು ಕಿಟಕೀಗಾಜಿನ ಹಲಿಗೆಗಳ
ಮೇಲೆ ಕೂತು ದ್ರವಾವಸ್ಥೆಯನ್ನು ಹೊಂದಿ ಸ್ರವಿಸುವುದಿಲ್ಲ. ಆದರೆ ಚಳಿರಾಷ್ಟ್ರ
ಗಳಲ್ಲಿ ಹೀಗಾಗುವುದು ಆ ದೇಶದ ಎಲ್ಲರಿಗೂ ಅನುಭವಸಿದ್ಧವಾದದ್ದು.)

ವಾಯುವಿಗೆ ನೀರಿನ ಆವಿಯು ಸೇರುವುದಕ್ಕಾದರೆ ನೀರನ್ನು ಕುದಿಸತಕ್ಕದ್ದೇ ಅ
ವಶ್ಯಕವಲ್ಲ. ತುಂಬಾ ಜನಗಳು ಸೇರಿರತಕ್ಕ ಶಾಖವಾದ ಕೊಠಡಿಗಳಲ್ಲಿ ಜನಗಳ ಶರೀ
ರದಿಂದ ಹೊರಟ ಜಲಾಂಶವು ಆವಿಯಾಗಿ ವಾಯುವಿನಲ್ಲಿ ಸೇರಿ ಕಿಟಕಿಯ ಗಾಜಿನಹಲ
ಗೆಗಳಿಂದ ಜಾರಿಬೀಳುವುದುಂಟು. ಹೀಗೆ ಸ್ರವಿಸಿದ ನೀರು ಕೆಲವುಕಾಲದಲ್ಲಿ ಬಹಳ
ಹೆಚ್ಚಾಗಿರುವುದು. ಈ ನೀರೆಲ್ಲಾ ಜನರ ಉಸಿರಿನಿಂದಲೂ ರೋಮಕೂಪಗಳಿ
ದಲೂ ಆವಿಯಾರೂಪವಾಗಿ ಹೊರಟದ್ದೆಂದು ಗೊತ್ತುಮಾಡುವುದು ಸುಲಭ. ನಮ್ಮ
ಉಸಿರಿನಿಂದಲೂ ರೋಮಕೂಪಗಳಿಂದಲೂ ಆವಿಯುರೂಪವಾಗಿ ಹೊರಡತಕ್ಕ ಜಲಾಂ
ಶವು ನಮ್ಮ ಕಣ್ಣಿಗೆ ಕಾಣುವುದಿಲ್ಲ. ಶರೀರವನ್ನು ಬಿಟ್ಟು ಹೊರಟಕೂಡಲೆ ವಾಯುವಿ
ಬಹಳ ತಣ್ಣಗಿದ್ದರೆ ಹೊಗೆಯಂತೆ ಈ ಜಲವು ಕಾಣಿಸಿ ತರುವಾಯ ಅದೃಶ್ಯವಾಗು
ವುದು. ಉಷ್ಣಕಾಲಗಳಲ್ಲಿ ಹೊಗೆಯಂತೆ ಈ ಜಲಾಂಶವು ಕಾಣುವುದೇ ಇಲ್ಲ.

ವಾಯುವು ಎಷ್ಟು ಜಲಾಂಶರಹಿತವಾಗಿದ್ದಾಗ್ಯೂ ಸ್ವಲ್ಪವಾದರೂ ಜಲಾಂ
ಶವು ಅದರಲ್ಲಿ ಅದೃಶ್ಯವಾಗಿ ಸೇರಿಕೊಂಡು ಇದ್ದೇಇರುವುದು. ವಾಯುಮಂಡಲ
ದಲ್ಲಿ ಸೇರಿಕೊಂಡಿರತಕ್ಕ ಜಲವು ಶಿಲಾವಸ್ಥೆಯನ್ನೂ ಹೊಂದಿದಾಗ ಅಲಿಕಲ್ಲು
ಮೊದಲಾದ ರೂಪವನ್ನು ಹೊಂದುವುದು ; ಜಲಾವಸ್ಥೆಯನ್ನು ಹೊಂದಿದಾಗ ಮಳೆ
ಯಂತೆವರ್ಷಿಸುವುದು.

ಪ್ರಪಂಚದಲ್ಲಿರತಕ್ಕ ಜಲವೆಲ್ಲಾ ಬೆಂಕಿ ಮತ್ತು ಸೂರ್ಯನ ಶಾಖದಿಂದ ಆವಿ
ಯಾಗಿ ವಾಯು ಮಂಡಲವನ್ನೂ ಸೇರುವುದು. ಅಲ್ಲಿಂದ ಜಲಾವಸ್ಥೆ ಶಿಲಾವಸ್ಥೆ
ಗಳಾಗಿ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ವರ್ಷಿಸುವುದು. ಇದು ಮಳೆಗೂ ಚಿರ

ಕೆಲವು ಗೂಡುಗಳ ಹಿಂಭಾಗವು ಸಂಪೂರ್ಣವಾಗಿ ಮುಚ್ಚಲ್ಪಟ್ಟಿರುತ್ತದೆ ಮತ್ತು ಕಲವುಗಳ ಹಿಂಭಾಗದಲ್ಲಿ ಬೆಳಕನ್ನು ನೋಡುವುದಕ್ಕೆ ಕನ್ನಡಿಯನ್ನು ಜೋಡಿಸಿರುವ ರಂಧ್ರವಿರುತ್ತದೆ. ವಾಯುನಾಳಗಳನ್ನು ಒಳಗೆ ತರುವುದಕ್ಕೆ ಸುಣ್ಣದ ದೀಪವನ್ನಿರಿಸುವ ಗೂಡಿನ ಹಿಂದುಗಡೆ ದ್ವಾರವಿರುವುದು. ಆ ದ್ವಾರದಲ್ಲಿ ಬೆಳಕು ಚೆದರಿ ಪ್ರಯೋಜನವಾಗದಹಾಗೆ ಗೂಡಿನ ಹಿಂದೆ ಕಪ್ಪು ತೆರೆಯನ್ನು ಹಾಕುವುದುಂಟು. ಆರ್ಗ್ಯಾಂಡ್ (Argand lamps) ದೀವಿಗೆಗಳನ್ನಿಡುವ ಗೂಡಿನ ಹಿಂಭಾಗವು ಸಂಪೂರ್ಣವಾಗಿ ಮುಚ್ಚಲ್ಪಟ್ಟಿರುತ್ತದೆ. ಈ ದಿವಿಗೆಗಳ ವಿಷಯವನ್ನು ಮುಂದೆ ತಿಳಿಸುತ್ತೇವೆ.

ಗೂಡಿನ ಮೇಲುಭಾಗದಲ್ಲಿ ಹೊಗೆ ಕೊಳವೆ ಅಥವಾ ಚಿಮಣಿ ಯಿರುತ್ತದೆ. ಪ್ಯಾರಾಫಿನ್ (Paraffin) ಎಣ್ಣೆಯದೀಪವನ್ನಿಡತಕ್ಕ ಗೂಡಿನ ಮೇಲುಭಾಗವು ತೆರೆದಿರುತ್ತದೆ. ಆರ್ಗ್ಯಾಂಡ್ ದೀವಿಗೆಯನ್ನಿಡುವ ಲಾಂದ್ರದ ಗೂಡಿಗೆ ಉದ್ದವಾದ ಚಿಮಣಿಯಿರಬೇಕು. ಸುಣ್ಣದ ದೀವಿಗೆಗೆ ಟೋಪಿಯುಹಾಗಿರುವ ಮುಚ್ಚಿಗೆಯುಳ್ಳ ತಂತು ಚಿಮಣಿಯು ಇರುತ್ತದೆ. ಗೂಡಿನ ಮೇಲುಭಾಗವನ್ನು ತೆಳುವಾದ ಕಬ್ಬಿಣದ ತಗಡು ದೀಪದ ಸೆಕೆಗೆ ಕಾಯುವುದರಿಂದ ಪ್ರದರ್ಶನಕ್ಕೆ ಬೇಕಾಗುವ ವಸ್ತುಗಳನ್ನು ಬಿಸಿಮಾಡುವುದಕ್ಕೂ ಶೀತಕಾಲದಲ್ಲಿ ಚಿತ್ರಕನ್ನಡಿಗಳ ಮೇಲಿರುವ ತೇವವನ್ನು ಹೋಗಲಾಡಿಸುವುದಕ್ಕೂ ಅನುಕೂಲವಾಗಿರುತ್ತದೆ.

ಅಮೇರಿಕಖಂಡದ ಸಂಯುಕ್ತಸಂಸ್ಥಾನಗಳಲ್ಲಿ ಒಂದು ವಿಜಾತೀಯವಾದ ಲಾಂದ್ರದ ಗೂಡನ್ನು ಮಾಡುತ್ತಾರೆ. ನಾಲ್ಕು ಕಾಲಿನ ಒಂದು ಲೋಹದ ಚೌಕಿಯನ್ನು ಮಾಡಿ ಅದರ ಮುಂದುಗಡೆ ಯಂತ್ರಕಾಚಗಳನ್ನಿಡತಕ್ಕ ಹಲಿಗೆಯನ್ನು ಜಂಟಿಸಿ, ಇವುಗಳಮೇಲೆ ಗಾಡಿಯುಕವಾನಿನಂತೆ ಹೊದ್ದಿಕೆಯನ್ನು ಹಾಕಿರುತ್ತಾರೆ.

ಅಲ್ಲಿಯೇ ಸ್ವಲ್ಪ ವ್ಯತ್ಯಸ್ತವಾದ ಮತ್ತೊಂದು ಗೂಡನ್ನು ಮಾಡುವುದುಂಟು, ಹೇಗೆಂದರೆ—ಕಾಲಿಲ್ಲದ ಒಂದು ಲೋಹದ ಚೌಕಿಯನ್ನು ಮಾಡಿ ಅದರ ಮುಂಭಾಗದಲ್ಲಿ ಯಂತ್ರಕಾಚಗಳಿಗೂ ರಂಗಕ್ಕೂ ಆಶ್ರಯವಾದ ಹಲಿಗೆಯನ್ನು ಜಂಟಿಸಿ ಹಿಂಭಾಗದಲ್ಲಿ ಎರಡು ಕಂಭಗಳಿನ್ನಿಟ್ಟು ಮೇಲುಗಡೆ ಹೊಗೆಯ ಕೊಳವೆಯುಳ್ಳ ತಗಡಿನ ಮುಚ್ಚಿಗೆಯನ್ನು ಮುಚ್ಚಿ ಹಿಂದುಗಡೆಗೂ ಪಾರ್ಶ್ವಗಳಿಗೂ ಕರೀಮುಸಕನ್ನು ಹಾಕಿರುತ್ತಾರೆ. ಹಗುರುವಾಗಿರುವುದರಿಂದ ಇಂತಹ ಲಾಂದ್ರದಗೂಡುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುಲಭವಾಗಿ ತೆಗೆದುಕೊಂಡು ಹೋಗಬಹುದು.

(ಥ) ವಿದೆ. ಇದರಲ್ಲಿ ತೋರಿಸಬೇಕಾದ ಚಿತ್ರವನ್ನಾಗಲೀ ವಸ್ತುವನ್ನಾಗಲೀ ಇಡ ತಾರ. ಈ ಅಂಗಗಳಲಿ ಪ್ರತಿ ಒಂದರ ಸಂಗತಿಯನ್ನು ಚೆನ್ನಾಗಿ ಪರಿಶೀಲಿಸಬೇಕು.

ಗೂಡು

ಇದರ ಮುಖ್ಯ ಉಪಯೋಗಗಳು ಎರಡು—(೧) ಮೊದಲು ಹೇಳಿದಂತೆ ಇದು ಇತರ ಭಾಗಗಳಿಗ ಆಶ್ರಯವಾಗಿರ ವುದು. (೨) ಬೆಳಕು ಚದರಿಹೋಗದಂತೆ ತಡೆದು ಪ್ರದರ್ಶನಕ್ಕೆ ಕುಂದಕವಿಲ್ಲದಂತೆ ಮಾಡುತ್ತದೆ. ಗೂಡಿನ ಆಕಾರವು ಗಾತ್ರವೂ ಒಳಗಿಡುವ ದೀವಿಗೆಗಳಿಗೆ ತಕ್ಕಂತೆ ಬೇರೆಬೇರೆಯಾಗಿರ ವುವು.

ಜಪಾನ್ ಎಂಬ ವೈರಗೆಸ್ ಹಚ್ಚಿದ ತಗರದಿಂದಾಗಲೀ ಕಬ್ಬಿಣದ ತಗಡಿನಿಂದಾಗಲೀ ಮಾಡಿದ ಗೂಡು ಸೊಗಸಾಗಿಯೂ ಸುಲಭಕ್ರಯವುಳ್ಳದ್ದಾಗಿಯೂ ಇರುತ್ತದೆ. ಗೂಡನ್ನು ಮರದಿಂದಲೂ ಹಿತ್ತಾಳೆಯಿಂದಲೂ ಮಾಡುವುದುಂಟು. ಮರದ ಗೂಡಿನ ಹೊರಗಡೆ ಕಬ್ಬಿಣದ ಅಥವಾ ತಗರ್ದ ಅವರಕವನ್ನು ಹಾಕಿರುತ್ತಾರೆ. ತೇಗ ಅಥವಾ ಮಾಗನಿ ಮರದಿಂದ ಗೂಡನ್ನು ಮಾಡುತ್ತಾರೆ. ಮರವು ಸಮವಾಗಿಯೂ ನಯವಾಗಿಯೂ ಇರಬೇಕು. ಗೂಡಿಗೆ ಯಾವಚಿತ್ರಕೆಲಸವೂ ಅನಾವಶ್ಯಕ. ಇದಕ್ಕೆ ದುಡ್ಡು ಹೆಚ್ಚಾಗಿ ವ್ಯಯವಾಗುವದಲ್ಲದೆ ಚಿತ್ರವು ಬೇಗನೆ ಕೆಟ್ಟುಹೋಗಿ, ನೋಡುವುದಕ್ಕೆ ಅಸಹ್ಯವಾಗಿಯೂ ಪ್ರದರ್ಶನಕ್ಕೆ ಅನನುಕೂಲವಾಗಿಯೂ ಆಗುತ್ತದೆ.

ಗೂಡಿನ ಮುಂಭಾಗದಲ್ಲಿ ಬಾಯಿ ಇದೆ. ಈ ಬಾಯಿಯಲ್ಲಿ ರಾಟಿಕಾರಿಯಿಡಲ್ಪಟ್ಟಿದೆ. ಇದರ ಮುಂದುಗಡೆಯಲ್ಲಿ ರಂಗವೂ ರಂಗದ ಮುಂದೆ ದರ್ಶಕವೂ ಇರುತ್ತವೆ.

ಒಳಗೆ ದೀವಿಗೆಯನ್ನಿಡುವುದಕ್ಕೆ ಗೂಡಿನ ಉಭಯಪಾರ್ಶ್ವಗಳಲ್ಲಾಗಲಿ ಅಥವಾ ಒಂದೇಪಕ್ಕದಲ್ಲಾಗಲಿ ಬಾಗಿಲಿರುತ್ತದೆ. ವಿಶೇಷವೆನಾಗಿ ಪ್ರದರ್ಶನವಾಡಬೇಕಾದರೆ ಉಭಯಪಾರ್ಶ್ವಗಳಲ್ಲೂ ಬಾಗಿಲುಗಳಿರುವುದು ಅನುಕೂಲ. ಕದಕ್ಕೆ ಸಣ್ಣ ರಂಧ್ರವಿರುತ್ತದೆ. ಈ ರಂಧ್ರಕ್ಕೆ ಕಪ್ಪಾದ ಫೀಲೀಕನ್ನಡಿಯನ್ನು ಜೋಡಿಸುತ್ತಾರೆ. ಇದರ ಮೂಲಕ ಆಗಾಗ ಒಳಗಿರುವ ದೀಪಸ್ಥಿತಿಯನ್ನು ನೋಡಿಕೊಳ್ಳಬಹುದು. ಇಂಥ ಕನ್ನಡಿಯಿಲ್ಲದೆ, ಅತಿಪ್ರಕಾಶವಾನವಾದ ಸಣ್ಣದ ಬೆಳಕನ್ನು ನೋಡುವುದಕ್ಕಾಗುವುದಿಲ್ಲ.

ಯಾವ ಕೆಲಸವನ್ನು ಮಾಡಿದಾಗ್ಯೂ, ಅದರ ಆಕಾರವನ್ನೂ, ಪ್ರಮಾಣವನ್ನೂ ಮೊದಲು ಚಿತ್ರದಲ್ಲಿ ತೋರಿಸುವುದನ್ನು ಕಲಿತು, ಆಮೇಲೆ ಚಿತ್ರಿಸಿದ ಪ್ರಮಾಣಕ್ಕೆ ಸರಿಯಾಗಿ ಆ ವಸ್ತುವನ್ನು ಘಾಡಬೇಕು. ಹೇಗೆಂದರೆ—ಮಣ್ಣಿನಲ್ಲಿ ಒಂದು ಪ್ರತಿಮೆಯನ್ನು ಮಾಡುವುದಕ್ಕೆ ಮೊದಲು, ಪ್ರತಿಮೆಯು ಹ್ಯಾಗಿರಬೇಕೋ ಅದರ ಭಾವವನ್ನೂ, ಪ್ರಮಾಣವನ್ನೂ ಸ್ವಲ್ಪಮಾತ್ರ ಕಾಗದದಲ್ಲಿ ಚಿತ್ರಿಸಿ ನೋಡಿದಲ್ಲಿ ಆ ಪ್ರತಿಮೆಯನ್ನು ಮಾಡುವ ಪ್ರಯಾಸವು ಬಹಳ ಕಡಿಮೆಯಾಗುತ್ತದೆ ನಮ್ಮ ಮನಸ್ಸಿನಲ್ಲಿ ಒಂದು ವಸ್ತುವನ್ನು ಜ್ಞಾಪಿಸಿಕೊಳ್ಳುತ್ತೇವೆ ಇದರ ಜ್ಞಾನವನ್ನು ಮತ್ತೊಬ್ಬರಿಗೆ ತಿಳಿಸಬೇಕಾದರೆ ಏನುಮಾಡಬೇಕು? ಆ ವಸ್ತುವನ್ನು ತೆಗೆದು ಅವರಿಗೆ ತೋರಿಸಬೇಕು. ಅಥವಾ ಅದರ ಆಕಾರವನ್ನೂ, ಪ್ರಮಾಣವನ್ನೂ ಚಿತ್ರದಮೂಲಕವಾಗಿ ತಿಳಿಸಬೇಕು. ಬರೀವಾಚ್ಯದಲ್ಲಿ ಅದರ ಗುಣಗಳನ್ನು ಎಷ್ಟು ಹೇಳಿದಾಗ್ಯೂ, ಮನಸ್ಸಿಗೆ ಗೊತ್ತಾಗುವುದಿಲ್ಲ. ಸಾಧಾರಣವಾಗಿ ನಮ್ಮಲ್ಲಿ ಕೆಲಸಗಾರರಿಗೆ ಯಾವುದಾದರೂ ಒಂದು ವಸ್ತುವನ್ನು ತಯಾರು ಮಾಡುವುದಕ್ಕೆ ಹೇಳಿದಲ್ಲಿ, (ಮೊದಲು ಆ ಪದಾರ್ಥದ ಆಕಾರವನ್ನೂ, ಪ್ರಮಾಣವನ್ನೂ ಬರೆದು ತಿಳಿದುಕೊಳ್ಳಲು ಚಿತ್ರವನ್ನು ಬರಿಯುವಧಕ್ಕೆ ಬಾರದುದರಿಂದ) ಒಂದು ನಮೂನೆ ಇಲ್ಲದೆ ಮತ್ತೊಂದನ್ನು ಅದರಹಾಗೆ ಮಾಡಲಾರರು. ಹೀಗೆ ಯಾವ ಕೈಗೆಲಸವನ್ನು ಅಭ್ಯಾಸಮಾಡಿದರೂ ಚಿತ್ರವನ್ನು ಮೊದಲು ಕಲಿಯುವುದೂ ಅವಶ್ಯಕ.

ಯಾವ ವಿದ್ಯಕ್ಕೇ ಆಗಲಿ ಭಾಷೆಯು ಅವಶ್ಯಕವಾಗಿರುತ್ತದೆ. ಆದರೆ ಚಿತ್ರವೇ ಮೊದಲಾದ ಕೈಗೆಲಸಕ್ಕೆ ಭಾಷೆಯು ಅವಶ್ಯಕವಿಲ್ಲ. ಏತಕ್ಕಂದರೆ ಇದನ್ನು ಕಿವುಡರೂ ಮೂಗರೂ ಸಹಾ ಸುಲಭವಾಗಿ ಕಲಿತು ಕೆಲಸಗಾರರಾಗಿರುತ್ತಾರೆ. ಒಂದು ವಿಷಯವನ್ನು ಭಾಷೆಯಲ್ಲಿ ಎಷ್ಟು ಹೇಳಿದಾಗ್ಯೂ, ಅದರ ಚಿತ್ರವನ್ನು ಒಂದುಸಲ ಕಣ್ಣಿನಿಂದ ನೋಡಿದಷ್ಟು ಸ್ಪಷ್ಟವಾಗಿ ಗೋಚರವಾಗುವುದಿಲ್ಲ ಇದಕ್ಕೆ ಉದಾಹರಣೆ, ಸುಮಾರು ಎರಡು, ಮೂರು ವರುಷ ವಯಸ್ಸುಳ್ಳ ಒಂದು ಮಗುವು ತನಗೆ ಯಾವಭಾಷೆಯೂ ತಿಳಿಯದಿದ್ದರೂ ತನ್ನ ತಂದೆ ತಾಯಿಗಳ ಭಾವಚಿತ್ರವನ್ನು ನೋಡಿದಕೂಡಲೆ ಅಪ್ಪ, ಅವ್ವ, ಎಂಬು ಪರವಲ್ಲರುವ ಚಿತ್ರವನ್ನು ಕರೆಯುವುದು. ಆದುದರಿಂದ ವಸ್ತುಪ್ರದರ್ಶಕವಾದ ಈ ವಿದ್ಯೆಯು ಬಹಳ ಸುಲಭ. "ಭಾಷೆ" ಎನ್ನುವದೆಲ್ಲಾ ವಸ್ತುಗಳ ಪರಿಜ್ಞಾನವನ್ನು ತಿಳಿಸುವ ಸಂಜ್ಞೆ. ಈ "ಭಾಷೆ" ಎಂಬ ಸಂಜ್ಞೆಯನ್ನೂ

ಬೇರೆಯಾದಾಗ ಅವುಗಳನ್ನು ಶ್ರಮವಿಲ್ಲದೆ ಬಿಚ್ಚಬಹುದು. ಬಿಚ್ಚಿದಾಗ ಅವುಗಳ ನಿಡುವುದಕ್ಕೆ ಹೆಚ್ಚು ಸ್ಥಳವು ಬೇಕಾಗುವುದಿಲ್ಲ; ಇಷ್ಟು ಸೌಲಭ್ಯವಿದ್ದರೂ ಪ್ರದರ್ಶನಕ್ಕವುಗಳು ಅನುಕೂಲವಾದವುಗಳಲ್ಲವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ.

ರಂಗ.

ರಂಗವೆಂದರೆ ಪ್ರದರ್ಶನೀಯ ಚಿತ್ರಗಳನ್ನೂ ಯಂತ್ರಗಳನ್ನೂ ಇತರ ವಸ್ತುಗಳನ್ನೂ ಇಡತಕ್ಕ ಸ್ಥಳ. ಇದು ಗೂಡಿನಮುಂದುಗಡೆ ಎರಡು ಯಂತ್ರಕಾಷ್ಠಗಳ ಮಧ್ಯದಲ್ಲಿದೆ. ಕೆಲವು ಲಾಂದ್ರಗಳಲ್ಲಿ ರಂಗವು ಗೂಡಿಗೆ ಸೇರಿರುತ್ತದೆ. ಮತ್ತೆ ಕೆಲವುಗಳಲ್ಲಿ ಇದನ್ನು ಬೇಕಾದಾಗ ಗೂಡಿನ ಮುಂದಿಟ್ಟುಕೊಳ್ಳಬಹುದು. ಚಿತ್ರವನ್ನು ಮಾತ್ರ ತೋರಿಸುವ ರಂಗಕ್ಕೆ ಮೇಲೆ ಮುಚ್ಚಿ ಪಾರ್ಶ್ವಗಳನ್ನು ತಡೆದಿರುತ್ತಾರೆ ರಂಗದಲ್ಲಿ ಎರಡುವಿಧವಾದ ಸೂತ್ರದ ಮಣೆ(Spring Plate)ಇರುವದುಂಟು ಇದರಮೂಲಕ ಬೇಕಾದಾಗ ಚಿತ್ರಗಳನ್ನು ಹಿಂದಕ್ಕಾಗಲೀ ಮುಂದಕ್ಕಾಗಲೀ ಮೇಲಕ್ಕಾಗಲೀ ಕೆಳಕ್ಕಾಗಲೀ ತಳ್ಳಬಹುದು. ಶಾಸ್ತ್ರೀಯ ಪ್ರಯೋಗಗಳನ್ನು ತೋರಿಸುವುದಕ್ಕಾಗಿ ವಸ್ತುಗಳನ್ನಿಡತಕ್ಕ ರಂಗದ ಮೇಲುಭಾಗವು ತೆರೆದೇ ಇರುತ್ತದೆ.

ದೀವಿಗೆಗಳ ಮತ್ತು ಯಂತ್ರಕಾಷ್ಠಗಳ ವಿಷಯದಲ್ಲಿ ತಿಳಿಯಬೇಕಾದ ಅಂಶಗಳು ಬಹಳವಾಗಿರುವುದರಿಂದ ಅವುಗಳು ಬೇರೆಬೇರೆ ಪ್ರಕರಣಗಳಲ್ಲಿ ವಿವರಿಸಲ್ಪಡುವವು.

ಕೈಗಾರಿಕೆಯೆ ವಿದ್ಯಾಭ್ಯಾಸ.

(೧೦೯ನೆ ಪುಟದ ಶೇಷ.)

ಯಾವ ಕೈಗೆಲಸಕ್ಕೂ ವಸ್ತುನಿರ್ಮಾಣ, ವಸ್ತು ಪ್ರದರ್ಶಕಗಳಿರಡೂ ತಿಳಿದಿರಬೇಕು. ಹೇಗಂದರೆ ಇಂಜನೀರ್ ಇಲಾಖೆಯಲ್ಲಿ ಯಾವ ಕಟ್ಟಡವನ್ನು ಕಟ್ಟಬೇಕಾದರೂ, ಮೊದಲು ಅದರ ಆದ್ಯಂತಪ್ರಮಾಣವನ್ನು ಒಂದು ಕಾಗದದ ಮೇಲೆ ಚಿತ್ರಿಸುವರು. ಬಳ್ಳದೆ ಹೀಗೆ ಚಿತ್ರಿಸಿರುವದನ್ನು ನೋಡಿ ಅದರಂತೆ ಕಟ್ಟುವರು. ಹೀಗೆಯೇ

ಕಲ್ಯಾಣನಗರಗಳ ಮೇಲಿಂದ ಬೀದರಿನ (Bedar) ವರೆಗೂ ವ್ಯಾಪಿಸಿದೆ; ಪೂರ್ವ ಮೇರೆ ಬೀದರಿನಿಂದ ರಾಯಚೂರು, ಆದವಾನಿ, ತಾಡಪತ್ರಿ, ಬೆಂಗಳೂರುಗಳ ಮೇಲೆ ನೀಲಗಿರಿಯ ವರೆಗೆ; ಪಶ್ಚಿಮಮೇರೆ ನೀಲಗಿರಿಯಿಂದ ಮಲೆಯಾಳದ ಮಂಗಳಾಪುರ ಹಿಡಿದು ಸದಾಶಿವಗಡದ ಪರ್ಯಂತ ಹೋಗಿ ಅಲ್ಲಿಂದ ಗೋಮಂತಕ ಪ್ರಾಂತ್ಯವನ್ನು ಬಿಟ್ಟು ಕೋಲಾಪುರದ ವರೆಗೆ ವ್ಯಾಪಿಸಿರುವ ಸಹ್ಯಾದ್ರಿ ಪರ್ವತ; ದಕ್ಷಿಣದಲ್ಲಿ ನೀಲಗಿರಿಯೇ ಇದರ ಮೇರೆಯಾಗಿರುವುದು. ಕರ್ಣಾಟಕದ ದಕ್ಷಿಣೋತ್ತರ ಅಳತೆ ಸುಮಾರು ೪೫೦ ಮೈಲು; ಪೂರ್ವ ಪಶ್ಚಿಮ ಅಳತೆ ೫೭೫; ಕ್ಷೇತ್ರಫಲ ಹೆಚ್ಚು ಕಡಮೆ ೧,೧೦೦೦೦ ಚಚೌಕ ಮೈಲುಗಳಾಗುವುದು. ಪ್ರಕೃತದಲ್ಲಿ ಕರ್ಣಾಟವು ನಾಲ್ಕೈದು ಆಧಿಪತ್ಯಗಳ ಕೈಕೆಳಗೆ ವಿಭಾಗಿಸಲ್ಪಟ್ಟಿವೆ ಮೈಸೂರು ರಾಜ್ಯವು ಪೂರ್ವದಿಂದಲೂ ಆಳಿ ಬಂದ ದೇಶೀಯ ದೊರೆಗಳ ಕೈಕೆಳಗಿದೆ. ದಕ್ಷಿಣಕನ್ನಡೀಯ ಮತ್ತು ನೀಲಗಿರಿ ಬೆಟ್ಟಗಳೂ ಬಳಾರಿ, ಶಾಲ್ಯ, ಕೊಯಂಬತ್ತೂರು ಜಿಲ್ಲೆಗಳಲ್ಲಿ ಕರ್ಣಾಟಕಕ್ಕೆ ಸೇರಿದ ಕೆಲವು ಭಾಗಗಳೂ ಮದರಾಸು ಸರ್ಕಾರದವರಸ್ವಾಧೀನವಲ್ಲಿವೆ. ಉತ್ತರಕನ್ನಡೀಯ ಜಿಲ್ಲೆಯೂ ಅಶ್ರಿತ ಸಂಸ್ಥಾನಗಳ ಸಮೇತವಾಗಿ ದಕ್ಷಿಣಮಹಾರಾಷ್ಟ್ರವೆನ್ನಿಸುವ ಧಾರವಾಡ, ಬೆಳಗಾಂವಿ, ವಿಜಾಪುರ ಜಿಲ್ಲೆಗಳೂ ಬೊಂಬಾಯಿ ಆಧಿಪತ್ಯಕ್ಕೆ ಸೇರಿವೆ. ಕೊಡಗು ಸೀಮೆಯು ಇಂಡಿಯಾ ಸರ್ಕಾರದವರ ಕೈಕೆಳಗಿದೆ. ಹೈದರಾಬಾದು ಸಂಸ್ಥಾನದಲ್ಲಿ ನೈರ್ಋತ ಭಾಗದಲ್ಲಿರುವ ಆರು ಜಿಲ್ಲೆಗಳಲ್ಲಿ ಕನ್ನಡ ಭಾಷೆಯೇ (೦) ಮುಖ್ಯವಾಗಿ ಆಡಲ್ಪಡುವುದು. ಕರ್ಣಾಟಕ ಭಾಷೆಯನ್ನೂ ಅದರಿಂದಲೇ ಹುಟ್ಟಿದ ಗಾರ್ವ್ಯ ಭಾಷೆಗಳನ್ನೂ ಮಾತನಾಡುವ ಜನರುಗಳ ಸಂಖ್ಯೆ ಸುಮಾರು ೧೦॥ ಮಿಲಯದ ವರೆಗೂ ಇರುವುದಾಗಿ ಕ್ರಿ. ಶ. ೧೯೧೧ ನೆಯ ವರ್ಷದಲ್ಲಿ ಮಾಡಿದ ಜನಪರಿಗಣನೆಯಿಂದ ತಿಳಿದುಬಂದಿದೆ.

ಕರ್ಣಾಟಕವೆಂಬ ಹೆಸರು ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾಗಿದೆ. ಆದರೆ ಕ್ರಿಸ್ತಶಕದ ಪೂರ್ವದಲ್ಲಿ ಕನ್ನಡಿಗರ ಸ್ಥಿತಿಗತಿಗಳು ಹೇಗಿದ್ದುವು, ಅವರು ಯಾವ ಧರ್ಮವನ್ನು ಅನುವರ್ತಿಸುತ್ತಿದ್ದರು; ಅವರ ರಾಜ್ಯವು ಎಷ್ಟು ವಿಸ್ತಾರವಾಗಿದ್ದಿತು, ಅವರ ಕಟ್ಟಳೆಗಳು ಹೇಗಿದ್ದುವು, ಇವೇ ಮೊದಲಾದ ಸಂಗತಿಗಳು ನಮಗೆ ಚೆನ್ನಾಗಿ

(೦) ಬೇದರ, ಕಲ್ಬುರ್ಗೆ, ಮಳಖೇಡು, ಸುರಪುರ, ರಾಯಚೂರು, ಮುದಗಲ್ಲು, ಇವು ಆರು ಹೈದರಾಬಾದಿಗೆ ಸೇರಿದ ಕನ್ನಡ ಜಿಲ್ಲೆಗಳು.

ಇದಕ್ಕೆ ಪ್ರತಿಯಾದ ಇಂಗ್ಲೀಷು ಮುಂತಾದ ಅನೇಕ ಇತರ ಭಾಷಾಂತರಗಳನ್ನೂ ಕಲಿಯುವುದು ಬಹಳ ಪ್ರಯಾಸ ಎಲ್ಲಾ ಭಾಷೆಗಳೂ ಒಂದೇ ವಸ್ತುವಿನ ಜ್ಞಾನವನ್ನು ಕೊಡೋಣದರಿಂದ ಚಿತ್ರವೇ ಪ್ರಕೃತಿಯ (Natures) ಭಾಷೆ. ಆದುದರಿಂದ ಇದನ್ನು ಎಲ್ಲರೂ ಕಲಿಯುವುದು ಒಳ್ಳೇದು. ಮೇಲೆ ಹೇಳಿದಪ್ರಕಾರ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿಯೂ ಚಿತ್ರಪಾಠವೇ ಮೊದಲನೇ (ಪ್ರಥಮ) ಪಾಠವಾಗಿರೋಣದರಿಂದ ಇದನ್ನು ವಾಚಕರಿಗೆ ತಿಳಿಸುವದಕ್ಕಾಗಿ ಮೊದಲು ಸುಲಭವಾಗಿರುವ ಕೆಲವು ಚಿತ್ರಪಾಠಗಳನ್ನು ಉದಾಹರಿಸಿ ಅವರಂತೆ ಸರಿಯಾಗಿ ಚಿತ್ರಿಸುವ ರೀತಿಯನ್ನೂ ಕೂಡ ಪ್ರಕಟಿಸುತ್ತೇವೆ ವಾಚಕರು ಅತ್ಯಂತೋಪಯುಕ್ತವಾಗಿರುವ ಈ ವಿಷಯವನ್ನು ಮನಸ್ಸಿಗೆ ತಂದುಕೊಂಡು, ಆ ಚಿತ್ರಗಳನ್ನು ನೋಡಿ ಕಮ್ಮ ತಮ್ಮ ಕೈಗಳಿಂದಲೇ ಚಿತ್ರಿಸಿ, ಅನಂತರ ನಾವು ಪ್ರಕಟಿಸುವ ಸೂಚನೆಯಂತೆ ತಮ್ಮ ಚಿತ್ರಗಳನ್ನು ಹೊಸುಲದವಾಗಿ ತಿದ್ದಿಕೊಳ್ಳಬಹುದು

— ಚಿತ್ರಕಲಾ —

ಎಂ. ವಿ. ಶ್ರೀನಿವಾಸ್ಯೆಯಂಗಾರ್.

ಗೌರ್ನಮೆಂಟ್ ಇಂಡಸ್ಟ್ರಿಯಲ್ ಸ್ಕೂಲ್,
ಸೂಪರಿಂಟೆಂಡೆಂಟರು.
ಮೈಸೂರು

ಅರ್ವಾಚೀನ ಕರ್ನಾಟಕ ಸಾಹಿತ್ಯದ ಬೆಳವಣಿಗೆ.

(೧೦೬ನೆಯ ಪುಟದಿಂದ ಮುಂದೆ)

ಕಾವೇರಿಯಿಂದ ಗೋದಾವರಿಯ ಪರ್ಯಂತ ವ್ಯಾಪಿಸಿರುವ ದೇಶವೇ ಕರ್ಣಾಟ ದೇಶವೆಂದು ಸಾಮಾನ್ಯವಾಗಿ ಹೇಳುವರು. (೧) ವಿವರವಾಗಿ ಹೇಳುವುದಾದರೆ ಕರ್ಣಾಟದೇಶದ ಉತ್ತರ ಮೇರೆಯು ಕೋಲಾಪುರದಿಂದ ಜತ್ತಿ, ಅಕ್ಕಲಕೋಟು

(೧) ಕಾವೇರಿಯಿಂದವುಗೋ । ದಾವರಿವರಮಿದ್ದ ನಾಡದಾಕನ್ನಡದೊಳ್॥
ಭಾವಿಸಿದಜನಪದಂವೆಸು । ಧಾವಳಯವಿಲೀನವಿಶದವಿಷಯವಿಶೇಷಂ॥
(ಕವಿರಾಜಮಾರ್ಗಂ).

ಇದನ್ನು ಪಾರ್ಶ್ವನಾಥ ಮಹಾವೀರರೆಂಬ ಮಹನೀಯರಿಬ್ಬರು ಸ್ಥಾಪಿಸಿದರಂತೆ. ಈ ಮತವು ಕರ್ನಾಟದಲ್ಲಿ ಬಹಳ ಪ್ರಸಿದ್ಧಿಗೆ ಬಂದಿತು. ಕ್ರಿಸ್ತ ಶಕದ ಆರಂಭದ ಕೆಲವು ಶತವಾನಗಳ ವರೆಗೆ ಈ ಮತವನ್ನೇ ಕರ್ನಾಟಕದ ರಾಜರುಗಳೆಲ್ಲಾ ಅನುಸರಿಸುತ್ತಿದ್ದರು. ಜನರಲ್ಲಿಯೂ ಬಹುಪಕ್ಷದವರು ಇದೇಧರ್ಮವನ್ನು ಅನುವರ್ತಿಸುತ್ತಿದ್ದರು. ಈ ಕಾಲದಲ್ಲಿಯೇ ಕರ್ನಾಟಕ ಭಾಷಾ ಬೀಜವು ಅಂಕುರಿಸಿ ಕ್ಷಿಪ್ರದಲ್ಲಿಯೇ ಬೆಳೆದು ಪ್ರಸಿದ್ಧ ಕವಿಗಳೆಂಬ ರೆಂಬೆಗಳನ್ನು ಎಲ್ಲಾ ಕಡೆಗಳಲ್ಲಿಯೂ ಹೊರಡಿಸಿ ಉತ್ಕೃಷ್ಟವಾದ ಕೃತಿಗಳೆಂಬ ರಸಭರಿತವಾದ ಫಲಗಳನ್ನು ಯಥೇಚ್ಛವಾಗಿ ತಿನ್ನಲು ಸೂರೆಬಿಟ್ಟಿತು. ಈ ಕರ್ನಾಟಕ ರಾಜ್ಯವನ್ನು ಆಳಿದ ಜೈನರಲ್ಲಿ ಪ್ರಸಿದ್ಧರಾದ ಮೊದಲನೆಯ ವಂಶದವರು ಕದಂಬರೆಂಬುವರು. ವರದಾನದೀ ತೀರದಲ್ಲಿರುವ ಬನವಾಸಿ ಎಂಬ ಪಟ್ಟಣವು ಇವರಿಗೆ ರಾಜಧಾನಿಯಾಗಿತ್ತು. ಇವರ ರಾಜ್ಯವು ಮೈಸೂರು ರಾಜ್ಯದ ಪಶ್ಚಿಮಭಾಗವನ್ನೂ ಉತ್ತರ ಮತ್ತು ದಕ್ಷಿಣ ಕನ್ನಡೀಯ ಜಿಲ್ಲೆಗಳನ್ನೂ ಆವರಿಸಿಕೊಂಡಿತ್ತು. ಈಕದಂಬ ವಂಶದ ೨೧ ರಾಜರುಗಳು ೬೫೦ ವರ್ಷಗಳವರೆಗೆ ಕರ್ನಾಟವನ್ನು ಸ್ವತಂತ್ರವಾಗಿ ಆಳಿದರು. ಕ್ರಿ. ಶ. ೪೭೬ ರಲ್ಲಿ ಆಳಲಾರಂಭಿಸಿದ ಕೀರ್ತಿವರ್ಮನೆಂಬ ಚಾಳುಕ್ಯರಾಜನು ಇವರನ್ನು ಜಯಿಸಿ ಇವರ ಸ್ವಾತಂತ್ರ್ಯವನ್ನು ಕೆತ್ತುಕೊಂಡನು. ಆಮೇಲೆಯೂ ಇವರು ಚಾಳುಕ್ಯರ ಮತ್ತು ಇತರ ರಾಜವಂಶಗಳ ಪ್ರತಿನಿಧಿಗಳಾಗಿ ಬಹುಕಾಲದವರೆಗೆ ಆಳಿದರು. ಕ್ರಿ. ಶ. ೧೩೩೬ ರಲ್ಲಿ ವಿಜಯನಗರ (ವಿದ್ಯಾನಗರ) ಸಂಸ್ಥಾನವು ಉನ್ನತಿಗೆ ಬಂದಮೇಲೆ ಈ ರಾಜ್ಯವು ಅದರಲ್ಲಿ ಬೆರೆತು ಹೋಗಿ ಈ ವಂಶವು ಪ್ರತ್ಯೇಕವಾಗಿ ಉಳಿಯಲಿಲ್ಲ. ಕವಿಗಳೊಳಗೆ ಗಣಿಸಲ್ಪಟ್ಟವನಾದ ಶಾಂತಿವರ್ಮನೆಂಬುವನು ಈ ಕದಂಬವಂಶದ ರಾಜರಲ್ಲಿ ಒಬ್ಬನಾಗಿರಬಹುದೆಂದು ಮೆ॥ ರೈಸ್ ಸಾಹೇಬರು ಬರೆದಿರುವರು.

ಕರ್ನಾಟರಾಜ್ಯವನ್ನು ಆಳಿದ ಪ್ರಮುಖವಾದ ಜೈನವಂಶಗಳಲ್ಲಿ ಗಂಗವಂಶದವರೂ ಪ್ರಸಿದ್ಧರಾಗಿರುವರು. ಇವರು ಕ್ರಿಸ್ತಶಕದ ಆದಿಭಾಗದಿಂದ ಸುಮಾರು ಕ್ರಿ. ಶ. ೧೦೦೪ ನೆಯ ಸಂವತ್ಸರದ ವರೆಗೆ ಬಲಾಢ್ಯವಾದ ರಾಜ್ಯವನ್ನು ಕಟ್ಟಿ ಕೊಳಿಂಗದೇಶವನ್ನೂ ಕರ್ನಾಟವನ್ನೂ ಒಂದಾಗಿ ಆಳಿದಂತೆ ತೋರುತ್ತಿದೆ. ಇಷ್ಟರಲ್ಲಿ ಆಳಿದ ಜೈನವಂಶಗಳಲ್ಲಿ ಇದೇ ಮುಖ್ಯವಾದುದೆಂದು ಮೆ॥ ರೈಸ್ ಸಾಹೇಬರು ಹೇಳಿರುವರು.

ತಿಳಿದುಬಂದಿಲ್ಲ. ಅಲ್ಲಲ್ಲಿ ಕಾಣಬರುತ್ತಿರುವ ಕಥೆಗಳಿಂದಲೂ, ಸ್ಥಲಪುರಾಣಗಳಿಂದಲೂ ಕಂಡುಹಿಡಿದಿರುವ ಶಿಲಾಲೇಖಗಳಿಂದಲೂ ಇದನ್ನು ಕೊಂಚಮಟ್ಟಿಗೆ ನಿರ್ಧರಿಸಿರುವರು ಆದರೆ ಅದೆಲ್ಲ ಕೇವಲ ವಿಶ್ವಸನೀಯವೆಂದೂ ನಿರ್ದುಷ್ಟವೆಂದೂ ಹೇಳಲು ಅವಕಾಶವಿಲ್ಲ. ಕರ್ಣಾಟಕದ ಪ್ರಾಚೀನ ಚರಿತ್ರವನ್ನು ಕುರಿತು ಬರೆದಿರುವ ಪುಸ್ತಕಗಳಿಂದಲೂ ತೋರಿಬರುವುದಿಲ್ಲ. ಕ್ರಿಸ್ತಶಕಕ್ಕಿಂತಲೂ ಬಹುಪೂರ್ವದಲ್ಲಿಯೇ ಕನ್ನಡಿಗರು ದ್ರವಿಡ ಮಹಾಜನರುಗಳಿಂದ ಪ್ರತ್ಯೇಕವಾಗಿ ಸ್ವತಂತ್ರವಾದ ಭಾಷೆಗಳನ್ನುಳ್ಳವರಾಗಿದ್ದರೆಂದು ಹೇಳಬಹುದು. ಈ ಕಾಲದಲ್ಲಿ ಬಹುಶಃ ಅವರು ಆರ್ಯಧರ್ಮವನ್ನೇ ಅವಲಂಬಿಸಿದವರಾಗಿದ್ದರೂ ಇದರೊಡನೆ ತಮ್ಮ ದ್ರಾವಿಡ ಧರ್ಮವನ್ನೂ ಆಚರಿಸುತ್ತಿದ್ದರೆಂದು ತಿಳಿಯಬಹುದಾಗಿದೆ ಇವರು ಎಷ್ಟುಕಾಲದ ವರೆಗೆವೇದೋಕ್ತ ಧರ್ಮದಲ್ಲಿ ವಿಶ್ವಾಸವುಳ್ಳವರಾಗಿ ಬ್ರಾಹ್ಮಣರಿಗೆ ಒಳಗಾಗಿದ್ದರೋ ಅಷ್ಟರವರೆಗೆ ಕರ್ಣಾಟಕ ಭಾಷೆಯು ಸಂಸ್ಕರಿಸಲ್ಪಟ್ಟುದಾಗಲಿಲ್ಲ ಪೂರ್ವದಲ್ಲಿ ಬ್ರಾಹ್ಮಣರಿಗೆ ದೇಶಭಾಷೆಗಳ ಮೇಲೆ ಬಲವಾದ ತಿರಸ್ಕಾರ ಭಾವವಿತ್ತು. ದೇಶಭಾಷೆಗಳನ್ನು ಅವರು ಪೈಶಾಚ ಭಾಷೆಗಳೆಂದು ಕರೆಯುತ್ತಿದ್ದರು. ಗೀರ್ವಾಣಭಾಷೆಯೊಂದೇ ಪೂಜ್ಯವಾದುದೆಂದೂ ಬರೆಯುತಕ್ಕ ಗ್ರಂಥಗಳೆಲ್ಲಾ ದೇವಭಾಷೆಯಾದ ಸಂಸ್ಕೃತದಲ್ಲಿಯೇ ಬರೆಯಬೇಕೆಂದು ಅವರು ತಿಳಿಯುತ್ತಿದ್ದರ ಈ ಭಾವವು ಬಹಳ ಕಾಲದವರಗೆ ಬ್ರಾಹ್ಮಣರುಗಳ ಮನಸ್ಸಿನಲ್ಲಿ ಇತ್ತೆಂದೂ, ಕೆಲವು ಸಂದರ್ಭಗಳಲ್ಲಿ ಅವರು ದೇಶಭಾಷಾ ಗ್ರಂಥಗಳನ್ನು ಏನಾರ್ಥವಾಗಿ ನಾಶವಾಡಿದರೆಂದೂ ಹೇಳಲು ಆಧಾರಗಳಿವೆ. ಹೀಗಿರಲು ಕ್ರಿ ಪೂ. ಅರನೆಯ ಶತವಾನದಲ್ಲಿ ಉತ್ತರ ಹಿಂದೂಸ್ಥಾನದಲ್ಲಿ ಬುದ್ಧನೆಂಬ ಮಹಾಪುರುಷನು ಹುಟ್ಟಿ ತನ್ನ ನೂತನಧರ್ಮವನ್ನು ಆರ್ಯಾವರ್ತದಲ್ಲೆಲ್ಲಾ ಪ್ರಚಾರಗೊಳಿಸಿದನು. ಈ ಧರ್ಮವು ಕರ್ಣಾಟದಲ್ಲಿ ಅಸ್ಖಂದು ಪ್ರಬಲವಾಗಿ ನೆಲೆಗೊಂಡಿತ್ತೆಂದು ಹೇಳಲು ಕಾರಣಗಳು ತೋರುವುದಿಲ್ಲ. ನಮ್ಮ ಕರ್ಣಾಟಕ ಸಾಹಿತ್ಯದಲ್ಲಿ ಬೌದ್ಧ ಗ್ರಂಥಗಳೊಂದೂ ಇದ್ದಂತೆ ತೋರಲಿಲ್ಲ; ಇದ್ದರೂ ಅವುಗಳಲ್ಲಿ ಯಾವುದೊಂದೂ ಉಳಿದಿಹಾಗಿಲ್ಲ

ಕಾಲಕ್ರಮವಾಗಿ ಬೌದ್ಧಮತದ ಬಲವು ಹಿಂದುಸ್ಥಾನದಲ್ಲಿ ಕಡಮೆಯಾಗುತ್ತ ಬಂತು; ಆಗ ಅದನ್ನೇ ಹಲವೆಂಗಗಳಲ್ಲಿ ಹೋಲತಕ್ಕ ಅರು ಬೇರೆ ಮತಗಳುಂಟಾದುವೆಂದು ಹೇಳುವರು. ಇವುಗಳಲ್ಲಿ ಅರ್ಹತವೆಂಬ ಜೈನಮತವೇ ಪ್ರಸಿದ್ಧವಾದುದು.

ಪಾಠಕ್ರಮ.

I. ಪಾಠಶಾಲೆಯ ವಿದ್ಯಾಭ್ಯಾಸದ ಭಾಗಗಳಾವುವು ? ಈ ಭಾಗಗಳಿಗಿರುವ ಪರಸ್ಪರ ಸಂಬಂಧವನ್ನು ವಿಶದವಾಗಿ ತಿಳಿಸಿ.

II. ಬಾಲಕರ ದೇಹಾರೋಗ್ಯವನ್ನು ಸರಿಯಾಗಿಡುವುದಕ್ಕೆ ಉಪಾಧ್ಯಾಯರು ಮಾಡಬೇಕಾದುದನೆಲ್ಲಾ ತಿಳಿಸಿ.

III. ತಿದ್ದುವಿಕೆ ಅಂದರೇನು ? ಯಾವಪಾಠಶಾಲೆಯಲ್ಲಿ ತಿದ್ದುವಿಕೆ ಸರಿಯಾಗಿದೆ ಎಂದು ಹೇಳಬಹುದು ?

IV. (a) ನಡತೆಯನ್ನು ತಿದ್ದುವುದಕ್ಕೆ ಯತ್ನಿಸುವ ಉಪಾಧ್ಯಾಯರಲ್ಲಿ ಯಾವಗುಣಗಳಿರಬೇಕು ? ಏತಕ್ಕೆ ?

(b) ನೀತ್ಯನುಶಾಸನದ ಅತ್ಯುತ್ತಮವಾದ ಸಾಧಕಗಳಾವು ? ಇವುಗಳನ್ನು ಹೇಗೆ ಉಪಯೋಗಿಸಬೇಕು ?

V. (a) ಬಾಲಕರನ್ನು ಕಷ್ಟಪಟ್ಟು ಕೆಲಸಮಾಡುವವರನ್ನಾಗಿಯೂ, ಸತ್ಯವಂತರನ್ನಾಗಿಯೂ ಮಾಡುವುದು ಹೇಗೆ ?

(b) ಬಾಲಕರನ್ನು ಸಕಾಲಕ್ಕೆ ಪಾಠಶಾಲೆಗೆ ಬರುವಂತೆ ಮಾಡುವುದು ಹೇಗೆ ?

VI. (a) ಸ್ತೋತ್ರ ಮತ್ತು ಬಹುಮಾನಗಳನ್ನು ಏತಕ್ಕೆ ಹೆಚ್ಚಾಗಿ ಉಪಯೋಗಿಸಬಾರದು ?

(b) ದಂಡನೆ ಅಂದರೇನು ? ದಂಡನೆಯನ್ನು ಕೊಡುವಾಗ್ಯೆ ಅನುಸರಿಸಬೇಕಾದ ನಿಯಮಗಳಾವುವು ?

VII. ದೇಹದಂಡನೆಯನ್ನು ಪಾಠಶಾಲೆಯಲ್ಲಿ ಉಪಯೋಗಿಸುವ ವಿಷಯದಲ್ಲಿ ನಿಮಗೆ ತಿಳಿದ ಅಂಶವನ್ನೆಲ್ಲಾ ಬರೆಯಿರಿ.

VIII. ಯಾವ ಬಾಹ್ಯ ಚಿಹ್ನೆಗಳಿಂದ ಪಾಠಶಾಲೆಯ ನೀತ್ಯನುಶಾಸನವು ಸರಿಯಾಗಿದೆ ಎಂದು ಊಹಿಸಬಹುದು ?

IX. ಶಿಕ್ಷಣವಂದರೇನು ? ವಿಷಯಬೋಧನೆಗೂ ಶಿಕ್ಷಣಕ್ಕೂ ಇರುವ ವ್ಯತ್ಯಾಸವನ್ನು ತಿಳಿಸಿ.

X. (a) 'ವಾಚನಿಕ ಬೋಧನೆ' ಅಥವ ಬಾಯಿ ಶಿಕ್ಷಣದ ಗುಣದೋಷಗಳನ್ನು ತಿಳಿಸಿ.

(b) ಪುಸ್ತಕ ಶಿಕ್ಷಣದ ಗುಣಗಳೇನು ? ಇದರ ಜತೆಗೆ ಮತ್ತೇನಾದರು ಅವಶ್ಯಕ ? ಏತಕ್ಕೆ ?

XI. ಶಿಕ್ಷಕರು ತಮ್ಮ ಕೆಲಸದಿಂದ ಸರಿಯಾದ ಫಲವನ್ನು ಪಡೆಯಬೇಕಾದರೆ ಇವರಲ್ಲಿರಬೇಕಾದ ಗುಣಗಳನ್ನೂ ಮತ್ತು ಇವರು ಮಾಡಬೇಕಾದ ಅಂಶಗಳನ್ನೂ ವಿಶದವಾಗಿ ಬರೆಯಿರಿ.

XII. ಶಿಕ್ಷಣದ ಮೂಲತತ್ವಗಳಾವುವು ? ಇವುಗಳಿಂದ ಪ್ರಯೋಜನವೇನು ?

ಆದಿಯಲ್ಲಿ ಇವರ ರಾಜಧಾನಿಯು ತಲವನಪುರ (ತಲಕಾಡು) ಆಗಿತ್ತು. ಕ್ರಿ. ಶ. ೧೦೦೪ನೆಯ ವರ್ಷದಲ್ಲಿ ಇವರ ಸ್ವಾತಂತ್ರ್ಯ ಹೋಯಿತು ರಾಜೇಂದ್ರಚೋಳನೆಂಬ ತಮಿಳು ರಾಜನು ಇವರ ರಾಜ್ಯದವೇಲೆ ದಂಡೆತ್ತಿ ಬಂದು ಇವರನ್ನು ಜಯಿಸಲು, ಇವರು ಓಡಿಹೋಗಿ ಚಾಳುಕ್ಯರ ಮತ್ತು ಹೊಯಿಸಳರ ಆಶ್ರಯದಲ್ಲಿ ನಿಂತರು. ಕ್ರಿ. ಶ. ೧೬ನೆಯ ಶತಮಾನದ ಆದಿಭಾಗದಲ್ಲಿ ಗಂಗರಾಜರು ಪುನಃ ಶಿವನಸಮುದ್ರವೆಂಬಲ್ಲಿ ತಮ್ಮ ಅರಸುತನವನ್ನು ನೆಲೆಗೊಳ್ಳಿಸಿದರು, ಆದರೆ ಇಬ್ಬರು ಅಳುವುದರೊಳಗಾಗಿಯೇ ಈ ವಂಶವೂ ನಿರ್ಮೂಲವಾಯಿತು. ಈ ರಾಜವಂಶದವರಿಗೂ ಕದಂಬ ವಂಶದವರಿಗೂ ಶರೀರಸಂಬಂಧಗಳಾಗುತ್ತಿದ್ದುವಂತೆ ಪ್ರಾಚೀನ ಕರ್ಣಾಟಕವಿಗಳಲ್ಲಿ ಅನೇಕರು ಈ ಗಂಗರ ಆಶ್ರಯದಲ್ಲಿದ್ದರೆಂದು ತೋರುತ್ತಿದೆ. ಕ್ರಿ. ಶ. ೮೮೯ ರಲ್ಲಿದ್ದ ಸಿಂಹನಂದಿಯೆಂಬುವನು ಕೊಂಗಿಣಿವರ್ಮನೆಂಬ ಗಂಗರಾಜನಿಗೆ ಗುರುವಾಗಿದ್ದನು. ಗಂಗರಾಜರಲ್ಲಿ ಒಬ್ಬನಾದ ವಾಧವನೆಂಬುವನು ತಾನೇ ಒಬ್ಬ ಗ್ರಂಥಕರ್ತನಾಗಿದ್ದನು. ಕ್ರಿ. ಶ. ೮೫೦ ರಲ್ಲಿ ಬಾಳಿಕೊಂಡಿದ್ದ ಪೂಜ್ಯಪಾದನು ದುರ್ವಿನೀತನೆಂಬ ಗಂಗರಾಜನ ಗುರುವಾಗಿದ್ದನು ದುರ್ವಿನೀತನೂ ಕವಿಯಾಗಿದ್ದನು. ಶ್ರವಣಬೆಳಗೊಳದ ಗಮ್ಮಟಸ್ವಾಮಿಯ ಪ್ರತಿಮೆಯನ್ನು ಮಾಡಿಸಿದ ಕವಿಯಾದ ಚಾಮುಂಡರಾಯನು ರಾಜಮಲ್ಲನೆಂಬ ಗಂಗರಾಜನ ದಳವಾಯಿಯಾಗಿದ್ದನು. ಈ ಕೆಲವು ಉದಾಹರಣಗಳಿಂದ ಗಂಗರಾಜರುಗಳ ಕೈಯುಕೆಳಗೆ ದೇಶಭಾಷೆಯು ಹೇಗೆ ವರ್ಧಿಸುತ್ತ ಬಂತೆಂಬುದನ್ನು ತಿಳಿಯಬಹುದು.

(ಸಶೇಷ)

R. M. B.

---

೧. ಇವರ ರಾಜಧಾನಿಯು ಲವಣಪುರವೆಂಬ ಮಡಿಕೇರಿ (ಕೊಡಗು) ಯಲ್ಲಿ ಇತ್ತೆಂದು ಮೆ|| ಫ್ಲೀಟ್ ಸಾಹೇಬರ ಅಭಿಪ್ರಾಯವಿರುವಂತೆ ತೋರುತ್ತಿದೆ.

ವಿಷಯಗಳು.	ಪರೀಕ್ಷೆಕರ ಹೆಸರು ಮತ್ತು ವಿಳಾಸ.
ಕನ್ನಡಟೆಕ್ಸ್ಟ್ (ಲೋವರ್‌ಸೆಕೆಂಡರೀ ಪರೀಕ್ಷೆಗೆ) ಕನ್ನಡವ್ಯಾಕರಣ (ಅಪ್ಪರ್ . .)	ಮಾ॥ ರಾ॥ ಆರ್ ನರಸಿಂಹಾಚಾರ್ಯರು ಎಂ. ಎ. ಶಾಸನದ ಇಲಾಖೆ.
ವಾಕ್ಯರಚನೆ (ಲೋವರ್ ಮತ್ತು ಅಪ್ಪರ್‌ಸೆಕೆಂಡರೀ ಪರೀಕ್ಷೆಗಳಿಗೆ.)	ಮಹಾರಾಣಿಯವರ ಕಾಲೇಜು ಅಸಿಸ್ಟೆಂಟ್‌ಮಾಸ್ಟರ್ ಮಾ॥ ರಾ॥ ಕೆ. ಲಕ್ಷ್ಮೀನಾರಣಪ್ಪ ಬಿ. ಎ ಯವರು.
ಕನ್ನಡ ಉಕ್ತಲೇಖನ—ಲೋವರ್‌ಸೆಕೆಂಡರಿಪರೀಕ್ಷೆಗೆ)	ಪಂಡಿತ ಬಿ. ಮಲ್ಲಪ್ಪನವರು.
ಕನ್ನಡಬರಹಣಿಗೆ—(ಲೋವರ್‌ಸೆಕೆಂಡರಿಪರಿಕ್ಷೆಗೆ	ಮೈಸೂರು ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿನ ಮ್ಯಾನೇಜರ್ ಮೆ॥ ಸಿ. ವಾಸುದೇವಯ್ಯನವರು.
ಹಿಂದುಸ್ಥಾನೀ ವ್ಯಾಕರಣ ಮತ್ತು ಹಿಂದುಸ್ಥಾನಿ ವಾಕ್ಯರಚನೆ ಮತ್ತು ಫಾರಷೀಭಾಷಾ ಪುಸ್ತಕಗಳು ಮತ್ತು ವ್ಯಾಕರಣ (ಅಪ್ಪರ್‌ಸೆಕೆಂಡರೀ ಪರೀಕ್ಷೆಗೆ) ಫಾರಷಿನಾ ವ್ಯಾಕರಣ ಮತ್ತು ಉಕ್ತಲೇಖನ ಇತರ ಭಾಷಾಪುಸ್ತಕಗಳು ಭಾಷಾಂತರ ಮತ್ತು ಹಿಂದುಸ್ಥಾನಿ ಉಕ್ತಲೇಖನ. (ಲೋವರ್‌ಸೆಕೆಂಡರೀ ಪರೀಕ್ಷೆಗೆ)	ಬೆಂಗಳೂರು ಸೆಂಟ್ರೆಲ್‌ಕಾಲೇಜು ಹಿಂದುಸ್ಥಾನಿ ಮುನಷಿಯವರು ಮೆ॥ ಖಾದರ್ ಮೊಹಿದ್ದೀನ್ ಮೆಕ್ಕೇಯವರು

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ
ಇಂಗ್ಲೀಷು ವ್ಯಾಕರಣ ಮತ್ತು ಭಾಷೆ.	೨ ನೇ ಭಾಗಕ್ಕೆ ಬೆಂಗಳೂರು ಲಂಡನ್ ಮಿಶ್ಶನ್ ಸೊಸೈಟಿಯ ಥಿಯಾಲಾಜಿಕಲ್ ಸೆಮಿನರಿಯ ಪ್ರಿನ್ಸಿಪಾಲರಾದ ರೆವರೆಂಡ್ ಡಬ್ಲ್ಯು. ರಾಸ್‌ಯವರು; ೧ ನೇ ಭಾಗಕ್ಕೆ ಚಿಕ್ಕಮಗಳೂರು ಗೌರ್ನಮೆಂಟ್ ಹೈಸ್ಕೂಲ್ ಹೆಡ್ಮಾಸ್ಟರು ಮು॥ ರಾ॥ ವಿ. ಸುಬ್ರಮಣ್ಯ ಅಯ್ಯರ್ ಬಿ. ಎ. ಯವರು.
ಇಂಗ್ಲೀಷು ಬರವಣಿಗೆ ಮತ್ತು ಉಕ್ತಲೇಖನ	ಬೆಂಗಳೂರು ವೆಸ್ಲಿಯನ್ ಮಿಷನ್‌ಹೈಸ್ಕೂಲ್ ಪ್ರಿನ್ಸಿಪಲ್ ರೆವರೆಂಡ್ ಯಿ. ಯಸ್. ಎಡ್‌ವರ್ಡ್ಸ್‌ರವರು.
ಲೋವರ್‌ಸೆಕೆಂಡರಿ ಪರೀಕ್ಷೆಗೆ ಭಾಷಾಂತರ.	ಮೈಸೂರು ಓರಿಯಂಟಲ್ ಲೈಬ್ರೆರಿಯ ಲೈಬ್ರೇರಿಯರ್ ಮು॥ ರಾ॥ ಎಸ್. ಜಿ. ನರಸಿಂಹಾಚಾರ್ಯರವರು.
ಲೋವರ್‌ಸೆಕೆಂಡರಿ ಇಂಗ್ಲೀಷು ವಿದ್ಯಾರ್ಥಿಗಳಿಗೆ ಮಾತ್ರ ಗಣಿತ.	ಬೆಂಗಳೂರು ಸೆಂಟ್ರಲ್‌ಕಾಲೇಜು ಪ್ರೊಫೆಸರ್ ಮೆ॥ ಆರ್. ವೆಂಕಟರಾಮೈಯ್ಯ ಬಿ. ಎ. ಯವರು.
ಗಣಿತ. ಲೋವರ್ ಮತ್ತು ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ(ಇಂಗ್ಲೀಷು ವಿದ್ಯಾರ್ಥಿಗಳಿಗೆ ಹೊರತ್ತು)	ಕೋಲಾರದ ಗೌರ್ನಮೆಂಟ್ ಹೈಸ್ಕೂಲ್ ಹೆಡ್ಮಾಸ್ಟರು ಮೆ॥ ಯಮ್. ಕೆ. ತಿರುಮಲಾಚಾರ್ ಬಿ. ಎ. ಯವರು.
ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ–ರೇಖಾ, ಕ್ಷೇತ್ರ ಮತ್ತು ಬೀಜಗಣಿತ ಲೋವರ್ ಸೆಕೆಂಡರಿ ಪರೀಕ್ಷೆಗೆ ಕ್ಷೇತ್ರಗಣಿತ.	ಮೈಸೂರು ಮಹಾರಾಜಾ ಕಾಲೇಜ್ ಸಹಾಯೋಪಾಧ್ಯಾಯರಾದ ಮು॥ ಎಚ್. ಆರ್. ಕೃಷ್ಣಮೂರ್ತಿ ಬಿ. ಎ ಯವರು.
ಕನ್ನಡಟೆಕ್ಸ್ಟ್(ಅಪ್ಪರ್‌ಸೆಕೆಂಡರೀ ಪರೀಕ್ಷೆಗೆ) ಕನ್ನಡವ್ಯಾಕರಣ(ಲೋವರ್‌ಸೆಕೆಂಡರಿಪರೀಕ್ಷೆಗೆ)	ಮೈಸೂರು ಗೌರ್ನಮೆಂಟ್ ಕನ್ನಡಸ್ಕೂಲ್ ಹೆಡ್‌ಮಾಸ್ಟರ್ ಮೆ॥ ಬಿ. ರಾಮರಾವ್ ಎಂ. ಎ. ಯವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಸಂಸ್ಕೃತಟೆಕ್ಸ್ಟ್ ಮತ್ತು ವ್ಯಾಕರಣ (ಅಪ್ಪರ್‌ಸೆಕೆಂಡರಿಯ ಪರೀಕ್ಷೆಗೆ) ಲೋವರ್‌ಸೆಕೆಂಡರೀ ಪರೀಕ್ಷೆಯ ಸಂಸ್ಕೃತ ಟೆಕ್ಸ್ಟ್ ಮತ್ತು ವ್ಯಾಕರಣ, ಭಾಷಾಂತರ, ಕೈಬರಹ, ಉಕ್ತಲೇಖನ.	ಬೆಂಗಳೂರು ಸೆಂಟ್ರಲ್ ಕಾಲೇಜು ಕನ್ನಡಪಂಡಿತರಾದ ಮೆ॥ ಜಿ. ಎ. ಕೃಷ್ಣಾಚಾರ್ಯರವರು.
ಸಂಸ್ಕೃತಭಾಷಾಂತರ– (ಅಪ್ಪರ್‌ಸೆಕೆಂಡರೀ ಪರೀಕ್ಷೆಗೆ) ವ್ಯಾಕರಣ, ಟೆಕ್ಸ್ಟ್, ಭಾಷಾಂತರ ಉಕ್ತಲೇಖನ, ಕೈಬರಹ (ಲೋವರ್‌ಸೆಕೆಂಡರೀ ಪರೀಕ್ಷೆಗೆ.	ಮೈಸೂರು ಗೌ॥ ನಾರ್ಮಲ್‌ಸ್ಕೂಲ್ ಸಹಾಯೋಪಾಧ್ಯಾಯರಾದ ಮೆ॥ ಎಂ ಹಿರಿಯಣ್ಣ ಎಂ. ಎ. ಯಲ್ ಟಿ. ಯವರು.
ತೆಲುಗುಭಾಷೆ ಮತ್ತು ತೆಲುಗು ಇತರ ಗ್ರಂಥಗಳಿಗೆ.	ಮೈಸೂರು ಗೌ॥ ಸಂಸ್ಕೃತ ಲೈಬ್ರೆರಿ ಕ್ಯೂರೇಟರ್ ಮೆ॥ ಎಂ. ಮಹದೇವಶಾಸ್ತ್ರಿ ಬಿ. ಎ. ಯವರು.
ತಮಿಳುಭಾಷೆ ಮತ್ತು ಇತರ ತಮಿಳು ಭಾಗಗಳಿಗೆ.	ಬೆಂಗಳೂರು ಸೆಂಟ್ರಲ್‌ಕಾಲೇಜ್ ಅಸಿಸ್ಟೆಂಟ್‌ಮಾಸ್ಟರ್ ಮೆ॥ ಕೆ. ಎ. ಕೃಷ್ಣಸ್ವಾಮಿ ಅಯ್ಯರ್ ಬಿ. ಎ. ಯವರು.
ಆರೋಗ್ಯಶಾಸ್ತ್ರ–(ಅಪ್ಪರ್ ಮತ್ತು ಲೋವರ್‌ಸೆಕೆಂಡರೀ ಪರೀಕ್ಷೆಗೆ)	ತುಮಕೂರು ಅ. ಸರ್ಜಿ ಮೆ॥ ಟಿ. ಎಸ್. ನಂಜಪ್ಪ ಎಂ. ಬಿ. ಸಿ. ಎಮ್ ಯವರು (೨ನೇ ಭಾಗ ಲೋವರ್‌ಸೆಕೆಂಡರಿ) ; ಮತ್ತು ಬೆಂಗಳೂರು ನಕ್ಷತ್ರಶಾಲೆಯ ಚೀಫ್ ಅಬ್ಸರ್ವರ್ ಮೆ॥ ಎಸ್ ವೆಂಕಟೇಶಯ್ಯಂಗಾರ್ ಬಿ. ಎ. ಯವರು (೧ನೇ ಭಾಗ ಲೋವರ್‌ಸೆಕೆಂಡರಿ ಮತ್ತು ಅಪ್ಪರ್‌ಸೆಕೆಂಡರಿ.
ವ್ಯವಸಾಯಶಾಸ್ತ್ರ-(ಅಪ್ಪರ್ ಮತ್ತು ಲೋವರ್‌ಸೆಕೆಂಡರೀ ಪರೀಕ್ಷೆಗೆ)	ಮೈಸೂರು ನಾರ್ಮಲ್‌ಸ್ಕೂಲ್ ಅಸಿಸ್ಟೆಂಟ್‌ಮಾಸ್ಟರ್ ಮೆ॥ ಕೆ. ನರಸಿಂಹಯ್ಯಂಗಾರ್ಯರವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಅಪ್ಪರ್‌ಸೆಕೆಂಡರಿ ಪರೀಕ್ಷೆಯ ಹಿಂದುಸ್ಥಾನೀ ಟೆಕ್ಸ್‌ಟ್, ಹಿಂದುಸ್ತಾನಿ ಮತ್ತು ಪರಿಷಿಯರ್ಡ್ ಭಾಷೆಯ ಭಾಷಾಂತರ (ಲೋವರ್‌ಸೆಕೆಂಡರಿಪರೀಕ್ಷೆಗೆ)ಮತ್ತು ಹಿಂದೂಸ್ತಾನೀ ಟೆಕ್ಸ್‌ಟ್, ವ್ಯಾಕರಣ ವಾಕ್ಯರಚನೆ, ಹಿಂದುಸ್ತಾನೀ ಕೈಬರಹ, ಪರಷಿಯರ್ಡ್ ಕೈಬರಹ, ಪರಿಷಿಯರ್ಡ್ ಭಾಷಾಂತರ. ಡಿ ಉಕ್ತಲೇಖನ. ಡಿ ಕೈಬರಹ.	ಮೈಸೂರು ಮಹಾರಾಜರವರ ಕಾಲೇಜು ಹಿಂದುಸ್ಥಾನೀ ಮುನಷಿಯವರು ಮೌ॥ ಸುಲ್ತಾನ್ ಮಹಮ್ಮದ್‌ಖಾನ್ ಸಾಹೇಬರವರು.
ಅಪ್ಪರ್‌ಸೆಕೆಂಡರಿ ಪರೀಕ್ಷೆಯ ಹಿಂದುಸ್ತಾನಿ ಚರಿತ್ರೆ, ಭೂಗೋಳ, ಗಣಿತ, ರೇಖಾ ಮತ್ತು ಬೀಜಗಣಿತ, ಕ್ಷೇತ್ರಗಣಿತ, ವ್ಯವಸಾಯ, ಆರೋಗ್ಯ, ಭೌತಿಕಶಾಸ್ತ್ರ ಮತ್ತು ಲೋವರ್‌ಸೆಕೆಂಡರಿ ಪರೀಕ್ಷೆಯ ಹಿಂದೂಸ್ತಾನೀ ಭಾಷಾಂತರ, ಗಣಿತ ಹಿಂದೂದೇಶದ ಚರಿತ್ರೆ, ಭೂಗೋಳ, ನಕ್ಷೆಬರೆಯುವದು, ಆರೋಗ್ಯ ಮತ್ತು ವ್ಯವಸಾಯಶಾಸ್ತ್ರಗಳಿಗೆ.	ಬೆಂಗಳೂರು ಹಿಂದುಸ್ಥಾನಿ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರ್ ಮೌ॥ ಸೈಯದ್ ತಾಜ್ ಪೀರಾನ್ ಬಿ. ಎ. ಯವರು.

ವಿದ್ಯಾದಾಯಿನಿ.

ಭಾಗ. ೯.] ಜುಲೈ. ೧೯೦೧. [ಸಂಚಿಕೆ. ೭.

ಎಡಿಟರವರ ನೋಟ್ಸ್.

ಸ್ ೧೮೭೯—೧೯೦೦ (ಜೂನ್) ನೆ ಇಸವಿಯ ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟನ್ನು ಆದರದಿಂದ ಓದಿನೋಡಿದೆವು. ವಿದ್ಯಾಭಿವೃದ್ಧಿಗೆ ವಿಶೇಷ ಕುಂದಕವನ್ನುಂಟುಮಾಡಿರುವ ಪ್ಲೇಗ್ ಜಾಡ್ಯವು ಸಂಸ್ಥಾನದ ಕೆಲವು ಡಿಸ್ಟ್ರಿಕ್ಟ್ ಗಳಲ್ಲಿ ಹರಡಿದ್ದಾಗ್ಯೂ, ವಿದ್ಯಾಭಿವೃದ್ಧಿ ಸೂಚಕಗಳಾದ, ವಿದ್ಯಾರ್ಥಿಗಳ ಸಂಖ್ಯೆಯೂ ಪಾಠಶಾಲೆಗಳ ಸಂಖ್ಯೆಯೂ, ಹಿಂದಣ ಸಂವತ್ಸರಕ್ಕಿಂತ ಈ ಸಂವತ್ಸರ ಹೆಚ್ಚಿರುವುದು. ಇದನ್ನು ನೋಡಿದರೆ ಸಂಸ್ಥಾನದಲ್ಲಿ ತೃಪ್ತಿಕರವಾಗಿ ವಿದ್ಯಾಭಿವೃದ್ಧಿಯುಂಟಾಗುತಿದೆ ಎಂಬುದು ವ್ಯಕ್ತವಾಗುವುದು. ಸ್ ೧೯೦೦ ನೇ ಇಸವಿಯ ೩೦ ನೇ ಜೂನ್‌ನಲ್ಲಿ: ಸರಕಾರದ ಪಾಠಶಾಲೆಗಳ ಸಂಖ್ಯೆಯು ಒಟ್ಟು ೧೦೯೭, ಇವುಗಳಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆಯು ಒಟ್ಟು ೯೨,೧೮೪. ಗತಸಾಲಿನ ಒಟ್ಟು ಪಾಠಶಾಲೆಗಳ ಸಂಖ್ಯೆಯು ೨,೦೬೪. ವಿದ್ಯಾರ್ಥಿಗಳ ಸಂಖ್ಯೆಯು ೮೨,೬೪೫. ಈ ಸಂಖ್ಯೆಗಳಿಂದ ೧೮೭೯—೧೯೦೦ ರಲ್ಲಿ ೧೦೩ ಪಾಠಶಾಲೆಗಳೂ, ೯,೪೯೯ ವಿದ್ಯಾರ್ಥಿಗಳೂ ಹೆಚ್ಚಾಗಿರುವ್ರದಾಗಿ ಸ್ಪಷ್ಟವಾಗುವುದು.

* * * * *

ಆದರೆ ಸರ್ಕಾರದ ಸಹಾಯವನ್ನು ಪಡೆದೂ, ಪಡೆಯದೆಯೂ, ಜನಗಳು ಇಟ್ಟುಕೊಂಡಿದ್ದ ಪಾಠಶಾಲೆಗಳ ಸಂಖ್ಯೆಯು ಕಡಮೆಯಾಗಿವ್ವರೂ, ಅವುಗಳಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆಯು ಮಾತ್ರ ಹೆಚ್ಚಿರುವ್ವದು. ಸ್ವಂತ (ಸರ್ಕಾರಕ್ಕೆ ಸೇರದ) ಪಾಠಶಾಲೆಗಳು—೧೬೯, ಗತಸಾಲಿನಲ್ಲಿ ೧೭೧. ವಿದ್ಯಾರ್ಥಿಗಳ ಸಂಖ್ಯೆ. ೨೦,೬೬೨. ಗತಸಾಲಿನಲ್ಲಿ ೨೦,೫೩೬.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ
ಭೌತಿಕಶಾಸ್ತ್ರ — ಅಪ್ಪರ್ ಸೆಕೆಂಡರೀಪರೀಕ್ಷೆ—ಭೌತಿಕಭೂಗೋಳಶಾಸ್ತ್ರ (ಲೋವರ್‌ಸೆಕೆಂಡರೀ ಪರಿಕ್ಷೆ)ಭೂಗೋಳ,ನಕ್ಷೆ(ಅಪ್ಪರ್‌ಸೆಕೆಂಡರಿಪರೀಕ್ಷೆ)	ಮೈಸೂರು ಮಹಾರಾಣಿ ಕಾಲೇಜಿನ ಸಹಾಯೋಪಾಧ್ಯಾಯರಾದ ಮೆ॥ ಕೆ. ಸಂಜೀವಸೆಟ್ಟಿ ಬಿ. ಎ. ಯವರು.
ಲೋವರ್‌ಸೆಕೆಂಡರೀಪರೀಕ್ಷೆಯ ಹಿಂದೂಚರಿತ್ರೆ ಮತ್ತು ಅಪ್ಪರ್‌ಸೆಕೆಂಡರೀಪರೀಕ್ಷೆಯ ಚರಿತ್ರೆ.	ಲೋವರ್ ಸೆಕೆಂಡರೀಪರೀಕ್ಷೆ ಹಿಂದೂಚರಿತ್ರೆಯ ೧ನೇ ಭಾಗಕ್ಕೆ ಮತ್ತು ಅಪ್ಪರ್ ಸೆಕೆಂಡರಿಯ ಹಿಂದೂಚರಿತ್ರೆಗೆ—ದೇಶೀಯ ಪರೀಕ್ಷೆಗಳ ಆಫೀಸ್ ಮ್ಯಾನೇಜರ್ ಮೆ॥ ಎಸ್. ಗೋಪಾಲರಾಯರವರ, ಬೆಂಗಳೂರು—ಮತ್ತು ಲೋವರ್‌ಸೆಕೆಂಡರೀ ಪರೀಕ್ಷೆಯ ಹಿಂದೂಚರಿತ್ರೆ ೧ನೇ ಭಾಗಕ್ಕೆ ಮತ್ತು ಅಪ್ಪರ್ ಸೆಕೆಂಡರೀ ಪರೀಕ್ಷೆಯ ಇಂಗ್ಲೀಷು ಚರಿತ್ರೆಗೆ—ಮೈಸೂರು ಮಹಾರಾಜರವರ ಕಾಲೇಜು ಅಸಿಸ್ಟೆಂಟ್ ಪ್ರೊಫೆಸ್ಸರ್ ಮೆ॥ ಬಿ. ಸುಬ್ಬರಾವ್ ಬಿ. ಎ. ಯವರು.
ಲೋವರ್‌ಸೆಕೆಂಡರೀಪರೀಕ್ಷೆ ನಕ್ಷೆಬರೆಯುವದು.	ಮೈಸೂರು ಇಂಡಸ್ಟ್ರಿಯಲ್ ಸ್ಕೂಲ್ ಸೂಪ್ರಿಂಟೆಂಡೆಂಟರಾದ ಮೆ॥ ಎಂ. ವಿ. ಶ್ರೀನಿವಾಸಅಯ್ಯಂಗಾರ್ ಬಿ. ಎ. ಯವರು.
ಡಿ ಭೂಗೋಳಶಾಸ್ತ್ರ.	ಮೈಸೂರು ನಾರ್ಮಲ್‌ಸ್ಕೂಲ್ ಹೆಡ್‌ಮಾಸ್ಟರ್ ಮೆ॥ ಕ. ನಾರಣ್ಯಯ್ಯಂಗಾರ್, ಬಿ. ಏ. ಯವರು.
ಪಾಕಶಾಸ್ತ್ರ ಲೋವರ್‌ಸೆಕೆಂಡರೀಪರೀಕ್ಷೆ.	ತುಮಕೂರು ಎಂಪ್ರೆಸ್ ಸ್ಕೂಲ್ ಹೆಡ್‌ಮಿಸ್ಟ್ರೆಸ್‌ರಾದ ಡಿ. ಸುಬ್ಬಮ್ಮನವರು.
ಕಸೂತಿಕೆಲಸ ಲೋವರ್ ಮತ್ತು ಅಪ್ಪರ್‌ಸೆಕೆಂಡರಿಪರೀಕ್ಷೆ.	ಬೆಂಗಳೂರು ವೆಸ್ಲ್ಯನ್‌ಮಿಷನ್ ಮಿಸ್—ವೈಟ್‌ರವರು. ಮತ್ತು ಬಾಲಿಕಾಪಾಠಶಾಲೆಗಳ ಲೇಡೀ ಸೂಪರಿಂಟೆಂಡೆಂಟರವರಾದ ಮಿಸ್. ಎಸ್. ಎಫ್. ರಾಜಗೋಪಾಲ ಯವರು.
ಸಂಗೀತ ಅಪ್ಪರ್‌ಸೆಕೆಂಡರೀ ಪರೀಕ್ಷೆ.	ಮೆ॥ ರಾ॥ ಆರ್. ನರಸಿಂಹಾಚಾರ್ಯರು ಎಂ. ಎ. ಶಾಸನದ ಇಲಾಖೆ.

ವಾಡುವಷ್ಟು ಸ್ವಾರ್ಥವನ್ನು ತೊರೆದು, ಮಿಡಲ್ ಮತ್ತು ಪ್ರೈಮರಿ (ಹೋಬಳಿ, ಗ್ರಾಮದ ಸ್ಕೂಲುಗಳು) ಸ್ಕೂಲುಗಳಲ್ಲಿ ಬಹುದಿನಗಳಿಂದಲೂ ಕೆಲಸವಾಡುತಿರುವ ಉಪಾಧ್ಯಾಯರುಗಳ ಸಂಬಳವನ್ನೂ, ಸ್ಥಿತಿಯನ್ನೂ ಅಭಿವೃದ್ಧಿಪಡಿಸಬೇಕೆಂದೂ, (೨) ವಿದ್ಯಾಭಿವೃದ್ಧಿಯು ವಿಷಯದಲ್ಲಿ ಬಹಳ ಹೀನಸ್ಥಿತಿಯಲ್ಲಿರುವ ಪ್ರದೇಶಗಳಲ್ಲಿ ಹೊಸದಾಗಿ ಸ್ಕೂಲುಗಳನ್ನು ಇಡಬೇಕೆಂದೂ, ಕೀಳಜನರಲ್ಲಿ ವಿದ್ಯಾಸಾಮ್ರಾಜ್ಯವಪಡಿಸಬೇಕೆಂದೂ, ಇನ್‌ಸ್ಪೆಕ್ಟರ್ ಜನರಲ್ ಮೆ॥ ಭಾಭಾ ಸಾಹೇಬರವರು ಅಭಿಪ್ರಾಯಪಟ್ಟಿರುವರು.

ಆರ್ನಲ್ಡ್‌ರವರ ಚರಿತ್ರೆ.

ಮತವಿಷಯಗಳಲ್ಲಿ ಬಹಳ ಪಂಡಿತರಾದವರಿಗೂ ಕೂಡ ದುರಭಿಮಾನಗಳಿರುವುದು ಸಹಜವಾದುದು. ಜನ್ಮಾರಭ್ಯ ಸ್ವಮತವಿಷಯದಲ್ಲಿ ಅನೇಕ ಸಂಗತಿಗಳು ಪರ್ಯಾಲೋಚಿಸಲ್ಪಟ್ಟಿರುತ್ತವೆ. ಅವುಗಳು ದೋಷಗಳಿಂದ ಮಿಶ್ರವಾಗಿದ್ದಾಗ್ಯೂ ಆ ದೋಷಗಳು ಜನರಿಗೆ ತೋರುವದು ಕಷ್ಟ. ಅವುಗಳನ್ನು ಪರಿತ್ಯಾಗವಾಡುವುದು ಇನ್ನೂ ಕಷ್ಟ. ಸ್ವಮತದಲ್ಲಿರುವ ದೋಷಗಳು ಪರಿಗ್ರಾಹ್ಯಗಳಾಗಿಯೂ ಪರಮತದಲ್ಲಿರುವ ದೋಷಗಳು ಉದ್ಘಾಟನೀಯಗಳಾಗಿಯೂ ಇರುವುದೇ ದುರಭಿಮಾನಕ್ಕೆ ಮುಖ್ಯ ಲಕ್ಷಣಗಳು. ಆದರೆ ಮೆ॥ ಆರ್ನಲ್ಡ್‌ರವರಿಗೆ ಇಂತಹ ದುರಭಿಮಾನವು ಇರಲಿಲ್ಲವೆಂದು ಇವರ ಮತಸಂಬಂಧವಾದ ಉಪನ್ಯಾಸಗಳಿಂದ ಗೊತ್ತಾಗುತ್ತದೆ. ೧೮೨೯ನೇ ಇಸವಿಯಲ್ಲಿ ಇವರ ಉಪನ್ಯಾಸಗಳು ಮುದ್ರಿಸಲ್ಪಟ್ಟವು. ಈ ಪುಸ್ತಕಕ್ಕೆ ಗಿರಾಕಿಯು ಬಹಳ ಹೆಚ್ಚಾಗಿ ಉಂಟಾಯಿತು. ಮತವಿಚಾರಗಳಲ್ಲಿ ಇವರ ಅಭಿಪ್ರಾಯಕ್ಕೆ ಭಿನ್ನವಾದ ಅಭಿಪ್ರಾಯವುಳ್ಳವರೂ ಕೂಡ ಈ ಗ್ರಂಥವನ್ನು ಪಠಿಸುವದಕ್ಕುಪಕ್ರಮಿಸಿದರು. ಈ ಉಪನ್ಯಾಸಗಳ ಶಯ್ಯೆಯ ವಿಷಯದಲ್ಲಿ ಅಲ್ಲಲ್ಲಿ ಆಕ್ಷೇಪಣೆಗಳು ಉಂಟಾದುವೇ ಹೊರತು ಇವರ ಸಿದ್ಧಾಂತ ವಿಷಯಗಳಲ್ಲಿ ಯಾರೂ ಆಕ್ಷೇಪಣೆಯನ್ನು ಮಾಡಲಿಲ್ಲ. ಈ ಆಕ್ಷೇಪಣೆಗಳನ್ನು ಕೇಳಿ ಆರ್ನಲ್ಡ್‌ರವರು ಹೇಳಿರತಕ್ಕ ಮಾತುಗಳು ಶ್ರೋತವ್ಯಗಳಾಗಿವೆ. ಅವರು ಹೇಳಿರುವದೇನೆಂದರೆ ;— "ನನ್ನ ಉಪನ್ಯಾಸಗಳ

ಸಂಸ್ಥಾನದ ಪಾಠಶಾಲೆಗಳ ಒಟ್ಟು ಸಂಖ್ಯೆ ೩,೪೪೮. ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ೧೧೨,೪೦೬

* * * * *

ವಿದ್ಯಾಭ್ಯಾಸದ ಇಲಾಖೆಯು ಖರ್ಚು :—ಗತಸಾಲಿನಲ್ಲಿ ಒಟ್ಟು ಖರ್ಚು ಆದದ್ದು ರೂ—೯,೯೧,೦೦೩. ಈ ಸಾಲಿನಲ್ಲಿ ರೂ. ೧೦,೪೨,೦೪೦. ಇದಕ್ಕಾಗಿ ಸೆಸ್ಸು ಫಿಯಿಂದ ಜಮಾ ಆದುದು ರೂ. ೪೫,೩೪೧. ಈ ಸಂಖ್ಯೆಯಿಂದ ಸರ್ಕಾರದ ಬಾಬುಗಳಲ್ಲೆಲ್ಲಾ ಆಲ್ಪಾದಾಯವೂ ವಿಶೇಷ ಖರ್ಚೂ ಉಳ್ಳ ಇಲಾಖೆಯು ವಿದ್ಯಾಭ್ಯಾಸದ ಇಲಾಖೆಯೆಂಬುದು ಸ್ಪಷ್ಟವಾಗುವುದು. ಕಾಲೇಜ್‌ಗಳಲ್ಲಿ ಓದತಕ್ಕ ಒಬ್ಬ ಹುಡುಗನು ಸರಕಾರಕ್ಕೆ ಕೊಡತಕ್ಕದ್ದು ದಾವಮಾಷಾಪ್ರಕಾರ ರೂ—೧೪. ಅವನ ವಿದ್ಯಾಭಿವೃದ್ಧಿಗಾಗಿ ಸರ್ಕಾರದವರು ಖರ್ಚು ಮಾಡತಕ್ಕದ್ದು ರೂ. ೪೦೫. ಹೈಸ್ಕೂಲ್‌ಗಳಲ್ಲಿ ಓದತಕ್ಕ ಹುಡುಗನು ಕೊಡತಕ್ಕ ಫಿ, ಸರಾಸರಿ, ರೂ. ೧೭. ಅವನಿಗಾಗಿ ಸರ್ಕಾರದ ಖರ್ಚು ರೂ ೪೩. ಇಂಗ್ಲಿಷ್ ಮಿಡಲ್ ಸ್ಕೂಲ್‌ಗಳಲ್ಲಿ ಓದತಕ್ಕ ಹುಡುಗನು ಕೊಡತಕ್ಕದ್ದು—ರೂ ೨. ಅವನಿಗಾಗಿ ಸರ್ಕಾರವು ಕೊಡತಕ್ಕದ್ದು ಸರಾಸರಿ—ರೂ ೯. ವರ್ನಾಕ್ಯುಲರ್ ಮಿಡಲ್ ಸ್ಕೂಲುಗಳಲ್ಲಿ ಓದತಕ್ಕ ಹುಡುಗನು ಕೊಡತಕ್ಕ ಫಿ ಸರಾಸರಿ ೧೨ ಆಣೆ. ಅವನಿಗಾಗಿ ಸರ್ಕಾರಕ್ಕೆ ಖರ್ಚು ರೂ ೩. ಇದರಮೇಲೆ ಸಂಸ್ಥಾನದ ಎಲ್ಲಾ ಬಾಲಿಕಾಪಾಠಶಾಲೆಗಳಲ್ಲಿಯೂ, ಪ್ರೈಮರಿ ವಿಲೇಜ್ ಸ್ಕೂಲ್‌ಗಳಲ್ಲಿಯೂ (ಹಳ್ಳಿಗಳಲ್ಲಿರತಕ್ಕ ಸ್ಕೂಲುಗಳು) ಓದತಕ್ಕ ಬಾಲಕಿಯರು, ಬಾಲಕರು ಸರ್ಕಾರಕ್ಕೆ ಏನೂ ಕೊಡತಕ್ಕದ್ದಿಲ್ಲ. ಈ ಖರ್ಚು ಪಟ್ಟಿಯನ್ನು ಪರೀಕ್ಷಿಸಿ ನೋಡಿದಲ್ಲಿ, ಮೈಸೂರು ಸಂಸ್ಥಾನದಲ್ಲಿ ಸರ್ಕಾರದವರೇ ವಿದ್ಯಾಭಿವೃದ್ಧಿಯ ಭಾರವನ್ನು ಸಂಪೂರ್ಣವಾಗಿ ವಹಿಸಿರುವರೆಂಬುದು ವ್ಯಕ್ತವಾಗುವುದು. ಅಲ್ಲದೆ ಕಾಲೇಜ್ ಹೈಸ್ಕೂಲು, ಮತ್ತು ಮಿಡಲ್‌ಸ್ಕೂಲು ಮುಂತಾದವುಗಳಿಂದ ವಸೂಲಾಗುವ ಮೊಬಲಗು ಬಹಳ ಸ್ವಲ್ಪವಾಗಿರುವುದೆಂತಲೂ, ಇದರ ಮಾರ್ಪಾಟು ಅವಶ್ಯಕವೆಂತಲೂ ಕಾಣುವುದು.

* * * * *

ಸ್ಕೂಲ್ ಫಿಯನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸೋಣದರಲ್ಲಿ ಉಂಟಾಗುವ ಲಾಭವು ದಿಂದ, (೧) ಬಹಳ ಸ್ವಲ್ಪ ಸಂಬಳವನ್ನು ತೆಗೆದುಕೊಂಡು, ಅಶ್ಯಾರ್ಯವನ್ನುಂಟು

ಇಷ್ಟರಲ್ಲಿ ಈ ಉಪನ್ಯಾಸಗಳಿಂದ ಇವರ ಮಹಿಮೆಯು ಹೆಚ್ಚಿತು. ಬ್ರಿಟಿಷ್‌ಪ್ರಸಂಚದಲ್ಲೆಲ್ಲಾ ಇವರ ಯೋಗ್ಯತೆಯೂ ಮಹಿಮೆಯೂ ಪ್ರಕಾಶಕ್ಕೆ ಬಂದುವು. ಇಷ್ಟರಲ್ಲಿ ವಿಂಚಸ್ಟರ್ ಪಟ್ಟಣದ ಪಾಠಶಾಲೆಯು ಅಧ್ಯಕ್ಷಪದವಿಯು ಖಾಲಿಯಾಯಿತು. ಈ ಕೆಲಸಕ್ಕೆ ಇವರಿಗಿಂತಲೂ ವಿಶೇಷ ಅರ್ಹರಾದವರು ಸಿಕ್ಕುವದಿಲ್ಲವೆಂಬದಾಗಿಯೂ ಇದಕ್ಕೆ ಇವರನ್ನೇ ನಿಯಮಿಸಬೇಕೆಂಬದಾಗಿಯೂ ಪ್ರಯತ್ನಗಳು ನಡೆಯುತ್ತಿದ್ದುವು. ಅಷ್ಟರಲ್ಲಿಯೇ ರಗ್ಬಿ ಪಾಠಶಾಲೆಯಲ್ಲಿ ೧೦ ವರ್ಷಗಳು ಕೆಲಸವಮಾಡಿ ಬಹಳ ಯಶೋವಂತರಾಗಿದ್ದ ಡಾಕ್ಟರ್ ಉಲ್ ಸಾಹೇಬರು ಆ ಪಾಠಶಾಲೆಯ ಹೆಡ್‌ಮಾಸ್ಟರ್ ಕೆಲಸಕ್ಕೆ ರಾಜಿನಾಮೆಯನ್ನು ಕೊಟ್ಟರು. ಈ ಪಾಠಶಾಲೆಯ ಮೇಲ್ವಿಚಾರಣೆಗೆ ೧೦ ಜನಗಳು ಟ್ರಸ್ಟಿಗಳುಳ್ಳ ಒಂದು ಕಮಿಟಿಯು ಇತ್ತು. ಈ ಕೆಲಸಕ್ಕೆ ಅನೇಕರು ಅಪ್ಲಿಕೇಷ್ ಬರೆದುಕೊಂಡು ತಮ್ಮ ಸರ್ಟಿಫಿಕೇಟುಗಳನ್ನು ಕಳುಹಿಸಿ ಇದ್ದರು. ಈ ಪೈಕಿ ಆರ್ನಲ್ಡ್‌ರವರು ಒಂದು ಅಪ್ಲಿಕೇಷನ್ನನ್ನು ಕಳುಹಿಸಿ ಇದ್ದರು. ಇವರು ಒಂದು ಸರ್ಟಿಫಿಕೇಟನ್ನು ಮಾತ್ರ ಕಳುಹಿಸಿ ಇದ್ದರು. ಆ ಸರ್ಟಿಫಿಕೇಟ್‌ನಲ್ಲಿಯೂ ಇವರ ವಿದ್ಯಾಶಕ್ತಿ ಮಾತ್ರ ನಮೂದಾಗಿತ್ತು. ಆದರೆ ಇತರರು ಹಾಜರ್ಮಾಡಿದ್ದ ಸರ್ಟಿಫಿಕೇಟುಗಳಲ್ಲಿ ಅವರವರ ಗುಣಾತಿಶಯಗಳು ವರ್ಣಿಸಲ್ಪಟ್ಟಿದ್ದಂತೆ ಇವರ ಸರ್ಟಿಫಿಕೇಟಿನಲ್ಲೇನೂ ಇರಲಿಲ್ಲ. ಆದರೆ ಡಾಕ್ಟರ್ ಹಾರ್ಕಿಸ್‌ರವರು ಈ ಕಮಿಟಿಗೆ ಒಂದು ಲೇಖನವನ್ನು ಬರೆದು ಕಳುಹಿಸಿದರು. ಈ ಲೇಖನದಲ್ಲಿ "ಆರ್ನಲ್ಡ್‌ರವರನ್ನು ಈ ಪಾಠಶಾಲೆಯು ಹೆಡ್‌ಮಾಸ್ಟರ್ ಕೆಲಸಕ್ಕೆ ನಿಯಮಿಸಿದರೆ ಈ ಪಾಠಶಾಲೆಯ ಸ್ಥಿತಿಯು ಅತ್ಯುತ್ತಮವಾಗುವದು ಮಾತ್ರವೇ ಅಲ್ಲದೆ ಇವರು ಹಾಕತಕ್ಕ ವಿದ್ಯಾಭ್ಯಾಸದ ಮೇಲುಪಜ್ಞೆಯಿಂದ ಬ್ರಿಟಿಷ್‌ರಾಜ್ಯವೇ ವಿದ್ಯಾಭ್ಯಾಸದ ವಿಷಯದಲ್ಲಿ ಅತ್ಯುತ್ತಮ ಸ್ಥಿತಿಗೆ ಬರುವುದು" ಎಂದು ಬರೆದಿದ್ದರು. ಇವರು ಹೀಗೆ ಬರೆದಾಗ್ಯೂ ಕಮಿಟಿಯವರು ಇವರ ಮಾತಿನಲ್ಲಿ ಪ್ರತ್ಯಯವನ್ನು ಇಡಲಿಲ್ಲ. ಈ ಕೆಲಸಕ್ಕೆ ಅಪ್ಲಿಕೇಷ್ ಕೊಟ್ಟಿರುವವರಲ್ಲಿ ನಿಜವಾದ ಯೋಗ್ಯತೆಯುಳ್ಳವರು ಯಾರು ಎಂದು ವಿಚಾರಿಸುವವರಿಲ್ಲದಿದ್ದರು. ಅಷ್ಟರಲ್ಲಿಯೇ ಆರ್ನಲ್ಡ್‌ರವರು "ಬ್ಯಾಚಿಲರ್ ಆಫ್ ಡಿವಿನಿಟಿ ಡಾಕ್ಟರ್ ಆಫ್ ಡಿವಿನಿಟಿ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಇದು ಆ ಕಮಿಟಿಯವರಿಗೆ ಇವರ ನಿಜವಾದ ಯೋಗ್ಯತೆಯನ್ನು ಗೊತ್ತುಮಾಡುವದಕ್ಕೆ ಸಾಧಕವಾಯಿತು. ಕೂಡಲೆ ಈ ಕಮಿಟಿಯವರು ಡಾಕ್ಟರ್ ಆರ್ನಲ್ಡ್‌ರವರೇ ಈ ಕೆಲಸಕ್ಕೆ ಸರಿಯಾದ ಶಕ್ತಿಯುಳ್ಳವರೆಂದು ಭಾವಿಸಿ ಅವರನ್ನು ನಿಯಮಿಸಿದರು.

ಶಯ್ಯೆಯು ಚನ್ನಾಗಿಲ್ಲವೆಂದು ಆಕ್ಷೇಪಿಸಿರುತ್ತಾರೆ. ನಾನು ಶೃಂಗಾರ ವಿಷಯವನ್ನೇ ನನ್ನೊಳ್ ಹೇಳಿಲ್ಲ. ಶೃಂಗಾರ ರಸಪ್ರಧಾನವಾದ ಗ್ರಂಥಗಳನ್ನು ಮಾತ್ರ ಅವಲೋಕಿಸಿ ಮತಸಿದ್ಧಾಂತಗಳನ್ನು ಹೇಳಿರುವ ನನ್ನ ಗ್ರಂಥಗಳಲ್ಲಿ ಅಲಂಕಾರಾದಿಗಳಿಲ್ಲವೆಂದು ಪರಿತಾಪ ಪಡುವ ಜನಗಳ ಆಕ್ಷೇಪಣೆಗೆ ಗುರಿಯಾಗುವದೇನೂ ನಿಂದ್ಯನಾದದ್ದಲ್ಲ. ಆದಾಗ್ಯೂ ಈ ಗ್ರಂಥವನ್ನು ತಿದ್ದಬೇಕೆಂಬ ಅಭಿಪ್ರಾಯದಿಂದ ಪುನಃ ಪರಿಶೋಧಿಸಿದೆನು. ಎಮ್ಮೆ ಪರಿಶೀಲಿಸಿ ನೋಡಿದಾಗ್ಯೂ ಈ ಉಪನ್ಯಾಸಗಳ ಶಯ್ಯೆಯು ವಿಷಯಕ್ಕೆ ತಕ್ಕದ್ದಾಗಿರುವಂತೆ ತೋರುತ್ತದೆಯೇ ಹೊರ್ತು ಅದನ್ನು ಬದಲಾಯಿಸುವದಕ್ಕೆ ಕಾರಣವೇನೂ ತೋರುವದಿಲ್ಲ. ನನ್ನ ಉಪನ್ಯಾಸಗಳಲ್ಲಿ ಕ್ರಿಸ್ತಸಿದ್ಧಾಂತವು ಬದಲಾಯಿಸಲ್ಪಟ್ಟದ ಎಂಬುದಾಗಿಯೂ, ಕ್ರಿಸ್ತನೂ ಅವನಶಿಷ್ಯರೂ ಮಾಡಿರತಕ್ಕ ವಿಧಾಯಕಗಳು ಯಾವಸ್ಥಿತಿಯಲ್ಲಿವೆಯೋ ಅದಕ್ಕಿಂತಲೂ ಹೆಚ್ಚಿನ ಸ್ಥಿತಿಯನ್ನು ನನ್ನ ಉಪನ್ಯಾಸಗಳಲ್ಲಿ ನಾನು ಅಪೇಕ್ಷಿಸುತ್ತೇನೆಂಬದಾಗಿಯೂ ಕೆಲವರು ಆಕ್ಷೇಪಿಸಿರುತ್ತಾರೆ. ಆದರೆ ಈ ಆಕ್ಷೇಪಣೆಗಳಿಗೆ ಕ್ರಿಸ್ತಮತ ಸಿದ್ಧಾಂತದಲ್ಲಿ ಪರಿಚಯವು ಕಡಮೆಯೆಂಬಾಗಿರುವದೆ ಮುಖ್ಯಕಾರಣವೆಂದು ತೋರುತ್ತದೆ. ನಾನುಹೇಳಿರುವ ಧರ್ಮಗಳೆಲ್ಲಾ ಕ್ರಿಸ್ತಮತ ಧರ್ಮಗಳು. ಈಧರ್ಮಗಳನ್ನು ಪ್ರಪಂಚದ ಅವಲಂಬನಾರ್ಥವಾಗಿ ಪುಷ್ಟೀಕರಿಸಿ ಹೇಳಿರುವೆನೇಹೊರ್ತು ಕ್ರಿಸ್ತನಿಗಿಂತಲೂ ನಾನುದೊಡ್ಡವನೆಂದುಭಾವಿಸಿ ಮನಸ್ವಿ ಹೇಳಿರುವದಿಲ್ಲ. ಉಪನ್ಯಾಸಮಾಡತಕ್ಕವರು ತಾವು ಉಪನ್ಯಸಿಸುವ ಧರ್ಮಗಳಪೂರ್ವಾಪರಗಳನ್ನು ಯಾವರೀತಿಯಲ್ಲಿ ಜನಗಳ ಮನಸಿಗೆ ತಗಲುವದೊ ಆ ರೀತಿಯಲ್ಲಿ ಹೇಳುವರು. ಅವರ ನಾಗ್ಧೋರಣೆಯೂ, ಉತ್ಸಾಹವೂ, ಅವರ ಉಪನ್ಯಾಸದಲ್ಲಿ ಪ್ರತಿಫಲಿಸಬಹುದು. ಆದಮಾತ್ರದಿಂದಲೇ ಅವರು ಮೂಲಧರ್ಮಗಳನ್ನು ಹೇಳಿದವರಿಗಿಂತಲೂ ದೊಡ್ಡವರೆಂದು ಭಾವಿಸುವರೆಂದು ಹೇಳುವದು ತಪ್ಪು. ಅದು ಹೇಗಾದರೂ ಇರಲಿ. ಕ್ರಿಸ್ತಧರ್ಮವನ್ನು ಕುರಿತು ಉಪನ್ಯಾಸ ಮಾಡುವದರಲ್ಲಿ ಆ ಧರ್ಮವನ್ನು ತಿಳಿದುಕೊಳ್ಳದೆ ಅಪಾರ್ಥವನ್ನು ಕಲ್ಪಿಸಿ ಆ ಧರ್ಮಕ್ಕೆ ನ್ಯೂನತೆ ಮಾಡಿರುತ್ತೇನೆಂದು ಯಾರಾದರೂ ದೋಷಾರೋಪಣೆಯನ್ನು ಮಾಡಿದ ಪಕ್ಷದಲ್ಲಿ ಅದಕ್ಕಾಗಿ ವ್ಯಸನ ಪಡಬೇಕೇ ಹೊರ್ತು ಕ್ರಿಸ್ತಮತಧರ್ಮಗಳನ್ನು ಹೇಳುವದರಲ್ಲಿ ವಿಶೇಷ ಶಕ್ತಿಯನ್ನು ಪ್ರದರ್ಶನ ಮಾಡಿ ಮೂಲಧರ್ಮಗಳಿಗಿಂತಲೂ ಚನ್ನಾಗಿ ಕಾಣುವಂತೆ ಮಾಡಿರುತ್ತೇನೆಂದು ಆಕ್ಷೇಪಿಸಿದರೆ ಅದಕ್ಕಾಗಿ ನಾನು ವ್ಯಸನಪಡತಕ್ಕದ್ದೇನೂ ಇರುವದಿಲ್ಲ."

ಇವರು ರಘುಪೂತರು, ಚಂದ್ರವಂಶದವರು. ದಕ್ಷಿಣಕ್ಕೆ ಬರುವ ಮೊದಲು ಇವರ ೪೯ ಮಂದಿ ಪೂರ್ವಜರು ಅಯೋಧ್ಯೆಯಲ್ಲಿ ಆಳಿದರೆಂದು ಹೇಳುವರು. ಕ್ರಿ. ಶ. ೪ ನೆಯ ಶತಮಾನದಲ್ಲಿ ಜಯಸಿಂಹನೆಂಬ ರಾಜನ ಕಾಲದಲ್ಲಿ ಇವರು ಪ್ರಥಮತಃ ನರ್ಮದೆಯ ದಕ್ಷಿಣಕ್ಕೆ ಬಂದರು. ಒಡನೆಯೇ ಇವರು ರಾಮಕೂಟವೆಂಬ ವಂಶದ ಇಂದ್ರನೆಂಬ ಅರಸನನ್ನು ಜಯಿಸಿದರು; ಆದರೆ ಪಲ್ಲವರು ತ್ರಿಲೋಚನನ ಕೈಕೆಳಗೆ ಇವರನ್ನು ಇದಿರಿಸಿ ನಿಂತು ಇವರ ಕೈವಶವಾಗಲಿಲ್ಲ. ಈ ಅಭಿಯೋಗ ಮಾಡಿದ ಚಾಳುಕ್ಯರ ಮೂಲ ಪುರುಷನೂ ಪಲ್ಲವರೊಡನೆ ಕಾದುತ್ತ ರಣರಂಗದಲ್ಲಿ ಮಡಿದನು. ಈತನ ಪುತ್ರನಾದ ರಾಜಸಿಂಹನು ಪಲ್ಲವರೊಡನೆ ಸಂಧಿಮಾಡಿ ಪಲ್ಲವ ವಂಶೀಯಳಾದ ರಾಜಕುಮಾರಿಯೊಬ್ಬಳನ್ನು ಮದುವೆಯಾದನು. ಇವನಿಂದ ನಾಲ್ಕನೆಯ ತಲೆಯುವನಾದ ಪುಲಿಕೇಶಿಯೆಂಬುವನು ಕ್ರಿ. ಶ. ೬ ನೆಯ ಶತಮಾನದಲ್ಲಿ ಪಲ್ಲವರನ್ನು ಜಯಿಸಿ ಬಾದಾಮಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಇವನ ಮಗ ಕೀರ್ತಿವರ್ಮನು ಮೌರ್ಯರನ್ನೂ ಕದಂಬರನ್ನೂ ಜಯಿಸಿ ಪ್ರಸಿದ್ಧನಾದನು. ಇಷ್ಟರಲ್ಲಿಯೇ ಚಾಳುಕ್ಯರ ರಾಜ್ಯವು ಪಶ್ಚಿಮಸಮುದ್ರದವರೆಗೂ ಹಬ್ಬಿಕೊಂಡಿತು. ಸುಮಾರು ಕ್ರಿ. ಶ ೬೧೨ ರಷ್ಟಕ್ಕೆ ಚಾಳುಕ್ಯರು ವಿಭಕ್ತರಾದರು. ಪೂರ್ವದವರು ಪುಲಿಕೇಶಿಯ ತಮ್ಮ ಕುಬ್ಜ ವಿಷ್ಣುವರ್ಧನನ ಕೈಕೆಳಗೆ ವೆಂಗಿಯನ್ನೂ ಆ ತರುವಾಯ ರಾಜಮಹೇಂದ್ರಪುರವನ್ನೂ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಪಶ್ಚಿಮಶಾಖೆಯವರು ಮೊದಲು ಬಾದಾಮಿಯುಲ್ಲಿಯೂ ಆಮೇಲೆ ಕಲ್ಯಾಣನಗರದಲ್ಲಿಯೂ ನಿಂತು ಆಳಲಾರಂಭಿಸಿದರು. ಇಲ್ಲಿಂದ ಬಳಿಕ ಪೂರ್ವಶಾಖೆಯು ಚಾಳುಕ್ಯರಿಗೂ ಕರ್ನಾಟಕಕ್ಕೂ ವಿಶೇಷ ಸಂಬಂಧವಿಲ್ಲ.

ಪಶ್ಚಿಮಶಾಖೆಯು ಚಾಳುಕ್ಯರಲ್ಲಿ ಎರಡನೆಯ ಪುಲಿಕೇಶಿ ಅಥವಾ ಸತ್ಯಾಶ್ರಯನೆಂಬುವನೇ ಮೊದಲನೆಯವನೂ ಯಶೋವಂತನೂ ಆಗಿರುವನು. ಇವನು ಕನ್ನಾಕುಬ್ಜದ ಶಿಲಾದಿತ್ಯ ಅಥವಾ ಹರ್ಷವರ್ಧನನೆಂಬ ರಾಜನನ್ನು ಗೆದ್ದು ಪರಮೇಶ್ವರನೆಂಬ ನಾಮಧೇಯವನ್ನು ಹೊಂದಿದನು. ಹುಯೆನ್‌ತ್ಸಾಂಗ್ ಎಂಬ ಚೀನದ ಪರ್ಯಟಕನು ಈ ರಾಜನ ಪರಾಕ್ರಮವನ್ನೂ ರಾಜ್ಯಭಾರವನ್ನೂ ಕುರಿತು ಅನೇಕಾನೇಕ ಸಂಗತಿಗಳನ್ನು ಬರೆದಿರುವನು. ಈತನು ಪಾರಸೀಕ ರಾಜನಾದ ಎರಡನೆಯ ಕುಶ್ರೂವಿನೊಡನೆ ಸ್ನೇಹ ಬೆಳೆಯಿಸಿದ್ದನೆಂದು ಅರಬ್ಬೀ ಚರಿತ್ರೆಗಳಿಂದ ಕಂಡುಬರುತ್ತಿದೆ. ಇವನ

ಅರ್ವಾಚೀನ ಕರ್ಣಾಟಕ ಸಾಹಿತ್ಯದ ಬೆಳವಣಿಗೆ.

(೧೩೨ನೆಯ ಪುಟದಿಂದ ಮುಂದೆ)

ಕರ್ಣಾಟಕವನ್ನು ಆಳಿದ ರಾಜವಂಶಗಳಲ್ಲಿ ಪಲ್ಲವ ವಂಶವೇ ಬಹಳ ಪ್ರಾಚೀನವಾದುದು. ಶಾತವಾಹನ ರಾಜವಂಶದವರ ತರುವಾಯ ಇವರು ಕರ್ಣಾಟದಲ್ಲಿ ಪ್ರಬಲರಾಗಿ ದೊಡ್ಡರಾಜ್ಯ ಕಟ್ಟಿದರು. ಶಾಲಿವಾಹನನ ವಂಶೀಯರಲೆಲ್ಲಾ ಬ್ಬನಾದ ಮುಕುಂತಿವಲ್ಲವನೆಂಬುವನು ಈವಂಶಮೂಲಪುರುಷನು. ಈತನು ಶಿವನಿಗೆ ಶಬರಕನ್ಯಾಲ್ಲಿಹುಟ್ಟಿದವನೆಂದು ಕಥೆಯಿದೆ. ಇವರರಾಜಧಾನಿಯು ಬಿಜಾಪುರದ ಡಿಸ್ಟ್ರಿಕ್ಟಿಗೆ ಸೇರಿದ ಬಾದಾಮಿ(ವಾತಾಪಿಪುರ)ಎಂಬಪಟ್ಟಣವಾಗಿತ್ತು. ಕ್ರಿ.ಶ. ೪ನೆಯಶತವಾನದಲ್ಲಿ ಚಾಳುಕ್ಯರು ಇವರನ್ನು ಬಾದಾಮಿಯಿಂದಲೂ ೬ನೆಯಶತವಾನದಲ್ಲಿ ವೆಂಗಿಪುರದಿಂದಲೂ ಓಡಿಸಿದರಂತೆ. ಇವರರಾಜಧಾನಿಯು ಇದಕ್ಕಿಂತಲೂ ಪೂರ್ವದಲ್ಲಿ ಕಂಚೀನಗರದಲ್ಲಿತ್ತಂತೆ. ಇವರ ರಾಜ್ಯವು ಮೈಸೂರು ಸೀಮೆಯು ಪೂರ್ವದಿಕ್ಕಿನಲ್ಲಿಯೂ, ಉತ್ತರದಲ್ಲಿಯೂ ಬಹಳ ದೂರದವರೆಗೆ ವ್ಯಾಪಿಸಿತ್ತು. ಇವರನ್ನು ನೊಳಂಬರೆಂದೂ, ಇವರ ದೇಶವನ್ನು ನೊಣಂಬವಾಡಿ ಎಂದೂ ಕರೆಯುತ್ತಿದ್ದರು. ಈ ವಂಶದವರು ಬಹಳಕಾಲದ ವರೆಗೆ ಶಿವೋಪಾಸಕರಾಗಿದ್ದರು. ಕ್ರಿ.ಶ. ೭೮೮ರಲ್ಲಿ ಆಳುತ್ತಿದ್ದ ಶ್ರೀವಲ್ಲಭನೆಂಬ ರಾಜನ ಸನ್ನಿಧಿಯಲ್ಲಿ ಬೌದ್ಧರಿಗೂ ಜೈನರಿಗೂ ಕಂಚೀಪುರದಲ್ಲಿ ದೊಡ್ಡ ಧರ್ಮವಾದ ನಡೆಯಿತು. ಇದರಲ್ಲಿ ಜೈನರು ವಿಜಯಿಗಳಾಗಲು, ರಾಜನು ಕಾನೂ ಜನಧರ್ಮವನ್ನು ಪರಿಗ್ರಹಿಸಿ ಬೌದ್ಧರನ್ನೆಲ್ಲಾ ಸಿಂಹಳ ದ್ವೀಪಕ್ಕೆ (ಸಿಲೋನ್) ಓಡಿಸಿಬಿಟ್ಟನಂತೆ. ಕ್ರಿ. ಶ. ೧೦ನೆಯ ಶತವಾನದಲ್ಲಿ ಈ ವಂಶದವರ ಪ್ರಾಬಲ್ಯವು ಬಹಳಮಟ್ಟಿಗೆ ಇಳಿದು ಹೋಯಿತು. ಗಂಗರಾಜನಾದ ವೀರಸಿಂಹ (೯೬೩—೯೭೪) ನಿಗೆ ನೋಲಂಬ ಕುಲಾಂತಕನೆಂಬ ಬಿರುದಿತ್ತು. ಆಬಳಿಕ ಈ ವಂಶದವರು ಚಾಳುಕ್ಯರ ಮತ್ತು ಚೋಳರರಾಜರ ಕೈಕೆಳಗೆ ಮಾಂಡಲಿಕರಾಗಿದ್ದುಕೊಂಡು ಬಹಳ ಕಾಲದವರೆಗೂ ಆಳಿದರು.

ಮೇಲೆ ಹೇಳಿದ ಎಲ್ಲಾ ರಾಜವಂಶಗಳಿಗಿಂತಲೂ ಚಾಳುಕ್ಯರಾಜವಂಶವೇ ಅತ್ಯಂತ ಪ್ರಸಿದ್ಧವಾದುದು. ಇವರಷ್ಟು ವಿಸ್ತಾರವಾದ ರಾಜ್ಯವನ್ನಾಗಲೀ, ದೀರ್ಘಕಾಲದವರೆಗಾಗಲೀ ಬೇರೆ ಯಾವ ಸಂತತಿಯವರೂ ರಾಜ್ಯಭಾರ ನಡೆಯಿಸಲಿಲ್ಲ

ಕರ್ನಾಟಕ ಸಾಹಿತ್ಯವನ್ನು ಬೆಳೆಯಿಸುವಂತೆ ಮಾಡಿದ ರಾಜವಂಶಗಳಲ್ಲಿ ರಾಷ್ಟ್ರಕೂಟರು ಕಡಮೆಯವರಲ್ಲ. ಇವರನ್ನು ರಟ್ಟರೆನ್ನುತ್ತಿದ್ದರು. ಇವರು ರಾಜಪೂತರ ರಾಠೋಡವಂಶದವರೆಂದೂ ಈಗ "ರೆಡ್ಡಿ" ಎನ್ನುವ ಜಾತಿಯವರು ಇವರ ವಂಶೀಯರೆಂದೂ ತಿಳಿಯುವರು. ಇವರ ರಾಜಧಾನಿಯು ಮೊತ್ತಮೊದಲು ನಾಸಿಕ್ ಜಿಲ್ಲೆಗೆ ಸೇರಿದ (ಮಯೂರಖಂಡಿ ಎಂಬ) ಮೋರ್‌ಖಂಡ್ ಎಂಬುದೂ, ಕ್ರಿ. ಶ. ೯ನೆಯ ಶತಮಾನದಿಂದೀಚಿಗೆ ಮಾನ್ಯಖೇಟವೆಂಬ ಮಳಖೇಡು ಎಂಬುದೂ ಆಗಿದ್ದಿತು. ಈ ವಂಶದಲ್ಲಿ ೧ನೆಯ ಕೃಷ್ಣನೆಂಬುವನು, ಮಹಾವೀರನಾಗಿ (ಕ್ರಿ. ಶ. ೭೬೦) ಅನೇಕ ರಾಜರನ್ನು ಗೆದ್ದನು. ಈ ಕಾಲದಲ್ಲಿ ಮೈಸೂರನ್ನು ರಟ್ಟರ ಪ್ರತಿನಿಧಿಗಳು ಆಳುತ್ತಿದ್ದರು. ಕ್ರಿ. ಶ. ೮೧೫ರಿಂದ ೮೭೭ರವರೆಗೆ ಆಳಿದ ಅಮೋಘವರ್ಷನೆಂಬ ನೃಪತುಂಗನು ಕವಿಯಾಗಿಯೂ ರಾಜನಾಗಿಯೂ ಪ್ರಸಿದ್ಧನಾಗಿದ್ದನು. ಕ್ರಿ. ಶ. ೧೦ನೆಯ ಶತಮಾನದಲ್ಲಿ ದಕ್ಷಿಣದಲ್ಲಿ ಚೋಳರಾಜ್ಯವೂ ಉತ್ತರದಲ್ಲಿ ಘೂರ್ಜರರಾಷ್ಟ್ರವೂ ಇವರಿಗೆ ಒಳಗಾಗಿದ್ದುವು. ಇವರು ಅತ್ಯಂತ ಬಲಶಾಲಿಯಾಗಿದ್ದರು. ಕ್ರಿ. ಶ. ೯೭೩ರಲ್ಲಿ ಚಾಳುಕ್ಯರಾಜನಾದ ತೈಲಪನು ಕಕ್ಕಲನೆಂಬ ರಾಷ್ಟ್ರಕೂಟ ರಾಜನನ್ನು ಸೋಲಿಸಿ ಕೊಂದು ಅವನ ಜಕ್ಕಬ್ಬೆ ಎಂಬ ಮಗಳನ್ನು ಮದುವೆಯಾದನು. ಕ್ರಿ. ಶ. ೯೮೨ರ ತರುವಾಯ ರಾಷ್ಟ್ರಕೂಟದ ವಿಷಯವಾಗಿ ನಮಗೆ ಏನೊಂದೂ ತಿಳಿಯದು. ರಾಷ್ಟ್ರಕೂಟರು ಭಾಷಾಪಾಂಡಿತ್ಯದ ವಿಷಯದಲ್ಲಿ ವಿಶೇಷವಾದ ಆಸಕ್ತಿಯುಳ್ಳವರಾಗಿದ್ದರೆಂದು ತೋರುತ್ತಿದೆ. ಹರಿವಂಶದ ವೀರಸೇನನೂ ಆದಿಪುರಾಣದ ಜಿನಸೇನನೂ (೭೯೩) ಅಮೋಘವರ್ಷನಿಗೆ ಉಪಾಧ್ಯಾಯರಾಗಿದ್ದರು. ನೃಪತುಂಗನು ತಾನೇ ಕವಿರಾಜಮಾರ್ಗವೆಂಬ ಅಲಂಕಾರ ಗ್ರಂಥವನ್ನು ಬರೆದನು. ಅಕಳಂಕನೂ (೮೫೫) ರಾಷ್ಟ್ರಕೂಟರ ಆಶ್ರಿತನಾಗಿದ್ದನು. ಉತ್ತರಪುರಾಣದ ಗುಣಭದ್ರನು (೮೫೦) ಅಕಾಲವರ್ಷನೆಂಬ ಎರಡನೆಯ ಕೃಷ್ಣನ ಕೈಕೆಳಗಿದ್ದನು. ಹೊನ್ನನು (೮೫೦) ಮೂರನೆಯ ಕೃಷ್ಣನ ಕೈಕೆಳಗಿದ್ದು ಪುರಾಣಚೂಡಾಮಣಿಯೆಂದು ಪ್ರಸಿದ್ಧವಾದ ಶಾಂತಿಪುರಾಣವನ್ನು ಬರೆದನು.

ಎರಡನೆಯ ಕೀರ್ತಿವರ್ಮನ ಕಾಲದಲ್ಲಿ ಕಳೆಗುಂದಿದ ಚಾಳುಕ್ಯರಾಜ್ಯವು ಪುನಃ ತೈಲಪನ ಕೈಕೆಳಗೆ ಉರ್ಜಿತಾವಸ್ಥೆಗೆ ಬಂದಿತು. ಇಲ್ಲಿಂದ ಮುಂದೆ ೭೦೦ ವರ್ಷಗಳ ವರೆಗೆ ಪ್ರಾಯಃ ಚಾಳುಕ್ಯರು ಅವ್ಯಾಹತವಾಗಿ ರಾಜ್ಯಭಾರ ಮಾಡಿ

ಕ್ರಿ. ಶ. ೬೧೦ ರಿಂದ ೬೫೫ ರವರಿಗೆ ಆಳಿದನೆಂದು ತೋರುತ್ತಿದೆ. ಈತನ ತರುವಾಯ ಚೋಳ, ಪಾಂಡ್ಯ, ಕೇರಳ, ಪಲ್ಲವರಾಜರೊಂದಾಗಿ ಈ ವಂಶದವರ ಅಧಿಕಾರವನ್ನು ಕುಂದಿಸಿದರು. ಆದರೆ ಕ್ರಿ. ಶ. ೬೫೫ ರಿಂದ ೬೮೦ ರವರೆಗೆ ಆಳಿದ ಮೊದಲನೆಯ ವಿಕ್ರಮಾದಿತ್ಯನು ತನ್ನ ಪೂರ್ವಜರ ಗೌರವವನ್ನು ಪುನಃ ಸಂಸ್ಥಾಪಿಸಿದನು. ತಮ್ಮ ಅಧಿಕಾರವನ್ನು ಕೆಡಿಸಲು ಪ್ರಯತ್ನಿಸಿದ ರಾಜರನ್ನೆಲ್ಲ ಇವನು ಜಯಿಸಿದನು. ಮುಖ್ಯವಾಗಿ ಕಂಚೀಪುರದ ಪಲ್ಲವ ರಾಜನನ್ನು- ಯಾರು ಪೂರ್ವದಲ್ಲಿ ಬಂಡೆಬ್ಬಿಸುವುದರಲಿ ಹಿರೇಮಣಿಯಾಗಿದ್ದನೋ ಮತ್ತು ಯಾರು ಒಬ್ಬ ವಿಗೂ ತಲೆಬಾಗ್ಗಿಸಲಿಲ್ಲವೆಂಬ ದರ್ಪದಿಂದ ಕೂಡಿದ್ದನೋ ಅವನನ್ನು ಜಯಿಸಿ ವಿಜೇತನಾದ ಅವನಿಂದ ತನ್ನ ಕಾಲುಗಳಿಗೆ ನಮಸ್ಕಾರ ಮಾಡಿಸಿಕೊಂಡನು. ಇವನ ಮಗನಾದ ವಿನಯಾದಿತ್ಯನು ಇನ್ನು ಅನೇಕಾನೇಕ ರಾಜರನ್ನು ಗೆದ್ದು ಚಕ್ರವರ್ತಿ ಎನ್ನಿಸಿಕೊಂಡನು. ಈತನ ಪುತ್ರನಾದ ಎರಡನೆಯ ವಿಕ್ರಮಾದಿತ್ಯನು ಕಂಚಿಯ ನಂದಿಪೋತವರ್ಮನೆಂಬ ಪಲ್ಲವರಾಜನನ್ನು ಓಡಿಸಿ ಅತನ ರಾಜಧಾನಿಯನ್ನು ಆಕ್ರಮಣ ಮಾಡಿದನು. ಎರಡನೆಯ ಕೀರ್ತಿವರ್ಮನೆಂಬ ಇವನ ಪುತ್ರನು ಯುವರಾಜನಾಗಿದ್ದಾಗಲೇ ಪಲ್ಲವರನ್ನು ಜಯಿಸಿ ಕೀರ್ತಿಗೊಂಡನು. ಹೀಗೆ ಚಾಳುಕ್ಯರು ಪಲ್ಲವ ದ್ವಿಗ್ವಿಜಯದಲ್ಲಿಯೇ ಅಸಕ್ತರಾಗಿದ್ದ ಸಮಯವನ್ನು ನೋಡಿಕೊಂಡು, ರಾಷ್ಟ್ರಕೂಟವಂಶದ ದಂತಿದುರ್ಗ ಮತ್ತು ಕೃಷ್ಣರೆಂಬವರು ಕ್ರಿ ಶ. ೭೫೮ ರಲ್ಲಿ ಅವರ ರಾಜಧಾನಿಯನ್ನು ಹಿಡಿದು ಅವರ ಬಲವನ್ನು ಮುರಿದು ಅವರನ್ನು ಬಹಳವಾಗಿ ಕುಂದಿಸಿದರು. ಇಲ್ಲಿಂದ ಮುಂದೆ ಎರಡುಶತವಾನಗಳವರೆಗೆ ಚಾಳುಕ್ಯರು ತಲೆಯನ್ನೆತ್ತಲಿಲ್ಲ.

ಚಾಳುಕ್ಯರು ಚಂದ್ರವಂಶದವರು ಮತ್ತು ಮಾನವ್ಯಗೋತ್ರದವರು. ಸಪ್ತ ಮಾತೃಕೆಗಳಿಂದ ಪೋಷಿತನಾದ ಹಾರೀತ ಎಂಬುವನಿಂದ ಇವರು ಹುಟ್ಟಿದರಂತೆ. ಹಾರೀತನ ಚುಲುಕದ (ಅಂಗೈ) ನೀರಿನಿಂದ ಇವರು ಹುಟ್ಟಿದುದರಿಂದಲೆಂದು ಕೆಲವರೂ ಹಾರೀತನು ದೇವತೆಗಳಿಗೆ ಎತ್ತಿದ ಅರ್ಘ್ಯಪಾತ್ರೆ (ಚುಲ್ಕ, ಚುಲುಕ) ದಿಂದ ಹುಟ್ಟಿದುದರಿಂದಲೆಂದು ಕೆಲವರೂ ಇವರಿಗೆ ಚಾಳುಕ್ಯರೆಂಬ ಹೆಸರಾಯಿತೆಂದು ಹೇಳುವರು. ಇವರು ವರಾಹಧ್ವಜರಾಗಿದ್ದರು. ಇವರಲ್ಲಿ ಪಶ್ಚಿಮಶಾಖೆಯವರು ಸತ್ಯಾಶ್ರಯ ಕುಲದವರೆಂದೂ ಕರೆಯಲ್ಪಡುತ್ತಿದ್ದರು. ಪೂರ್ವಶಾಖೆಯವರು ಕ್ರಿ. ಶ. ೧೧ ನೆಯಶತವಾನದಲ್ಲಿ ಚೋಳರಿಂದ ಜಯಿಸಲ್ಪಟ್ಟು ನಾಮಶೇಷರಾದರು.

ಸಮಮೂಲೆಗಳಾಗಿರುವ ಆಕೃತಿ.

ಇದರಲ್ಲಿ ಎಷ್ಟಾಗಿರುವ ತ್ರಿಭುಜಗಳು ಒಂದೊಂದಕ್ಕೆ ಸಮವಾಗಿವೆ.

ಈ ತುಂಡುಗಳ ಉದ್ದವು ೩ ಅಂಗುಲವೂ ಅಗಲವು ಒಂದಂಗುಲವೂ ಎತ್ತರವು ಅರ್ಧ ಅಂಗುಲವೂ ಇರುವದು. ಪೂರ್ವದಲ್ಲೇ ಸೂಚಿಸಿರುವಂತೆ ಮಕ್ಕಳಿಗೆ ಪೆಟ್ಟಿಗೆಗಳನ್ನು ಹಂಚಿ ಹಿನ್ನೇ ಕರಣದಲ್ಲಿ ಹೇಳಿರುವಮೇರೆ ಘನರೂಪವಾಗಿರುವಂತೆ ಮುಂದಿರುವ ಬೆಂಚಿನಮೇಲೆ ಮಾಡಿ ಪೆಟ್ಟಿಗೆಗಳಲ್ಲಿ ಮುಚ್ಚಳವನ್ನು ಕರ್ಣವಾಗಿಡಿಸಿ ಬೆಂಚಿನ ಅಂಚಿಗೆ ಸಮಾನಾಂತರದಲ್ಲಿಡಿಸಬೇಕು. ಘನದ ಹೆಸರನ್ನೂ ಅಂಚುಗಳು, ಮುಖಗಳು ಇವುಗಳನ್ನೂ ಎಣಿಸುವಂತೆ ಹೇಳಿ. ಕಡ್ಡಿಯಿಂದ ಉದ್ದ, ಅಗಲ, ಎತ್ತರ ಇವುಗಳನ್ನು ಅಳೆಯುವಂತೆ ಹೇಳಬೇಕು. ತರುವಾಯ ಘನಗಳನ್ನು ಸಾಲಾಗಿ ಎಣಿಸುವಂತೆ ಹೇಳಿ, ಭಾಗಿಸಿದನಂತರ 2—4.....1—3....4—8..... ಬೆಂಚಿನ ಮೇಲಿನ ಭಾಗಗಳನ್ನು ಎಣಿಸುವಂತೆ ಹೇಳಿ ಪ್ರತಿ ಆವೃತ್ತಿಯಲ್ಲೂ ವಿಲೋಮ ಕ್ರಮದಲ್ಲಿ ಹೇಳಿಸಬೇಕು. ತರುವಾಯ ಅರ್ಧ, ಕಾಲು, ಆರಕಾಲು, ಇವುಗಳ ಸಂಕಲನ ವ್ಯವಕಲನಗಳನ್ನು ಹಿಂದಿನ ಕರಣದಂತೆ ಅಭ್ಯಾಸ ಮಾಡಿಸಬೇಕು. ಹೀಗೆ ಮಾಡಿದ ನಂತರ ಮಕ್ಕಳು ಹಿಂದಿನ ಕರಣದ ಇಟಿಗೆಗೂ ಇದಕ್ಕೂ ಇರುವ ವ್ಯತ್ಯಾಸವನ್ನು ತಿಳಿಯುವರು. ಈ ಆಕೃತಿಗೆ [ ] ಆಯತವೆಂದು ಕರೆಯುವರೆಂದು ಹೇಳಿ ಅದರ ವಿಷಯವನ್ನು ಚನ್ನಾಗಿ ಮಂದಟ್ಟು ಮಾಡಿಸಬೇಕು.

ತರುವಾಯ ಕಟ್ಟಡಗಳನ್ನು ಕಟ್ಟಿಸಬೇಕು. ಈ ತುಂಡುಗಳಿಂದ ಕಟ್ಟಿಸುವ ಕಟ್ಟಡಗಳು ಹಿಂದಿನ ಕರಣದ ಇಟಿಗೆಗಳಿಂದ ಕಟ್ಟಿದವುಗಳಂತೆ ಇರದೆ ಬೇರೆ ವಿಧವಾಗುವವು ಯಾಕೆಂದರೆ ಇದರ ಇಟಿಗೆಗಳ ಆಕಾರವೇ ಭೇದವಾಗಿರುವದು. ಒಂದಕ್ಕೊಂದು ತಗಲುವಂತೆ ಇಟ್ಟರೆ ದೀಪದಗೂಡೂ, ಸಂತೆಯಲ್ಲಿ ವ್ಯಾಪಾರದವರು ಹಾಕಿಕೊಂಡಿರುವಂಥ ಗುಡಾರವೂ ಆಗುವುವು. ತರುವಾಯ ಸಂತೆಯ ವಿಷಯವಾಗಿ ಅಲ್ಲಿ ನಡೆಯುವ ವ್ಯಾಪಾರ, ಮೂರು ದಿನಸುಗಳು, ಸಂತೆ ಕಟ್ಟತಕ್ಕಕಾಲ, ಅದರಿಂದ ಜನಗಳಿಗೆ ಅನುಕೂಲ, ಇವುಗಳನ್ನು ಕಲಿಸುವದಕ್ಕೆ ತಕ್ಕ ಸಮಯವು ದೊರೆಯುವುದು. ಈ ಕರಣದ ಇಟಿಗೆಗಳಿಂದ ಮೇಲೆ ಹೇಳಿರುವ ಕಟ್ಟಡಗಳಲ್ಲದೆ ಇನ್ನೂ ಅನೇಕ ಕಟ್ಟಡಗಳನ್ನು ಕಟ್ಟಬಹುದು;—ಮನೆ, ಮಂಟಪ, ಬೆಂಚು, ಮೇಜು, ಸೇತುವೆ, ಪೆಟ್ಟಿಗೆ, ಕೊಟ್ಟಿಗೆ, ಕುದುರೆ ಲಾಯ ಮುಂತಾದವು. ಇವುಗಳ ಉಪಯೋ

ದರು. ಇವರಿಗೂ ಚೋಳರಿಗೂ ಆಗಿಂದಾಗ ಯುದ್ಧಗಳು ನಡೆಯುತ್ತಲೇ ಇದ್ದುವು. ಕ್ರಿ. ಶ. ೧೦೭೬ ರಿಂದ ೧೧೮೬ ರವರೆಗೆ ಆಳಿದ ತ್ರಿಭುವನ ಮಲ್ಲನೆಂದೆನ್ನಿಸಿಕೊಂಡ ಆರನೆಯ ವಿಕ್ರಮಾದಿತ್ಯನು ಕರ್ಣಾಟದ ಶಿಲಾಹಾರ ರಾಜಪುತ್ರಿಯಾದ ಚಂದ್ರಲೇಖೆ ಎಂಬ ಸುಂದರೀಮಣಿಯನ್ನು ಸ್ವಯಂವರದಲ್ಲಿ ವರಿಸಿದನು. ಇವನ ಮುಮ್ಮಗನಾದ ತ್ರಿಲೋಕಮಲ್ಲನ ಕೈಕೆಳಗೆ (ಕ್ರಿ. ಶ. ೧೧೫೦—೧೧೮೦) ರಾಜ್ಯವು ಪುನಃ ಕಲೆಗಟ್ಟಿತು. ಕಾಲಚೂರ್ಯವಂಶದ ಬಿಜ್ಜಳನೆಂಬ ಬಲಶಾಲಿಯಾದ ಶ್ರೀಮಂತನು ಈ ರಾಜರುಗಳ ಕೈಕೆಳಗೆ ಸೇನಾಧಿಪತಿಯಾಗಿದ್ದು ಕೊನೆಗೆ ತ್ರಿಲೋಕಮಲ್ಲನನ್ನು ಸಿಂಹಾಸನದಿಂದ ದೊಬ್ಬಿ ತಾನೇ ರಾಜನಾದನು. ಚಾಳುಕ್ಯರಾಜನು ಬನವಾಸಿಗೆ ಹೋಗಿ ನಿಂತನು. ಈ ವಂಶದ ಕಡೆಯ ನಾಮಮಾತ್ರರಾಜನಾದ ಸೋಮೇಶ್ವರನು ಕ್ರಿ. ಶ. ೧೧೮೯ ರಲ್ಲಿ ಪಟ್ಟಕ್ಕೆ ಬಂದು ಧಾರವಾಡದ ಬಳಿಯಲ್ಲಿರುವ ಅಣ್ಣಿಗೇರಿಯಲ್ಲಿ ವಾಸಮಾಡಿದನೆಂದು ತಿಳಿದುಬಂದಿದೆ. ಈ ವಂಶದವರೇ ೧೩ ನೆಯ ಶತಮಾನದ ಅರ್ಧದವರೆಗೆ ಕೊಂಕಣವನ್ನು ಆಳುತ್ತಿದ್ದರು. ಕವಿಗಳಲ್ಲಿ ಮೊದಲನೆಯವನೆಂದು ಪ್ರಸಿದ್ಧನಾದ ಪಂಪನು ತನ್ನ ಆದಿಪುರಾಣವನ್ನು ಚಾಳುಕ್ಯ ರಾಜನಾದ ಅರಿಕೇಸರಿಯ ಕೈಕೆಳಗಿದ್ದು ಬರೆದನು. ಗದಾಯುದ್ಧದ ರಚಕನಾದ ರನ್ನನು ಸತ್ಯಾಶ್ರಯನ ಆಶ್ರಯದಲ್ಲಿದ್ದನು. ಬಿಲ್ಹಣನು ವಿಕ್ರಮಚಾಳುಕ್ಯನ ಕಾಲದಲ್ಲಿ ಇದ್ದನು. ಗುಣಚಂದ್ರನು ಭುವನೈಕಮಲ್ಲನಲ್ಲಿದ್ದನು. ೧೦೭೬ ರಿಂದ ೧೧೨೮ ರವರೆಗೆ ಆಳಿದ ಸೋಮೇಶ್ವರನು ತಾನೇ ಮಾನಸೋಲ್ಲಾಸವೆಂಬ ಸಂಸ್ಕೃತ ಗ್ರಂಥವನ್ನು ಬರೆದನು. [ಸಶೇಷ]

R. M. B.

ಕಿಂಡರ್‌ಗಾರ್ಟನ್

V ನೆಯ ಅಧ್ಯಾಯ. IV ನೆಯ ಕರಣ.

ನಾಲ್ಕನೇ ಕರಣದ ಪೆಟ್ಟಿಗೆಯಲ್ಲೂ ೩ ನೇ ಕರಣದ ಪೆಟ್ಟಿಗೆಯಲ್ಲಿದ್ದಂತೆ ಮರದ ತುಂಡುಗಳಿವೆ. ಆದರೆ ಈ ತುಂಡುಗಳು "ಆಯತ" ರೂಪದಲ್ಲಿರುವು. ಆಯತವೆಂದರೆ ನಾಲ್ಕು ಭುಜಗಳೂ ಸಮನಿಲ್ಲದ ಎಲ್ಲಾ ಮೂಲೆಗಳೂ

ಇದಕ್ಕೇ ಓಜೋನ್ ಎಂಬ ಹೆಸರು. ಇದು ಕೊಳೆಯತಕ್ಕ ಹೆಣಗಳನ್ನೂ ಮತ್ತು ಸಸ್ಯಾದಿಗಳನ್ನೂ ಶುದ್ಧಮಾಡುತ್ತದೆ. ವಾಯುವನ್ನು ನಿರ್ಮಲವಾಗಿ ಮಾಡುತ್ತದೆ. ಸಮುದ್ರದ ತೀರಗಳಲ್ಲಿ ಓಜೋನ್ ಎಂಬ ವಾಯುವಿನ ಅಂಶವು ವಿಶೇಷವಾಗಿರುವುದು. ತುಂಬಾ ಜನಭರಿತವಾದ ಪ್ರದೇಶಗಳಲ್ಲಿ ಇದು ಕಡಮೆಯಾಗಿರುವುದು. ಈ ಓಜೋನ್ ಎಂಬ ವಾಯ್ವಂಶವು ವಾಯುವಿನಲ್ಲಿ ವಿಶೇಷವಾಗಿದ್ದರೆ ಅಂಥಾ ವಾಯುವನ್ನು ಸೇವಿಸತಕ್ಕವರು ವಿಶೇಷ ಆರೋಗ್ಯವನ್ನು ಹೊಂದುವರು. ಅದು ಕಡಮೆಯಾಗಿದ್ದರೆ ಆ ವಾಯುಸೇವನೆಯಿಂದ ಸಂಪೂರ್ಣವಾದ ಆರೋಗ್ಯಭಾಗ್ಯವುಂಟಾಗಲಾರದು.

ಒಂದು ಕಟ್ಟಿಗೆಯನ್ನಾಗಲಿ ಅಥವಾ ಇದ್ದಲನ್ನಾಗಲಿ ಉರಿಯುವಂತೆ ಮಾಡಿದರೆ ಅದು ಸುಟ್ಟು ಬೂದಿಯಾಗುವುದು. ಒಂದು ಮೋಂಬತ್ತಿಯನ್ನು ಹತ್ತಿಸಿದರೆ ಅದೆಲ್ಲಾ ಪೂರ್ತಿಸುವವರೆಗೂ ದೀಪವು ಉರಿಯುವುದು. ಸೌದೆ ಅಥವಾ ಇದ್ದಲು ಉರಿದು ಬೂದಿಯಾದಮೇಲೆ ಮೋಂಬತ್ತಿಯು ಉರಿದುಹೋದಮೇಲೆ ಸೌದೆಯು ಇದ್ದಲು, ಮೋಂಬತ್ತಿಯು ಏನಾದುವು ಯೋಚಿಸೋಣ. ಅವುಗಳೆಲ್ಲಾ ನಾಶವಾಗಿರಬೇಕೆಂದು ಪೂರ್ವಾಪರ ಜ್ಞಾನವಿಲ್ಲದವರು ಯೋಚಿಸಬಹುದು. ಆದರೆ ಈ ಪದಾರ್ಥಗಳಲ್ಲಿ ಒಂದು ಅಣುವೂ ಕೂಡ ನಾಶವಾಗಿ ಇರುವ್ರದಿಲ್ಲ. ಅವುಗಳು ಇದ್ದೇ ಇರುತ್ತವೆ. ಆದರೆ ಉರಿಸಿಬಿಡುವುದರಿಂದ ಅವುಗಳಿಗೆ ಅವಸ್ಥಾಂತರ ಉಂಟಾಗಿರುತ್ತದೆ. ಪುನಃ ಅವುಗಳನ್ನು ಪೂರ್ವಾವಸ್ಥೆಗೆ ತರುವುದಕ್ಕೆ ನಮ್ಮ ಕೈಲಿ ಆಗುವುದಿಲ್ಲ. ಆದರೆ ಅವಸ್ಥಾಂತರದಲ್ಲಿ ವಾಯುವಿನಲ್ಲಿರುತ್ತದೆಂದು ಶೋಧಿಸುವುದು ಸುಲಭ.

ಇದ್ದಲು ಭೂತವಸ್ತುವಲ್ಲ. ಬೇರೆಬೇರೆ ಭೂತವಸ್ತುಗಳ ಸಂಯೋಗದಿಂದ ಇದ್ದಲು ಆಗಿರುವುದು. ಎಲ್ಲಾ ಸಸ್ಯಾದಿಗಳಲ್ಲಿಯೂ, ಪ್ರಾಣಿಗಳಲ್ಲಿಯೂ ಇದ್ದಲು ಇರುವುದು. ನಮ್ಮ ಶರೀರವು ಇದ್ದಲಿನ ಅಂಶವನ್ನು ಹೊಂದಿರುವದು. ಇದ್ದಲನ್ನು ಸುಟ್ಟರೆ ಅದರಲ್ಲಿರತಕ್ಕ ಕಾರ್ಬನ್ ಎಂಬ ಕರೀ ಭಾಗವು ಹೊಗೆಯಂತೆ ಎದ್ದು ವಾಯುಮಂಡಲವನ್ನು ಸೇರುವದು. ಇಲ್ಲಣ ಮೊದಲಾದವುಗಳೆಲ್ಲಾ ಇದ್ದಲಿನ ಕರೀಭಾಗವಾಗಿರುವದು. ಈ ಅಂಶವು ಎಣ್ಣೆಯಲ್ಲಿಯೂ, ಮೋಂಬತ್ತಿಯಲ್ಲಿಯೂ ಎಲ್ಲಾ ವಿಧವಾದ ಉರಿಯತಕ್ಕ ಪದಾರ್ಥಗಳಲ್ಲಿಯೂ ಇರುವುದು.

ಈ ಕಾರ್ಬನ್ ಎಂಬ ಭಾಗವೆಲ್ಲಾ ಹೊಗೆಯ ಆಕೃತಿಯಿಂದ ವಾಯುಮಂಡ

ಗವಸ್ನು ಹೇಳಿಸುವುದರಿಂದ ಪ್ರಾಣಿಗಳ, ಮತ್ತು ವಸ್ತುಗಳ ವಿಷಯಗಳನ್ನು ಉಪ
ಯೋಗವನ್ನೂ ತಿಳಿಯುವದಲ್ಲದೆ ಮನೆ, ಲಾಯ, ಕೊಟಿಗೆ, ಮುಂತಾದವುಗಳು
ಕಟ್ಟುವುದಕ್ಕೆ ಬೇಕಾಗುವ ಸಾಮಾನುಗಳನ್ನೂ ತಿಳಿಸುವದಕ್ಕನುಕೂಲವಾಗುವುದು.
ಪುನಃ ಘನರೂಪವನ್ನು ಮೊಡಿಸಿ ಹಿಂದಿನ ಕರಣದ ಪೆಟ್ಟಿಗೆಯನ್ನು ಮುಚ್ಚಿಸುವ
ಕ್ರಮದಲ್ಲಿಯೇ ಮುಚ್ಚಿಸಡಬೇಕು. ಮುಖ್ಯವಾಗಿ ಉಪಾಧ್ಯಾಯನು ಪ್ರೀತಿಯಿಂದ
ಮಕ್ಕಳಿಗೆ ಹಿಂದೆ ಮಾಡಿಸಿರುವ ಮತ್ತು ಈಗ ಹೇಳಿರುವ ಕರಣಗಳಿರುವ ನಾನಾವಿಧ
ವಾದ ಸಾಮ್ಯ ವೈಷಮ್ಯಗಳನ್ನು ತಿಳಿಸಿ ಮಕ್ಕಳು ತಾವಾಗಿಯೇ ಹೊಸ ವಿಷಯ
ವನ್ನು ಕಲಿಯುವದಕ್ಕೆ ಕುತೂಹಲ ಹುಟ್ಟುವಂತೆ ಮಾಡಬೇಕು. ಇದೊಂದು ತೊಂದ
ರೆಯಿಲ್ಲದ ರಗಳೆಯೆಂದು ತಿಳಿಯದೆ ಮಕ್ಕಳಿಗೆ ಆಟದಿಂದ ಜ್ಞಾನಕ್ಕೆ ಸಾಧನೆಯೆಂದು
ತಿಳಿದು ವಿಷಯಗಳು ಮಕ್ಕಳಲ್ಲಿ ಚೆನ್ನಾಗಿ ನೆಡುವ ಪರ್ಯಂತರ ಪುನರಾವರ್ತನ
ಮಾಡಿಸಬೇಕು. ಈ ಕರಣದಲ್ಲಿ ಅನೇಕರು ಒಟ್ಟುಗೂಡಿ ಗೋಪುರ, ಕಟ್ಟಡ,
ಮುಂತಾದವುಗಳನ್ನು ಕಟ್ಟಿಸಿ ಪರಸ್ಪರಾನುರಾಗಕ್ಕೆ ಉತ್ತೇಜನ ಕೊಡಬಹುದು
ಮಧ್ಯೆಮಧ್ಯೆ ಮಕ್ಕಳಿಗೆ ಹಿತವನ್ನುಂಟುಮಾಡತಕ್ಕ ವಿಷಯಗರ್ಭಿತವಾಗಿಯೂ ನೀತಿ
ಕರವಾಗಿಯೂ ಇರುವ ಕಥೆಗಳನ್ನೂ ಹೇಳಿ ಅಂಥ ಹಾಡುಗಳನ್ನೂ ಹೇಳಿಸಬೇಕು.

ವಾಯು.

ವಾಯುವಿನಲ್ಲಿ ದೃಷ್ಟಿಗೆ ಗೋಚರವಾಗದೇ ಇರತಕ್ಕ ೩ ಪದಾರ್ಥಗ
ಳುಂಟು. ಇವುಗಳಲ್ಲಿ ಎರಡು ಅನಿಲಾವಸ್ಥೆಯಲ್ಲಿರುತ್ತವೆ, ಇವುಗಳೇ ಓ ಜೋನ್
ಮತ್ತು ಕಾರ್ಬಾನಿಕ್‌ಆಸಿಡ್‌ಗ್ಯಾಸ್ ಎಂಬುವುಗಳು. ನೀರಿನ ಜವೆಯು ಮೂರನೇ
ಪದಾರ್ಥವಾಗಿರುವುದು. ಸಿಡಿಲು ಬಿದ್ದಕೂಡಲೆ ಒಂದು ವಿಚಿತ್ರವಾದ ವಾಸನೆಯುಂ
ಟಾಗುವುದು. ವಿದ್ಯುಚ್ಛಕ್ತಿಯ ಯಂತ್ರದಿಂದ ಈ ಶಕ್ತಿಯು ಉಂಟುಮಾಡಲ್ಪಟ್ಟಾ
ಗಲೂ ಕೂಡ ಈ ವಾಸನೆಯು ಉಂಟಾಗುವುದು. ಇದು ಆಕ್ಸಿಜನ್ ಎಂಬ ಪ್ರಾಣ
ಧಾರಕವಾಯುವು ತೀಕ್ಷ್ಣವಾಗಿರುವಾಗ ಈ ವಿಧವಾದ ವಾಸನೆಯು ಹುಟ್ಟುವುದು.

ವಾಯುವಿನ ಪ್ರಮಾಣ

ವಾಯುಮಂಡಲವು ಭೂಮಂಡಲವನ್ನು ಎಲ್ಲಾ ಕಡೆಗಳಲ್ಲಿಯೂ ಆವರಿಸಿಕೊಂಡಿರುವುದಷ್ಟೆ. ಭೂಮಿಯಿಂದ ಮೇಲಕ್ಕೆ ಎಷ್ಟು ಎತ್ತರದವರೆಗೂ ಇದು ವ್ಯಾಪಿಸಿಕೊಂಡಿರುವುದು? ಭೂಮಿಯು ೨೪ ಘಂಟೆಗಳಿಗೊಂದಾವರ್ತಿ ಪಶ್ಚಿಮದಿಂದ ಪೂರ್ವಕ್ಕೆ ತಿರುಗುವುದು. ಸುಮಾರು ೩೬೫ ದಿವಸಗಳು ೬ ಘಂಟೆಗಳೊಳಗೆ ಸೂರ್ಯನ ಸುತ್ತಲೂ ತನ್ನ ಮಾರ್ಗವನ್ನನುಸರಿಸಿ ಪ್ರದಕ್ಷಿಣವನ್ನು ಮಾಡುವುದು. ವಾಯುಮಂಡಲಕ್ಕೂ ಕೂಡ ಈ ಎರಡು ಚಲನೆಗಳು ಸಿದ್ಧವಾಗಿರುವುವು. ಭೂಮಿಯು ಒಂದು ನಿಮಿಷಕ್ಕೆ ೧೯ ಮೈಲಿಗಳಂತೆ ಚಲಿಸುವುದು. ಈ ವೇಗವು ವಾಯುಮಂಡಲಕ್ಕೂ ಸಲ್ಲುವುದು. ಇಷ್ಟು ವೇಗವಾಗಿ ಸಂಚರಿಸತಕ್ಕ ಭೂಮಿಯಮೇಲಿರತಕ್ಕ ಪದಾರ್ಥಗಳು ಭೂಮಿಯನ್ನು ಬಿಟ್ಟು ಓಡಬೇಕೆಂದು ತೋರುವುದು. ಆದರೆ ಅಂಥಾ ಪದಾರ್ಥಗಳೇ ಆಗಲಿ ವಾಯುಮಂಡಲವೇ ಆಗಲಿ ಭೂಮಿಯನ್ನು ಬಿಟ್ಟು ತೊಲಗುವದಿಲ್ಲ. ಹೀಗೆ ತೊಲಗದೇ ಇರುವುದಕ್ಕೆ ಕಾರಣವೇನು? ಭೂಮಿಯ ಆಕರ್ಷಣಶಕ್ತಿ ಇದಕ್ಕೆ ಮುಖ್ಯವಾದ ಕಾರಣವು. ಭೂಮಿಯನ್ನಾವರಿಸಿಕೊಂಡಿರತಕ್ಕ ವಾಯುಮಂಡಲಕ್ಕೆ ಅವಧಿಯಾವುದು? ಈ ವಾಯುಮಂಡಲವು ಎಷ್ಟು ಎತ್ತರದವರೆಗೂ ಇರುವುದು? ಈ ವಾಯುಮಂಡಲದ ಮೇಲೆ ಏನು ಇರುವುದು? ಈ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವುದು ಸುಲಭ. ನಿರ್ಮಲವಾದ ಕೃಷ್ಣಪಕ್ಷದ ರಾತ್ರಿಗಳಲ್ಲಿ ನಕ್ಷತ್ರ ಪತನಗಳಾಗುವಂತೆ ಕಾಣುವುದು ಎಲ್ಲರಿಗೂ ಅನುಭವಸಿದ್ಧವಷ್ಟೆ. ಅಕಸ್ಮಾತ್ತಾಗಿ ನಕ್ಷತ್ರಗಳು ಬೀಳುವಂತೆ ತೋರಿ ಶೀಘ್ರದಲ್ಲಿಯೇ ಮರೆಯಾಗುವುವು. ಅವುಗಳು ಬೀಳುವ ಕಾಲದಲ್ಲಿ, ಆಕಾಶಮಾರ್ಗದಲ್ಲಿ ಗುಡಿಗಿನಂತೆ ಶಬ್ದವು ಕೇಳುವದುಂಟು. ಹಾಗೆ ನೆಲಕ್ಕೆ ಬಿದ್ದ ಪದಾರ್ಥಗಳೂ ಕೂಡಿಸಲ್ಪಟ್ಟಿರುವದುಂಟು. ಇವುಗಳನ್ನು ಸಿದ್ಧಾಂತಿಗಳು ಬಹಳ ಜಾಗರೂಕತೆಯಿಂದ ಪರೀಕ್ಷಿಸಿರುತ್ತಾರೆ. ಬೇರೆಬೇರೆ ಸ್ಥಳಗಳಿಂದ ಸಿದ್ಧಾಂತಿಗಳು ಇವುಗಳ ಪತನವನ್ನು ಪರೀಕ್ಷಿಸುತ್ತಾರೆ. ಹೀಗೆ ಪರೀಕ್ಷಿಸಲ್ಪಟ್ಟ ಪ್ರತ್ಯೇಕ ಸ್ಥಳಗಳಿಗೂ ಈ ನಕ್ಷತ್ರಗಳು ಬೀಳುವದಕ್ಕುಪಕ್ರಮವಾದ ಭಾಗಕ್ಕೂ ಒಂದು ತ್ರಿಭುಜವನ್ನು ಕಲ್ಪಿಸಿ ಅದನ್ನು ರೇಖಾಗಣಿತದ ಕಟ್ಟಳೆಗಳ ಪ್ರಕಾರ ಲೆಕ್ಕ ಮಾಡಿದರೆ ಸುಮಾರು ೧೦೦ ಮೈಲಿಗಳ ಎತ್ತರದಲ್ಲಿ ಪ್ರಥಮತಃ ಬೀಳುವಂತೆ ತೋರ

ವನ್ನು ಸೇರುವುದಿಲ್ಲ. ಇದ್ದಲು ಮೊದಲಾದ ಪದಾರ್ಥಗಳು ಉರಿಯುವಾಗ ವಾಯುವಿನಲ್ಲಿರತಕ್ಕ ಆಕ್ಸಿಜ್ ಎಂಬ ಭೂತವಸ್ತುವು ಇದರೊಡನೆ ಸಂಯೋಗವನ್ನು ಹೊಂದಿ ಅವೃಶ್ಯನಾದ ಕಾರ್ಬಾನಿಕ್‌ಗ್ಯಾಸ್ ಎಂಬ ಪದಾರ್ಥವಾಗುತ್ತದೆ. ಉರಿಯು ಜ್ವಾಲಾರೂಪವಾಗಿರುವವರೆಗೂ ಆಕ್ಸಿಜ್, ಕಾರ್ಬ್‌ಗಳು ಹೀಗೆ ಪರಸ್ಪರ ಸಂಯೋಗವನ್ನು ಹೊಂದುವುವು. ಉರಿಯನ್ನು ನಿಲ್ಲಿಸಬಿಟ್ಟರೆ ಕಾರ್ಬ್ ಎಂಬ ಪದಾರ್ಥವು ಹೊಗೆಯಾಗಿ ವಾಯುಮಂಡಲದಲ್ಲಿ ಸೇರಿಕೊಳ್ಳುವ ಅವಸ್ಥೆಯು ಬರುವುದು. ಉರಿಯು ನಿಂತುಹೋದಮೇಲೆ ಇದ್ದಲು ಮೊದಲಾದವುಗಳಿಂದ ಕಾರ್ಬ್ ಪ್ರತ್ಯೇಕವಾಗುವುದು ಕೂಡ ಇಲ್ಲ.

ಈ ಕಾರ್ಬಾನಿಕ್ ಆಸಿಡ್‌ಗ್ಯಾಸ್ ಎಂಬುವುದು ವಾಯುಮಂಡಲಕ್ಕೆ ಸೇರತಕ್ಕದ್ದು ಉರಿಯತಕ್ಕ ಪದಾರ್ಥಗಳಿಂದ ಮಾತ್ರವೇ ಅಲ್ಲ. ಉಚ್ಛ್ವಾಸ ನಿಶ್ವಾಸಗಳಿಂದ ವಾಯುವನ್ನು ಸೇವಿಸತಕ್ಕ ಪ್ರಾಣಿಗಳೆಲ್ಲಾ ವಾಯುಮಂಡಲಕ್ಕೆ ಕಾರ್ಬಾನಿಕ್ ಆಸಿಡ್‌ಗ್ಯಾಸನ್ನು ಕೊಡುವುವು. ನಾವು ವಾಯುವನ್ನು ತೆಗೆದುಕೊಂಡಾಗ ಆ ವಾಯುವು ನಮ್ಮ ಶ್ವಾಸಕೋಶವನ್ನು ಪ್ರವೇಶಿಸುವುದು. ಆ ಶ್ವಾಸಕೋಶದಲ್ಲಿ ನಮ್ಮ ರಕ್ತನಾಳಗಳಲ್ಲಿ ಸಂಚಾರಮಾಡುವ ರಕ್ತದೊಡನೆ ಸಂಬಂಧವನ್ನು ಹೊಂದುವುದು. ಅಲ್ಲಿನ ದೇಹಾಗ್ನಿಯ ಉರಿಯಿಂದ ವಾಯುವಿನಲ್ಲಿರತಕ್ಕ ಆಕ್ಸಿಜ್‌ಗೂ, ರಕ್ತದಲ್ಲಿರುವ ಕಾರ್ಬ್‌ಗೂ ಸಂಯೋಗ ಉಂಟಾಗಿ ಕಾರ್ಬಾನಿಕ್‌ಆಸಿಡ್‌ಗ್ಯಾಸ್ ಇರುವುದು. ಈ ಕಾರ್ಬಾನಿಕ್‌ಆಸಿಡ್‌ಗ್ಯಾಸ್ ನಮ್ಮ ನಿಶ್ವಾಸದಿಂದ ಈಚೆಗೆ ಬರುವುದು. ಈ ಕಾರ್ಬಾನಿಕ್‌ಆಸಿಡ್‌ಗ್ಯಾಸ್ ಎಂಬುವುದು ಪ್ರಾಣಿಜಾತಿಗೂ, ಉರಿಯನ್ನು ನಿಲ್ಲಿಸುವುದಕ್ಕೂ ಮುಖ್ಯ ಕಾರಣವಾಗುವುದು. ಒಂದು ದೀಪವನ್ನು ಇಟ್ಟು ಅದರಮೇಲೆ ಒಂದು ಗಾಜಿನ ಬಟ್ಟಲನ್ನು ಕವುಚಿದರೆ ಕೊಂಚಹೊತ್ತಿನೊಳಗಾಗಿ ದೀಪವು ಆರಿಹೋಗುವುದು. ಹೀಗೆ ಆರಿ ಹೋಗುವುದಕ್ಕೆ ಆ ಗಾಜಿನ ಬಟ್ಟಲಿನಲ್ಲಿದ್ದ ವಾಯುವಿನ ಆಕ್ಸಿಜ್‌ಗೂ ದೀಪದೆಣ್ಣೆಯ ಕಾರ್ಬ್‌ಗೂ ಸಂಬಂಧವುಂಟಾಗಿ ಕಾರ್ಬಾನಿಕ್ ಆಸಿಡ್‌ಗ್ಯಾಸ್ ಉಂಟಾದದ್ದೇ ಮುಖ್ಯಕಾರಣ. ಅಂಥಾ ಕಾರ್ಬಾನಿಕ್‌ಆಸಿಡ್‌ಗ್ಯಾಸ್‌ನಲ್ಲಿ ದೀಪವು ತಾನಾಗೆ ಆರಿಹೋಗುವುದೋ ಹಾಗೆಯೇ ಪ್ರಾಣಿಗಳೂ ಕೂಡ ಉಳಿಯುವದಿಲ್ಲ. ಅದೇ ಬಟ್ಟಲಿಗೆ ಒಂದು ಇಲಿಯನ್ನು ಹಾಕಿದರೆ ಆ ಇಲಿಯು ಕೂಡ್ಲೆ ಸಾಯುವುದು. ಇಂಥಾ ಕಾರ್ಬಾನಿಕ್ ಆಸಿಡ್‌ಗ್ಯಾಸನ್ನು ಉರಿಯತಕ್ಕ ಪದಾರ್ಥಗಳು ತಾನಾಗೇ ಹಾಗೆ ಮನುಷ್ಯರೇ ಮೊದಲಾದ ಪ್ರಾಣಿಗಳೆಲ್ಲಾ ವಾಯುಮಂಡಲಕ್ಕೆ ಸಹಾಯ ಪಡಿಸುವುವು.

ವಾಯುವಿನ ಪ್ರಮಾಣ.

ವಾಯುಮಂಡಲವು ಭೂಮಂಡಲವನ್ನು ಎಲ್ಲಾ ಕಡೆಗಳಲ್ಲಿಯೂ ಆವರಿಸಿಕೊಂಡಿರುವುದಷ್ಟೆ. ಭೂಮಿಯಿಂದ ಮೇಲಕ್ಕೆಎಷ್ಟು ಎತ್ತರದವರೆಗೂ ಇದು ವ್ಯಾಪಿಸಿಕೊಂಡಿರುವದು? ಭೂಮಿಯು ೨೪ ಘಂಟೆಗಳಿಗೊಂದಾವರ್ತಿ ಪಶ್ಚಿಮದಿಂದ ಪೂರ್ವಕ್ಕೆ ತಿರುಗುವುದು. ಸುಮಾರು ೫೬೫ ದಿವಸಗಳು ೬ ಘಂಟೆಗಳೊಳಗೆ ಸೂರ್ಯನ ಸುತ್ತಲೂ ತನ್ನ ಮಾರ್ಗವನ್ನನುಸರಿಸಿ ಪ್ರದಕ್ಷಿಣವನ್ನು ಮಾಡುವುದು. ವಾಯುಮಂಡಲಕ್ಕೂ ಕೂಡ ಈ ಎರಡು ಚಲನೆಗಳು ಸಿದ್ಧವಾಗಿರುವುವು. ಭೂಮಿಯು ಒಂದು ನಿಮಿಷಕ್ಕೆ ೧೯ ಮೈಲಿಗಳಂತೆ ಚಲಿಸುವುದು. ಈ ವೇಗವು ವಾಯುಮಂಡಲಕ್ಕೂ ಸಲ್ಲುವುದು. ಇಷ್ಟು ವೇಗವಾಗಿ ಸಂಚರಿಸತಕ್ಕ ಭೂಮಿಯಮೇಲಿರತಕ್ಕ ಪದಾರ್ಥಗಳು ಭೂಮಿಯನ್ನು ಬಿಟ್ಟು ಓಡಬೇಕೆಂದು ತೋರುವುದು. ಆದರೆ ಅಂಥಾ ಪದಾರ್ಥಗಳೇ ಆಗಲಿ ವಾಯುಮಂಡಲವೇ ಆಗಲಿ ಭೂಮಿಯನ್ನು ಬಿಟ್ಟು ತೊಲಗುವದಿಲ್ಲ. ಹೀಗೆ ತೊಲಗದೇ ಇರುವುದಕ್ಕೆ ಕಾರಣವೇನು? ಭೂಮಿಯು ಆಕರ್ಷಣಶಕ್ತಿ ಇದಕ್ಕೆ ಮುಖ್ಯವಾದ ಕಾರಣವು. ಭೂಮಿಯನ್ನಾವರಿಸಿಕೊಂಡಿರತಕ್ಕ ವಾಯುಮಂಡಲಕ್ಕೆ ಅವಧಿಯಾವುದು? ಈ ವಾಯುಮಂಡಲವು ಎಷ್ಟು ಎತ್ತರದವರೆಗೂ ಇರುವುದು? ಈ ವಾಯುಮಂಡಲದ ಮೇಲೆ ಏನು ಇರುವುದು? ಈ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವುದು ಸುಲಭ. ನಿರ್ಮಲವಾದ ಕೃಷ್ಣಪಕ್ಷದ ರಾತ್ರಿಗಳಲ್ಲಿ ನಕ್ಷತ್ರ ಪತನಗಳಾಗುವಂತೆ ಕಾಣುವುದು ಎಲ್ಲರಿಗೂ ಅನುಭವಸಿದ್ಧವಷ್ಟೆ. ಅಕಸ್ಮಾತ್ತಾಗಿ ನಕ್ಷತ್ರಗಳು ಬೀಳುವಂತೆ ತೋರಿ ಶೀಘ್ರದಲ್ಲಿಯೇ ಮರೆಯಾಗುವುವು. ಅವುಗಳು ಬೀಳುವ ಕಾಲದಲ್ಲಿ, ಆಕಾಶಮಾರ್ಗದಲ್ಲಿ ಗುಡಿಗಿನಂತೆ ಶಬ್ದವು ಕೇಳುವದುಂಟು. ಹಾಗೆ ನೆಲಕ್ಕೆ ಬಿದ್ದ ಪದಾರ್ಥಗಳೂ ಕೂಡಿಸಲ್ಪಟ್ಟಿರುವದುಂಟು. ಇವುಗಳನ್ನು ಸಿದ್ಧಾಂತಿಗಳು ಬಹಳ ಜಾಗರೂಕತೆಯಿಂದ ಪರೀಕ್ಷಿಸಿರುತ್ತಾರೆ. ಬೇರೆಬೇರೆ ಸ್ಥಳಗಳಿಂದ ಸಿದ್ಧಾಂತಿಗಳು ಇವುಗಳ ಪತನವನ್ನು ಪರೀಕ್ಷಿಸುತ್ತಾರೆ. ಹೀಗೆ ಪರೀಕ್ಷಿಸಲ್ಪಟ್ಟ ಪ್ರತ್ಯೇಕ ಸ್ಥಳಗಳಿಗೂ ಈ ನಕ್ಷತ್ರಗಳು ಬೀಳುವದಕ್ಕುಪಕ್ರಮವಾದ ಭಾಗಕ್ಕೂ ಒಂದು ತ್ರಿಭುಜವನ್ನು ಕಲ್ಪಿಸಿ ಅದನ್ನು ರೇಖಾಗಣಿತದ ಕಟ್ಟಳೆಗಳ ಪ್ರಕಾರ ಲೆಕ್ಕಮಾಡಿದರೆ ಸುಮಾರು ೧೦೦ ಮೈಲಿಗಳ ಎತ್ತರದಲ್ಲಿ ಪ್ರಥಮತಃ ಬೀಳುವಂತೆ ತೋರಿ

ಲವನ್ನು ಸೇರುವುದಿಲ್ಲ. ಇದ್ದಲು ಮೊದಲಾದ ಪದಾರ್ಥಗಳು ಉರಿಯುವಾಗ ವಾಯುವಿನಲ್ಲಿರತಕ್ಕ ಆಕ್ಸಿಜನ್ ಎಂಬ ಭೂತವಸ್ತುವು ಇದರೊಡನೆ ಸಂಯೋಗವನ್ನು ಹೊಂದಿ ಅದೃಶ್ಯವಾದ ಕಾರ್ಬಾನಿಕ್‌ಗ್ಯಾಸ್ ಎಂಬ ಪದಾರ್ಥವಾಗುತ್ತದೆ. ಉರಿಯು ಜ್ವಾಲಾರೂಪವಾಗಿರುವವರೆಗೂ ಆಕ್ಸಿಜನ್, ಕಾರ್ಬನ್‌ಗಳು ಹೀಗೆ ಪರಸ್ಪರ ಸಂಯೋಗವನ್ನು ಹೊಂದುವುವು. ಉರಿಯನ್ನು ನಿಲ್ಲಿಸಬಿಟ್ಟರೆ ಕಾರ್ಬನ್ ಎಂಬ ಪದಾರ್ಥವು ಹೊಗೆಯಾಗಿ ವಾಯುಮಂಡಲದಲ್ಲಿ ಸೇರಿಕೊಳ್ಳುವ ಅವಸ್ಥೆಯು ಬರುವುದು. ಉರಿಯು ನಿಂತುಹೋದಮೇಲೆ ಇದ್ದಲು ಮೊದಲಾದವುಗಳಿಂದ ಕಾರ್ಬನ್ ಪ್ರತ್ಯೇಕವಾಗುವುದು ಕೂಡ ಇಲ್ಲ.

ಈ ಕಾರ್ಬಾನಿಕ್ ಆಸಿಡ್‌ಗ್ಯಾಸ್ ಎಂಬುವುದು ವಾಯುಮಂಡಲಕ್ಕೆ ಸೇರತಕ್ಕದ್ದು ಉರಿಯತಕ್ಕ ಪದಾರ್ಥಗಳಿಂದ ಮಾತ್ರವೇ ಅಲ್ಲ. ಉಚ್ಛ್ವಾಸ ನಿಶ್ವಾಸಗಳಿಂದ ವಾಯುವನ್ನು ಸೇವಿಸತಕ್ಕ ಪ್ರಾಣಿಗಳೆಲ್ಲಾ ವಾಯುಮಂಡಲಕ್ಕೆ ಕಾರ್ಬಾನಿಕ್ ಆಸಿಡ್‌ಗ್ಯಾಸನ್ನು ಕೊಡುವುವು. ನಾವು ವಾಯುವನ್ನು ತೆಗೆದುಕೊಂಡಾಗ ಆ ವಾಯುವು ನಮ್ಮ ಶ್ವಾಸಕೋಶವನ್ನು ಪ್ರವೇಶಿಸುವುದು. ಆ ಶ್ವಾಸಕೋಶದಲ್ಲಿ ನಮ್ಮ ರಕ್ತನಾಳಗಳಲ್ಲಿ ಸಂಚಾರಮಾಡುವ ರಕ್ತದೊಡನೆ ಸಂಬಂಧವನ್ನು ಹೊಂದುವುದು. ಅಲ್ಲಿನ ದಾಹಾಗ್ನಿಯು ಉರಿಯಿಂದ ವಾಯುವಿನಲ್ಲಿರತಕ್ಕ ಆಕ್ಸಿಜನ್‌ಗೂ, ರಕ್ತದಲ್ಲಿರುವ ಕಾರ್ಬನ್‌ಗೂ ಸಂಯೋಗ ಉಂಟಾಗಿ ಕಾರ್ಬಾನಿಕ್‌ಆಸಿಡ್‌ಗ್ಯಾಸ್ ಇರುವುದು. ಈ ಕಾರ್ಬಾನಿಕ್‌ಆಸಿಡ್‌ಗ್ಯಾಸ್ ನಮ್ಮ ನಿಶ್ವಾಸದಿಂದ ಈಚೆಗೆ ಬರುವುದು. ಈ ಕಾರ್ಬಾನಿಕ್‌ಆಸಿಡ್‌ಗ್ಯಾಸ್ ಎಂಬುವುದು ಪ್ರಾಣಿಜಾತಿಗೂ, ಉರಿಯನ್ನು ನಿಲ್ಲಿಸುವುದಕ್ಕೂ ಮುಖ್ಯ ಕಾರಣವಾಗುವುದು. ಒಂದು ದೀಪವನ್ನು ಇಟ್ಟು ಅದರಮೇಲೆ ಒಂದು ಗಾಜಿನ ಬಟ್ಟಲನ್ನು ಕವುಚಿದರೆ ಕೊಂಚಹೊತ್ತಿನೊಳಗಾಗಿ ದೀಪವು ಆರಿಹೋಗುವುದು. ಹೀಗೆ ಆರಿ ಹೋಗುವುದಕ್ಕೆ ಆ ಗಾಜಿನ ಬಟ್ಟಲ್ಲಿನಲ್ಲಿದ್ದ ವಾಯುವಿನ ಆಕ್ಸಿಜನ್‌ಗೂ ದೀಪದೆಣ್ಣೆಯ ಕಾರ್ಬನ್‌ಗೂ ಸಂಬಂಧವುಂಟಾಗಿ ಕಾರ್ಬಾನಿಕ್ ಆಸಿಡ್‌ಗ್ಯಾಸ್ ಉಂಟಾದದ್ದೇ ಮುಖ್ಯಕಾರಣ. ಅಂಥಾ ಕಾರ್ಬಾನಿಕ್‌ಆಸಿಡ್‌ಗ್ಯಾಸ್‌ನಲ್ಲಿ ದೀಪವು ಹ್ಯಾಗೆ ಆರಿಹೋಗುವುದೋ ಹಾಗೆಯೇ ಪ್ರಾಣಿಗಳೂ ಕೂಡ ಉಳಿಯುವದಿಲ್ಲ. ಅದೇ ಬಟ್ಟಲೊಳಕ್ಕೆ ಒಂದು ಇಲಿಯನ್ನು ಹಾಕಿದರೆ ಆ ಇಲಿಯು ಕೂಡ್ಲೆ ಸಾಯುವುದು. ಇಂಥಾ ಕಾರ್ಬಾನಿಕ್ ಆಸಿಡ್‌ಗ್ಯಾಸನ್ನು ಉರಿಯತಕ್ಕ ಪದಾರ್ಥಗಳು ಹ್ಯಾಗೋ ಹಾಗೆ ಮನುಷ್ಯರೇ ಮೊದಲಾದ ಪ್ರಾಣಿಗಳೆಲ್ಲಾ ವಾಯುಮಂಡಲಕ್ಕೆ ಸಹಾಯ ಮಾಡುವುವು.

ಹೊಂದಿ ಪ್ರಾಣವನ್ನು ಬಿಡುವುದು ಉಂಟು. ಉಸರು ಬಿಡುವುದರಲ್ಲಿ ಕಷ್ಟವಾಗಿ ಸಂಕಟವು ತೋರಿದಕೂಡ್ಲೆ ಇನ್ನು ಮೇಲಕ್ಕೆ ಆಕಾಶಬುಟ್ಟಿಯನ್ನು ಬಿಡುವುದು ಅಪಾಯಕರವೆಂದು ತಿಳಿದುಕೊಂಡು ಈ ಬುಟ್ಟಿಯಲ್ಲಿ ಮೇಲಕ್ಕೆ ಸಂಚಾರಮಾಡುತ್ತಕ್ಕವರು ಕೆಳಕ್ಕೆ ಇಳಿಯುವದಕ್ಕೆ ಉಪಕ್ರಮಮಾಡುವರು. ಈ ಭೂಮಿಗೆ ಸಂಬಂಧಪಟ್ಟ ಪ್ರಾಣಿಗಳಿಗೆ ಎಷ್ಟು ನಿಬಿಡವಾಗಿರಬೇಕೋ ಅಂಥಾ ವಾಯುವು ೬—೭ ಮೈಲಿಗಳ ದಾಪ್ಪಾಗ್ಯೂ ಅದರ ಮೇಲೆ ಸುಮಾರು ೯೩ ಮೈಲಿಗಳವರೆಗೂ ಸೂಕ್ಷ್ಮವಾದ ವಾಯುವು ಇರುವುದೆಂದು ಮೇಲೆ ಹೇಳಿದಂತೆ ಸಿದ್ಧಾಂತಗಳಿಂದ ಮಾಡಲ್ಪಟ್ಟ ಪರೀಕ್ಷೆಯಿಂದ ಗೊತ್ತಾಗಿರುವುದು.

ಸುಣ್ಣ.

ಸುಣ್ಣವನ್ನು ಗೊಬ್ಬರವಾಗಿ ಉಪಯೋಗಿಸುವ ವಾಡಿಕೆ ನಮ್ಮ ದೇಶದಲ್ಲಿ ಇಲ್ಲವೆಂದೇ ಹೇಳಹಬುದು. ಇದಕ್ಕೆ ಕೆಲವು ಕಾರಣಗಳಿವೆ. ಇವುಗಳು ಮುಂದೆ ಗೊತ್ತಾಗುತ್ತವೆ. 'ಡಾಕ್ಟರ್ ಲೆದರ್' ಸಾಹೇಬರವರು ಇಂಡಿಯಾ ದೇಶದ ಅನೇಕ ಮಣ್ಣುಗಳನ್ನು ಪರೀಕ್ಷಿಸಿರುವರು. ಅವರು ವಿಭಜನೆ ಮಾಡಿದ ಮಣ್ಣುಗಳ ಮುಖ್ಯವಾದವುಗಳಲ್ಲಿ ಸಸ್ಯಗಳಿಗೆ ಸಾಕಾಗುವಷ್ಟು ಸುಣ್ಣ ಸಾಮಾನ್ಯವಾಗಿ ಇದೆ. ಈ ಅಂಶವನ್ನು ಕೆಳಗೆ ಬರೆದಿರುವ ಪಟ್ಟಿಯಿಂದ ತಿಳಿಯಬಹುದು.

ನಂ	ಮಣ್ಣುಗಳ ಹೆಸರು.	ಸುಣ್ಣದ ಪರಿಮಾಣ ತೂಕದಲ್ಲಿ ೧೦೦ ಭಾಗ.
೧	ಡುಮಾರೂನಿನ ಗೋಡುಮಣ್ಣು ...	೩೬
೨	ಪಾಟ್ನಾದಲ್ಲಿಯ ಜೇಡಿಮಣ್ಣು ..	೧.೬೪
೩	ಅಯೋಧ್ಯೆಯ ಸುಣ್ಣಕಲ್ಲು ಮಣ್ಣು ..	೧೪.೫೪
೪	ಮದರಾಸ್ ಪ್ರಾಂತ್ಯದ ಕುಟ್ಟತಲೆ ಎಂಬ ಊರಿನ ಗೋಡು ಮಣ್ಣು	೦.೪೪
೫	ಮಧುರೆಯ ಕೃಷ್ಣರೇಗಡೆ ...	೧.೯೬
೬	ಕೋಯಿಮುತ್ತೂರಿನ ಕೃಷ್ಣರೇಗಡೆ ..	೪.೦
೭	ಗುಂಟೂರಿನ ಕೃಷ್ಣರೇಗಡೆ ..	೧ ೧೬
೮	ಕನೂರಿನ ಕೃಷ್ಣರೇಗಡೆ ..	೩.೬೬
೯	ಮದರಾಸ್‌ಪ್ರಾಂತ್ಯದ ಕೆಂಪುಮರಳು ...	೦.೭೯
೧೦	ಆಸಾಂದೇಶದ ಭೀಲ್ ಮಣ್ಣುಗಳ ಒಂದು ಮಾದರಿ.	ಬಹಳ ಕಡಮೆ.

ತಕ್ಷತ್ರವು ದೃಷ್ಟಿಪಥಕ್ಕೆ ಬಿತ್ತೆಂದು ಗೊತ್ತಾಗುವುದು. ಹೀಗೆ ಬೀಳತಕ್ಕ ಪದಾರ್ಥವನ್ನು ಪರೀಕ್ಷಿಸಿದರೆ ಅವುಗಳು ಪೃಥ್ವೀಸಂಬಂಧವಾದ ಪದಾರ್ಥಗಳೆಂದು ಗೊತ್ತಾಗುವುವು. ಈ ಪದಾರ್ಥಗಳು ಕೆಲವು ಪೌಂಡು ತೂಕಗಳು ಮೊದಲುಗೊಂಡು ಸಾವಿರಾರು ಪೌಂಡು ತೂಕದವರೆಗೂ ಇರುವುದುಂಟು. ಇವುಗಳು ಸ್ವಯಂ ಪ್ರಕಾಶವಾದುವುಗಳಲ್ಲ. ಸ್ವಯಂಪ್ರಕಾಶವಾದ ತೇಜೋರಾಶಿಗಳಿಂದ ಬೆಳಕನ್ನು ಹೊಂದಿ ಆ ಬೆಳಕನ್ನು ಭೂಮಿ ಚಂದ್ರ ಮೊದಲಾದವುಗಳಂತೆ ಪ್ರತಿಫಲಿಸತಕ್ಕವುಗಳಾಗಿರುತ್ತವೆ. ಅವುಗಳು ಅವುಗಳ ಮಾರ್ಗದಲ್ಲಿ ಬಹಳ ವೇಗವಾಗಿ ಸಂಚರಿಸುತ್ತಾ ಇರುತ್ತವೆ. ಕೆಲವು ಕಾಲದಲ್ಲಿ ಅವುಗಳು ಭೂಮಿಯ ಸವಿಾಪಕ್ಕೆ ಬಂದು ಭೂಮಿಯ ಗುರುತ್ವಶಕ್ತಿಗೆ ಸಿಕ್ಕುತ್ತವೆ. ಆಕಾಶಮಾರ್ಗದಿಂದ ಬಂದು ಭೂಮಿಯ ವಾಯು ಮಂಡಲಕ್ಕೆ ತಗಲಿದಕೂಡಲೆ ಒಂದು ಸಂಘರ್ಷಣೆಯು ಉಂಟಾಗುವುದು. ಈ ಸಂಘರ್ಷಣೆಯ ಬಲದಿಂದ ಈ ಪದಾರ್ಥವು ಉರಿಯುವುದಕ್ಕೆ ಉಪಕ್ರಮಿಸುವುದು. ಹಾಗೆ ಉರಿಯುತ್ತಿರುವ ಭೂಮಿಯಕಡೆಗೆ ಬೀಳುವಾಗ್ಯೇ ನೋಡುವವರ ದೃಷ್ಟಿಗೆ ನಕ್ಷತ್ರ ಪತನವೆಂದು ತೋರುವುದು. ಇದು ಎಲ್ಲಿ ಉರಿಯುವುದಕ್ಕೆ ಉಪಕ್ರಮಿಸುವುದೋ ಅಲ್ಲಿಯವರೆಗೂ ವಾಯುಮಂಡಲವಿರುವದೆಂದು ಗೊತ್ತಾಗುವುದು. ಆದುದರಿಂದ ಭೂಮಿಗ ಬೀಳತಕ್ಕ ಪೃಥ್ವೀವಿಕಾರವಾದ ಈ ಪದಾರ್ಥಗಳ ಉರಿಯುವಸ್ಥಳವೇ ವಾಯು ಮಂಡಲದ ಮೇಲುಭಾಗವೆಂದು ಹೇಳಬಹುದು. ಈ ಭಾಗಕ್ಕೂ ಭೂಮಿಗೂ ೧೦೦ ಮೈಲಿಗಳಾಗುವುವ

ಆದರೆ ಭೂಮಿಯ ಸವಿಾಪದಲ್ಲಿರತಕ್ಕ ವಾಯುವು ನಿಬಿಡವಾಗಿರುವುದು ಮೇಲಕ್ಕೆ ಹೋಗುತ್ತಾ ಹೋಗುತ್ತಾ ಇದು ಕ್ರಮಕ್ರಮವಾಗಿ ಸೂಕ್ಷ್ಮಾವಸ್ಥೆಯನ್ನು ಹೊಂದುವುದು. ಭೂಮಿಯ ಸವಿಾಪದಲ್ಲಿರುವಾಯುವು ಉಚ್ಛ್ವಾಸ ನಿಶ್ವಾಸಗಳಿಗೆ ಅನುಕೂಲವಾಗಿರುವುವು. ಮೇಲಕ್ಕೆ ಹೋದಹಾಗೆಲ್ಲಾ ಸೂಕ್ಷ್ಮಾವಸ್ಥೆಯನ್ನು ಹೊಂದುವ ವಾಯುವು ಉಚ್ಛ್ವಾಸನಿಶ್ವಾಸಗಳಿಗೆ ಅನುಕೂಲವಾಗುವುದಿಲ್ಲ. ಉನ್ನತವಾದ ಬೆಟ್ಟಗಳನ್ನು ಹತ್ತುವಕಾಲದಲ್ಲಿಯೇ ಈ ಸಂಗತಿಯು ಅನುಭವಸಿದ್ಧವಾಗುವುದು. ಆಕಾಶಬುಟ್ಟಿಯಲ್ಲಿ ಬಹಳ ಮೇಲಕ್ಕೆ ಹೋದವರು ಸೂಕ್ಷ್ಮಾವಸ್ಥೆಯಲ್ಲರತಕ್ಕ ವಾಯುವು ಪ್ರಾಣವನ್ನು ಧರಿಸುವದಕ್ಕೆ ಸಾಕಾದಷ್ಟು ಶಕ್ತಿಯನ್ನು ಹೊಂದದೇ ಇರುವುದರಿಂದ ೬—೭ ಮೈಲಿಗಳಿಗಿಂತ ಮೇಲಕ್ಕೆ ಹೋದವರು ಮೂರ್ಛೆಯನ್ನು

ಕಕ್ಷೆಕ್ಷೇತ್ರವು ದೃಷ್ಟಿಪಥಕ್ಕೆ ಬಿತ್ತೆಂದು ಗೊತ್ತಾಗುವುದು. ಹೀಗೆ ಬೀಳತಕ್ಕ ರದಾರ್ಥವನ್ನು ಪರೀಕ್ಷಿಸಿದರೆ ಅವುಗಳು ಪೃಥ್ವೀಸಂಬಂಧವಾದ ಪದಾರ್ಥಗಳೆಂದು ಗೊತ್ತಾಗುವುವು. ಈ ಪದಾರ್ಥಗಳು ಕೆಲವು ಪೌಂಡು ತೂಕಗಳು ಮೊದಲುಗೊಂಡು ಸಾವಿರಾರು ಪೌಂಡು ತೂಕದವರೆಗೂ ಇರುವುದುಂಟು. ಇವುಗಳು ಸ್ವಯಂಪ್ರಕಾಶವಾದುವುಗಳಲ್ಲ. ಸ್ವಯಂಪ್ರಕಾಶವಾದ ತೇಜೋರಾಶಿಗಳಿಂದ ಬೆಳಕನ್ನು ಹೊಂದಿ ಆ ಬೆಳಕನ್ನು ಭೂಮಿ ಚಂದ್ರ ಮೊದಲಾದವುಗಳಂತೆ ಪ್ರತಿಫಲಿಸತಕ್ಕವುಗಳಾಗಿರುತ್ತವೆ. ಅವುಗಳು ಅವುಗಳ ಮಾರ್ಗದಲ್ಲಿ ಬಹಳ ವೇಗವಾಗಿ ಸಂಚರಿಸುತ್ತಾ ಇರುತ್ತವೆ. ಕೆಲವು ಕಾಲದಲ್ಲಿ ಅವುಗಳು ಭೂಮಿಯ ಸವಿಾಪಕ್ಕೆ ಬಂದು ಭೂಮಿಯ ಗುರುತ್ವಾಕರ್ಷಣಶಕ್ತಿಗೆ ಸಿಕ್ಕುತ್ತವೆ. ಆಕಾಶಮಾರ್ಗದಿಂದ ಬಂದು ಭೂಮಿಯ ವಾಯು ಮಂಡಲದೊಳಕ್ಕೆ ಪ್ರವೇಶಿಸಿದಕೂಡಲೆ ಒಂದು ಸಂಘರ್ಷಣೆಯು ಉಂಟಾಗುವುದು. ಈ ಸಂಘರ್ಷಣೆಯ ಬಲದಿಂದ ಈ ಪದಾರ್ಥವು ಉರಿಯುವುದಕ್ಕೆ ಉಪಕ್ರಮಿಸುವುದು. ಹಾಗೆ ಉರಿಯುತ್ತಾ ಭೂಮಿಯಕಡೆಗೆ ಬೀಳುವಾಗ್ಯೇ ನೋಡುವವರ ದೃಷ್ಟಿಗೆ ನಕ್ಷತ್ರ ಪತನವಾಗುತ್ತಿರುವುದು ಇದು ಎಲ್ಲಿ ಉರಿಯುವುದಕ್ಕೆ ಉಪಕ್ರಮಿಸುವುದೋ ಅಲ್ಲಿಯವರೆಗೂ ವಾಯುಮಂಡಲವಿರುವದೆಂದು ಗೊತ್ತಾಗುವುದು. ಆದುದರಿಂದ ಭೂಮಿಗೆ ಬೀಳತಕ್ಕ ಪೃಥ್ವೀವಿಕಾರವಾದ ಈ ಪದಾರ್ಥಗಳ ಉರಿಯುವಸ್ಥಳವೇ ವಾಯುಮಂಡಲದ ಮೇಲುಭಾಗವೆಂದು ಹೇಳಬಹುದು. ಈ ಭಾಗಕ್ಕೂ ಭೂಮಿಗೂ ೧೦೦ ಮೈಲಿಗಳಾಗುವವು.

ಆದರ ಭೂಮಿಯ ಸವಿಾಪದಲ್ಲಿರತಕ್ಕ ವಾಯುವು ನಿಬಿಡವಾಗಿರುವುದು ಕ್ರಮಕ್ರಮವಾಗಿ ಹೋಗುತ್ತಾ ಇದು ಕ್ರಮಕ್ರಮವಾಗಿ ಸೂಕ್ಷ್ಮಾವಸ್ಥೆಯನ್ನು ಹೊಂದುವುದು. ಭೂಮಿಯ ಸವಿಾಪದಲ್ಲಿರುವ ವಾಯುವು ಉಚ್ಛ್ವಾಸ ನಿಶ್ವಾಸಗಳಿಗೆ ಅನುಕೂಲವಾಗಿರುವುವು. ಮೇಲಕ್ಕೆ ಹೋದಹಾಗೆಲ್ಲಾ ಸೂಕ್ಷ್ಮಾವಸ್ಥೆಯನ್ನು ಹೊಂದುವ ವಾಯುವು ಉಚ್ಛ್ವಾಸನಿಶ್ವಾಸಗಳಿಗೆ ಅನುಕೂಲವಾಗುವುದಿಲ್ಲ. ಉನ್ನತವಾದ ಬೆಟ್ಟಗಳನ್ನು ಹತ್ತುವಕಾಲದಲ್ಲಿಯೇ ಈ ಸಂಗತಿಯು ಅನುಭವಸಿದ್ಧವಾಗುವುದು. ಆಕಾಶಬುಟ್ಟಿಯಲ್ಲಿ ಬಹಳ ಮೇಲಕ್ಕೆ ಹೋದವರು ಸೂಕ್ಷ್ಮಾವಸ್ಥೆಯಲ್ಲಿರತಕ್ಕ ವಾಯುವು ಪ್ರಾಣವನ್ನು ಧರಿಸುವುದಕ್ಕೆ ಸಾಕಾದಷ್ಟು ಶಕ್ತಿಯನ್ನು ಹೊಂದದೇ ಇರುವುದರಿಂದ ೩—೪ ಮೈಲಿಗಳಿಗಿಂತ ಮೇಲಕ್ಕೆ ಹೋದವರು ಮೂರ್ಛೆಯನ್ನು